ಸಂಕ್ಷಿಪ್ತ ಸುದ್ದಿ

ಹೋಟೆಲ್ ವಹಿವಾಟು: ರಾತ್ರಿ 1 ಗಂಟೆವರೆಗೂ ಅವಕಾಶ

ಬೆಂಗಳೂರು: ತಿಂಡಿ–ತಿನಿಸು ಮಾರುವ ಅಂಗಡಿಗಳು ಹಾಗೂ ಹೋಟೆಲ್‌ಗಳ ವಹಿವಾಟು ಅವಧಿಯನ್ನು ರಾತ್ರಿ 1 ಗಂಟೆಯವರೆಗೂ ವಿಸ್ತರಿಸಲಾಗಿದ್ದು, ಈ ಸಂಬಂಧ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

‘ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ತಿಂಡಿ–ತಿನಿಸು ಒದಗಿಸುವ ಸ್ಥಳಗಳ ವ್ಯಾಪಾರದ ಅವಧಿಯನ್ನು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 1 ಗಂಟೆಯವರೆಗೆ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ’ ಎಂದು ಕಮಿಷನರ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

‘ಎಲ್ಲ ವಿಭಾಗಗಳ ಡಿಸಿಪಿಗಳು ತಮ್ಮ ಅಧೀನದ ಪೊಲೀಸರಿಗೆ ಆದೇಶದ ಬಗ್ಗೆ ತಿಳಿಸಬೇಕು. ಆದೇಶದನ್ವಯ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕು’ ಎಂದು ಹೇಳಿದ್ದಾರೆ.

‘ಸರ್ಕಾರದ ಆದೇಶದಂತೆ ರಾತ್ರಿ 1 ಗಂಟೆಯವರೆಗೂ ವ್ಯಾಪಾರ–ವಹಿವಾಟು ನಡೆಸಲು ಅವಕಾಶವಿದೆ. ಅಷ್ಟಾದರೂ ಪೊಲೀಸರು ರಾತ್ರಿ 11 ಗಂಟೆಗೆ ಹೋಟೆಲ್‌ಗಳನ್ನು ಬಂದ್ ಮಾಡಿಸುತ್ತಿದ್ದಾರೆ ಎಂಬುದಾಗಿ ಹೋಟೆಲ್‌ಗಳ ಮಾಲೀಕರ ಸಂಘದ ಅಧ್ಯಕ್ಷರು ದೂರು ನೀಡಿದ್ದರು. ಇದನ್ನು ಪರಿಶೀಲಿಸಿ ಹೊಸ ಜ್ಞಾಪನಾ ಆದೇಶ ಹೊರಡಿಸಲಾಗಿದೆ’ ಎಂದು ಕಮಿಷನರ್ ಅವರು ತಿಳಿಸಿದ್ದಾರೆ.

ಸಾರಿಗೆ ಇಲಾಖೆ: ಗುರಿ ಮೀರಿ ವರಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಮೊದಲ ಅರ್ಧದಲ್ಲಿ ಸಾರಿಗೆ ಇಲಾಖೆ ಗುರಿ ಮೀರಿ ವರಮಾನ ಸಂಗ್ರಹಿಸಿದೆ.

ಏಪ್ರಿಲ್‌ನಿಂದ ಸೆಪ್ಟೆಂಬರ್ ತನಕ ಆರು ತಿಂಗಳಲ್ಲಿ ₹4,003.34 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ₹4,294.47 ಕೋಟಿ ಸಂಗ್ರಹಿಸುವಲ್ಲಿ ಇಲಾಖೆ ಯಶಸ್ವಿಯಾಗಿದೆ. ₹291.13 ಕೋಟಿ ಹೆಚ್ಚುವರಿ ವರಮಾನ ಸಂಗ್ರಹಿಸಿದ್ದು, ಶೇ 107.27ರಷ್ಟು ಸಾಧನೆಯಾಗಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಸೆಪ್ಟೆಂಬರ್ ತಿಂಗಳಿನಲ್ಲೇ ಅತಿ ಹೆಚ್ಚು ₹809.63 ಕೋಟಿ ಸಂಗ್ರಹವಾಗಿದೆ. ಜುಲೈನಲ್ಲಿ ಅತಿ ಕಡಿಮೆ ₹657.33 ಕೋಟಿ ಸಂಗ್ರಹವಾಗಿದೆ. ₹8,006.68 ಕೋಟಿ ವಾರ್ಷಿಕ ಗುರಿಯನ್ನು ಇಲಾಖೆ ಹೊಂದಿದೆ.

ಮತಾಂತರ ನಿಷೇಧ ಕಾಯ್ದೆ: ರಾಜ್ಯದಲ್ಲಿ ಮೊದಲ ಪ್ರಕರಣ ದಾಖಲು

ಪ್ರೀತಿಸುವ ಆಮಿಷವೊಡ್ಡಿ ಇಸ್ಲಾಂ ಧರ್ಮಕ್ಕೆ ಮತಾಂತರ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ಸೈಯದ್ ಮೋಯಿನ್

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗಷ್ಟೇ ಜಾರಿ ಮಾಡಿರುವ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆಯಡಿ (ಮತಾಂತರ ನಿಷೇಧ) ಯಶವಂತಪುರ ಠಾಣೆಯಲ್ಲಿ ಮೊದಲ ಪ್ರಕರಣ ದಾಖಲಾಗಿದ್ದು, ಪ್ರೀತಿಸುವ ಆಮಿಷವೊಡ್ಡಿ ಯುವತಿಯನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿದ್ದ ಆರೋಪದಡಿ ಸೈಯದ್ ಮೋಯಿನ್ (24) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

‘ಯಶವಂತಪುರ ಠಾಣೆ ವ್ಯಾಪ್ತಿಯ ಬಿ.ಕೆ. ನಗರದ ಸೈಯದ್ ಮೋಯಿನ್, ತನ್ನ ಮನೆ ಬಳಿಯ ನಿವಾಸಿಯಾದ 19 ವರ್ಷದ ಹಿಂದೂ ಯುವತಿಯನ್ನು ಮತಾಂತರ ಮಾಡಿದ್ದ. ಯುವತಿ ಪೋಷಕರು ನೀಡಿದ್ದ ದೂರಿನಡಿ, ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆಯಡಿ (ಮತಾಂತರ ನಿಷೇಧ) ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ತಿಳಿಸಿದರು.

ಉತ್ತರ ಪ್ರದೇಶದ ಕುಟುಂಬ: ‘ಯುವತಿಯ ತಂದೆ–ತಾಯಿ, ಉತ್ತರ ಪ್ರದೇಶದವರು. ಕೆಲಸಕ್ಕಾಗಿ ಬೆಂಗಳೂರಿಗೆ ಬಂದು ಬಿ.ಕೆ.ನಗರದಲ್ಲಿ ನೆಲೆಸಿದ್ದರು. ದಂಪತಿಗೆ ಯುವತಿ ಸೇರಿ ಮೂವರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗನಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಎಸ್ಸೆಸ್ಸೆಲ್ಸಿವರೆಗೂ ಓದಿದ್ದ ಯುವತಿ, ಅರ್ಧಕ್ಕೆ ಶಾಲೆ ಬಿಟ್ಟು ಮನೆಯಲ್ಲಿದ್ದರು. ಮನೆಗೆ ಅಗತ್ಯವಿದ್ದ ವಸ್ತುಗಳನ್ನು ತರಲು ಅಂಗಡಿಗೆ ಆಗಾಗ ಹೋಗಿ ಬರುತ್ತಿದ್ದರು. ಯುವತಿಯನ್ನು ಹಿಂಬಾಲಿಸಿ ಪರಿಚಯ ಮಾಡಿಕೊಂಡಿದ್ದ ಆರೋಪಿ ಸೈಯದ್ ಮೋಯಿನ್, ಹೆಚ್ಚು ಮಾತನಾಡಲಾರಂಭಿಸಿದ್ದ. ಆರೋಪಿ ಹಾಗೂ ಯುವತಿ, ಮೊಬೈಲ್ ನಂಬರ್ ಬದಲಾಯಿಸಿಕೊಂಡು ನಿತ್ಯವೂ ಮಾತನಾಡುತ್ತಿದ್ದರು. ಆರೋಪಿಯೇ ಪ್ರೀತಿಯ ನಿವೇದನೆ ಮಾಡಿದ್ದ. ಆತನ ಆಮಿಷಕ್ಕೆ ಒಳಗಾಗಿ, ಯುವತಿ ಸಹ ಪ್ರೀತಿಸಲಾರಂಭಿಸಿದ್ದರು’ ಎಂದು ಹೇಳಿವೆ.

ಯುವತಿ ಪ್ರೀತಿಸುತ್ತಿರುವ ಸಂಗತಿ 6 ತಿಂಗಳ ಹಿಂದೆಯಷ್ಟೇ ಪೋಷಕರಿಗೆ ಗೊತ್ತಾಗಿತ್ತು. ಸಿಟ್ಟಾಗಿದ್ದ ಪೋಷಕರು, ಯುವತಿಗೆ ಬುದ್ಧಿವಾದ ಹೇಳಿದ್ದರು. ಆದರೂ ಯುವತಿ, ಆರೋಪಿಯನ್ನು ಹಲವು ಬಾರಿ ಭೇಟಿಯಾಗಿದ್ದರು. ಮದುವೆಯಾಗುವುದಾಗಿ ಆಮಿಷ ವೊಡ್ಡಿ ತನ್ನೊಂದಿಗೆ ಆಂಧ್ರಪ್ರದೇಶಕ್ಕೆ ಬರುವಂತೆ ಒತ್ತಾಯಿಸಿದ್ದ’ ಎಂದು ಹೇಳಿವೆ.

ನಾಪತ್ತೆ ಬಗ್ಗೆ ದೂರು: ‘ಆರೋಪಿ ಮಾತಿಗೆ ಒಪ್ಪಿದ್ದ ಯುವತಿ, ಅ. 5ರಂದು ಸಂಜೆ ಅಂಗಡಿಗೆ ಹೋಗಿ ಬರುವುದಾಗಿ ಪೋಷಕರಿಗೆ ಹೇಳಿ ಹೋಗಿದ್ದರು. ರಾತ್ರಿಯಾದರೂ ಯುವತಿ ಮನೆಗೆ ವಾಪಸು ಬಂದಿರಲಿಲ್ಲ. ಗಾಬರಿಗೊಂಡ ಪೋಷಕರು, ಹಲವೆಡೆ ಹುಡುಕಾಡಿದ್ದರು. ಸುಳಿವು ಸಿಗದಿದ್ದರಿಂದ, ಮಗಳು ನಾಪತ್ತೆಯಾಗಿರುವುದಾಗಿ ದೂರು ನೀಡಿದ್ದರು. ಆರೋಪಿ ಸೈಯದ್ ಮೋಯಿನ್ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು’ ಎಂದು ತಿಳಿಸಿವೆ.

ಆಂಧ್ರಪ್ರದೇಶದ ದರ್ಗಾದಲ್ಲಿ ಮತಾಂತರ

‘ಪ್ರಕರಣದ ತನಿಖೆ ಕೈಗೊಂಡಾಗ, ಯುವತಿ ಜೊತೆ ಆರೋಪಿ ಆಂಧ್ರಪ್ರದೇಶದಲ್ಲಿರುವ ಮಾಹಿತಿ ಲಭ್ಯವಾಯಿತು. ಆಂಧ್ರಪ್ರದೇಶಕ್ಕೆ ಹೋದ ವಿಶೇಷ ತಂಡ, ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಯುವತಿಯನ್ನು ರಕ್ಷಿಸಿ, ಪೋಷಕರ ಸುಪರ್ದಿಗೆ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಯುವತಿಯನ್ನು ಪೆನುಕೊಂಡ ದರ್ಗಾಕ್ಕೆ ಕರೆದೊಯ್ದಿದ್ದ ಆರೋಪಿ, ‘ನನ್ನನ್ನು ಮದುವೆಯಾಗಬೇಕು ಎಂದರೆ ಇಸ್ಲಾಂ ಧರ್ಮಕ್ಕೆ ಮತಾಂತರ ಆಗಬೇಕು’ ಎಂದಿದ್ದ. ನಂತರ, ಯುವತಿಯನ್ನು ಬಲವಂತವಾಗಿ ಮತಾಂತರ ಮಾಡಿಸಿದ್ದ’ ಎಂದು ತಿಳಿಸಿವೆ.

‘ಒತ್ತಾಯದ ಮತಾಂತರವೆಂದು ಯುವತಿ ಹೇಳಿಕೆ ನೀಡಿದ್ದರಿಂದ, ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆಯಡಿ (ಮತಾಂತರ ನಿಷೇಧ) ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇದು ರಾಜ್ಯದ ಮೊದಲ ಪ್ರಕರಣ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಓಲಾ–ಉಬರ್ ವಿರುದ್ಧ ಬಲವಂತದ ಕ್ರಮ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಗೆ ನ್ಯಾಯಯುತ ದರ ನಿಗದಿಗೆ 15 ದಿನಗಳ ಕಾಲಾವಕಾಶ ನೀಡಿರುವ ಹೈಕೋರ್ಟ್, ಅಲ್ಲಿಯವರೆಗೂ ಅಗ್ರಿಗೇಟರ್‌ಗಳ ವಿರುದ್ಧ ಬಲವಂತದ ಕ್ರಮ ಜರುಗಿಸಬಾರದು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಓಲಾ, ಉಬರ್ ಮತ್ತು ರ‍್ಯಾಪಿಡೊ ಕಂಪನಿಯವರು ಆ್ಯಪ್ ಆಧಾರಿತ ಆಟೊರಿಕ್ಷಾ ಪ್ರಯಾಣಿಕರ ಸೇವೆಗಳನ್ನು ತಕ್ಷಣದಿಂದ ಸ್ಥಗಿತಗೊಳಿಸುವಂತೆ ಸಾರಿಗೆ ಇಲಾಖೆ ಆಯುಕ್ತರು ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು’ ಎಂದು ಕೋರಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಉಬರ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸಲು ಸೂಚಿಸಿ ಸರ್ಕಾರ ಹೊರಡಿಸಿರುವ ಆದೇಶ ಕಾನೂನುಬಾಹಿರ ಹಾಗೂ ಏಕಪಕ್ಷೀಯವಾಗಿದೆ. ಸರ್ಕಾರ ನಿಗದಿ ಮಾಡಿರುವುದಕ್ಕಿಂತ ಹೆಚ್ಚು ದರ ಪಡೆಯಲಾಗುತ್ತಿದೆ ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲ. ದರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಯಾವುದೇ ನಿಯಮಗಳೂ ಇಲ್ಲ’ ಎಂದು ಪ್ರತಿಪಾದಿಸಿದರು.

ಇದನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ‘ಬಹುತೇಕ ಅಗ್ರಿಗೇಟರ್‌ಗಳು ಪರವಾನಗಿ ಪಡೆಯದೇ ಕಾರ್ಯಚರಣೆ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ಸಾರ್ವಜನಿಕರು ನೀಡಿರುವ ದೂರುಗಳ ಆಧಾರದ ಮೇಲೆ ಸರ್ಕಾರವು ಇದೇ 6 ಮತ್ತು 11ರಂದು ಆದೇಶ ಹೊರಡಿಸಿದೆ. ಸರ್ಕಾರ ದರ ನಿಗದಿಪಡಿಸಿ 2021ರ ನವೆಂಬರ್ 6ರಂದೇ ಆದೇಶ ಹೊರಡಿಸಿದೆ. ಅದರಲ್ಲಿ ನಿಗದಿಪಡಿಸಿರುವ ಪ್ರಮಾಣಕ್ಕಿಂತ ಹೆಚ್ಚಿನ ದರವನ್ನು ಅರ್ಜಿದಾರ ಅಗ್ರಿಗೇಟರ್‌ಗಳು ಸಂಗ್ರಹಿಸುತ್ತಿದ್ದಾರೆ. ಮುಂದಿನ 12ರಿಂದ 15 ದಿನಗಳಲ್ಲಿ ಸರ್ಕಾರ ದರ ನಿಗದಿಪಡಿಸಲು ಸಿದ್ಧವಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಸದ್ಯ ತಾತ್ಕಾಲಿಕ ಪರಿಹಾರ ವ್ಯವಸ್ಥೆ ಮುಂದುವರಿಯಲಿ. ಅಲ್ಲಿಯವರೆಗೂ ಸರ್ಕಾರ ಮತ್ತು ಅದರ ಪ್ರತಿನಿಧಿಗಳು ಅಗ್ರಿಗೇಟರ್‌ಗಳ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು. ದರ ನಿಗದಿ ವೇಳೆ ಸರ್ಕಾರ ಎಲ್ಲಾ ಪಾಲುದಾರರ ಅಹವಾಲು ಆಲಿಸಬೇಕು. ಮಧ್ಯಂತರ ಪರಿಹಾರ ರೂಪದಲ್ಲಿ ಅರ್ಜಿದಾರರು ರಾಜ್ಯ ಸರ್ಕಾರ ನಿಗದಿಪಡಿಸಿರುವ ದರವನ್ನು ಪಾಲಿಸಬಹುದು. ಅದಕ್ಕೆ ಹೆಚ್ಚುವರಿ ಶೇ 10ರಷ್ಟು ಮತ್ತು ಅನ್ವಯಿಕ ತೆರಿಗೆಯನ್ನು ಸಂಗ್ರಹಿಸಬಹುದು’ ಎಂದು ನಿರ್ದೇಶಿಸಿತು.

‘ಆಟೊರಿಕ್ಷಾ ಸೇವೆ ಒದಗಿಸಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದರೆ, ಅದನ್ನು ಕಾನೂನು ಪ್ರಕಾರ ಪರಿಗಣಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ 6ಕ್ಕೆ ಮುಂದೂಡಿತು.

ತಿಂಗಳಾಂತ್ಯಕ್ಕೆ 5 ರಸ್ತೆ ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಯೋಜನೆಗಳ ವಿಭಾಗ ನಡೆಸುತ್ತಿರುವ ಐದು ರಸ್ತೆ ಕಾಮಗಾರಿಗಳನ್ನು ಅ.31ರೊಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಮುಂದಿನ ದಿನಗಳಲ್ಲಿ ದೀಪಾವಳಿ, ಕನ್ನಡ ರಾಜ್ಯೋತ್ಸವ ಹಬ್ಬಗಳು ಮತ್ತು ಬೆಂಗಳೂರು ನಗರದಲ್ಲಿ ನಿಗದಿತ ಜಾಗತಿಕ ಹೂಡಿಕೆದಾರರ ಸಭೆ ನಡೆಯಲಿರುವುದರಿಂದ ಚಾಲ್ತಿಯಲ್ಲಿರುವ ಕೆಲವು ಪ್ರಮುಖ ಯೋಜನೆಗಳನ್ನು ಗುರುತಿಸಲಾಗಿದೆ. ತಿಂಗಳಾಂತ್ಯಕ್ಕೆ ಪೂರ್ಣಗೊಳಿಸಬೇಕೆಂದು ಗುರಿ ನೀಡಿದ್ದಾರೆ.

ಯೋಜನೆಗಳ ಕಾಮಗಾರಿಗಳನ್ನು ಹವಾಮಾನಕ್ಕೆ ಅನುಗುಣವಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಬಿಬಿಎಂಪಿ ಯೋಜನೆಗಳ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ವಿವರ ನೀಡಿದರು.

‘ಶಿವಾನಂದ ವೃತ್ತ ಮೇಲ್ಸೇತುವೆ ಸದೃಢವಾಗಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವರದಿ ಸಲ್ಲಿಸಿದೆ. ಮೇಲ್ಸೇತುವೆಯಲ್ಲಿ ಅಲ್ಪ ಕಾಮಗಾರಿ ಮಾತ್ರ ಬಾಕಿ ಉಳಿದಿದೆ. ಮಳೆ ನಿಂತ ಮೇಲೆ ಎಲ್ಲವನ್ನೂ ಪೂರ್ಣಗೊಳಿಸಲಾಗುತ್ತದೆ’ ಎಂದರು.

ರಸ್ತೆಗಳು: ಶಿವಾನಂದ ವೃತ್ತದಿಂದ ರೇಸ್ ಕೋರ್ಸ್ ಜಂಕ್ಷನ್‌ವರೆಗಿನ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಅ.23 ಕೊನೆಯ ದಿನವಾಗಿದೆ. ಇನ್ನುಳಿದಂತೆ ಕೆ.ಜಿ ರಸ್ತೆ-ಟೆಂಡರ್ ಶ್ಯೂರ್ (ಮೈಸೂರು ಬ್ಯಾಂಕ್ ಜಂಕ್ಷನ್‌ನಿಂದ ಮೆಜೆಸ್ಟಿಕ್), ಮೋಹನ್ ಕುಮಾರ್ ರಸ್ತೆ (ಮತ್ತಿಕೆರೆ ಮುಖ್ಯರಸ್ತೆ ಜಂಕ್ಷನ್‌ನಿಂದ ರೈಲ್ವೆ ಪ್ಯಾರಲಲ್ ರಸ್ತೆ ಜಂಕ್ಷನ್), ದೊಮ್ಮಲೂರು ಮೇಲ್ಸೇತುವೆಯಿಂದ ಈಜಿಪುರದವರೆಗಿನ ಮಧ್ಯಂತರ ರಿಂಗ್ ರಸ್ತೆ, ಎನ್.ಆರ್. ರಸ್ತೆಗಳನ್ನು (ಟೆಂಡರ್ ಶ್ಯೂರ್) ಅ.31ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಸುದ್ದಿ 2 ನಿಮಿಷ

ಇದೇ ತಿಂಗಳು ವೇತನ ಆಯೋಗ ರಚನೆ: ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಇದೇ ತಿಂಗಳು ವೇತನ ಆಯೋಗ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

‘ಪುಣ್ಯಕೋಟಿ ದತ್ತು ಯೋಜನೆ’ಗೆ ರಾಜ್ಯದ ಸರ್ಕಾರಿ ನೌಕರರು ನೀಡಿದ ದೇಣಿಗೆಯ ಸಮ್ಮತಿ ಪತ್ರ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ಹಿಂದೆ ನೀಡಿದ್ದ ಭರವಸೆಯಂತೆ 7ನೇ ವೇತನ ಆಯೋಗ ರಚಿಸಲಾಗುವುದು. ವೇತನ, ಭತ್ಯೆಗಳ ಜತೆಗೆ ಅತ್ಯುತ್ತಮ ಕಾರ್ಯನಿರ್ವಹಣೆಗೆ ಪ್ರೋತ್ಸಾಹಕಗಳನ್ನು ನೀಡಲಾಗುವುದು. 2023ರ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡುವುದಾಗಿ ಮುಖ್ಯಮಂತ್ರಿ ಆಶ್ವಾಸನೆ ನೀಡಿದರು.

ಬೆಂಗಳೂರಿಗೆ ಬಂದ ವಿಶ್ವದ ಅತಿದೊಡ್ಡ ವಾಣಿಜ್ಯ ವಿಮಾನ



ದೇವನಹಳ್ಳಿ: ವಿಶ್ವದ ಅತಿದೊಡ್ಡ ವಾಣಿಜ್ಯ ವಿಮಾನವಾದ ಸೂಪರ್ ಜಂಬೋ ಏರ್‌ಬಸ್-ಎ380 ಶುಕ್ರವಾರ ಮಧ್ಯಾಹ್ನ 3.30ಕ್ಕೆ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು.

ಎಮಿರೇಟ್ಸ್ ಏರ್‌ಲೈನ್ಸ್ ಒಡೆತನದ ಇದು ಡಬಲ್ ಡೆಕ್ಕರ್ ವಿಮಾನವಾಗಿದೆ. ಬೆಳಿಗ್ಗೆ 10 ಗಂಟೆಗೆ ದುಬೈನಿಂದ ಹೊರಟು ಮಧ್ಯಾಹ್ನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ತಲುಪಿದೆ. ಪುನಃ ಈ ವಿಮಾನವು ಬೆಂಗಳೂರಿನಿಂದ ಸಂಜೆ 6.40ಕ್ಕೆ ಹೊರಟಿದ್ದು, ರಾತ್ರಿ 9ಕ್ಕೆ ದುಬೈ ತಲುಪಲಿದೆ.

ಈ ಹಿಂದೆಯೇ ಎಮಿರೇಟ್ಸ್ ಏರ್‌ಲೈನ್ಸ್ ಘೋಷಿಸಿದಂತೆ ಜಂಬೋ ಜೆಟ್‌ನ ಮೊದಲ ಹಾರಾಟವು ಅ. 30ರ ರಾತ್ರಿ ದುಬೈನಿಂದ ಟೇಕಾಫ್ ಆಗಿ ಅ. 31ಕ್ಕೆ ಬೆಂಗಳೂರಿನಲ್ಲಿ ಲ್ಯಾಂಡ್ ಆಗಬೇಕಿತ್ತು. ಆದರೆ, ಎರಡು ವಾರದ ಮುನ್ನವೇ ಬೃಹತ್ ಲೋಹದ ಹಕ್ಕಿ ಬೆಂಗಳೂರು ತಲುಪಿರುವುದು ವಿಮಾನ ಪ್ರಯಾಣಿಕರಲ್ಲಿ ಸಂತಸ ತಂದಿದೆ.

ಮೀಸಲಾತಿ ಹೆಚ್ಚಳದಿಂದ ಕಾಂಗ್ರೆಸ್‌ಗೆ ನಡುಕ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಪರಿಶಿಷ್ಟರ ಮೀಸಲಾತಿ ಹೆಚ್ಚಳ ಮಾಡಿದ ನಂತರ ಸಿದ್ದರಾಮಯ್ಯ ಸೇರಿದಂತೆ ಕರ್ನಾಟಕ ಕಾಂಗ್ರೆಸ್ ನಾಯಕರಿಗೆ ಬೆವರಿಳಿಯತೊಡಗಿದೆ ಎಂದು ಬಿಜೆಪಿ ಕುಟುಕಿದೆ.

‘ಸಿದ್ದರಾಮಯ್ಯ ಅವರೇ, ನೀವು ಮತ ಬ್ಯಾಂಕ್ ಆಗಿ ಬಳಸಿದ್ದ ದಲಿತ ಸಮುದಾಯ ಬಿಜೆಪಿ ಜತೆ ಕೈಜೋಡಿಸುತ್ತಿರುವುದು ಸಹಿಸಲು ಆಗುತ್ತಿಲ್ಲವೇ? ಅಧಿಕಾರ ಇದ್ದಾಗ ಪರಿಶಿಷ್ಟರ ಬೇಡಿಕೆ ಮನ್ನಿಸದೆ ಕಾಲಹರಣ ಮಾಡಿದ್ದೀರಿ. ಬಿಜೆಪಿ ನೇತೃತ್ವದ ಬಸವರಾಜ ಬೊಮ್ಮಾಯಿ ಸರ್ಕಾರ ಮಾಡಿದ ಮೀಸಲಾತಿ ಹೆಚ್ಚಳದ ನಿರ್ಧಾರ ಬಿಸಿ ತುಪ್ಪವಾಗಿದೆ. ಕಾಂಗ್ರೆಸ್ ಮೀಸಲಾತಿ ವಿರೋಧಿ ಪಕ್ಷ ’ ಎಂದು ಬಿಜೆಪಿ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿದೆ.

‘ಮೋದಿ ಸರ್ಕಾರಕ್ಕೆ ಭಯ ಇದ್ದಿದ್ದರೆ ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದಾಗುತ್ತಿರಲಿಲ್ಲ. ರಾಮಮಂದಿರ ನಿರ್ಮಾಣ ಆಗುತ್ತಿರಲಿಲ್ಲ, ಸಿದ್ದರಾಮಯ್ಯ ಅವರೇ, ಇವೆಲ್ಲವನ್ನೂ ವಿರೋಧಿಸಿದ ದೇಶದೊಳಗಿನ ದ್ರೋಹಿಗಳಿಂದ ನಮಗೆ ಭಯ ಕಾಡುತ್ತಿರುವುದು ನಿಜ’ ಎಂದು ಬಿಜೆಪಿ ಹೇಳಿದೆ.

‘ನಮ್ಮ ಮಾರ್ಗದರ್ಶಕರಾದ ಬಿ.ಎಸ್.ಯಡಿಯೂರಪ್ಪ ಅವರು ಈಗಷ್ಟೇ ಪ್ರಚಾರ ಆರಂಭಿಸಿದ್ದಾರೆ. ಆಗಲೇ ಕಾಂಗ್ರೆಸ್ ಕಕ್ಕಾಬಿಕ್ಕಿಯಾಗಿದೆ. ಸಿದ್ದರಾಮಯ್ಯ ಬೆವರಿದ್ದಾರೆ. ಜನ ಸಂಕಲ್ಪ ಯಾತ್ರೆಯ ಆರಂಭದಲ್ಲೇ ಹೀಗಾದರೆ ಮುಂದೆ ಹೇಗೆ’ ಎಂದು ಪ್ರಶ್ನಿಸಿದೆ.

ಹೊಸೂರು: 100ಕ್ಕೂ ಅಧಿಕ ಮಕ್ಕಳು ಅಸ್ವಸ್ಥ

ಕೃಷ್ಣಗಿರಿ (ಪಿಟಿಐ): ಜಿಲ್ಲೆಯ ಹೊಸೂರಿನಲ್ಲಿರುವ ಪಾಲಿಕೆಯ ಮಾಧ್ಯಮಿಕ ಶಾಲೆಯ 100ಕ್ಕೂ ಅಧಿಕ ಮಕ್ಕಳು ಶುಕ್ರವಾರ ಅಸ್ವಸ್ಥಗೊಂಡಿದ್ದಾರೆ. ಶಾಲೆಯ ಆವರಣದಲ್ಲಿನ ಸೆಪ್ಟಿಕ್ ಟ್ಯಾಂಕ್‌ನಿಂದ ಅನಿಲ ಸೋರಿಕೆಯಾಗಿದ್ದೆ ಈ ಅವಘಡಕ್ಕೆ ಕಾರಣ ಎನ್ನಲಾಗಿದೆ.

‘ತರಗತಿಯಲ್ಲಿದ್ದಾಗ ಕೆಲ ಮಕ್ಕಳಲ್ಲಿ ವಾಕರಿಕೆ ಕಂಡುಬಂದರೆ, ಕೆಲವರು ವಾಂತಿ ಮಾಡಿಕೊಂಡರು. ಇವರ ಪೈಕಿ 67 ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಜಯಚಂದ್ರ ಭಾನು ರೆಡ್ಡಿ ಅವರು ಶಾಲೆ ಹಾಗೂ ಆಸ್ಪತ್ರೆಗೆ ಭೇಟಿ, ಮಕ್ಕಳ ಆರೋಗ್ಯ ವಿಚಾರಿಸಿದರು.

ಸ್ಫೋಟಕ ಸಿಡಿದು ಕಾರ್ಮಿಕ ಸಾವು

ಮಾಲೂರು (ಕೋಲಾರ ಜಿಲ್ಲೆ): ತಾಲ್ಲೂಕಿನ ಟೇಕಲ್ ಹೋಬಳಿಯ ಅನಿಮಿಟ್ಟನಹಳ್ಳಿ ಬಳಿ ಕಲ್ಲು ಕ್ವಾರಿಯಲ್ಲಿ ಗುರುವಾರ ಸಂಜೆ ಸ್ಫೋಟಕ ಸಿಡಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಆದರೆ, ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ಬಿಂಬಿಸಲು ಯತ್ನಿಸಲಾಗಿದೆ.

ಬಿಹಾರ ಮೂಲದ ರಾಕೇಶ್ ಸಾಣಿ (34) ಮೃತಪಟ್ಟವರು.

ಟಿಪ್ಪರ್ ಹರಿದು ಮೃತಪಟ್ಟಿರುವುದಾಗಿ ಮಾಸ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮೃತ ರಾಕೇಶ್ ಅವರ ತಮ್ಮ ನಿತೀಶ್ ಕುಮಾರ್ ಈ ರೀತಿ ದೂರು ನೀಡಿದ್ದರು. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ಕೂಡ ನಡೆಸಲಾಗಿದೆ. ಸ್ಫೋಟಕ ಸಿಡಿತದಲ್ಲಿ ಗಾಯ ಗೊಂಡಿರುವ ಬಿಹಾರ ಮೂಲದ ಮತ್ತೊಬ್ಬ ಕಾರ್ಮಿಕ ಅಜಾದ್ ಎಂಬುವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಅಪಘಾತವೆಂದು ಪ್ರಕರಣ ದಾಖಲಿಸಿದ ಮಾಸ್ತಿ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ವಸಂತಕುಮಾರ್ ಅವರನ್ನು ಅಮಾನತುಗೊಳಿಸಲಾಗಿದೆ. ಸ್ಫೋಟಕ ಸರಬರಾಜು ಮಾಡಿದ ದೀಪೆನ್ ಎಂಬಾತನನ್ನೂ ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I SYED ARIFULLA SAHAB HUSAINI RESIDING AT NO. 29 BETTADASANAPURA 5TH CROSS. BEHIND XAVIER SCHOOL VITTA SANDRA VILLAGE, MAHALAXMI NAGAR, BANGLORE SOUTH 560100,HAVE CHANGED MY NAME TO NEW NAME SYED ARIF ULLAH. VIDE AFFIDEVIT DATED 6.10.2022, BEFORE NOTARY I. KANIKHA RAJA, 97. K.G.HALLI. 2ND CROSS BEHIND C.S.J.CHURCH JALA HALLI WEST. BANGALORE, HENCE FORTH I SHALL BE CALLED NEW NAME SYED ARIF ULLAH.

I, SAROJA A BACHAPPANAVAR @ JAYASHREE P VAIDYA W/o. Vaidya P.R, R/at No.002, Sannidhi Kalpatharu Enclave, 3rd Main, Srinivasanagara, Bengaluru-560085, declare that both the names pertain to me only and henceforth I shall be known as SAROJA A BACHAPPANAVAR vide affidavit dated 13.10.2022 before notary L. Shankaranarayana Bangalore.

I, LAVANYA LAKKIREDDY @ LAVANYA JAKKIREDDY R/a. No. 62, 2nd Main, Samruddi Layout Kurudusonnenahalli, Virgonagar post, Bengaluru-560049, declare that both the names pertain to me and henceforth I shall be known as LAVANYA LAKKIREDDY vide affidavit dated 14.10.2022, before notary C.V. Earappa, Bangalore.

6396841F SEP/DSR, Rasham Pal Singh, 2ATC, son name record's AKSHIT KUMAR instead of AKSHIT SAINI notary K.V. Mani.

I, SATHIYA Narayanan. K aged about 37 years R/a #34, G-1, Padmanabha residency, 3rd cross, 10th main, Gururaja layout, Banashankari 3rd stage, Bangalore-70, have changed my name as Sathiya Narayanan vide affidavit 14/10/2022 before H.G.Padmanabha Rao, notary Bangalore.

14817456M HAV/MT, Anandan R 2ATC, my son name record's A EZHILAN instead of EZHILAN A notary K.V. Mani.

14817456M HAV/MT, Anandan R 2ATC, my son name record's A LUKESH instead of LUKESH A notary K.V. Mani.

Lost

LOST

Gunja Koteswara Rao S/o. Late. Mastanaiah R/o. No. 67, Shubhodaya Residency, NGEF Layout, mallathalli Main Road, Bengaluru informs that I have lost the following Original Sale Deed 342/38-39, 56/81-82 and 7190/87-88 along with other title deed pertaining to said sale deeds for property bearing Site No. 9 & 10, House List No. 179, Khatha No. 156, New BBMP Khatha No. 780/4725/2691/156/179/9,10,11,12 situated at Nagadevanahalli Village, Kengeri Hobli, Bangalore South Taluk, Bangaloreand In this regard I have lodged a Police Complaint on their portal. If found, please call me on my mobile number :8073730249.

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
9901641752 : 9886213331
080 - 45557163 / 164



ನಗರದಲ್ಲಿ ಶುಕ್ರವಾರ ವಿಶ್ವ ಮೊಟ್ಟೆ ದಿನಾಚರಣೆ ಅಂಗವಾಗಿ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ವತಿಯಿಂದ ಜಾಗೃತಿ ಜಾಥಾ ನಡೆಯಿತು. ಮಹಾಮಂಡಳ ಅಧ್ಯಕ್ಷ ಡಿ.ಕೆ. ಕಾಂತರಾಜು, ವ್ಯವಸ್ಥಾಪಕ ನಿರ್ದೇಶಕ ಡಾ. ಎಂ. ಪ್ರಕಾಶ್ ಇದ್ದರು.

ಪಾಲಿಕೆ ನೈರ್ಮಲ್ಯ ನಿರೀಕ್ಷಕನಿಗೆ ₹ 1 ಕೋಟಿ ದಂಡ, 4 ವರ್ಷ ಸಜೆ



ಶಿವಲಿಂಗ ಕೊಂಡಗೂಳಿ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ ಹಿರಿಯ ನೈರ್ಮಲ್ಯ ನಿರೀಕ್ಷಕ ಶಿವಲಿಂಗ ಕೊಂಡಗೂಳಿ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪ ಸಾಬೀತಾಗಿದ್ದು, ಅವರಿಗೆ ಇಲ್ಲಿಯ 3ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ನಾಲ್ಕು ವರ್ಷ ಸಜೆ ಹಾಗೂ ₹ 1 ಕೋಟಿ ದಂಡ ವಿಧಿಸಿ ಶುಕ್ರವಾರ ತೀರ್ಪು ನೀಡಿದೆ.

ದಂಡ ಕಟ್ಟಲು ಶಿವಲಿಂಗ ವಿಫಲ ನಾದರೆ ಮತ್ತೆ ಒಂದು ವರ್ಷ ಸಾದಾ ಸಜೆ ಅನುಭವಿಸಬೇಕು ಎಂದು ನ್ಯಾಯಾಧೀಶ ಬಿ.ಬಿ.ಜಕಾತಿ ಅವರು ತೀರ್ಪಿನಲ್ಲಿ ಹೇಳಿದ್ದಾರೆ. ಶಿವಲಿಂಗ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮೂಲಗಳು ನೀಡಿದ ಮಾಹಿತಿ ಆಧರಿಸಿ ಲೋಕಾಯುಕ್ತ ಪೊಲೀಸರು 2013ರ ಫೆ. 15ರಂದು ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.

‘ಆದೇಶದ ಬಳಿಕ ಕೊಂಡಗೂಳಿಯನ್ನು ಬಂಧಿಸಿ ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಅವರು ಆದಾಯಕ್ಕಿಂತ ಶೇ 237.5ರಷ್ಟು ಹೆಚ್ಚು ಆಸ್ತಿ ಹೊಂದಿರುವುದು ತನಿಖೆಯಲ್ಲಿ ಸಾಬೀತಾಗಿತ್ತು’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿಗಣೇಶ್ ಅವರು ತಿಳಿಸಿದರು.

ಕೆನಡಾದಲ್ಲಿ ಜನಾಭಿಪ್ರಾಯ ಸಂಗ್ರಹ: ಕಳವಳ

ನವದೆಹಲಿ (ಪಿಟಿಐ): ಪ್ರತ್ಯೇಕ ಖಾಲಿಸ್ತಾನದ ಬೇಡಿಕೆಗೆ ಸಂಬಂಧಿಸಿದಂತೆ ಕೆಲ ಭಾರತ ವಿರೋಧಿ ಶಕ್ತಿಗಳು ಕೆನಡಾದಲ್ಲಿ ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗಿರುವ ಬಗ್ಗೆ ಭಾರತ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.

‘ಕೆನಡಾ ರಾಯಭಾರ ಕಚೇರಿಗೆ ಹಾಗೂ ಅಲ್ಲಿನ ಸರ್ಕಾರಕ್ಕೆ ಭಾರತ ಸರ್ಕಾರ ತನ್ನ ಕಳವಳವನ್ನು ವಿವರಿಸಿದೆ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

‘ಭಾರತ ವಿರೋಧಿ ಶಕ್ತಿಗಳಿಂದ ನಡೆಯಲಿರುವ ಜನಾಭಿಪ್ರಾಯ ಸಂಗ್ರಹಕ್ಕೆ ಸಂಬಂಧಿಸಿ ನಮ್ಮ ನಿಲುವು ಸ್ಪಷ್ಟವಾಗಿದ್ದು, ಕೆನಡಾ ಸರ್ಕಾರಕ್ಕೆ ತಿಳಿಸಿದ್ದೇವೆ. ಈ ಮಾಹಿತಿಯನ್ನು ನಾವು ಬಹಿರಂಗವಾಗಿಯೇ ಹಂಚಿಕೊಂಡಿದ್ದೇವೆ’ ಎಂದೂ ಅವರು ಹೇಳಿದ್ದಾರೆ.



ಶನಿವಾರ, ಅಕ್ಟೋಬರ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 285 | ಪುಟ 34
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

ನ. 10ರಿಂದ ಚೆನ್ನೈ–ಮೈಸೂರು ನಡುವೆ ವಂದೇ ಭಾರತ್ ರೈಲು 4
ಆಡಳಿತ ಸೂಚ್ಯಂಕ: ರಾಜ್ಯಕ್ಕೆ 6ನೇ ಸ್ಥಾನ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,920 ▲	17,185 ▲	₹52,250 (ಬೆಂಗಳೂರು) ▼	₹58,200 (ಬೆಂಗಳೂರು) ▼	82.19 ▲

‘ಚುನಾವಣಾ ಬಾಂಡ್: ಪ್ರತಿ ಹಂತದಲ್ಲೂ ಪಾರದರ್ಶಕತೆ’

ನವದೆಹಲಿ: ‘ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಹಣ ನೀಡುವ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಕಪ್ಪುಹಣವನ್ನು ಈ ಮೂಲಕ ಪಕ್ಷಗಳು ಪಡೆಯಲು ಅವಕಾಶವಿಲ್ಲ’ ಎಂದು ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. 9

ಸಾಯಿಬಾಬಾ ಬಿಡುಗಡೆಗೆ ಆದೇಶ


ಸಾಯಿಬಾಬಾ

ಮುಂಬೈ: ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ, ಗಾಲಿಕುರ್ಚಿಯಲ್ಲಿರುವ ಜಿ.ಎನ್. ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಲಾಗಿದ್ದು ತಕ್ಷಣ ಬಿಡುಗಡೆ ಮಾಡುವಂತೆ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠವು ಶುಕ್ರವಾರ ಆದೇಶಿಸಿದೆ. ನಕ್ಸಲರ ಜತೆಗೆ ನಂಟು ಇದೆ ಎಂಬ ಕಾರಣಕ್ಕೆ 8 ವರ್ಷಗಳ ಹಿಂದೆ ಅವರನ್ನು ಬಂಧಿಸಲಾಗಿತ್ತು. 9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಹಿಮಾಚಲ ಪ್ರದೇಶ: ನವೆಂಬರ್ 12ರಂದು ಮತದಾನ

ಗುಜರಾತಿಗೆ ಘೋಷಣೆಯಾಗದ ಚುನಾವಣಾ ವೇಳಾಪಟ್ಟಿ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಅಕ್ಟೋಬರ್ 17 ಚುನಾವಣಾ ಅಧಿಸೂಚನೆ ಪ್ರಕಟ	ಅಕ್ಟೋಬರ್ 25 ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ
ಅಕ್ಟೋಬರ್ 27 ನಾಮಪತ್ರಗಳ ಪರಿಶೀಲನೆ	ಅಕ್ಟೋಬರ್ 29 ನಾಮಪತ್ರ ಹಿಂಪಡೆಯಲು ಕೊನೆಯ ದಿನಾಂಕ

ನವದೆಹಲಿ: ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಹಿಮಾಚಲ ಪ್ರದೇಶ ವಿಧಾನಸಭೆಗೆ ಒಂದೇ ಹಂತದಲ್ಲಿ (ನವೆಂಬರ್ 12) ಚುನಾವಣೆ ನಡೆಯಲಿದೆ. ಡಿಸೆಂಬರ್ 8ರಂದು ಮತ ಎಣಿಕೆ ನಡೆಸಲಾಗುತ್ತದೆ ಎಂದು ಚುನಾವಣಾ ಆಯೋಗ ಪ್ರಕಟಿಸಿದೆ.

ಗುಜರಾತ್ ಮತ್ತು ಹಿಮಾಚಲ ಪ್ರದೇಶದ ವಿಧಾನಸಭೆಗೆ ಶುಕ್ರವಾರವೇ ಚುನಾವಣಾ ದಿನಾಂಕ ಘೋಷಿಸಲಾಗುತ್ತದೆ ಎಂಬ ನಿರೀಕ್ಷೆಯಲ್ಲಿ ರಾಜಕೀಯ ಪಕ್ಷಗಳು ಇದ್ದವು. ಆದರೆ, ಚುನಾವಣಾ ಆಯೋಗವು ಹಿಮಾಚಲ ಪ್ರದೇಶದ ವಿಧಾನಸಭೆಯ ಚುನಾವಣಾ ದಿನಾಂಕವನ್ನಷ್ಟೇ ಘೋಷಣೆ ಮಾಡಿದೆ.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ‘ಪ್ರಜಾಪ್ರಭುತ್ವದ ಹಬ್ಬದಲ್ಲಿ ಅತ್ಯಧಿಕ ಸಂಖ್ಯೆ ಮತದಾರರು ಪಾಲ್ಗೊಳ್ಳುವಂತೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದರು.

ಗುಜರಾತ್ ವಿಧಾನಸಭೆಗೆ ಚುನಾವಣೆ ದಿನಾಂಕ ಘೋಷಣೆ ಮಾಡದ ಆಯೋಗದ ಕ್ರಮಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಮತದಾನ ನಡೆದ ಒಂದು ತಿಂಗಳ ಬಳಿಕ ಮತ ಎಣಿಕೆ ನಡೆಸುವ ಆಯೋಗದ ಕ್ರಮವನ್ನೂ ಪ್ರಶ್ನಿಸಿವೆ.

‘ಗುಜರಾತ್‌ನಲ್ಲಿ ಇನ್ನಷ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಲು ಹಾಗೂ ಹೊಸ ಯೋಜನೆಗಳನ್ನು ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅನುಕೂಲ ಮಾಡಿಕೊಡಲು ಚುನಾವಣಾ ದಿನಾಂಕವನ್ನು ಘೋಷಿಸಿಲ್ಲ. ಇದರಲ್ಲಿ ಆಶ್ಚರ್ಯವೇನಿಲ್ಲ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಆದರೆ, 2017ರಲ್ಲೂ ಎರಡು ರಾಜ್ಯಗಳಿಗೆ ಪ್ರತ್ಯೇಕವಾಗಿ ಚುನಾವಣಾ ದಿನಾಂಕ ಘೋಷಣೆ ಮಾಡಲಾಗಿತ್ತು. ಆಯೋಗದಿಂದ ಯಾವುದೇ ಲೋಪ ಆಗಿಲ್ಲ ಎಂದು ಚುನಾವಣಾ ಆಯೋಗ ಸಮರ್ಥಿಸಿಕೊಂಡಿದೆ. ಗುಜರಾತ್ ವಿಧಾನಸಭೆಯ ಚುನಾವಣೆಯನ್ನು ಮುಂದಿನ ದಿನಗಳಲ್ಲಿ ಘೋಷಿಸಲಾಗುವುದು ಎಂದು ಆಯೋಗ ತಿಳಿಸಿದೆ.

ಹಿಮಾಚಲ ಪ್ರದೇಶದಲ್ಲಿ ಪ್ರಧಾನಿ ಅವರು ಇತ್ತೀಚೆಗೆ ಹಲವು ಯೋಜನೆಗಳಿಗೆ ಚಾಲನೆ ನೀಡಿದ್ದು, ಮತ್ತೆ ಅಧಿಕಾರಕ್ಕೆ ಬರುವ ವಿಶ್ವಾಸದಲ್ಲಿ ಬಿಜೆಪಿ ಇದೆ. ಕಳೆದ ಚುನಾವಣೆಯಲ್ಲಿ ಕಮಲ ಪಾಳಯಕ್ಕೆ ಪ್ರಬಲ ಪೈಪೋಟಿ ನೀಡಿದ್ದ ಕಾಂಗ್ರೆಸ್ ಈ ಸಲ ಆಂತರಿಕ ಕಲಹದಿಂದ ಹೈರಾಣಾಗಿದೆ. ಜಿ–23 ಗುಂಪಿನ ಆನಂದ ಶರ್ಮಾ ಅವರು ಹೈಕಮಾಂಡ್ ಜತೆಗೆ ಮುನಿಸಿಕೊಂಡು ಪಕ್ಷದ ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡಿದ್ದಾರೆ. ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ಗಳಿಸಿರುವ ಆಮ್ ಆದ್ಮಿ ಪಕ್ಷವು, ನೆರೆಯ ರಾಜ್ಯದಲ್ಲಿ ತನ್ನ ತಾಕತ್ತು ತೋರಿಸುವ ಹವಣಿಕೆಯಲ್ಲಿದೆ. 2017ರಲ್ಲಿ ಹಿಮಾಚಲ ಪ್ರದೇಶಕ್ಕೆ ಅ. 12ರಂದು ಹಾಗೂ ಗುಜರಾತ್‌ಗೆ ಅ. 25ರಂದು ಚುನಾವಣೆ ಘೋಷಿಸಲಾಗಿತ್ತು. ಡಿ. 18ರಂದು ಮತ ಎಣಿಕೆ ನಡೆದಿತ್ತು.

ಈ ಸಲ ಎರಡು ರಾಜ್ಯಗಳಿಗೆ ಒಂದೇ ದಿನ ಮತ ಎಣಿಕೆ ನಡೆಯಲಿದೆಯಾ ಎಂಬ ಪ್ರಶ್ನೆಗೆ ಮುಖ್ಯ ಚುನಾವಣಾ ಆಯುಕ್ತ, ‘ಗುಜರಾತ್ ವಿಷಯ ಬಂದಾಗ ಈ ಬಗ್ಗೆ ನಿಮಗೆ ಹೇಳುತ್ತೇವೆ’ ಎಂದು ಪ್ರತಿಕ್ರಿಯಿಸಿದರು.

9ನೇ ಪುಟ ನೋಡಿ

ಜ್ಞಾನವಾಪಿ ಮಸೀದಿ: ಕಾರ್ಬನ್ ಡೇಟಿಂಗ್ ಪರೀಕ್ಷೆ ಇಲ್ಲ

ಲಖನೌ/ ವಾರಾಣಸಿ: ವಾರಾಣಸಿಯ ಕಾಶಿ ದೇವಾಲಯ ಸಂಕೀರ್ಣದಲ್ಲಿರುವ ಜ್ಞಾನವಾಪಿ ಮಸೀದಿಯಲ್ಲಿ ಪತ್ತೆಯಾಗಿರುವ ಶಿವಲಿಂಗ ರೂಪದ ರಚನೆಯ ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅನುಮತಿ ನೀಡಲು ವಾರಾಣಸಿ ನ್ಯಾಯಾಲಯ ನಿರಾಕರಿಸಿದೆ.

ಈ ಸಂಬಂಧ ನಾಲ್ವರು ಹಿಂದೂ ಮಹಿಳೆಯರು ಸಲ್ಲಿಸಿದ್ದ ನೂತನ ಅರ್ಜಿಯನ್ನು ನ್ಯಾಯಾಲಯವು ವಜಾ ಮಾಡಿದೆ.

‘ಮಸೀದಿಯ ಆವರಣದಲ್ಲಿರುವ ನೀರಿನ ತೊಟ್ಟಿಯನ್ನು ರಕ್ಷಿಸುವಂತೆ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಸೂಚಿಸಿದೆ. ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅವಕಾಶ ನೀಡಿದರೆ, ಆ ಜಾಗಕ್ಕೆ ಹಾನಿಯಾಗುವ ಸಾಧ್ಯತೆ ಇದೆ. ಹಾಗೆ ಆದರೆ, ಅದು ಸುಪ್ರೀಂ ಕೋರ್ಟ್‌ನ ಸೂಚನೆಯ ಉಲ್ಲಂಘನೆಯಾಗುತ್ತದೆ. ಜತೆಗೆ ಅದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಸಾಧ್ಯತೆಯೂ ಇದೆ’ ಎಂದು ವಾರಾಣಸಿ ಜಿಲ್ಲಾ ನ್ಯಾಯಾಧೀಶ ಎ.ಕೆ.ವಿಶ್ವೇಶ್ ತೀರ್ಪು ನೀಡಿದ್ದಾರೆ.

ಜ್ಞಾನವಾಪಿ ಮಸೀದಿಯಲ್ಲಿ ಪೂಜೆಗೆ ಅವಕಾಶ ನೀಡಬೇಕು’ ಎಂದು ಕೋರಿ ಐವರು ಹಿಂದೂ ಮಹಿಳೆಯರು ಸಲ್ಲಿಸಿದ ಮೂಲ ಅರ್ಜಿಯು ಇನ್ನೂ ವಿಚಾರಣೆ ಹಂತದಲ್ಲಿದೆ.

ಪ್ರಜಾವಾಣಿ @75

ಅಮೃತಮಹೋತ್ಸವ ಸಂಭ್ರಮ

ನಿಮ್ಮ ಮೆಚ್ಚಿನ ‘ಪ್ರಜಾವಾಣಿ’ ಪತ್ರಿಕೆಯು ಇಂದು ಅಮೃತಮಹೋತ್ಸವದ ಸಂಭ್ರಮಕ್ಕೆ ಹೆಜ್ಜೆ ಇಟ್ಟಿದೆ. ಇಂದಿಗೆ ಸರಿಯಾಗಿ 74 ವರ್ಷಗಳ ಹಿಂದೆ (15-10-1948) ನಾಡಿನ ಜನರ ಶಕ್ತಿಯುತ ದನಿಯಾಗಿ ‘ಪ್ರಜಾವಾಣಿ’ ಆರಂಭವಾಯಿತು. ಮೊದಲ ದಿನದಿಂದಲೂ ಅಭಿಪ್ರಾಯವನ್ನು ಹೇರದೆ, ಸುದ್ದಿಯ ಘನತೆಯನ್ನು ಬಿಟ್ಟುಕೊಡದೆ ನಿಷ್ಪಕ್ಷಪಾತ, ನಿರ್ಭಿಡೆಯ ಪತ್ರಿಕೋದ್ಯಮ ನಡೆಸಿಕೊಂಡು ಬಂದಿದೆ. ಪತ್ರಿಕಾ ವೃತ್ತಿಯ ಪಾವಿತ್ರ್ಯವನ್ನು ಕಾಪಾಡುತ್ತಿದೆ.

ಸಂಸ್ಥಾಪಕ ಕೆ.ಎನ್.ಗುರುಸ್ವಾಮಿ ಅವರ ದೂರದೃಷ್ಟಿಯ ಫಲವಾಗಿ ಪತ್ರಿಕೆ ರೂಪುಗೊಂಡಿತು. ಭವಿಷ್ಯದ ದಿನಗಳ ಬಗ್ಗೆ ಭವ್ಯ ಕನಸುಗಳನ್ನು ಕಾಣುತ್ತಿದ್ದ ಗುರುಸ್ವಾಮಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ‘ಪ್ರಜಾವಾಣಿ’ ಅಲ್ಪ ಸಮಯದಲ್ಲಿಯೇ ಜನಪ್ರಿಯವಾಯಿತು. ಆರಂಭದ ಕಾಲದಿಂದಲೂ ಜನರ ಒಡನಾಡಿಯಾಗಿ ಬೆಳೆದ ಪತ್ರಿಕೆ ಈಗ ಪ್ರಬುದ್ಧ ಹಂತಕ್ಕೆ ಬಂದು ನಿಂತಿದೆ.

1948 ಎಂದರೆ ಅದೇ ಆಗ ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಅದು ಪರಿವರ್ತನೆಯ ಕಾಲಘಟ್ಟವಾಗಿತ್ತು. ಹರಿದುಹಂಚಿಹೋಗಿದ್ದ ರಾಜ್ಯಗಳನ್ನು ಒಂದುಗೂಡಿಸುವ ಪ್ರಕ್ರಿಯೆ ನಡೆಯುತ್ತಿತ್ತು. ಒಡೆದ ಮನಸ್ಸುಗಳನ್ನು ಸೇರಿಸುವ ಕೆಲಸವೂ ಆಗುತ್ತಿತ್ತು. ಇಂತಹ ಪರ್ವ ಕಾಲದಲ್ಲಿ ಆರಂಭವಾದ ‘ಪ್ರಜಾವಾಣಿ’ ನಿಷ್ಪಕ್ಷಪಾತ ರೀತಿಯಲ್ಲಿ ವರದಿಯನ್ನು ಮಂಡಿಸುವ ಮತ್ತು ಯಾವುದೇ ಸಿದ್ಧಾಂತಕ್ಕೆ ಜೋತು ಬೀಳದೆ ಘಟನೆಗಳನ್ನು ಇದ್ದದ್ದು ಇದ್ದಂತೆ ಚಿತ್ರಿಸುವ ಬದ್ಧತೆಯೊಂದಿಗೆ ಮುನ್ನಡೆಯಿತು.

ಸುದ್ದಿಯು ‘ಖರೀದಿಸಬಹುದಾದ ಸರಕು’ ಎಂದು ಪರಿಗಣಿಸಲಾಗಿರುವ ದುರದೃಷ್ಟಕರ ಬೆಳವಣಿಗೆಯ ಇಂದಿನ ಕಾಲಘಟ್ಟದಲ್ಲೂ ‘ಪ್ರಜಾವಾಣಿ’ಯು ಜನರ ಹಾಗೂ ಓದುಗರ ಹಿತಾಸಕ್ತಿಯೇ ಮುಖ್ಯ ಎಂದು ಬಲವಾಗಿ ನಂಬಿದೆ. ಈ ನಂಬಿಕೆ ಮತ್ತು ಸ್ವತಂತ್ರ ಪತ್ರಿಕೋದ್ಯಮವನ್ನು ಉದ್ದಕ್ಕೂ ದೃಢಚಿತ್ತದಿಂದ ನಡೆಸಿಕೊಂಡು ಬಂದಿದೆ.

ಪತ್ರಿಕೆಯು ಕಾಲಕಾಲಕ್ಕೆ ಹೊಸ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿದೆ. ಅಂತರ್ಜಾಲ ತಾಣ ಮತ್ತು ಇ-ಪೇಪರ್ ಗೂ ಅಸಂಖ್ಯಾತ ಓದುಗರಿದ್ದಾರೆ. ಪ್ರಜಾವಾಣಿ ಆ್ಯಪ್ ಜನಮೆಚ್ಚುಗೆ ಪಡೆದಿದೆ. ಪಾಡ್ ಕಾಸ್ಟ್, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಜನಬೆಂಬಲ ಪಡೆದುಕೊಂಡಿವೆ.

74 ವರ್ಷಗಳಿಂದಲೂ ಕನ್ನಡನಾಡಿನ ಜೀವನಾಡಿಯೇ ಆಗಿರುವ ‘ಪ್ರಜಾವಾಣಿ’ಯ ಅಮೃತಮಹೋತ್ಸವದ ಸಂತಸದ ಹೊತ್ತಿನಲ್ಲಿ ನಮ್ಮೆಲ್ಲ ಓದುಗರಿಗೆ, ವಿತರಕರಿಗೆ, ಜಾಹೀರಾತುದಾರರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಾವು ಪತ್ರಿಕಾ ತತ್ವ ಸಿದ್ಧಾಂತಕ್ಕೆ ಕಟಿಬದ್ಧರಾಗಿದ್ದೇವೆ. ಜನಸಾಮಾನ್ಯರ ದೂರುದುಮ್ಮಾನಗಳಿಗೆ ಯಾವತ್ತೂ ಕಿವಿಯಾಗಿರುತ್ತೇವೆ. ಪತ್ರಿಕೋದ್ಯಮದ ಉನ್ನತ ಮೌಲ್ಯಗಳನ್ನು ಎತ್ತಿಹಿಡಿಯುತ್ತೇವೆ ಎಂದು ಪುನರುಚ್ಚರಿಸುತ್ತೇವೆ. ನಮ್ಮ ಬದ್ಧತೆಯು ಹೀಗೆಯೇ ಮುಂದುವರಿಯಲಿದೆ. ನಿಮ್ಮ ಸಂಪೂರ್ಣ ಬೆಂಬಲ ಸಿಗುತ್ತದೆ ಎಂಬ ನಂಬಿಕೆ ನಮಗಿದೆ. ನಿಮ್ಮ ಸಲಹೆಗಳಿಗೆ ಸದಾ ಸ್ವಾಗತ.

–ಕಾರ್ಯನಿರ್ವಾಹಕ ಸಂಪಾದಕ

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ

ಹಿಂದಿ ಹೇರಿಕೆ: ಬಂಗಾಳದಲ್ಲಿ ಗಮನಸೆಳೆದ ಕುವೆಂಪು ಚಿತ್ರ

ಕೋಲ್ಕತ್ತ: ಹಿಂದಿ ಹೇರಿಕೆಯನ್ನು ಖಂಡಿಸಿ ಬುಧವಾರ ಇಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಚಿತ್ರ, ಘೋಷಣೆಗಳು ಪ್ರಮುಖವಾಗಿ ಗಮನಸೆಳೆದವು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಹಿಂದಿಯೇತರ ನಾಗರಿಕರ ಮೇಲೆ ಹಿಂದಿ ಭಾಷೆಯನ್ನು ಬಲವಂತದಿಂದ ಹೇರುತ್ತಿದೆ ಎಂದು ಆರೋಪಿಸಿ ನೂರಾರು ಜನರು ಮೆರವಣಿಗೆ ನಡೆಸಿದರು.

ಬಂಗಾಳಿ ಸಂಘಟನೆ ‘ಬಾಂಗ್ಲಾ ಪೊಕ್ಕೋ’ ಕೋಲ್ಕತ್ತದ ಸಾಂಸ್ಕೃತಿಕ ಕೇಂದ್ರವಾದ ‘ರವೀಂದ್ರ ಸದನ್’ನಿಂದ ದಕ್ಷಿಣ ಕೋಲ್ಕತ್ತದ ಹಜ್ರಾ ಕ್ರಾಸಿಂಗ್‌ವರೆಗೆ ಮೆರವಣಿಗೆ ನಡೆಸಿ ಹಿಂದಿ ಹೇರಿಕೆ ಖಂಡಿಸಿ ಕೇಂದ್ರದ ವಿರುದ್ಧ ಅಸಮಾಧಾನ ಹೊರಹಾಕಿತು. ಸಂವಿಧಾನದ 8ನೇ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲ 22 ಭಾಷೆಗಳಿಗೆ ಸಮಾನ ಹಕ್ಕು ನೀಡಬೇಕು ಎಂದು ಒತ್ತಾಯಿಸಲಾಗಿದೆ.

9ನೇ ಪುಟ ನೋಡಿ

ಮೀಸಲಾತಿ ಹೆಚ್ಚಳ: ಸುಗ್ರೀವಾಜ್ಞೆ ಮೂಲಕ ಜಾರಿಗೆ ಸಲಹೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಒಟ್ಟಾರೆ ಶೇಕಡ 6ರಷ್ಟು ಹೆಚ್ಚಿಸುವ ನಿರ್ಧಾರವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲಹೆ ನೀಡಿದ್ದಾರೆ.

8ನೇ ಪುಟ ನೋಡಿ

ಬೌದ್ಧ ಧಮ್ಮ ದೀಕ್ಷೆ ಪಡೆದ 417 ಮಂದಿ

ಯಾದಗಿರಿ: ಜಿಲ್ಲೆಯ ಸುರಪುರದ ಗೋಲ್ಡನ್ ಕೇವ್ ಬುದ್ಧ ವಿಹಾರದಲ್ಲಿ ಶುಕ್ರವಾರ ಬುದ್ಧ ವಿಹಾರ ಟ್ರಸ್ಟ್ ಮತ್ತು ದಲಿತ ಸಂಘಟನೆಗಳ ಸಹಯೋಗದಲ್ಲಿ ನಡೆದ ಬೌದ್ಧ ಧಮ್ಮ ದೀಕ್ಷೆ ಕಾರ್ಯಕ್ರಮದಲ್ಲಿ 417 ಮಂದಿ ಬೌದ್ಧ ಧರ್ಮ ಸ್ವೀಕರಿಸಿದರು.

ಬೀದರ್‌ನ ಅಣದೂರು ಬುದ್ಧ ವಿಹಾರ ಭಂತೆ ವರಜ್ಯೋತಿ ಮತ್ತು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಮೊಮ್ಮಗಳು ರಮಾತಾಯಿ ಅವರ ಸಮ್ಮುಖದಲ್ಲಿ ಜನರು ಹಿಂದೂ ಧರ್ಮ ತ್ಯಜಿಸಿದರು.

ಈ ವೇಳೆ ರಮಾತಾಯಿ ಮಾತನಾಡಿ, ‘ಅಂಬೇಡ್ಕರ್ ಅವರು ಏಕಾಏಕಿ ಬೌದ್ಧ ಧರ್ಮ ಸ್ವೀಕರಿಸಿಲ್ಲ. 15 ವರ್ಷ ಅಧ್ಯಯನ ಮಾಡಿದರು. ಅಂಬೇಡ್ಕರ್ ಮಾರ್ಗದಲ್ಲಿ ಎಲ್ಲರೂ ನಡೆಯಬೇಕು’ ಎಂದರು.

10ನೇ ಪುಟ ನೋಡಿ





ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಇಲ್ಲಿನ ಕಬೀರ್ ಟ್ರಸ್ಟ್ '100 ದಿನಗಳ ಜ್ಞಾನ ಯಜ್ಞ' ಶೀರ್ಷಿಕೆಯಡಿ ಉಚಿತ ಕೋಚಿಂಗ್ ಹಮ್ಮಿಕೊಂಡಿದೆ.

37ನೇ ವರ್ಷದ ಉಪನ್ಯಾಸ ತರಗತಿಗಳು ಇದಾಗಿದ್ದು, ಇದೇ 30ರಿಂದ ಪ್ರಾರಂಭವಾಗಲಿವೆ. ಜೆ.ಸಿ. ನಗರದ ಕಬೀರ್ ಆಶ್ರಮದಲ್ಲಿ ಪ್ರತಿದಿನ ಬೆಳಿಗ್ಗೆ 6.30ಕ್ಕೆ ತರಗತಿ ನಡೆಯಲಿದೆ. ಅರ್ಜಿಗಳನ್ನು ಕಬೀರ್ ಆಶ್ರಮದ ಮಹಡಿ ಮೇಲಿರುವ ಐ-ಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಕೇಂದ್ರದಲ್ಲಿ ಪಡೆಯಬಹುದು ಎಂದು ಟ್ರಸ್ಟ್‌ನ ಅಧ್ಯಕ್ಷ ಟಿ. ಪ್ರಭಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9845193425

'ಪುಣ್ಯಕೋಟಿ'ಗೆ ನೌಕರರಿಂದ ₹ 100 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ರೂಪಿಸಿರುವ 'ಪುಣ್ಯಕೋಟಿ ದತ್ತು ಯೋಜನೆ'ಗೆ ರಾಜ್ಯದ ಸರ್ಕಾರಿ ನೌಕರರು ₹ 100 ಕೋಟಿ ದೇಣಿಗೆ ನೀಡುತ್ತಿದ್ದಾರೆ.

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದ ನಿಯೋಗ ಶುಕ್ರವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ, ಯೋಜನೆಗೆ ರಾಜ್ಯ ಸರ್ಕಾರಿ ಹಾಗೂ ಸರ್ಕಾರದ ಇತರೆ ಸಂಸ್ಥೆಗಳ ನೌಕರರು ದೇಣಿಗೆ ನೀಡಲು ಸಮ್ಮತಿಸಿರುವ ಪತ್ರವನ್ನು ಹಸ್ತಾಂತರಿಸಿದರು.

'ಬಸವರಾಜ ಬೊಮ್ಮಾಯಿ ಅವರು ಈಚೆಗೆ ನಡೆದ ಸಮಾರಂಭದಲ್ಲಿ ಪುಣ್ಯಕೋಟಿ ಯೋಜನೆಗೆ ಸಹಕರಿಸುವಂತೆ ನೌಕರರನ್ನು ಕೋರಿದ್ದರು. ಸಂಘದ ರಾಜ್ಯ ಕಾರ್ಯಕಾರಿಣಿ ಹಾಗೂ ನಿಗಮ, ಮಂಡಳಿ, ಇತರೆ ಸಂಸ್ಥೆಗಳ ವೃಂದ ಸಂಘಗಳ ಸಭೆಯಲ್ಲಿ ಯೋಜನೆ ಕುರಿತು ವಿಸ್ತೃತವಾಗಿ ಚರ್ಚಿಸಲಾಗಿತ್ತು. ಅಲ್ಲಿ ತೆಗೆದುಕೊಂಡ ನಿರ್ಣಯದಂತೆ ಗ್ರೂಪ್–'ಎ' ಅಧಿಕಾರಿಗಳು ₹ 11 ಸಾವಿರ, ಗ್ರೂಪ್– 'ಬಿ' ಅಧಿಕಾರಿಗಳು ₹ 4 ಸಾವಿರ ಹಾಗೂ 'ಸಿ' ವೃಂದದ ನೌಕರರು ₹ 400 ದೇಣಿಗೆಯನ್ನು ಒಂದು ಬಾರಿಗೆ ಪಾವತಿಸಲು ಸಮ್ಮತಿಸಲಾಗಿದೆ. ಈ ದೇಣಿಗೆಯನ್ನು ಅಕ್ಟೋಬರ್ ಹಾಗೂ ನವೆಂಬರ್ ತಿಂಗಳ ವೇತನದಲ್ಲಿ ಕಡಿತಗೊಳಿಸಲಾಗುತ್ತಿದೆ. ಈ ಮೊತ್ತವು ಸುಮಾರು ₹ 100 ಕೋಟಿಯಾಗಲಿದೆ ಎಂದು ಸಿ.ಎಸ್. ಷಡಾಕ್ಷರಿ ಮಾಹಿತಿ ನೀಡಿದರು.

ನೌಕರರ ಸಂಘದ ಈ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಮುಖ್ಯಮಂತ್ರಿ, ನಿರ್ಗತಿಕ, ರೋಗ ಸಮಸ್ಯೆಯಿಂದ ಬಳಲುವ, ಅಶಕ್ತ, ವಯಸ್ಸಾದ ಹಾಗೂ ರೈತರು ಸಾಕಲು ಸಾಧ್ಯವಾಗದ ಒಂದು ಲಕ್ಷಕ್ಕೂ ಹೆಚ್ಚು ರಾಸುಗಳು ರಾಜ್ಯ ಸರ್ಕಾರದ ಗೋಶಾಲೆಗಳಲ್ಲಿ ಆಶ್ರಯ ಪಡೆದಿವೆ. ಈ ಪುಣ್ಯದ ಕೆಲಸದಲ್ಲಿ ಸರ್ಕಾರಿ ನೌಕರರು ಸ್ವಯಂ ಪ್ರೇರಣೆಯಿಂದ ಕೈಜೋಡಿಸಲು ಮುಂದಾಗಿರುವುದು ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬರ, ಪ್ರವಾಹ, ಕೋವಿಡ್ ಮತ್ತಿತರ ಸಂಕಷ್ಟದ ಸಮಯದಲ್ಲಿ ಸರ್ಕಾರಿ ನೌಕರರು ಅತ್ಯಂತ ಬದ್ಧತೆಯಿಂದ ಕಾರ್ಯನಿರ್ವಹಿಸಿದ್ದಾರೆ. ಸರ್ಕಾರಿ ನೌಕರರ ಕಾರ್ಯ ನಿರ್ವಹಣೆಯಲ್ಲಿ ತಂತ್ರಜ್ಞಾನದ ಅಳವಡಿಕೆ ಕುರಿತು ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದರು.

ನೀಡಿದ್ದ ಭರವಸೆಯಂತೆ ಈ ತಿಂಗಳಲ್ಲೇ ವೇತನ ಆಯೋಗ ರಚಿಸಲಾಗುವುದು. ವೇತನ, ಭತ್ಯೆಗಳ ಜತೆಗೆ ಅತ್ಯುತ್ತಮ ಕಾರ್ಯನಿರ್ವಹಣೆಗೆ ಪ್ರೋತ್ಸಾಹಕಗಳನ್ನು ನೀಡಲಾಗುವುದು.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ನೌಕರರು ರಾಜ್ಯ ಸರ್ಕಾರದ ಅವಿಭಾಜ್ಯ ಅಂಗ. ದೇಣಿಗೆ ನೀಡುವುದು ಸಾಮಾಜಿಕ ಹೊಣೆಗಾರಿಕೆ. ಹಲವು ಬಾರಿ ಇಂತಹ ಕಾರ್ಯಕ್ಕೆ ಸ್ಪಂದಿಸಲಾಗಿದೆ.
ಸಿ.ಎಸ್.ಷಡಾಕ್ಷರಿ
ರಾಜ್ಯಾಧ್ಯಕ್ಷ, ಸರ್ಕಾರಿ ನೌಕರರ ಸಂಘ

ನೌಕರ ವರ್ಗ	ದೇಣಿಗೆ ಮೊತ್ತ (₹ ಗಳಲ್ಲಿ)
ಗ್ರೂಪ್ ಎ	11,000
ಗ್ರೂಪ್ ಬಿ	4,000
ಗ್ರೂಪ್ ಸಿ	400

ಬಿಎಂಆರ್‌ಸಿಎಲ್, ಕೆ–ರೈಡ್ ವರದಿ ಪರಿಶೀಲನೆಗೆ ಸಂಸದ ಪಿ.ಸಿ.ಮೋಹನ್ ಮನವಿ

ಹೆಬ್ಬಾಳ ಜಂಕ್ಷನ್ ದಟ್ಟಣೆ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ನಿವಾರಿಸಲು ಮೇಲ್ಸೇತುವೆಯಲ್ಲಿ ಮತ್ತೆರಡು ಲೇನ್ ನಿರ್ಮಿಸುವ ಕಾಮಗಾರಿ ಕೈಗೆತ್ತಿಕೊಳ್ಳುವ ಮೊದಲು ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ನಿಗಮ) ಮತ್ತು ಕೆ-ರೈಡ್(ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ) ಸಿದ್ಧಪಡಿಸಿರುವ ಸಮಗ್ರ ಯೋಜನಾ ವರದಿ(ಡಿಪಿಆರ್) ಪರಿಶೀಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸದ ಪಿ.ಸಿ.ಮೋಹನ್ ಪತ್ರ ಬರೆದಿದ್ದಾರೆ.



ಪಿ.ಸಿ.ಮೋಹನ್

ಹೆಬ್ಬಾಳ ಜಂಕ್ಷನ್‌ನಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಬಿಡಿಎ ಟೆಂಡರ್ ಆಹ್ವಾನಿಸಿದೆ. ಇದೇ ಜಾಗದಲ್ಲಿ ಮೆಟ್ರೊ ರೈಲು ಮತ್ತು ಉಪನಗರ ರೈಲು ಯೋಜನೆಯ ಕಾಮಗಾರಿಗಳು ನಡೆಯುತ್ತಿವೆ. ಆದ್ದರಿಂದ ಈ ಸಂಸ್ಥೆಗಳ ಜತೆಯೂ ಸಮಾಲೋಚನೆ ನಡೆಸಿ ಅವುಗಳ ಯೋಜನೆಯನ್ನು ಪರಿಶೀಲಿಸಿ ಮುಂದುವರಿಯುವುದು ಸೂಕ್ತ ಎಂದು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಶೀಘ್ರದಲ್ಲೇ ಉದ್ಘಾಟನೆಯಾಗಲಿದೆ. ಲಕ್ಷಾಂತರ ಪ್ರಯಾಣಿಕರು ಈ ಮೇಲ್ಸೇತುವೆ ಮೂಲಕವೇ ಹಾದು ಹೋಗಬೇಕಿದೆ. ಎಲ್ಲಾ ರೀತಿಯ ಸಾರಿಗೆ ವ್ಯವಸ್ಥೆಯನ್ನು ಜನ ಬಳಸುವಂತೆ ಸಮಗ್ರ ಯೋಜನೆ ರೂಪಿಸುವುದು ಸೂಕ್ತ ಎಂದು ಪಿ.ಸಿ.ಮೋಹನ್ ಪತ್ರದಲ್ಲಿ ಹೇಳಿದ್ದಾರೆ.

ಹೆಬ್ಬಾಳ ವೃತ್ತವು ಮುಂದಿನ ದಿನಗಳಲ್ಲಿ ಬಸ್, ಮೆಟ್ರೊ ರೈಲು, ಉಪನಗರ ರೈಲುಗಳ ಪ್ರಮುಖ ಜಂಕ್ಷನ್ ಆಗಲಿದೆ. ಆದ್ದರಿಂದ ಎಲ್ಲಾ ಸಂಸ್ಥೆಗಳು ಸೇರಿ ಸಮಗ್ರ ಯೋಜನೆ ರೂಪಿಸಬೇಕಾದ ಅಗತ್ಯವಿದೆ. ಮೆಟ್ರೊ ಮತ್ತು ಉಪನಗರ ರೈಲು ಯೋಜನೆಗಳ ಸಮಗ್ರ ಯೋಜನಾ ವರದಿಯನ್ನು ಅಧ್ಯಯನ ನಡೆಸಿ ಮುಂದುವರಿಯಬೇಕು ಎಂದು ಮನವಿ ಮಾಡಿದ್ದಾರೆ.

ಮೇಲ್ಸೇತುವೆಗೆ ಟೆಂಡರ್

ಹೆಬ್ಬಾಳ ಮೇಲ್ಸೇತುವೆಗೆ ಮತ್ತೆರಡು ಲೇನ್ ಸೇರ್ಪಡೆ ಮತ್ತು ಕೆಳ ಸೇತುವೆ ನಿರ್ಮಿಸಲು ₹225 ಕೋಟಿ ಮೊತ್ತದ ನವೀಕೃತ ಯೋಜನೆಗೆ ಬಿಡಿಎ ಇತ್ತೀಚೆಗೆ ಟೆಂಡರ್ ಕರೆದಿದೆ.

ವಿಮಾನ ನಿಲ್ದಾಣದಿಂದ ನಗರದ ಕಡೆಗೆ ಮುಕ್ತವಾಗಿ ಸಂಚರಿಸಲು ಎರಡು ಲೇನ್ ಅನ್ನು ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಮಿಸಲು ಉದ್ದೇಶಿಸಿದೆ. ತುಮಕೂರು ರಸ್ತೆಯಿಂದ ಕೆ.ಆರ್. ಪುರದ ಕಡೆಯ ಎರಡು ಬದಿ ಮುಕ್ತವಾಗಿ ಸಂಚರಿಸಲು ಅನುವಾಗುವಂತೆ ಕೆಳ ಸೇತುವೆ ನಿರ್ಮಿಸಲಾಗುತ್ತದೆ. ಇದಕ್ಕೆ ಭೂ ಸ್ವಾಧೀನದ ಅಗತ್ಯ ಇಲ್ಲ. ಮೇಲ್ಸೇತುವೆಯ ಕೆಳಭಾಗದಲ್ಲೇ ಮಾಡಬಹುದು ಎಂದು ಬಿಡಿಎ ಅಂದಾಜಿಸಿದೆ.

ಈ ಯೋಜನೆಗೆ ಬಿಎಂಆರ್‌ಸಿಎಲ್ ಸಮ್ಮತಿಸಿದೆ. ಇನ್ನು ಮೇಲ್ಸೇತುವೆಯನ್ನು ವಿಸ್ತರಿಸಿ ಎರಡು ಲೇನ್‌ಗಳನ್ನು ನಗರದಿಂದ ವಿಮಾನ ನಿಲ್ದಾಣದ ಕಡೆಗೆ ನಂತರದ ಹಂತದಲ್ಲಿ ನಿರ್ಮಿಸಲಾಗುತ್ತದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಅರುಣ್‌ಸಿಂಗ್ ಇಂದಿನಿಂದ ಪ್ರವಾಸ

ಬೆಂಗಳೂರು: ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಇದೇ 15 ರಿಂದ ಮೂರು ದಿನಗಳ ಕಾಲ ಜನಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ.

15ರಂದು ಹಾವೇರಿ, ಹಿರೇಕೆರೂರುಗಳಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಅ.16 ರಂದು ಹುಬ್ಬಳ್ಳಿ–ಧಾರವಾಡಗಳಿಗೆ ಸಂಬಂಧಿಸಿದ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಬೆಳಗಾವಿಗೆ ತೆರಳಿ ಅಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅ.17 ರಂದು ಚಿಕ್ಕೋಡಿಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದೇ ದಿನ ದೆಹಲಿಗೆ ಹಿಂತಿರುಗಲಿದ್ದಾರೆ.

ಸಭೆಗೆ ಗೈರು: ಮಾಹಿತಿ ನೀಡಿದ್ದ ಬಿಡಿಎ ಆಯುಕ್ತ

ಬೆಂಗಳೂರು: ವಿಧಾನಸಭೆ ಅರ್ಜಿಗಳ ಸಮಿತಿ ಗುರುವಾರ ನಡೆಸಿದ ಸಭೆಗೆ ಹಾಜರಾಗಲು ಸಾಧ್ಯವಾಗದಿರುವ ಬಗ್ಗೆ ಅ.7ರಂದೇ ಬಿಡಿಎ ಆಯುಕ್ತ ಕುಮಾರನಾಯಕ ಅವರು ಮಾಹಿತಿ ನೀಡಿದ್ದರು ಎಂದು ಬಿಡಿಎ ಸ್ಪಷ್ಟೀಕರಣ ನೀಡಿದೆ.

ರಾಜಸ್ಥಾನದ ಉದಯಪುರದಲ್ಲಿ ಎಲ್ಲಾ ರಾಜ್ಯಗಳ ಇಂಧನ ಇಲಾಖೆ ಸಚಿವರು ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಸಭೆ ಶುಕ್ರವಾರ(ಅ.14) ನಿಗದಿಯಾಗಿತ್ತು. ಅದರಲ್ಲಿ ಭಾಗವಹಿಸಲು ಪೂರ್ವಭಾವಿಯಾಗಿ ಗುರುವಾರ ರಾಜ್ಯ ಇಂಧನ ಸಚಿವರು ಸಭೆ ಕರೆದಿದ್ದರಿಂದ ಅರ್ಜಿಗಳ ಸಮಿತಿ ಸಭೆಗೆ ಭಾಗವಹಿಸಲು ಸಾಧ್ಯವಾಗಿಲ್ಲ. ಈ ಕುರಿತ ಮಾಹಿತಿಯನ್ನು ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ ಅವರಿಗೆ ಪತ್ರ ಬರೆಯಲಾಗಿದ್ದು, ಅ.10ರಂದು ಅವರಿಂದ ಸ್ವೀಕೃತಗೊಂಡಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲಸೌಕರ್ಯ ಕುರಿತು ಅರ್ಜಿಗಳ ಸಮಿತಿಗೆ ಮಾಹಿತಿ ನೀಡಲು ಪ್ರಾಧಿಕಾರದ ಹಿರಿಯ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು ಎಂದು ಬಿಡಿಎ ಸಾರ್ವಜನಿಕ ಸಂಪರ್ಕಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಆಯುಕ್ತರು ಗೈರಾಗಿದ್ದು ಸಮಿತಿ ಸದಸ್ಯರ ಅಸಮಾಧಾನಕ್ಕೆ ಕಾರಣವಾಯಿತು. ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲು ಸಮಿತಿ ತೀರ್ಮಾನಿಸಿತ್ತು. ಈ ಕುರಿತ ವರದಿಯನ್ನು 'ಪ್ರಜಾವಾಣಿ' ಶುಕ್ರವಾರ ಪ್ರಕಟಿಸಿತ್ತು.

ಮಹಿಳೆಯ ಶಿಕ್ಷಣದ ಹಕ್ಕು ಎತ್ತಿ ಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರ ಅಭಿಪ್ರಾಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ವಾಗತಿಸಿದೆ.

'ಮಹಿಳೆಯರ ಶಿಕ್ಷಣದ ಹಕ್ಕನ್ನು ನ್ಯಾಯಮೂರ್ತಿ ಸುಧಾಂಶು ಧುಲಿಯಾ ಎತ್ತಿ ಹಿಡಿದಿದ್ದಾರೆ. ಹೆಣ್ಣು ಮಗುವಿಗೆ ಮನೆ ಒಳಗೆ ಅಥವಾ ಮನೆಯ ಹೊರಗೆ ಹಿಜಾಬ್ ಧರಿಸಲು ಅಧಿಕಾರ ಇದೆ. ಆ ಹಕ್ಕು ಶಾಲೆಯ ದ್ವಾರದ ಬಳಿ ಮೊಟಕುಗೊಳ್ಳುವುದಿಲ್ಲ ಎಂದು ನ್ಯಾಯಮೂರ್ತಿ ಸುಧಾಂಶು ದುಲಿಯಾ ಅವರು ಹೇಳಿದ ಮಾತು ಜನವಾದಿ ಸಂಘಟನೆ ಅಭಿಪ್ರಾಯವನ್ನು ದೃಢೀಕರಿಸಿದಂತಾಗಿದೆ' ಎಂದು ತಿಳಿಸಿದೆ.

'ಈ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿದೆ. ವಿಸ್ತೃತ ಪೀಠವು ಮಳೆಯರ ಶಿಕ್ಷಣದ ಮೂಲಭೂತ ಹಕ್ಕನ್ನು ಮತ್ತು ಆಯ್ಕೆಯ ಹಕ್ಕನ್ನು ರಕ್ಷಿಸುವ ನೆಲೆಯಲ್ಲಿ ಬರುತ್ತದೆ ಎಂಬ ಆಶಾದಾಯಕವಾದ ನಿರೀಕ್ಷೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೊಂದಿದೆ' ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ಮಾರಮ್ಮ ದೇವಿಯ ಜಾತ್ರೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆ ಮಾರಮ್ಮ ದೇವಿಯ ಜಾತ್ರೆ ಅ. 16ರಿಂದ 18ರ ತನಕ ನಡೆಯಲಿದೆ.

16ರಂದು ಮಧ್ಯಾಹ್ನ 2ಕ್ಕೆ ಮಾರಮ್ಮ ದೇವಿಯ ಪುಣ್ಯಾಹ, ರಾತ್ರಿ 8ಕ್ಕೆ ಬಾಗಲಗುಂಟೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ. 17ರಂದು ಬೆಳಿಗ್ಗೆ 8ಕ್ಕೆ ವಿನಾಯಕ ಮತ್ತು ನವಗ್ರಹಗಳಿಗೆ ಬೆಲ್ಲದ ಆರತಿ ನಡೆಯಲಿದೆ.18ರಂದು ಮಹಾಮಂಗಳಾರತಿ ಜರುಗಲಿದೆ. ಸಂಜೆ ಕುರುಕ್ಷೇತ್ರ ನಾಟಕ ಮತ್ತು ಸಂಗೀತ ರಸ ಸಂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

CLINICAL RESEARCH UNIT (UNANI), MEDICINE
(CCRUM-Ministry of AYUSH, Govt of India,)
NATIONAL INSTITIUTE OF UNANI MEDICINE, CAMPUS, KOTTIGEPALYA, MAGADI MAIN ROAD, BENGALURU-560091
Email-id: crubangalore2000@yahoo.com

TENDER NOTICE NO.03/2022-23

The Deputy Director, CRU, Bengaluru inviting separate sealed tenders from reputed/authorized firms/companies for outsourcing of One Vehicle on rental basis. **Eeco/Maruti Omni/GYPSY/ Mahindra Xylo (Non-Ac) Commercial Vehicle on daily basis is required for Mobilization of OPD Healthcare programme Under SCSP in and around Bengaluru district. Interested parties/Travel Agent/Dealer can obtain TENDER DOCMENTES from above Clinical Research Unit, Bengaluru. Or it may be downloaded from the CCRUM** website: www.ccrum.res.in last date for submission of tender (Duly filled) is **07/11/2022 at 5.00 Pm**.
Any Change/extension in due date will appear in the above website only in future. No press note will be issued further.

Sd/-
DEPUTY DIRECTOR

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/71/2022-23 **ಪ್ರಕಟಣೆ** ದಿನಾಂಕ: 13.10.2022.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಶ್ರೀ ಬಿ. ರಮೇಶ್ ಬಿನ್ ಲೇಟ್ ಭೈರಪ್ಪ, #50, 7ನೇ ಮುಖ್ಯರಸ್ತೆ, 7ನೇ ಇ ಅಡ್ಡರಸ್ತೆ, ರಾಜೀವ್ ನಗರ, ಬೆಂಗಳೂರು ದಕ್ಷಿಣ, ಬೆಂಗಳೂರು, ಕರ್ನಾಟಕ–560 085.	ಆನೇಕಲ್	ಅತ್ತಿಬೆಲೆ	ಬಿದರಗುಪ್ಪೆ	338/3 338/4	0–12 0–13	ವ್ಯವಸಾಯ	ವಸತಿ


ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2609/ಆಕಾರ್/22–23

Ministry of Power Government of India | Azadi Ka Amrit Mahotsav

ಭಾರತ ಸರ್ಕಾರದ ನೀತಿ ಆಯೋಗದ "ಮಿಷನ್ ಲೈಫ್" ಕಾರ್ಯಕ್ರಮ ಎರವಲು ಪಡೆದ ಭೂತಕಾಲದ ಚಿಂತನೆಯನ್ನು, ವರ್ತಮಾನದಲ್ಲಿ ಕಾರ್ಯರೂಪಕ್ಕೆ ತಂದು ಉಜ್ವಲ ಭವಿಷ್ಯದ ಮೇಲೆ ಕೇಂದ್ರೀಕರಿಸುತ್ತದೆ.



ನೋಂದಾಯಿಸಲು ಕೊನೆಯ ದಿನಾಂಕ 25 ಅಕ್ಟೋಬರ್ 2022

ಇಂಧನ ಸಂರಕ್ಷಣೆ ಬಗ್ಗೆ ರಾಷ್ಟ್ರೀಯ ಚಿತ್ರಕಲೆ ಸ್ಪರ್ಧೆ 2022

ಭಾಗವಹಿಸಿ ಮತ್ತು ನಿಮ್ಮ ದೃಷ್ಟಿಯಲ್ಲಿನ 'ಇಂಧನ ದಕ್ಷ ಪ್ರಪಂಚ'ದ ಕಲ್ಪನೆ ಬಗ್ಗೆ ಚಿತ್ರಿಸಿ

ರಾಜ್ಯ / ಕೇಂದ್ರಾಡಳಿತ ಪ್ರದೇಶ ಹಾಗೂ ರಾಷ್ಟ್ರೀಯ ಮಟ್ಟದ ಚಿತ್ರಕಲಾ ಸ್ಪರ್ಧೆ 2022

ವರ್ಗ ಎ: 5,6 ಹಾಗೂ 7ನೇ ತರಗತಿ ವಿದ್ಯಾರ್ಥಿಗಳು
ವರ್ಗ ಬಿ: 8,9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳು

ಪ್ರತಿ ವರ್ಗದಲ್ಲೂ ಬಹುಮಾನಗಳು	ರಾಜ್ಯ/ಕೇಂದ್ರಾಡಳಿತ ಪ್ರದೇಶ ಮಟ್ಟದ ಬಹುಮಾನ		ರಾಷ್ಟ್ರೀಯ ಮಟ್ಟದ ಬಹುಮಾನ	
	ವರ್ಗ ಎ	ವರ್ಗ ಬಿ	ವರ್ಗ ಎ	ವರ್ಗ ಬಿ
ಪ್ರಥಮ ಬಹುಮಾನ (ಒಂದು)	₹ 50,000/-	₹ 50,000/-	₹ 1,00,000/-	₹ 1,00,000/-
ದ್ವಿತೀಯ ಬಹುಮಾನ (ಒಂದು)	₹ 30,000/-	₹ 30,000/-	₹ 50,000/-	₹ 50,000/-
ತೃತೀಯ ಬಹುಮಾನ (ಒಂದು)	₹ 20,000/-	₹ 20,000/-	₹ 30,000/-	₹ 30,000/-
ಪ್ರೋತ್ಸಾಹದ ಬಹುಮಾನ (ಹತ್ತು)	₹ 7,500/-	₹ 7,500/-	₹ 15,000/-	₹ 15,000/-

*ನೋಂದಣಿಗೆ ಹಾಗೂ ಸಂಪೂರ್ಣ ಮಾಹಿತಿಗಾಗಿ ದಯವಿಟ್ಟು ಭೇಟಿ ಕೊಡಿ
www.bee-studentsaward.in

ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ (BEE)
ಭಾರತ ಸರ್ಕಾರದ ಇಂಧನ ಇಲಾಖೆಯ ಒಂದು ಅಂಗ ಸಂಸ್ಥೆ
www.beeindia.gov.in /beeindiadigital /beeindiadigital

ಡಾ. ಎಂ. ಜಿ. ಆನಂದಕುಮಾರ್
ಜಂಟಿ ನಿರ್ದೇಶಕರು/ಮುಖ್ಯಸ್ಥ–ತರಬೇತಿ ವಿಭಾಗ
ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ,
ಪಿಬಿ ನಂ. 8066, ಪ್ರೊ. ಸರ್.ಸಿ.ವಿ.ರಾಮನ್ ರಸ್ತೆ,
ಸದಾಶಿವನಗರ, ಬೆಂಗಳೂರು – 560 080
ಮೊಬೈಲ್ ಸಂಖ್ಯೆ : 9986318844, 9448835540, 9845449383
ಮೇಲ್ ಐಡಿ : mgananda@cpri.in, trgcpri22@gmail.com

ಪ್ರಜಾವಾಣಿ | DH DECCAN HERALD



ಭೂಮಿಕಾ ಕ್ಲಬ್

ಹೊಸ ಸ್ನೇಹಿತರ ಸಂಗಮ, ಹೊಸ ವಿಷಯಗಳ ಕಲಿಕೆ ಮತ್ತು ಮೋಜಿನ ಸಂಜೆಯ ಕಾಲಕ್ಷೇಪಕ್ಕೆ ಭೂಮಿಕಾ ಕ್ಲಬ್‌ನ ಫೆಸ್ಟಿವ್ ಎಡಿಷನ್‌ನಲ್ಲಿ ಭಾಗವಹಿಸಿ.

ಇಂದು, 2:30 pm ರಿಂದ ಪ್ರಾರಂಭ

St. Joseph Institute of Management, Off MG Road, Bengaluru


ನೋಂದಾಯಿತರಿಗೆ ಮಾತ್ರ ಅವಕಾಶ.
QR code ಅನ್ನು ಸ್ಕ್ಯಾನ್ ಮಾಡಿ ಅಥವಾ bit.ly/pvbhumikaclub ಗೆ ಲಾಗ್ ಆನ್ ಮಾಡಿ.

ನೊಂದಣಿ ಇಂದು ಮಧ್ಯಾಹ್ನ 12:00 ವರೆಗೆ ಮಾತ್ರ

ಇಲ್ಲಿ ಏನೆಲ್ಲಾ ಇವೆ?

- ಉದ್ಘಾಟನೆ
  ಶಮಿತಾ ಮಲ್ನಾಡ್ - ಹಿನ್ನೆಲೆ ಗಾಯಕಿ
  ಅದ್ವಿತಿ ಶೆಟ್ಟಿ - ನಟಿ
- ಸಮ್ಮೋಹಕ ಸಂಗೀತ ಪ್ರದರ್ಶನ
  ಶಮಿತಾ ಮಲ್ನಾಡ್ - ಹಿನ್ನೆಲೆ ಗಾಯಕಿ
- ಆರೋಗ್ಯಕರ ಆಹಾರ ಪದ್ಧತಿ
  ಡಾ॥ ಪ್ರಿಯಾಂಕ ರೋಹಟ್ಗಿ
  ಚೀಫ್ ಡೈಟಿಶಿಯನ್, ಅಪೋಲೋ ಹಾಸ್ಪಿಟಲ್ಸ್
- ಸ್ಟೈಲಿಂಗ್ ಸೆಷನ್
  ನಿಕಿತಾ ಪ್ರಿಯಾ ಭರಣ
  ಸ್ಯಾಂಡಲ್‌ವುಡ್ ಸ್ಟೈಲಿಸ್ಟ್
- ಹೋಮ್ ಡೆಕಾರ್ ಸಲಹೆಗಳು
  ಸ್ನೇಹಾಲ್ ಪಾಟಿಲ್
  ಇಂಟೀರಿಯರ್ ಡೆಕೊರೇಟರ್
- ಫ್ಯಾಷನ್ ಶೋ
  ಥೀಮ್ - ಫೆಸ್ಟೀವ್
- ಹೈ-ಟೀ ಮತ್ತು ನೆಟ್‌ವರ್ಕಿಂಗ್
- ಅತ್ಯಾಕರ್ಷಕ ಸ್ಪರ್ಧೆಗಳು
- ಎಲ್ಲರಿಗೂ ಗಿಫ್ಟ್ ಹ್ಯಾಂಪರ್

5 ಅದೃಷ್ಟಶಾಲಿ ನೋಂದಾಯಿತರಿಗೆ ₹15,000* ಮೌಲ್ಯದ AO ಸ್ಮಿತ್ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ*



ಗಿಫ್ಟ್ ಪಾರ್ಟನರ್: INDIA SWEET HOUSE
ಫ್ಯಾಷನ್ ಶೋ ಪಾರ್ಟನರ್: STILE STRADA events & more...
ಎಫ್ & ಬಿ ಪಾರ್ಟನರ್: TUKTUK BY CHAATWORKS

ಇಂದೇ ನೋಂದಾಯಿಸಿಕೊಳ್ಳಿ

T&C apply



ಪಿಎಸಿಯಿಂದ ವರದಿ ಬಿಡುಗಡೆ: ದೊಡ್ಡ ರಾಜ್ಯಗಳ ಸಾಲಿನಲ್ಲಿ ಹರಿಯಾಣ ಪ್ರಥಮ

ಆಡಳಿತ ಸೂಚ್ಯಂಕ: ರಾಜ್ಯಕ್ಕೆ 6ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಆಡಳಿತ ಸೂಚ್ಯಂಕದಲ್ಲಿ (ಪಿಎಐ) ಈ ವರ್ಷ ದೊಡ್ಡ ರಾಜ್ಯಗಳ ಸಾಲಿನಲ್ಲಿ ಹರಿಯಾಣ ಮೊದಲ ಸ್ಥಾನ ಗಳಿಸಿದೆ.

ತಮಿಳುನಾಡು ದ್ವಿತೀಯ, ಕೇರಳ 3ನೇ ಸ್ಥಾನ ಗಳಿಸಿದೆ. ಕರ್ನಾಟಕವು ಒಟ್ಟಾರೆ ಸಾಧನೆಯಲ್ಲಿ 6ನೇ ಸ್ಥಾನ ಗಳಿಸಿದೆ. 2021ನೇ ಸಾಲಿನಲ್ಲಿ ರಾಜ್ಯವು 7ನೇ ಸ್ಥಾನದಲ್ಲಿತ್ತು. ಸಣ್ಣ ರಾಜ್ಯಗಳಲ್ಲಿ ಸಿಕ್ಕಿಂ ಮೊದಲ ಸ್ಥಾನದಲ್ಲಿದೆ.


ಸಾರ್ವಜನಿಕ ವ್ಯವಹಾರಗಳ ಕೇಂದ್ರ (ಪಿಎಸಿ)ನಿಂದ ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಆಡಳಿತ ಸೂಚ್ಯಂಕದ ವರದಿಯನ್ನು ತಜ್ಞರು ಬಿಡುಗಡೆ ಮಾಡಿದರು.

ನ್ಯಾಯದ ಪರಿಕಲ್ಪನೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಆರ್ಥಿಕ ನ್ಯಾಯದಲ್ಲಿ ಕರ್ನಾಟಕವು 3ನೇ, ಸಾಮಾಜಿಕ ನ್ಯಾಯದಲ್ಲಿ 10ನೇ ಹಾಗೂ ರಾಜಕೀಯ ನ್ಯಾಯದಲ್ಲಿ 8ನೇ ಸ್ಥಾನದಲ್ಲಿದೆ.

ಕಾರ್ಮಿಕರ ಉತ್ಪಾದಕತೆ, ದಿನಗೂಲಿ ನೌಕರರ ಉತ್ತಮ ಜೀವನಮಟ್ಟ, ಆದಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ ಆಧರಿಸಿ ಆರ್ಥಿಕ ನ್ಯಾಯ ವಿಭಾಗದಲ್ಲಿ ಸ್ಥಾನ ನೀಡಲಾಗಿದೆ. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣೆಯ ಹಂಚಿಕೆ, ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಮಾಡುವ ಸ್ವಾತಂತ್ರ್ಯದ ಬದ್ಧತೆ ಆಧರಿಸಿ ರಾಜಕೀಯ ನ್ಯಾಯದ ಶ್ರೇಣಿ ನೀಡಲಾಗಿದೆ. ಶಾಲಾ ವಿದ್ಯಾರ್ಥಿಗಳ ಕಲಿಕಾ ಪರಿಣಾಮ, ಕುಡಿಯುವ ನೀರು ಪೂರೈಕೆ ಆಧರಿಸಿ ರಾಜ್ಯಗಳಿಗೆ ಶ್ರೇಣಿ ನೀಡಲಾಗಿದೆ. ರಾಜ್ಯಗಳ ವಿಸ್ತೀರ್ಣ, ಜನಸಂಖ್ಯೆ ಆಧರಿಸಿ 18 ದೊಡ್ಡ ರಾಜ್ಯಗಳು ಹಾಗೂ 10 ಸಣ್ಣ ರಾಜ್ಯಗಳು ಎಂದು ವಿಂಗಡಣೆ ಮಾಡಲಾಗಿದೆ.



ಆಡಳಿತ ಸೂಚ್ಯಂಕದ ವರದಿಯನ್ನು (ಎಡದಿಂದ) ಪಿಎಸಿ ನಿರ್ದೇಶಕ ಜಿ.ಗುರುಚರಣ್, ವಕೀಲ ವಿ.ಸುದೀಶ್ ಪೈ ಹಾಗೂ ಪಿಎಸಿ ಅಧ್ಯಕ್ಷ ಡಾ.ಎ.ರವೀಂದ್ರ ಬಿಡುಗಡೆ ಮಾಡಿದರು



ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನ್ಯಾಯದಲ್ಲಿ ವ್ಯತ್ಯಾಸ ದಾಖಲಿಸಲಾಗಿದೆ ಎಂದು ಪಿಎಸಿ ಅಧ್ಯಕ್ಷ ಡಾ.ಎ.ರವೀಂದ್ರ ಹೇಳಿದರು.

ಪಿಎಸಿ ನಿರ್ದೇಶ ಜಿ.ಗುರುಚರಣ್ ಮಾತನಾಡಿ, 'ಇದು ನಿಷ್ಪಕ್ಷಪಾತ ಹಾಗೂ ಸ್ವತಂತ್ರ ಪ್ರಯತ್ನ. ವೈಜ್ಞಾನಿಕವಾಗಿ ವರದಿ ತಯಾರಿಸಲಾಗಿದೆ. ರಾಜ್ಯಗಳು ಆಡಳಿತಕ್ಕೆ ಬಳಸುವ ವಿಷಯ ಆಧರಿಸಿ ಮೌಲ್ಯಮಾಪನ ಮಾಡಲಾಗಿದೆ' ಎಂದರು.

ವಕೀಲ ವಿ.ಸುದೀಶ್ ಪೈ, 'ಬರೀ ಭರವಸೆ ನೀಡುವುದಲ್ಲ. ಪ್ರಜಾಪ್ರಭುತ್ವದ ಆಶಯ ಗಟ್ಟಿಗೊಳ್ಳಬೇಕಿದ್ದರೆ ಭರವಸೆಗಳು ನ್ಯಾಯ ಸಮ್ಮತವಾಗಿ ಈಡೇರಬೇಕು' ಎಂದು ಪ್ರತಿಪಾದಿಸಿದರು. ಡಾ.ಅನ್ನಪೂರ್ಣ ರವಿಚಂದರ್ ಹಾಜರಿದ್ದರು.

ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅಭಿಮತ

'ಸಾಹಿತ್ಯಕ್ಕೆ ಸಂಗೀತ ಪೂರಕವಾಗಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯವನ್ನು ಜನರಿಗೆ ತಲುಪಿಸುವಲ್ಲಿ ಸಂಗೀತ ಪರಿಣಾಮಕಾರಿಯಾದ ಮಾಧ್ಯಮ. ಆದರೆ, ಸಂಗೀತವು ಸಾಹಿತ್ಯಕ್ಕೆ ಪೂರಕವಾಗಿರಬೇಕೆ ಹೊರತು, ಅಂತರ ನಿರ್ಮಾಣ ಮಾಡಬಾರದು' ಎಂದು ಕವಿ ಎಚ್.ಎಸ್.ವೆಂಕಟೇಶಮೂರ್ತಿ ತಿಳಿಸಿದರು.

ರಂಗ ಸಂಸ್ಥಾನ ಸಂಸ್ಥೆ ನಗರದಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ಕವಿಯ ಗ್ರಹಿಕೆ ಮತ್ತು ಸಂಗೀತ ಸಂಯೋಜಕರ ಗ್ರಹಿಕೆ ಏಕಪ್ರಕಾರವಾಗಿರಬೇಕು. ಕೆಲವೊಮ್ಮೆ ಸಂಗೀತ ಸಂಯೋಜನೆ ಮಾಡುವ ಸಂದರ್ಭ ಕೆಲ ಸಾಲುಗಳನ್ನು ಬಿಡಲಾಗುತ್ತದೆ. ಇದರಿಂದ ಕವಿತೆ ಕೇಳುಗರಿಗೆ ಪೂರ್ಣವಾಗಿ ದಕ್ಕುವುದಿಲ್ಲ. ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು' ಗೀತೆಯಲ್ಲಿ ಪ್ರಮುಖ ಸಾಲುಗಳನ್ನೇ ಬಿಡಲಾಗಿತ್ತು' ಎಂದು ಸ್ಮರಿಸಿಕೊಂಡರು.

ಎಸ್.ಸೋಮಸುಂದರಂ ಅವರು ಸಂಗೀತ ಸಂಯೋಜಿಸಿರುವ ಗೀತೆಗಳ ಸ್ವರಪ್ರಸ್ತಾರದ 'ಗಾನಸುಧಾ ಗಾನವಾಹಿನಿ' ಪುಸ್ತಕವನ್ನು ಲೋಕಾರ್ಪಣೆ ಮಾಡಿದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, 'ಎಸ್.ಸೋಮಸುಂದರಂ ಅವರು ಹಲವು ರಾಗಗಳನ್ನು ಬಳಸಿ, ಸುಂದರವಾಗಿ ಗೀತೆಗಳಿಗೆ ಸ್ವರಪ್ರಸ್ತಾರ ಹಾಕಿದ್ದಾರೆ. ಎಲ್ಲಿಯೂ ಸಾಹಿತ್ಯಕ್ಕೆ ಚ್ಯುತಿಬಾರದಂತೆ ರಾಗ ಸಂಯೋಜನೆ ಮಾಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಂಗಸಂಸ್ಥಾನ, ಗಾನಸುಧಾ ಸಂಗೀತ ಅಕಾಡೆಮಿ, ಪೂರ್ವಿ ಸಂಗೀತ ಅಕಾಡೆಮಿ ಹಾಗೂ ವರ್ಣಶ್ರೀ ಮೂರೂರು ತಂಡದವರು ಎಸ್.ಸೋಮಸುಂದರಂ ಅವರು ಸಂಗೀತ ಸಂಯೋಜಿಸಿರುವ ಗೀತೆಗಳನ್ನು ಹಾಡಿದರು. ಸುಷ್ಮ ಗಜಾನನ ತಂಡದವರು ಮತ್ತು ವಿಶ್ವಾಸ್ ತಂಡದವರು ಗೀತೆಗಳಿಗೆ ಸಮೂಹನೃತ್ಯ ಮಾಡಿದರು. ಗಾಯಕಿ ಪ್ರತಿಭಾನಂದನ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ರಂಗಸಂಸ್ಥಾನದ ಅಧ್ಯಕ್ಷ ಬಂಡ್ಲಹಳ್ಳಿ ವಿಜಯಕುಮಾರ್, ಕನ್ನಡ ಪ್ರಾಧ್ಯಾಪಕ ಡಾ.ರುದ್ರೇಶ್ ಅದರಂಗಿ, ಅನನ್ಯ ಸಂಸ್ಥೆಯ ಅನನ್ಯ ರಾಘವೇಂದ್ರರಾವ್, ಸಮಾಜಸೇವಕ ರೇವಣ್ಣ ಇದ್ದರು.



ಎಸ್.ಸೋಮಸುಂದರಂ ಅವರು ಸಂಗೀತ ಸಂಯೋಜಿಸಿರುವ ಗೀತೆಗೆ ಕಲಾವಿದರು ಸಮೂಹ ನೃತ್ಯ ಮಾಡಿದರು

ಎಲ್‌ಸಿಎ–ತೇಜಸ್‌ಗೆ ವಿನೂತನ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಸಿಎ–ತೇಜಸ್‌ಗಾಗಿ ಸಿಎಸ್‌ಐಆರ್– ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯವು (ಎನ್‌ಎಎಲ್) ವಿಶೇಷ ಕಂಪೋಸಿಟ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಹಸ್ತಾಂತರಿಸಿದೆ.

ಕಳೆದ ಮೂರು ದಶಕಗಳಿಂದ ಸಿಎಸ್‌ಐಆರ್–ಎನ್‌ಐಎಲ್ ಹಗುರ ಯುದ್ಧ ವಿಮಾನಗಳಿಗಾಗಿ (ಎಲ್‌ಸಿಎ) ಹಲವು ಮಹತ್ವದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಈಗ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನವು ವೆಚ್ಚವನ್ನು ಕಡಿಮೆ ಮಾಡುವ ಜತೆಗೆ ಯುದ್ಧ ವಿಮಾನದ ಸಾಮರ್ಥ್ಯವನ್ನು ಹೆಚ್ಚಿಸಲಿದೆ.

ಹೊಸ ತಂತ್ರಜ್ಞಾನದಿಂದ ವೆಚ್ಚದಲ್ಲಿ ಶೇ 20ರಷ್ಟು ಉಳಿತಾಯವಾಗಲಿದೆ ಮತ್ತು ಶೇ 25ರಷ್ಟು ತೂಕ ಕಡಿಮೆಯಾಗಲಿದೆ ಎಂದು ಸಿಎಸ್‌ಐಆರ್–ಎನ್‌ಎಎಲ್ ಡಾ. ಅಭಯ್ ಎ. ಪಾಶಿಲ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್‌ಸಿಎ ಸರಣಿ ಉತ್ಪಾದನೆಗಾಗಿ ಉಪಕರಣಗಳನ್ನು ಪೂರೈಸಲು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಜತೆ ಸಿಎಸ್‌ಐಆರ್–ಎನ್‌ಎಎಲ್ ಒಪ್ಪಂದ ಮಾಡಿಕೊಂಡಿದೆ. 2019ರಲ್ಲಿ 20 ಯುದ್ಧ ವಿಮಾನಗಳಿಗಾಗಿ ಮೊದಲ ಹಂತದಲ್ಲಿ ಉಪಕರಣಗಳನ್ನು ಪೂರೈಸಲಾಗಿದೆ. ಮುಂದಿನ ಹಂತಕ್ಕಾಗಿ ಈ ತಿಂಗಳ ಅಂತ್ಯದ ಒಳಗಾಗಿ ಪೂರೈಕೆಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಬಿಎಂಟಿಸಿ: ಪ್ರಯಾಣ ದರ ತಗ್ಗಿಸಲು ಸಮೀಕ್ಷಾ ವರದಿ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)ಯ ಪ್ರಯಾಣಿಕರ ಅನುಭವ ಹಾಗೂ ಸವಾಲು ಕುರಿತು 'ಗ್ರೀನ್‌ಪೀಸ್ ಇಂಡಿಯಾ' ಸಮೀಕ್ಷೆ ನಡೆಸಿದ್ದು, ಅದರ ವರದಿಯನ್ನು 'ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆಯ ಪುನರುತ್ಥಾನ' ಎಂಬ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಬಿಎಂಟಿಸಿ ನಿರ್ದೇಶಕ (ಐ.ಟಿ) ಸೂರ್ಯಸೇನ್, ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿ ಆಶಿಶ್ ವರ್ಮಾ, ಹೋರಾಟಗಾರ ಶ್ರೀನಿವಾಸ ಅಲವಿಲ್ಲಿ, ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಶಾಹೀನ್ ಶಸಾ, ಕಾರ್ಮಿಕ ಸಂಘಟನೆಯ ಮುಖಂಡರಾದ ಯಶೋದಾ ಅವರು ಪಾಲ್ಗೊಂಡಿದ್ದರು.

ಜನವರಿ, ಫೆಬ್ರುವರಿ ನಡುವೆ ನಡೆಸಿದ ಈ ಅಧ್ಯಯನಕ್ಕಾಗಿ ಶಿವಾಜಿನಗರ ಬಸ್ ನಿಲ್ದಾಣ, ಕೆಆರ್ ಪುರಂ ಬಸ್ ನಿಲ್ದಾಣ, ಕೆಂಪೇಗೌಡ ಬಸ್ ಟರ್ಮಿನಲ್, ಕೆ.ಆರ್. ಮಾರುಕಟ್ಟೆ ಬಸ್ ನಿಲ್ದಾಣ ಮತ್ತು ಬೆಂಗಳೂರಿನ ಚಿಕ್ಕಪೇಟೆ ಬಸ್ ನಿಲ್ದಾಣವೂ ಸೇರಿ ಒಟ್ಟು 558 ಪ್ರಯಾಣಿಕರನ್ನು ಸಂದರ್ಶಿಸಲಾಗಿತ್ತು.

ಸಾರ್ವಜನಿಕ ಸಾರಿಗೆಯ ಮೇಲೆ ಹೆಚ್ಚು ಅವಲಂಬಿತರಾಗಿರುವ ಮಹಿಳೆಯರು, ವಿದ್ಯಾರ್ಥಿಗಳು ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ನೀಡುವಂತೆ ಕೋರಿದ್ದಾರೆ. ಕೋವಿಡ್ ನಂತರ ಬಸ್‌ಗಾಗಿ ಕಾಯುವ ಸಮಯ ಹೆಚ್ಚಾಗಿದೆ ಎಂದು ಪ್ರಯಾಣಿಕರು ಹೇಳಿದ್ದಾರೆ.

'ಕೋವಿಡ್ ನಂತರದ ದಿನಗಳಲ್ಲಿ ಬಿಎಂಟಿಸಿ ಪ್ರಯಾಣವು ಜನರಿಗೆ ದುರ್ಭರ ಎನಿಸಿದೆ. ಪ್ರಸ್ತುತ ಕೊನೆಯ ಮೈಲು ಸಂಪರ್ಕವನ್ನು ಸುಧಾರಿಸುವ ತುರ್ತು ಅಗತ್ಯ ಇದೆ. ಬೆಂಗಳೂರಿನ ಕೇಂದ್ರಭಾಗವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬಸ್‌ಗಳು ಹೆಚ್ಚಾಗಿ ಸಂಚರಿಸುತ್ತಿವೆ. ಇದನ್ನು ಬದಲಾಯಿಸಬೇಕಾಗಿದೆ. ಬಸ್ ಸಂಖ್ಯೆ ಕೂಡ ಹೆಚ್ಚಿಸಬೇಕು' ಎಂದು ಶಾಹೀನ್ ಶಸಾ ಕೇಳಿಕೊಂಡರು.

ಪುಣೆ, ದೆಹಲಿ, ಮುಂಬೈ ಮತ್ತು ಚೆನ್ನೈ ನಗರಗಳಿಗೆ ಹೋಲಿಸಿದರೆ ಬಿಎಂಟಿಸಿ ದರಗಳು ದುಬಾರಿ ಆಗಿರುವುದರಿಂದ ಬಸ್ ದರ ಕೈಗೆಟುಕುವಂತೆ ನಿಗದಿಪಡಿಸಬೇಕು ಎಂದು ವರದಿ ಶಿಫಾರಸು ಮಾಡಿದೆ. 'ಎಲೆಕ್ಟ್ರಿಕ್ ಬಸ್'ಗಳ ಸಂಖ್ಯೆ ಹೆಚ್ಚಿಸಬೇಕು ಎಂಬ ಅಂಶ ಸಮೀಕ್ಷಾ ವರದಿಯಲ್ಲಿದೆ.





ನ. 10ರಿಂದ ಚೆನ್ನೈ–ಮೈಸೂರು ನಡುವೆ ವಂದೇ ಭಾರತ್ ರೈಲು

ನವದೆಹಲಿ: ಚೆನ್ನೈ-ಬೆಂಗಳೂರು–ಮೈಸೂರು ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ನವೆಂಬರ್ 10ರಿಂದ ಸಂಚಾರ ಆರಂಭಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ ಇದಕ್ಕೆ ಚಾಲನೆ ನೀಡಲಿದ್ದಾರೆ.

ಈ ಮೂಲಕ ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ಈ ರೈಲು ಸಂಚರಿಸಲಿದೆ. ಇದು ಐದನೇ ವಂದೇ ಭಾರತ್ ರೈಲು ಆಗಿದೆ. ಚೆನ್ನೈ-ಬೆಂಗಳೂರು-ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ಒಟ್ಟು 483 ಕಿ.ಮೀ. ದೂರವನ್ನು ಕ್ರಮಿಸಲಿದೆ. 'ವಂದೇ ಭಾರತ್ 2.0' ರೈಲುಗಳು, 'ಕವಚ' ಎಂಬ ರೈಲು ಡಿಕ್ಕಿ ತಪ್ಪಿಸುವ ವ್ಯವಸ್ಥೆ (ಟಿಸಿಎಎಸ್) ಸೇರಿದಂತೆ ಅತ್ಯಾಧುನಿಕ ಸುರಕ್ಷತಾ ವೈಶಿಷ್ಟ್ಯಗಳನ್ನು ಹೊಂದಿವೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ದೇವದಾಸಿ ಪದ್ಧತಿ: ವರದಿ ನೀಡಲು ಎನ್‌ಎಚ್‌ಆರ್‌ಸಿ ಸೂಚನೆ

ನವದೆಹಲಿ: ದೇವದಾಸಿ ಪದ್ಧತಿ ನಿಷೇಧಿಸಿದ್ದರೂ ಈ ಪದ್ಧತಿ ಮುಂದುವರಿದಿರುವ ಮತ್ತು ಇದನ್ನು ತಡೆಗಟ್ಟಲು ಕಾನೂನು ಕ್ರಮ ತೆಗೆದುಕೊಂಡಿರುವ ಬಗ್ಗೆ ವಿವರವಾದ ವರದಿ ಸಲ್ಲಿಸುವಂತೆ ಕರ್ನಾಟಕ ಸೇರಿ ಆರು ರಾಜ್ಯಗಳು ಮತ್ತು ಕೇಂದ್ರ ಸರ್ಕಾರಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಶುಕ್ರವಾರ ಸೂಚನೆ ನೀಡಿದೆ.

ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ಸರ್ಕಾರಗಳಿಗೆ ಸಮಗ್ರ ವರದಿಗಳನ್ನು ಸಲ್ಲಿಸಲು ಆರು ವಾರಗಳ ಗಡುವನ್ನು ಎನ್‌ಎಚ್‌ಆರ್‌ಸಿ ನೀಡಿದೆ.

ದಕ್ಷಿಣ ಭಾರತದ ವಿವಿಧ ದೇವಾಲಯಗಳಲ್ಲಿ ದೇವದಾಸಿ ಪದ್ಧತಿ ಪಿಡುಗು ಮುಂದುವರಿದಿರುವ ಬಗ್ಗೆ ಮಾಧ್ಯಮಗಳ ವರದಿ ಆಧರಿಸಿ ಆಯೋಗ ಈ ಕ್ರಮ ತೆಗೆದುಕೊಂಡಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/ಸಿಓಎಸ್/ಟೆಕ್/1029/21/ಡಿಡಿಡಿ/22–23/1077, ಬೆಂಗಳೂರು ದಿನಾಂಕ: 14–10–2022

ಸೂಚನೆ

ವಿಷಯ: ಕರಡು – ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು. (ಸಿಓಎಸ್) (ಹನ್ನೊಂದನೇ ತಿದ್ದುಪಡಿ), 2022

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಷರತ್ತುಗಳ ಕರಡು ತಿದ್ದುಪಡಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 11–08–2022ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: www.kerc.karnataka.gov.in ನಲ್ಲಿ ಲಭ್ಯವಿರಿಸಲಾಗಿದೆ. ಆಯೋಗವು ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಓಎಸ್) ಗೆ ಹೆಚ್ಚಿನ ತಿದ್ದುಪಡಿಯನ್ನು ಪರಿಗಣಿಸುವ ಅವಶ್ಯಕತೆ ಇರುವುದರಿಂದ ದಿನಾಂಕ: 20–10–2022 ರಂದು ಬೆಳಿಗ್ಗೆ 11.00 ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ವಿಚಾರಣೆಯನ್ನು ರದ್ದುಗೊಳಿಸಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/2603/2022–23

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ಅಗತ್ಯವಿರುವ ಈ ಕೆಳಕಂಡ ಉಪಕರಣಗಳ ಖರೀದಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ.

1	ಈ ಸಂಸ್ಥೆಯ ಇಎನ್‌ಟಿ ವಿಭಾಗಕ್ಕೆ Modular OT with Laminar Airflow ಸ್ಥಾಪಿಸಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/08/2022–23 ದಿನಾಂಕ: 13.10.2022
2	ಈ ಸಂಸ್ಥೆಯ ರೇಡಿಯಾಲಜಿ ವಿಭಾಗಕ್ಕೆ ದಪ್ಪನೆಯ ಕಾಗದದ ಮೇಲೆ (ಸಿಟಿ ಎಂಆರ್‌ಐ ಮತ್ತು ಕ್ಷ–ಕಿರಣ) ಕ್ಷ–ಕಿರಣ ಮುದ್ರಣಕ್ಕಾಗಿ ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/09/2022–23 ದಿನಾಂಕ: 13.10.2022
3	ಈ ಸಂಸ್ಥೆಯ ಮೈಕ್ರೋಬಯಾಲಜಿ ವಿಭಾಗಕ್ಕೆ National Program on Surveillance of Viral Hepatitis (NPSVH)ನ ಅಡಿಯಲ್ಲಿ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/10/2022–23 ದಿನಾಂಕ: 13.10.2022
4	ಶ್ರೀ ಸತ್ಯಸಾಯಿ ವೈಷ್ಣವಿ ಲಯನ್ಸ್ ಐ ಕೇರ್ ಸೆಂಟರ್‌ಗೆ ಮೈಕ್ರೋಸ್ಕೋಪ್‌ನ್ನು ಶಾಸಕರ ನಿಧಿಯಿಂದ ಖರೀದಿಸಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/11/2022–23 ದಿನಾಂಕ: 13.10.2022

1) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ: **14–10–2022. 2)** ಪೂರ್ವ ಭಾವಿ ಸಭೆ ದಿನಾಂಕ: **20–10–2022ರಂದು ಪೂರ್ವಾಹ್ನ 11.30 ಗಂಟೆಗೆ. 3)** ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: **29–10–2022ರಂದು ಅಪರಾಹ್ನ 4.30 ಕ್ಕೂ ಮುಂಚೆ. 4)** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **31–10–2022ರಂದು ಪೂರ್ವಾಹ್ನ 11.30 ಗಂಟೆಗೆ.** ಟೆಂಡರ್ ವಿವರಗಳು ಇ.ಎಂ.ಡಿ ವಿವರಗಳು ಹಾಗೂ ಸಂಬಂಧಿತ ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ನೋಡಬಹುದು. ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್: **https://www.eproc.karnataka.gov.in** ಆಸಕ್ತ ಟೆಂಡರುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳಬೇಕು. ಈ ಬಗ್ಗೆ ವಿವರಗಳನ್ನು ಸದರಿ ವೆಬ್‌ಸೈಟಿನಲ್ಲಿ ವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ಮಹಾವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.**

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/2604/ಅಡ್ವರ್ಟೋ/2022–23

ಕೃಷಿ ವಿಶ್ವವಿದ್ಯಾನಿಲಯ

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು – 560065

ಸಂ: ಆಅ/ಟಿಎನ್/484/2022–23 ದಿನಾಂಕ: 07.10.2022

ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕ್ರಮ ಸಂಖ್ಯೆ. 1 ರಿಂದ 4ರ ಕೆಲಸಕ್ಕೆ ದ್ವಿಲಕೋಟೆ ಪದ್ಧತಿಯಲ್ಲಿ ಮಂಡ್ಯ, ಮಾಗಡಿ, ಚಾಮರಾಜನಗರ, ಚಿಂತಾಮಣಿಯಲ್ಲಿ ಸಾಮಾನ್ಯ ಇನ್ಕ್ಯುಬೇಶನ್ ಕೇಂದ್ರಗಳಿಗೆ ಪ್ರತಿಷ್ಠಿತ O&M ಆಪರೇಟರ್ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ವಿವರ ವೆಬ್‌ಸೈಟ್: https://www.uasbangalore.edu.in ರಲ್ಲಿ ದೊರೆಯುತ್ತದೆ.

ಟೆಂಡರ್ ಫಾರಂಗಳನ್ನು ಎಲ್ಲಾ ಕೆಲಸದ ದಿನಗಳಲ್ಲಿ ಕಛೇರಿ ಸಮಯದಲ್ಲಿ ನೀಡಲಾಗುತ್ತದೆ. ಏಜೆನ್ಸಿಗಳು/ಗುತ್ತಿಗೆದಾರರು ಕೆಳಗೆ ಸಹಿ ಮಾಡಿದವರಿಂದ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಹರಾಗಲು ಅರ್ಜಿಯೊಂದಿಗೆ ದೃಢೀಕರಿಸಿದ ಕೆಳಗಿನ ಪ್ರಮಾಣಪತ್ರಗಳನ್ನು ಖುದ್ದಾಗಿ ಹಾಜರುಪಡಿಸಬೇಕು. (1) ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ (2) ಜಿ.ಎಸ್.ಟಿ ಪ್ರಮಾಣ ಪತ್ರ ಮತ್ತು ಜಿ.ಎಸ್.ಟಿ ಪಾವತಿ ಮಾಡಿರುವ ವಿವರ (3) ಇದೇ ರೀತಿಯ ಕೆಲಸವನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಪ್ರಮಾಣಪತ್ರ (4) ಪ್ಯಾನ್ ಪ್ರತಿ (5) ಹಿಂದಿನ 3 ವರ್ಷಗಳ ವಾರ್ಷಿಕ ವಹಿವಾಟು ಪ್ರಮಾಣ ಪತ್ರದ ಪ್ರತಿ, ಲಾಭ/ನಷ್ಟದ ವಿವರಗಳ ಪ್ರತಿ ರೂ.1.00 ಲಕ್ಷಕ್ಕಿಂತ ಕಡಿಮೆ ಇರಬಾರದು ಮತ್ತು ಆದಾಯ ತೆರಿಗೆ ಪಾವತಿಯ ವಿವರ (6) ತೊಡಗಿಸಿಕೊಂಡಿರುವ ಸಿಬ್ಬಂದಿ ವಿವರಗಳು.

ಸ್ವೀಕರಿಸಿದ ಅರ್ಜಿಗಳನ್ನು ಮತ್ತು ಮೂಲ ಪ್ರಮಾಣಪತ್ರಗಳ ಪರಿಶೀಲಿಸಿದ ನಂತರ ಅರ್ಹ ಅರ್ಜಿದಾರರಿಗೆ ಮಾತ್ರ ಟೆಂಡರ್ ಫಾರಂಗಳನ್ನು ನೀಡಲಾಗುವುದು. ಅಪೂರ್ಣ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್ ಸಲ್ಲಿಸುವಾಗ ಪ್ರತಿ ಕೆಲಸಗಳಿಗೆ ಟೆಂಡರ್ ಶುಲ್ಕ ರೂ. 1,000.00 ಮತ್ತು ಪ್ರತಿ ಕೆಲಸಗಳಿಗೆ ಇ.ಎಂ.ಡಿ ರೂ. 30,000.00 ಗಳನ್ನು Comptroller, UAS, GKVK, Bengaluru ರವರ ಪರವಾಗಿ ಡಿ.ಡಿ ಗಳನ್ನು ಸಲ್ಲಿಸಬೇಕು.

(1) ಟೆಂಡರ್ ಫಾರಂಗಳನ್ನು ವಿತರಣೆ ಮಾಡುವುದಕ್ಕಾಗಿ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ: **27.10.2022ರಂದು 4.00 ಘಂಟೆಯವರೆಗೆ** (2) ತುಂಬಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **31.10.2022 ರಂದು 3.00 ಘಂಟೆಯವರೆಗೆ.** (3) ಪ್ರಿ–ಬಿಡ್ ಮೀಟಿಂಗ್ ದಿನಾಂಕ: **28.10.2022ರಂದು ಬೆಳಗ್ಗೆ 10.30 ಗಂಟೆಗೆ** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್ಡನ್ನು ದಿನಾಂಕ: **04.11.2022ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. (5) ಸಂಸ್ಥೆಯು ಪ್ರಸ್ತುತಿಯನ್ನು (Presentation) ಟೆಂಡರ್ ಕಮಿಟಿ ಕೊಠಡಿಯಲ್ಲಿ ದಿನಾಂಕ: **07.11.2022ರಂದು ಬೆಳಗ್ಗೆ 10.30ಕ್ಕೆ** ನಡೆಲಾಗುವುದು (6) ಹಣಕಾಸಿನ ಬಿಡ್ಡನ್ನು ದಿನಾಂಕ: 10.11.20222ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು.

ಸಹಿ/–
ಆಸ್ತಿ ಅಧಿಕಾರಿಗಳು
ವಾಸಾಸಂಇ/ವಾಪ್ರ/ಅಡ್ವಿಟ್/2614/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಮೂ–ದಕ್ಷಿಣ ವಿಭಾಗ, ಕೊಠಡಿ ಸಂಖ್ಯೆ 106, 1ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ/ರಮೂ/ದಕ್ಷಿಣ/ಟೆಂಡರ್/03/2022–23 ದಿನಾಂಕ: 14.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ

ಕಾರ್ಯಪಾಲಕ ಅಭಿಯಂತರರು, ರಮೂ–ದಕ್ಷಿಣ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್–ಕೆಡಬ್ಲ್ಯು–4 ಮತ್ತು ಕೆಟಿಪಿಪಿ ಕಾಯ್ದೆಯ ಅನುಸಾರದಂತೆ)**

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇಎಂಡಿ (ಲಕ್ಷಗಳಲ್ಲಿ)
1	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಹೊರವರ್ತುಲ ರಸ್ತೆಯ ಜನತಾ ಬಜಾರ್‌ನಿಂದ ಇಟ್ಟಮಡು ಮುಖ್ಯರಸ್ತೆ ವಿಬಿಬಿ ಬೇಕರಿ ಹತ್ತಿರ ಎಸ್‌ಡಬ್ಲ್ಯುಡಿ ವರೆಗೆ ಇಟ್ಟಮಡು ಮುಖ್ಯರಸ್ತೆಯ ಅಗಲೀಕರಣ ಮತ್ತು ಸುಧಾರಣೆ. G.O. Sl. No. 91 (ಪ್ಯಾಕೇಜ್ ನಂ. 2022-23-S4)	1,398.00	14.00 ಲಕ್ಷಗಳು (ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 13.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ)

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳು ಮತ್ತು ಇತರೆ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **17.10.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ: **28.10.2022, ಸಂಜೆ 4:00 ಗಂಟೆ.** (3) ಟೆಂಡರ್ ದಸ್ತಾವೇಜುಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **03.11.2022ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **05.11.2022ರ ಸಂಜೆ 4:30 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಮೌಲ್ಯಮಾಪನದ ಅನುಮೋದನೆಯ ನಂತರ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಮೂ–ದಕ್ಷಿಣ ವಿಭಾಗ, ಬಿಬಿಎಂಪಿ
"ಸುಧಾರಣಾ ವೆಚ್ಚ ಪಾವತಿಸಿ, ಬೆಂಗಳೂರಿನ ಅಭಿವೃದ್ಧಿಗೆ ಸಹಕರಿಸಿ"

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3ನೇ ವರ್ಷದ ಪುಣ್ಯ ಸ್ಮರಣೆ



ಡಾ|| ಕೆ.ಸಿ.ಲಾವಣ್ಯ
ನಿಧನ : 15–10–2019
ನೀವು ಕಣ್ಮರೆಯಾದ ಈ ಮೂರು ವರ್ಷದಲ್ಲಿ
ನಿಮ್ಮ ಪ್ರೀತಿ ಮಮತೆ ವಾತ್ಸಲ್ಯದ ಸವಿನೆನಪು ನಮ್ಮೆಲ್ಲರನ್ನು ಸದಾ ಕಾಡುತ್ತಿದೆ
ಪ್ರತಿ ಹೆಜ್ಜೆಯಲ್ಲೂ ನೀವು ತೋರಿದ ತಾಳ್ಮೆ ಹಾಗೂ ಸಹನೆಯನ್ನು ನಾವು ಗೌರವಿಸುತ್ತೇವೆ.
ನೀವು ಕಣ್ಮರೆಯಾದ ಈ ಮೂರು ವರ್ಷದಲ್ಲಿ
ನಾವೆಲ್ಲರೂ ಅನುಭವಿಸಿದ ನೋವು ಹಂಚಿಕೊಳ್ಳಲು ಅಸಾಧ್ಯ.
ಜನರ ಸೇವೆಯೇ ಜನಾರ್ಧನ ಸೇವೆ ಎಂದು ಭಾವಿಸಿ ಸಲ್ಲಿಸಿದ ನಿಮ್ಮ ಆತ್ಮವಿಶ್ವಾಸದ ಅಚ್ಚು ಮೆಚ್ಚಿನ ಸೇವೆಯಿಂದ
ಇಂದಿಗೂ ಎಂದೆಂದಿಗೂ ಪ್ರತಿಯೊಬ್ಬರಲ್ಲೂ ನಿಮ್ಮ ನೆನಪು ಶಾಶ್ವತವಾಗಿ ಅಚ್ಚಾಗಿ ಉಳಿದಿದೆ.
ಅಪರೂಪದ ಪ್ರತಿರೂಪ ನಿಮ್ಮದು ಎಂಬ ಹೆಮ್ಮೆ ನಮ್ಮದಾಗಿದೆ.
ಇಂತಿ ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಡಾ|| ಬಿ.ಎನ್. ತ್ಯಾಗರಾಜ್
ಮಕ್ಕಳು ಪ್ರೀತಮ್ ಟಿ., ನೇಹರಾಜ್ ಟಿ. ಹಾಗೂ ಕುಟುಂಬ ವರ್ಗದವರು

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಬಿ15, ಸೆಕ್ಟರ್ –62, ನೋಯ್ಡ.
ಜಿಲ್ಲೆ ಜಿ.ಬಿ.ನಗರ. ಉತ್ತರ ಪ್ರದೇಶ ಪಿನ್–201309

ಅಧಿಸೂಚನೆ

2023–24ನೇ ಶೈಕ್ಷಣಿಕ ವರ್ಷದ ಜವಾಹರ ನವೋದಯ ವಿದ್ಯಾಲಯಗಳ 2023 ನೇ ಸಾಲಿಗೆ 9ನೇ ತರಗತಿಯ ಉಳಿಕೆ ಸ್ಥಾನಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸುವ ಅವಧಿಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ **25ನೇ ಅಕ್ಟೋಬರ್ 2022** ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ಉಚಿತವಾಗಿ ಅರ್ಜಿ ಸಲ್ಲಿಸಲು ನವೋದಯ ವಿದ್ಯಾಲಯ ಸಮಿತಿಯ ಅಂತರ್‌ಜಾಲದಲ್ಲಿ ಸಂಪರ್ಕಿಸಲು ಕೋರಿದೆ.
www.navodaya.gov.in or nvsadmissionclassnine.in

ಪ್ರಕಟಣೆ: ನವೋದಯ ವಿದ್ಯಾಲಯ ಸಮಿತಿ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ಬೆಂಗಳೂರು–560 052.
ದೂರವಾಣಿ:080–2226 6852, ಇಮೇಲ್: kviboardbangkar@gmail.com

ಸಂ.ಖಾಮಂ/ಸಾಮಾನ್ಯ–1/302/2022–23 ದಿನಾಂಕ:14.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧಿಕಾರಿಗಳ ಕೆಲಸಗಳ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇಲೆ ಮೂರು A.C ವಾಹನಗಳನ್ನು ಒದಗಿಸಲು ಟೆಂಡರ್ ಕರೆಯಲು ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಇ–ಟೆಂಡರ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು http://eproc.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 27.10.2022ರ ಸಾಯಂಕಾಲ 4.00 ಗಂಟೆ** ಇದ್ದು, ದಿನಾಂಕ **28.10.2022**ರಂದು **ಸಾಯಂಕಾಲ 5.00 ಗಂಟೆಗೆ** ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಖಾದಿ ಮಂಡಳಿಯ ಮಾರುಕಟ್ಟೆ ವಿಭಾಗದ **ಸಂಪರ್ಕ ಸಂಖ್ಯೆ: 94808 25647** ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಟೆಂಡರ್ ಆಹ್ವಾನಿಸುವ ಅಧಿಕಾರಿ
ಖಾದಿ ಮಂಡಳಿ, ಬೆಂಗಳೂರು.

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ,
ಬೆಂಗಳೂರು. ದೂರವಾಣಿ: 080–22255210

ಸಂಖ್ಯೆ: ಕಾಅ/ಕವಿ.1/ಎಇ–5/24/2022–23 ದಿನಾಂಕ: 13.10.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಬೆಂಗಳೂರು, ಬೆಂಗಳೂರು ಉತ್ತರ, ಜಾಲಹಳ್ಳಿ, ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಪ್ರೈಮರಿ ಮತ್ತು ಹೈಸ್ಕೂಲ್ ಕೊಠಡಿಗಳ ನಿರ್ಮಾಣ ಕಾಮಗಾರಿಗಾಗಿ (ಕೆಪಿಡಬ್ಲ್ಯೂಡಿ/2022–23/ಬಿಡಿ/ವರ್ಕ್–ಇಂಡೆಂಟ್154094) ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್:**(http://eproc.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೌಲ್ಯ: **ರೂ.166.32ಲಕ್ಷಗಳು.** ಇಎಂಡಿ: **ರೂ.2.50 ಲಕ್ಷಗಳು** (ಇ–ಪಾವತಿ ಮೂಲಕ **ರೂ.1,00,000/– ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ ರೂ.1.5ಲಕ್ಷಗಳು).** ದಸ್ತಾವೇಜುವಿನ ಬೆಲೆ: ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: 11 ತಿಂಗಳು. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 20.10.2022, ಸಂಜೆ 4.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 21.10.2022, ಸಂಜೆ 5.30 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉ.ನಿ.ನ/2607/ಎಂಸಿಎ/2022–23

ಬಿಎಸ್‌ವೈ ಪ್ರಕರಣ: ವಿಚಾರಣೆಯಿಂದ ಹಿಂದೆ ಸರಿದ ಸಿಜೆಐ

ನವದೆಹಲಿ: ಅಕ್ರಮ ಡಿನೋಟಿಫಿಕೇಶನ್ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಹಿಂದೆ ಸರಿದಿದ್ದಾರೆ.

ಶುಕ್ರವಾರ ಈ ಅರ್ಜಿಯ ವಿಚಾರಣೆಗೆ ಬಂದಾಗ, ನ್ಯಾಯಮೂರ್ತಿಗಳು ಯಾವುದೇ ನಿರ್ದಿಷ್ಟ ಕಾರಣ ನೀಡದೆ ವಿಚಾರಣೆಯಿಂದ ಹಿಂದಕ್ಕೆ ಸರಿದರು. ಮುಖ್ಯ ನ್ಯಾಯಮೂರ್ತಿ ಹಾಗೂ ನ್ಯಾಯಮೂರ್ತಿ ಹೇಮಂತ್ ಗುಪ್ತ ಅವರನ್ನು ಒಳಗೊಂಡ ಪೀಠ, ಪ್ರಕರಣವನ್ನು ದೀಪಾವಳಿ ನಂತರ ಮತ್ತೊಂದು ಪೀಠದ ಮುಂದೆ ವರ್ಗಾಯಿಸಲಾಗುವುದು ಎಂದು ತಿಳಿಸಿದರು. 2011ರಲ್ಲಿ 20 ಎಕರೆ ಭೂಮಿಯ ಡಿನೋಟಿಫಿಕೇಶನ್‌ನಲ್ಲಿ ಅಕ್ರಮ ನಡೆದಿದೆ ಎಂದು ಎಂ.ಆಲಂ ಪಾಷಾ ಅವರು ದೂರು ನೀಡಿದ್ದರು.

ಡಯಾಲಿಸಿಸ್: ಅ.20 ರಿಂದ ಸೇವೆ ವ್ಯತ್ಯಯ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪಾವತಿ ವಿಳಂಬ ಹಾಗೂ ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದನ್ನು ವಿರೋಧಿಸಿ ರಾಜ್ಯದಾದ್ಯಂತ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಇದೇ 20 ರಿಂದ ಮುಷ್ಕರ ಹಮ್ಮಿಕೊಂಡಿದ್ದಾರೆ. ಇದರಿಂದಾಗಿ ಡಯಾಲಿಸಿಸ್ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಘಟಕಗಳನ್ನು ಬಿಆರ್‌ಎಸ್ ಏಜೆನ್ಸಿ ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ಕಾರಣಕ್ಕೆ ಸಂಸ್ಥೆ ಜತೆಗಿನ ಒಪ್ಪಂದವನ್ನು ಆರೋಗ್ಯ ಇಲಾಖೆ ಕಳೆದ ವರ್ಷ ರದ್ದು ಮಾಡಿತ್ತು. ರಾಜ್ಯದ ಎಲ್ಲ ಡಯಾಲಿಸಿಸ್ ಘಟಕಗಳ ನಿರ್ವಹಣೆಯನ್ನು ಈಗ ಸಂಜೀವಿನಿ ಸಂಸ್ಥೆಗೆ ಹೊರಗುತ್ತಿಗೆ ನೀಡಲಾಗಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ 120 ಡಯಾಲಿಸಿಸ್ ಘಟಕಗಳಿದ್ದು, 650 ಕ್ಕೂ ಅಧಿಕ ಸಿಬ್ಬಂದಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬೇಡಿಕೆಗಳ ಈಡೇರಿಕೆ ಸಂಬಂಧ ಡಯಾಲಿಸಿಸ್ ಘಟಕದ ಸಿಬ್ಬಂದಿ ಕಳೆದ ಜೂನ್ ತಿಂಗಳಲ್ಲಿ ಸೇವೆ ಬಹಿಷ್ಕರಿಸಿ, ಬೆಂಗಳೂರಿನಲ್ಲಿ ಮುಷ್ಕರ ನಡೆಸಿದ್ದರು. ಆ ವೇಳೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಇನ್ನು ಬೇಡಿಕೆ ಈಡೇರಿದ್ದರಿಂದ ಮತ್ತೆ ಮುಷ್ಕರ ಕೈಗೊಳ್ಳಲು ನಿಬ್ಬಂದಿ ನಿರ್ಧರಿಸಿದ್ದಾರೆ.

ವಾಟ್ಸ್‌ಆ್ಯಪ್ ಖಾಸಗಿತನ ನೀತಿ: ಅರ್ಜಿ ವಜಾ

ನವದೆಹಲಿ: ವಾಟ್ಸ್‌ಆ್ಯಪ್‌ನ ಖಾಸಗಿತನ ನೀತಿ– 2021 ಕುರಿತು ತನಿಖೆ ನಡೆಸುವಂತೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮೆಟಾ ಪ್ಲಾಟ್‌ಫಾರ್ಮ್ಸ್ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾಗೊಳಿಸಿತು.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಸಿಸಿಐ ಸ್ವತಂತ್ರ ಪ್ರಾಧಿಕಾರವಾಗಿದೆ. ಅದು ನಡೆಸುವ ಕಲಾಪಗಳು, ವಿಚಾರಣೆಗಳನ್ನು ತಡೆಯಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯವೂ ಇಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಮೆಟಾ ಪ್ಲಾಟ್‌ಫಾರ್ಮ್ಸ್, ಸಾಮಾಜಿಕ ಮಾಧ್ಯಮಗಳಾದ ವಾಟ್ಸ್‌ಆ್ಯಪ್ ಹಾಗೂ ಫೇಸ್‌ಬುಕ್‌ನ ಮಾತೃಸಂಸ್ಥೆಯಾಗಿದೆ.

ಕ್ಲಾಸಿಫೈಡ್ಸ್
EDUCATION CORNER

ಸ್ಪರ್ಧಾ ಮಿತ್ರ ACADEMY
IAS / KAS
Prelims and Mains
PSI / PDO / FDA / SDA
RRB / SSC / BANK-PO
FREE WORKSHOP OCT -16TH (10am)
ಕಲ್ಯಾಣ ಕರ್ನಾಟಕ ಹಾಗೂ SC|ST ಅಭ್ಯರ್ಥಿಗಳಿಗೆ ಶುಲ್ಕ ರಿಯಾಯಿತಿ ನೀಡಲಾಗುವುದು.
Admission Open
Bengaluru | Mysore | Kalaburagi
3417/13, Opposite Maruthi Medicals, Near Attiguppe metro Station, (338 Metro pillar) Service Road, Vijayanagar, Bangalore - 560 040.
E-mail : spardhamithra@gmail.com | Website : www.spardhamithra.in
9535111133 / 9535111199



ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆ ಮಾಡಿ: 9611225266/ 9611225388

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339 /9036657399

Marketing & Sales

HIRING
BUSINESS DEVELOPMENT EXECUTIVE NOS: 100+
BUSINESS DEVELOPMENT MANAGER NOS: 100+
REGIONAL MANAGER NOS: 20+
Location: BANGALORE
DATE: 15/10/2022
VENUE: 632, 2nd main, 2nd Cross Rd, RBI Layout, Phase 7, J. P. Nagar, Bengaluru, Karnataka - 560078.
TIME: 09:00AM to 05:00PM.
NEEDFUL DOCUMENTS
Resume (Hard Copy), Passport Size Photo Copy, Aadhar Card(Soft or Hard Copy), Educational Documents(Soft Copy).
Note: Suitable candidates will be having their all the round interviews on the same day and the offer will be released on the same day itself.
dileepan.m@nibavlifts.com
+918925804732
NIBAV

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ಸ್, ರಿಸೆಪ್ಷನಿಸ್ಟ್, ಆಫೀಸ್ ಅಸಿಸ್ಟೆಂಟ್ಸ್ ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್ ಟೆಲಿಕಾಲರ್ಸ್ ಪರ್ಚೇಸ್/ ಸ್ಟೋರ್ಕೀಪರ್ಸ್ ಎಲೆಕ್ಟ್ರಿಷಿಯನ್ಸ್ ರಮ್ಯ: 7204367465/ 8050107101

Cook

ಕೇರಳದ ಎರ್ನಾಕುಲಂನಲ್ಲಿರುವ ರೆಸ್ಟೋರೆಂಟ್‌ಗಾಗಿ ದೊಸೆ ಮತ್ತು ಥಟ್ಟು ಇಡ್ಲಿ ಮೇಕರ್‌ಅನುಭವವುಳ್ಳವರು ತಕ್ಷಣ ಬೇಕಾಗಿದ್ದಾರೆ ಆಕರ್ಷಕ ವೇತನ : 9895175800

Wanted

ಬೇಕಾಗಿದ್ದಾರೆ ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ SSLC/PUC/DIPLOMA/ DEGREE ಸಂಪರ್ಕಿಸಿ 9738365092 SANKALPA VENTURES

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಭವಿಷ್ಯ

Healing

6 - ಹಂತದ ಮಹಾಜ್ವಾಲ ಮಂತ್ರ
ಜೀವನದಲ್ಲಿ ಯಶಸ್ಸು, ದೈಹಿಕ ಆರೋಗ್ಯ, ಮಾನಸಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ವಿದ್ಯಾರ್ಥಿಗಳ ಯಶಸ್ಸಿಗೆ
ಸಂಪರ್ಕಿಸಿ: 82775 65480

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇತರೆ

Medical

ಶ್ರೀ ಶಕ್ತಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಸೆಂಟರ್ (ಸರ್ವಿಸ). ಮಂಡಿ, ಬೆನ್ನು, ಕತ್ತು ನೋವು ಲಕ್ವಾ ವೆರಿಕೋಸ್ ವೆಯ್ನ್, ಆರ್ಥ್ರೈಟಿಸ್ ಸಮಸ್ಯೆಗಳಿಗೆ, ಯಾವುದೇ ರೀತಿಯ ಔಷಧಿ, ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಮಾಡಲಾಗುವುದು. ವಿಳಾಸ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಶೇಷಾದ್ರಿ ಪುರಂ ಬೆಂಗಳೂರು. 9019626612

ಪ್ರವಾಸ

Travel

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖ ಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ, ಎಸಿ.ಬಸ್ಸು ನೊಂದಿಗೆ ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್ ವಿಷ್ಣುನ್ ಟ್ರಾವೆಲ್ ಲೈನ್ಸ್, #164/3 ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

For Advt. Booking Contact : 9845114560

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
conditions apply*
dhclassifieds@deccanherald.co.in www.dhclassifieds.com



ಮಹಿಳೆಯರ ಆಹಾರ ಸೇವನೆ ಮಿಥ್ಯೆ–ತಥ್ಯ

ವಿಶ್ವ ಆಹಾರ ದಿನ ಅಕ್ಟೋಬರ್ 16

ಮಹಿಳೆಯರ ಜೈವಿಕ ಬದುಕಿನಲ್ಲಿ ಋತುಮತಿಯಾಗುವುದು, ಬಸುರಿ, ಬಾಣಂತನಗಳು ಬಹಳ ಪ್ರಮುಖ ಘಟ್ಟಗಳು. ಹಲವು ತಪ್ಪುಕಲ್ಪನೆಗಳಿಂದ ಈ ಸಂದರ್ಭಗಳಲ್ಲಿ ಮಹಿಳೆಯರಿಗೆ ಸತ್ವಯುತ ಆಹಾರ ಸಿಗುತ್ತಿಲ್ಲ. ಇದರಿಂದ ಅಪೌಷ್ಟಿಕತೆ ಮತ್ತು ರಕ್ತಹೀನತೆಯಂಥ ಸಮಸ್ಯೆಗಳು ಜೀವನಪರ್ಯಂತ ಕಾಡುತ್ತವೆ. ವಿಶ್ವ ಆಹಾರ ದಿನದ ಹಿನ್ನೆಲೆಯಲ್ಲಿ ಮಹಿಳೆಯರು ಸೇವಿಸುವ ಆಹಾರದ ಸುತ್ತ ಇರುವ ಹಲವು ಮಿಥ್ಯೆಗಳ ಬಗ್ಗೆ ಆಯುರ್ವೇದತಜ್ಞೆ ಡಾ. ವಸುಂಧರಾ ಭೂಪತಿ ಅವರು ಇಲ್ಲಿ ಚರ್ಚಿಸಿದ್ದಾರೆ.

ಅವತ್ತು ಬೆಳಿಗ್ಗೆ ಬೆಳಿಗ್ಗೆಯೇ ಫೋನ್ ಮಾಡಿದ ಸುನಂದಮ್ಮ, 'ಡಾಕ್ಟ್ರೆ, ಬಾಣಂತಿಯರು ಹೆಚ್ಚು ನೀರು ಕುಡಿಯಬಾರದು ಅಂತ ಹೇಳಿದರೂ ಸೊಸೆ ಮಾತೇ ಕೇಳೋದಿಲ್ಲ. ಬಾಳೆಹಣ್ಣು ತಿನ್ನಬಾರದು; ಹಸಿ ಮೈಯ ಬಾಣಂತಿ ಅಂದ್ರೂ ಕೇಳೋದಿಲ್ಲ' ಅಂತ ಆತಂಕ ಹೇಳಿಕೊಂಡರು.

'ಬಾಣಂತಿಯರು ನೀರು ಕುಡಿಯಬಾರದು ಅಂತ ಯಾರು ಹೇಳಿದ್ದು ನಿಮಗೆ' ಅಂತ ಮರು ಪ್ರಶ್ನೆ ಹಾಕಿದೆ. ಅದಕ್ಕೆ ಸುನಂದಮ್ಮ ಅವರಮ್ಮ, ಅಜ್ಜಿ ಅಂತೆಲ್ಲ ಕತೆ ಹೇಳಿದ್ದರು.

ಇಂಥದ್ದೇ ಹತ್ತು ಹಲವು ಮಿಥ್ಯೆಗಳು ಆಹಾರ ಸುತ್ತ ಇವೆ. ಹೆಣ್ಣುಮಕ್ಕಳ ಜೈವಿಕ ಪ್ರಕ್ರಿಯೆಯಲ್ಲಿ ಋತುಮತಿಯಾಗುವುದು, ಬಸುರಿ, ಬಾಣಂತನಗಳು ಬಹಳ ಪ್ರಮುಖ ಘಟ್ಟಗಳು. ಆದರೆ, ಇಂಥ ಮಿಥ್ಯೆಗಳಿಂದಾಗಿ ಸರಿಯಾದ ಪ್ರಮಾಣದಲ್ಲಿ ಆಹಾರದ ಸತ್ವಗಳು ಸಿಗದೇ ಜೀವನಪರ್ಯಂತ ದೇಹದಲ್ಲಿ ಒಂದಲ್ಲ ಒಂದು ಕಡೆ ನೋವು ಅನುಭವಿಸುವುದು ಸಾಮಾನ್ಯವಾಗಿದೆ.

3 ಲೀಟರ್ ನೀರು ಕುಡಿಯಿರಿ

ನೀರು ಜೀವಜಲ. ಬಾಣಂತಿಯರನ್ನು ಇದರಿಂದ ದೂರ ಮಾಡಿದರೆ ಹೇಗೆ?. ಬಾಣಂತಿಯರು ಕನಿಷ್ಠ 3 ಲೀಟರ್ ನೀರು ಕುಡಿಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ದೇಹದಲ್ಲಿ ನೀರಿನಂಶ ಕಡಿಮೆಯಾದರೆ, ಎದೆಹಾಲಿನ ಉತ್ಪತ್ತಿಯೂ ಕಡಿಮೆಯಾಗುತ್ತದೆ. ಜತೆಗೆ ಮಲಬದ್ಧತೆ, ಮೂಲವ್ಯಾಧಿಯಂಥ ಸಮಸ್ಯೆಗಳು ಕಾಡಬಹುದು.

ಬಾಳೆಹಣ್ಣು, ದ್ರಾಕ್ಷಿ ಸೇವನೆ ಕೂಡ ಬಾಣಂತನದಲ್ಲಿ ಮುಖ್ಯ. ಬಾಳೆಹಣ್ಣಿನಲ್ಲಿ ಕಬ್ಬಿಣಾಂಶ ಮತ್ತು ದ್ರಾಕ್ಷಿಯಲ್ಲಿ ವಿಟಮಿನ್ ಸಿ ಇದೆ. ಇವು ದೇಹಕ್ಕೆ ಪೋಷಣೆ ನೀಡಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ನನ್ನ ಎರಡೂ ಬಾಣಂತನದಲ್ಲಿಯೂ ನಿತ್ಯ ಮೂರು ಲೀಟರ್ ನೀರು ಕುಡಿಯುತ್ತಿದ್ದೆ. ಬಾಳೆಹಣ್ಣು, ದ್ರಾಕ್ಷಿ ತಿಂದಿದ್ದೇನೆ.

ಇದೊಂದು ಉದಾಹರಣೆಯಷ್ಟೆ. ಇಂಥದ್ದೇ ಹಲವಾರು ತಪ್ಪು ತಿಳಿವಳಿಕೆಗಳು ಅದರಲ್ಲೂ ಮಹಿಳೆಯರ ಆಹಾರ ಪದ್ಧತಿಯಲ್ಲಿ ತುಸು ಹೆಚ್ಚಾಗಿಯೇ ಇವೆ. ಸಸ್ಯಾಹಾರ ಮತ್ತು ಮಾಂಸಾಹಾರ ಸೇವನೆಯಲ್ಲೂ ಇಂಥ ತಪ್ಪು ತಿಳಿವಳಿಕೆಗಳು ಸಾಮಾನ್ಯ ಎನಿಸಿವೆ.

ಹಾರ್ಮೋನ್‌ನಲ್ಲಿ ವ್ಯತ್ಯಾಸವಾಗದು

ಋತುಸ್ರಾವದ ಆರಂಭದ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ಮಾಂಸಾಹಾರ ನೀಡಬಾರದು. ಕೊಬ್ಬಿನಾಂಶ ಹೆಚ್ಚಿರುವುದರಿಂದ ಹಾರ್ಮೋನ್‌ಗಳಲ್ಲಿ ವ್ಯತ್ಯಯ ಉಂಟಾಗುತ್ತದೆ ಎನ್ನುವುದೆಲ್ಲ ಬರಿಯ ಊಹೆ.

ಋತುಸ್ರಾವದ ಆರಂಭದ ದಿನಗಳಲ್ಲಿ ದೇಹದ ಬೆಳವಣಿಗೆ ಕ್ಷಿಪ್ರವಾಗಿರುತ್ತದೆ. ಈ ಸಂದರ್ಭದಲ್ಲಿ ಹೆಚ್ಚಿನ ಪ್ರೊಟೀನ್, ಮೇದಸ್ಸು ಬೇಕಾಗುತ್ತದೆ. ಮಾಂಸಾಹಾರ ಸೇವನೆಯಿಂದ ಇವೆಲ್ಲ ಸಿಗುತ್ತದೆ. ಜತೆಗೆ ವ್ಯಾಯಾಮ, ಆಟ, ಯೋಗದಲ್ಲಿ ಯಾವುದಾದರೂ ಒಂದನ್ನು ನಿಯಮಿತವಾಗಿ ಮಾಡುವ ಅಭ್ಯಾಸ ಮಾಡಿಕೊಳ್ಳಬೇಕು.

ಮೀನು ಮೊಟ್ಟೆಯಿಂದ ತಾಮಸ ಹೆಚ್ಚಲ್ಲ

'ಗರ್ಭಿಣಿಯರು ಮೀನು, ಮೊಟ್ಟೆ ತಿಂದರೆ ಮಗು ಮಂದವಾಗುತ್ತದೆ. ತಾಮಸ ಹೆಚ್ಚುತ್ತದೆ' ಎನ್ನುವುದು ಕೂಡ ಒಂದು ಮಿಥ್ಯೆ. ಗರ್ಭಿಣಿಯರು ಇಷ್ಟಪಟ್ಟರೆ ಮಾಂಸಾಹಾರ ಖಂಡಿತ ಸೇವಿಸಬಹುದು. ಮಾಂಸಾಹಾರ ಅಭ್ಯಾಸವಿರುವ ಗರ್ಭಿಣಿಯರು ದೇಹದ ಪೋಷಣೆಗೆ ಮತ್ತು ಭ್ರೂಣದ ಬೆಳವಣಿಗೆಗೆ ನಾಲ್ಕನೇ ತಿಂಗಳಲ್ಲಿ ಮಾಂಸ ಸೇವನೆ ಮಾಡಬೇಕೆಂದು ಆಯುರ್ವೇದದಲ್ಲಿ ಹೇಳಲಾಗಿದೆ. ಇದರಿಂದ ಮಗುವಿನಲ್ಲಿ ತಾಮಸ ಗುಣವಾಗಲಿ ಮಂದವಾಗುವುದಾಗಲಿ ಯಾವುದೂ ಆಗುವುದಿಲ್ಲ.

'ಗರ್ಭಿಣಿ ಮೊಟ್ಟೆ ತಿಂದರೆ, ಹುಟ್ಟುವ ಮಗುವಿನ ತಲೆಯಲ್ಲಿ ಕೂದಲಿರುವುದಿಲ್ಲ' ಎನ್ನುವುದು ಇಂಥದ್ದೇ ಮತ್ತೊಂದು ತಪ್ಪು ಕಲ್ಪನೆ. ಅಂಥದ್ದೇನೂ ಇಲ್ಲ. ಮೊಟ್ಟೆಯಲ್ಲಿ ಪ್ರೊಟೀನ್, ಕ್ಯಾಲ್ಸಿಯಂ ಅಧಿಕವಾಗಿರುತ್ತದೆ. ಮೊಟ್ಟೆ ಸೇವಿಸಿದರೆ ಗರ್ಭಿಣಿಗೆ ಪೋಷಕಾಂಶ ದೊರೆಯುವುದರ ಜತೆಗೆ ಮಗುವಿನಲ್ಲಿ ಮೂಳೆ, ಚರ್ಮ, ಕೂದಲು ಬೆಳವಣಿಗೆ ಉತ್ತಮವಾಗಿರುತ್ತದೆ.

ಗರ್ಭಿಣಿಯರು ಪಪ್ಪಾಯ ತಿನ್ನಬಹುದು

ಗರ್ಭಿಣಿಯರು ಖಂಡಿತಾಗಿಯೂ ಪಪ್ಪಾಯ ಹಣ್ಣು ತಿನ್ನಬಹುದು. ಆದರೆ, ಯಾವ ತಿಂಗಳಿನಿಂದ ತಿನ್ನಬೇಕು ಎನ್ನುವುದರ ಬಗ್ಗೆ ಅರಿವಿರಬೇಕು. ಗರ್ಭ ಧರಿಸಿ ಆರಂಭದ ಮೂರು ತಿಂಗಳನ್ನು ಹೊರತುಪಡಿಸಿ ಉಳಿದ ತಿಂಗಳಲ್ಲಿ ಪಪ್ಪಾಯ ಹಣ್ಣು ತಿನ್ನಬಹುದು. ಎರಡನೇ ಮಗುವಿಗೆ ಗರ್ಭಿಣಿಯಾಗಿದ್ದಾಗ ಪ್ರತಿ ನಿತ್ಯ ಮನೆಯಲ್ಲಿಯೇ ಬೆಳೆದ ರುಚಿಕರ ಪಪ್ಪಾಯ ಹಣ್ಣನ್ನು ತಿಂದಿದ್ದೇನೆ. ನೈಸರ್ಗಿಕವಾಗಿಯೇ ಹೆರಿಗೆಯಾಯಿತು. ದಷ್ಟಪುಷ್ಟ ಮಗುವೂ ಜನಿಸಿತು.

ಆಹಾರ ಅಲರ್ಜಿ ಬಗ್ಗೆ ಎಚ್ಚರವಿರಲಿ

ಸಸ್ಯಾಹಾರಿಯಾಗಿರಲಿ, ಮಾಂಸಾಹಾರಿಯಾಗಿರಲಿ ಕೆಲವೊಂದು ಆಹಾರ ಪದಾರ್ಥಗಳು ದೇಹಕ್ಕೆ ಒಗ್ಗುವುದಿಲ್ಲ. ಪ್ರತಿ ಮನುಷ್ಯನೂ ಭಿನ್ನ. ಹಾಗಾಗಿ ಮಹಿಳೆಯರು ಆಹಾರ ಅಲರ್ಜಿಯ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕು. ಕೆಲವರಿಗೆ ಕಡಲೆಬೀಜ ಆದರೆ, ಇನ್ನು ಕೆಲವರಿಗೆ ಎಳ್ಳು ಆಗುವುದಿಲ್ಲ. ದೇಹದ ಒಗ್ಗದಿರುವ ಆಹಾರ ಪದಾರ್ಥ ಸೇವಿಸಿದಾಗ ಹಿಸ್ಟಮಿನ್ ಉತ್ಪತ್ತಿ ಅಧಿಕವಾಗಿ ತಕ್ಷಣ ದೇಹ ಪ್ರತಿಕ್ರಿಯೆ ತೋರಿಸುತ್ತದೆ.

ಆಹಾರ ಸೇವನೆ ವಿಚಾರದಲ್ಲಿ ಊಹಾಪೋಹಗಳಿಗೆ ಕಿವಿಗೊಡಬೇಡಿ. ಏನೇ ಸಂಶಯಗಳಿದ್ದರೂ ವೈದ್ಯರೂ, ಆಹಾರತಜ್ಞರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಿ. ಯಾರದ್ದೋ ಮಾತನ್ನು ನಂಬಿ ಇಷ್ಟವಿಲ್ಲದ ಆಹಾರವನ್ನು ಸೇವಿಸುವುದಾಗಲಿ, ಇಷ್ಟವಿರುವ ಆಹಾರವನ್ನು ವರ್ಜ್ಯಿಸುವುದಾಗಲಿ ತಪ್ಪು.

ಸಮತೋಲಿತ ಆಹಾರ ಅಗತ್ಯ

ಮಹಿಳೆಯರಲ್ಲಿ ಅಪೌಷ್ಟಿಕತೆ, ರಕ್ತಹೀನತೆಯ ಸಮಸ್ಯೆಗಳು ಅಧಿಕ. ದೇಶದಲ್ಲಿ ಪ್ರತಿ ನೂರು ಮಹಿಳೆಯರಲ್ಲಿ 42 ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇದಕ್ಕೆ ಕಾರಣ, ಸಮತೋಲನ ಆಹಾರ ಸೇವಿಸುವುದು ಕಡಿಮೆಯಾಗಿರುವುದು. ಸಾಮಾನ್ಯ ಮಹಿಳೆಯರಿಗಿಂತ ಗರ್ಭಿಣಿ, ಬಾಣಂತಿಯರಿಗೆ ಇನ್ನೂ ಹೆಚ್ಚಿನ ಪೌಷ್ಟಿಕಾಂಶಗಳು ಬೇಕಾಗುತ್ತವೆ. ಇಂಥ ಸಮಯದಲ್ಲಿ ದೇಹಕ್ಕೆ ಪೋಷಕಾಂಶಗಳು ಸರಿಯಾಗಿ ಪೂರೈಕೆಯಾಗದೇ ರಕ್ತಹೀನತೆ, ವಿಟಮಿನ್‌ಗಳ ಕೊರತೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಾಗಿ ಕಡ್ಡಾಯವಾಗಿ ಸಮತೋಲಿತ ಆಹಾರ ಸೇವಿಸಬೇಕು.

ಎರಡರಲ್ಲೂ ಪ್ರೊಟೀನ್ ಇದೆ

'ಡಾಕ್ಟ್ರೆ, ನನ್ನ ತಂಗಿ ಜಿಮ್‌ಗೆ ಹೋಗ್ತಾಳೆ. ದೇಹಕ್ಕೆ ಹೆಚ್ಚು ಪ್ರೊಟೀನ್ ಬೇಕಾಗುತ್ತದೆ, ಅದಕ್ಕೆ ಕೆಲವರು ಮೊಟ್ಟೆ ತಿನ್ನಿ ಅಂತ ಸಲಹೆ ನೀಡುತ್ತಾರಂತೆ. ನಾವು ಮೊಟ್ಟೆ ತಿನ್ನುವುದಿಲ್ಲ. ಸಸ್ಯಾಹಾರದಲ್ಲಿ ಹೆಚ್ಚು ಪ್ರೊಟೀನ್ ಸಿಗುವುದಿಲ್ಲವೇ ?' ಇದು ಸಸ್ಯಾಹಾರಿಯೊಬ್ಬರ ಪ್ರಶ್ನೆ.

ಮಾಂಸಾಹಾರದಲ್ಲಿರುವಷ್ಟು ಸಸ್ಯಾಹಾರದಲ್ಲಿ ಪ್ರೊಟೀನ್ ಇರುವುದಿಲ್ಲ ಎನ್ನುವುದೇ ತಪ್ಪು ತಿಳಿವಳಿಕೆ. ಸಸ್ಯಾಹಾರ, ಮಾಂಸಾಹಾರ ಎರಡರಲ್ಲಿಯೂ ಇರುವ ಅಮೈನೊ ಆಮ್ಲಗಳನ್ನು ತನಗೆ ಬೇಕಾದಂತೆ ತನ್ನ ಆರೋಗ್ಯಕ್ಕೆ ಪೂರಕವಾಗಿ ಮಾರ್ಪಡಿಸಿಕೊಳ್ಳುವ ಚಾಣಕ್ಷತೆ ದೇಹಕ್ಕಿದೆ.

ದೇಹದಲ್ಲಿ ಹಾರ್ಮೋನುಗಳು, ಕಿಣ್ವಗಳು, ಕೊಲಾಜನ್‌ಗಳು, ಎಲಾಸ್ಟಿನ್ ಗಳು ರಚನೆಯಾಗಲು ಪ್ರೊಟೀನ್‌ನಲ್ಲಿರುವ ಅಮೈನೊ ಆಮ್ಲಗಳೇ ಕಾರಣ. ಪ್ರೊಟೀನ್ ಗುಣಮಟ್ಟವು ಅದರಲ್ಲಿರುವ ಅಮೈನೊ ಆಮ್ಲಗಳ ಪ್ರಮಾಣದ ಮೇಲೆ ನಿಂತಿದೆ.

ಮೊಟ್ಟೆ ಮತ್ತು ಹಾಲು ಎರಡರಲ್ಲೂ ಹೆಚ್ಚು ಅವಶ್ಯಕ ಅಮೈನೊ ಆಮ್ಲಗಳಿವೆ. ದೇಹಕ್ಕೆ ಸುಮಾರು 25ಕ್ಕೂ ಹೆಚ್ಚು ಅಮೈನೋ ಆಮ್ಲಗಳು ಬೇಕು. ಪ್ರತಿ ಜೀವಕಣಗಳ ಬೆಳವಣಿಗೆಗಳ ಇವು ಅವಶ್ಯ. ಉದಾ: ಮಾಂಸ, ಮೊಟ್ಟೆಗಳಲ್ಲಿರುವ ಅರ್ಜಿನೈನ್ ಅಮೈನೊ ಆಮ್ಲ, ಕುಸುಬಲಕ್ಕಿ, ಬಟಾಣಿ, ಹೆಸರುಕಾಳು, ಕಡಲೆಬೀಜ(ಶೇಂಗಾ)ದಲ್ಲಿಯೂ ಇರುತ್ತದೆ. ಹಂದಿ ಮಾಂಸದಲ್ಲಿರುವ ಹಿಸ್ಟಡಿನ್, ಚೀಸ್, ಎಳ್ಳು, ಕುಸುಬಲಕ್ಕಿ, ತೊಗರಿಬೇಳೆ. ಮೊಟ್ಟೆಯಲ್ಲಿರುವ ಸಿಸ್ಟಿನ್, ಟೈರೊಸಿನ್, ಥ್ರಿಂಯೋನೈನ್‌ಗಳು ಕಡಲೆಬೀಜ, ಹಾಲು, ಬಾದಾಮಿ, ಗೋಧಿಹಿಟ್ಟು, ರಾಗಿ, ಎಳ್ಳುಗಳಲ್ಲಿಯೂ ದೊರೆಯುತ್ತದೆ. ಹೀಗೆ ಅನೇಕ ಅಮೈನೊ ಆಮ್ಲಗಳು ಸಸ್ಯಹಾರದಲ್ಲಿಯೂ ದೊರೆಯುತ್ತವೆ. ಅವರವರ ದೇಹದ ತೂಕಕ್ಕನುಗುಣವಾಗಿ ಒಂದು ಕೆ.ಜಿಗೆ ಒಂದು ಗ್ರಾಂ ಪ್ರೊಟೀನ್ ಬೇಕು. ಆನೆ ಅತ್ಯಂತ ಬಲಶಾಲಿ. ಅದು ಸಸ್ಯಾಹಾರಿ ಅಲ್ಲವೇ?



ಹಸಿವೆ ತಣಿಸುವ ಅಪಟೈಸರ್

ಋತ ರಾಘವಿ

ನಳಪಾಕ

ಹಸಿವು ಎಂದಾಕ್ಷಣ ಥಟ್ ಅಂತ ಸಿದ್ಧಗೊಂಡು ಆ ಹಸಿವನ್ನು ನೀಗಿಸುವ ಎಲ್ಲ ಆಹಾರಗಳೂ 'ಅಪಟೈಸರ್'ಗಳೇ. ಇಂಥ ದಿಢೀರನೆ ಹಸಿವು ನೀಗಿಸುವ ಖಾದ್ಯಗಳ ರೆಸಿಪಿ ಇಲ್ಲಿದೆ.



ಸೋಯಾ ಚಂಕ್ಸ್ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು: ಬಿಸಿ ನೀರಿನಲ್ಲಿ ನೆನೆಸಿಟ್ಟ ಒಂದು ಕಪ್ ಸೋಯಾ ಚಂಕ್ಸ್, ಒಂದು ಈರುಳ್ಳಿ, ಹಸಿಮೆಣಸಿನಕಾಯಿ, ನಾಲ್ಕು ಬೆಳ್ಳುಳ್ಳಿ, ಅರ್ಧ ಇಂಚು ಶುಂಠಿ, ಕೊತ್ತಂಬರಿ, ಒಂದು ಚಮಚ ಕಡಲೆಹಿಟ್ಟು, ಒಂದು ಚಮಚ ಅಕ್ಕಿ ಹಿಟ್ಟು, ಅರ್ಧ ಟೀ ಸ್ಪೂನ್ ಜೀರಿಗೆ ಪುಡಿ, ಅರ್ಧ ಚಮಚ ಗರಂ ಮಸಾಲ, ದನಿಯಾ ಪುಡಿ, 1/2 ಚಮಚ ಅರಿಶಿನ. ಕರಿಯಲು ಎಣ್ಣೆ ಹಾಗೂ ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ನೆನಸಿಟ್ಟ ಸೋಯಾ ಚಂಕ್ಸ್, ಈರುಳ್ಳಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿ ಹಾಗೂ ಶುಂಠಿಯನ್ನು ಮಿಕ್ಸಿಗೆ ಹಾಕಿ ತರಿ ತರಿಯಾಗಿ ರುಬ್ಬಿಕೊಳ್ಳಿ. ನಂತರ ಆ ಮಿಶ್ರಣಕ್ಕೆ ಕೊತ್ತಂಬರಿ, ಕಡಲೆಹಿಟ್ಟು, ಅಕ್ಕಿಹಿಟ್ಟು, ಜೀರಿಗೆ ಪುಡಿ, ಗರಂ ಮಸಾಲ, ದನಿಯಾ ಪುಡಿ, ಅರಿಶಿನ , ಉಪ್ಪು ಸೇರಿಸಿ ನಾದಿಕೊಳ್ಳಿ. ಹಿಟ್ಟನ್ನು ವಡೆಯಾಕಾರಕ್ಕೆ ಮಾಡಿಕೊಂಡು ಮಧ್ಯಮ ಉರಿಯಲ್ಲಿರುವ ಕಾದ ಎಣ್ಣೆಗೆ ಬಿಡಿ. ಬಿಸಿ ಬಿಸಿ ಸೋಯಾ ಚಂಕ್ಸ್ ಕಟ್ಲೆಟ್ ಸವಿಯಲು ಸಿದ್ಧ.



ಪಾಲಕ್ ಚೀಸ್ ಬಾಲ್

ಬೇಕಾಗುವ ಸಾಮಗ್ರಿಗಳು: ಎಣ್ಣೆ, ನಾಲ್ಕು ಬೆಳ್ಳುಳ್ಳಿ ಎಸಳು, ಚಿಕ್ಕ ಶುಂಠಿ, ಈರುಳ್ಳಿ, ಹಸಿ ಮೆಣಸು, ಬ್ರೆಡ್ ಪುಡಿ, ಕಾರ್ನ್ ಪುಡಿ, ಒಂದು ಕಪ್ ಪಾಲಕ್, ಚೀಸ್ ಕ್ಯೂಬ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಒಂದು ಪಾತ್ರೆಗೆ ಎರಡು ಚಮಚ ಎಣ್ಣೆ ಹಾಕಿ, ಅದರಲ್ಲಿ ಬೆಳ್ಳುಳ್ಳಿ, ಶುಂಠಿ, ಈರುಳ್ಳಿ, ಹಸಿಮೆಣಸನ್ನು ಚೆನ್ನಾಗಿ ಹುರಿಯಿರಿ. ಇದಕ್ಕೆ ಪಾಲಕ್ ಸೊಪ್ಪು ಸೇರಿಸಿ ಬಾಡಿಸಿ. ನಂತರ ಇಷ್ಟನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಿ. ಈ ಮಿಶ್ರಣಕ್ಕೆ ಉಪ್ಪು, ಬ್ರೆಡ್‌ಪುಡಿ ಹಾಗೂ ಕಾರ್ನ್ ಪುಡಿ ಸೇರಿಸಿ ಹಿಟ್ಟಿನಾಕಾರಕ್ಕೆ ನಾದಿಕೊಳ್ಳಿ. ನಾದಿಕೊಂಡ ಹಿಟ್ಟನ್ನು ಅಗಲ ಆಕಾರಕ್ಕೆ ತಂದು ಅದರ ಮಧ್ಯೆ ಚೀಸ್ ಕ್ಯೂಬ್ ಇಟ್ಟು ಉಂಡೆಯಾಕಾರ ಮಾಡಿ. ಈ ಉಂಡೆಗಳನ್ನು ಕಾದ ಎಣ್ಣೆಯಲ್ಲಿ ಬಿಟ್ಟರೆ ಪಾಲಕ್ ಚೀಸ್ ಬಾಲ್ ಸಿದ್ಧ.



ಮ್ಯಾಗಿ ಪಕೋಡ

ಬೇಕಾಗುವ ಸಾಮಗ್ರಿಗಳು: ಒಂದು ಪ್ಯಾಕ್ ಮ್ಯಾಗಿ, ಒಂದು ಪ್ಯಾಕ್ ಮ್ಯಾಗಿ ಮಸಾಲ, ಅರ್ಧಕಪ್ ಎಲೆ ಕೋಸು, ಎರಡು ಹಸಿಮೆಣಸಿನಕಾಯಿ, ಎರಡು ಈರುಳ್ಳಿ, ಕರಿಬೇವು, ಕೊತ್ತಂಬರಿ ಸೊಪ್ಪು, ಅಕ್ಕಿಹಿಟ್ಟು, ಕಡಲೆಹಿಟ್ಟು, ಅರ್ಧ ಚಮಚ ಜಿರೀಗೆ ಪುಡಿ, ಒಂದು ಚಮಚ ಖಾರದ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, ಕರಿಯಲು ಬೇಕಾಗುವಷ್ಟು ಎಣ್ಣೆ

ಮಾಡುವ ವಿಧಾನ: ಕುದಿಯುವ ನೀರಿಗೆ ಮ್ಯಾಗಿ ಹಾಕಿ. ಮೂರು ನಿಮಿಷ ಬೇಯಿಸಿ. ಬೆಂದ ಮ್ಯಾಗಿಯನ್ನು ಸೋಸಿಕೊಂಡು ಇಡಿ. ಒಂದು ಪಾತ್ರೆಗೆ ಎಲೆಕೋಸು, ಹಸಿಮೆಣಸು, ಹೆಚ್ಚಿದ ಈರುಳ್ಳಿ, ಕರಿಬೇವು, ಕೊತ್ತಂಬರಿ ಸೊಪ್ಪು, ಉಪ್ಪು, ಜೀರಿಗೆ ಪುಡಿ, ಖಾರದಪುಡಿ ಸೇರಿಸಿ ಮಿಶ್ರಣ ಮಾಡಿಕೊಳ್ಳಿ. ಈ ಮಿಶ್ರಣಕ್ಕೆ ಬೆಂದ ಮ್ಯಾಗಿ ಹಾಗೂ ಅದರ ಮಸಾಲವನ್ನು ಸೇರಿಸಿ. ಹೆಚ್ಚು ನೀರು ಬಳಸಬೇಡಿ. ಎರಡು ಚಮಚ ನೀರು ಹಾಕಿ, ಅಕ್ಕಿಹಿಟ್ಟು ಹಾಗೂ ಕಡಲೆ ಹಿಟ್ಟನ್ನು ಹಂತ ಹಂತವಾಗಿ ಸೇರಿಸಿ ಮಿಶ್ರಣ ಮಾಡಿಕೊಳ್ಳಿ. ಈ ಮಿಶ್ರಣವನ್ನು ಕಾದ ಎಣ್ಣೆಗೆ ಉಂಡೆಯಾಗಿ ಬಿಡಿ. ಮ್ಯಾಗಿ ಪಕೋಡ ಸಿದ್ಧಗೊಳ್ಳುತ್ತದೆ.

ಸ್ಪಂದನ



ಡಾ. ವೀಣಾ ಎಸ್. ಭಟ್

ಗರ್ಭಿಣಿಯರಲ್ಲಿ ಕಸಕೆಳಗಿರುವುದು ಎಂದರೇನು ?

• ನಾನು ಮೊದಲ ಬಾರಿಗೆ ಗರ್ಭಿಣಿಯಾಗಿದ್ದು 4 ತಿಂಗಳು ನಡೆಯುತ್ತಿದೆ. ನನಗೆ ಒಮ್ಮೆ ಸ್ವಲ್ಪ ರಕ್ತಸ್ರಾವವಾದಾಗ ಡಾಕ್ಟರ್ ಸ್ಕ್ಯಾನಿಂಗ್ ಮಾಡಿ ಕಸಕೆಳಗಿದೆ ಆಮೇಲೆ ಮೇಲೆಹೋಗುತ್ತೆ, ಜಾಗರೂಕತೆಯಿಂದಿರಿ, ವಿಶ್ರಾಂತಿಯಲ್ಲಿರಿ ಎಂದಷ್ಟೇ ಹೇಳಿದ್ದರು. ಏಕೆ ಎಂದು ವಿವರವಾಗಿ ಅರ್ಥವಾಗಿಲ್ಲ? ಈ ಬಗ್ಗೆ ತಿಳಿಸುವಿರಾ?

ಪೂಜಾ, ಬೆಂಗಳೂರು.

ಉತ್ತರ: ಪೂಜಾರವರೇ, ಗರ್ಭಸ್ಥ ಶಿಶುವಿನ ಪೋಷಣೆ ಹಾಗೂ ಬೆಳವಣಿಗೆಗೆ ಪೂರಕವಾಗಿ ತಾಯಿ ಹಾಗೂ ಮಗುವನ್ನು ಜೋಡಿಸುವ ಅಂಗವೇ ಪ್ಲಾಸೆಂಟಾ (ಕಸ/ಮಾಸು) ಮತ್ತು ಕರುಳಬಳ್ಳಿ. ಸಂತಾನೋತ್ಪತ್ತಿ ಸೃಷ್ಟಿಕ್ರಿಯೆಯ ಅತ್ಯದ್ಭುತ ಪ್ರಕ್ರಿಯೆ ಹೆಣ್ಣಿನ ಅಂಡಾಣು ಹಾಗೂ ಗಂಡಸಿನ ವೀರ್ಯಾಣು ಗರ್ಭನಾಳದಲ್ಲಿ ಮಿಲನವಾಗಿ ಫಲಿತಗೊಂಡ ಜೀವಾಣು ಗುಣಿತಗೊಳ್ಳುತ್ತ ಗರ್ಭಾಶಯದೆಡೆಗೆ ಚಲಿಸಿ ಅಲ್ಲಿ ತನಗಾಗಿ ಸಿದ್ಧವಾಗಿರುವ ಮೃದುವಾದ ಒಳಪದರದಲ್ಲಿ ನಾಟಿಕೊಳ್ಳುತ್ತದೆ. ಪ್ಲಾಸೆಂಟಾವು ಸ್ವಲ್ಪಭಾಗ ತಾಯಿಯಿಂದ ಸ್ವಲ್ಪಭಾಗ ಶಿಶುವಿನಿಂದ ಬೆಳೆಯುತ್ತದೆ. ಭ್ರೂಣವು 11ನೆಯದಿನ ತಾಯಿಗರ್ಭಕ್ಕೆ ಅಂಟಿಕೊಳ್ಳುವುದು ಮುಗಿದಿರುತ್ತದೆ. ಆದರೆ ತಾಯಿಯ ರಕ್ತಕ್ಕೂ ಮಗುವಿನ ರಕ್ತನಾಳದಲ್ಲಿ ಹರಿಯುವ ರಕ್ತಕ್ಕೂ ನಿಕಟವಾದ ಸಂಪರ್ಕವಿದ್ದರೂ ನೇರವಾದ ಸಂಪರ್ಕವಿರುವುದಿಲ್ಲ. ಶಿಶುವಿನಿಂದ ಬಂದ ಹೊರಭಾಗದಲ್ಲಿರುವ ಕೋಶಗಳು ಹಾಗೂ ತಾಯಿಯ ಗರ್ಭದಲ್ಲಿ ಬೆಳೆದಿರುವ ಗರ್ಭಾಶಯದ ಒಳಾವರಣ ಇವೆರಡೂ ಸೇರಿ ಮಾಸು ಉಂಟಾಗುತ್ತದೆ. ಸುಮಾರು ಮೂರು ವಾರಗಳಲ್ಲಿ ರಕ್ತನಾಳಗಳು ಬೆಳೆದು ತಾಯಿ ಹಾಗೂ ಶಿಶುವಿನ ಸಂಬಂಧ ಏರ್ಪಡುತ್ತದೆ ಮತ್ತು ಹನ್ನೆರಡುವಾರದೊಳಗೆ (ಮೂರುತಿಂಗಳೊಳಗೆ) ಮಾಸು/ಪ್ಲಾಸೆಂಟಾದ ಕೆಲಸ ಆರಂಭವಾಗುತ್ತದೆ. ಗರ್ಭಸ್ಥ ಶಿಶುವಿಗೆ ಆಹಾರ ಸರಬರಾಜು, ಪ್ರಾಣವಾಯು ಸರಬರಾಜು ಅಷ್ಟೇ ಅಲ್ಲ ತ್ಯಾಜ್ಯವಸ್ತುಗಳಾದ ಇಂಗಾಲಆಮ್ಲ, ಯೂರಿಯಾ ಇತ್ಯಾದಿಗಳನ್ನು ಹೊರಸಾಗಿಸುವ ಕ್ರಿಯೆ ಇವೆಲ್ಲಾ ಮಾಸುವಿನಿಂದಲೇ ನಡೆಯುವಂತದ್ದು. ಬೆಳೆಯುತ್ತಿರುವ ಪಿಂಡಕ್ಕೆ ಹಾನಿಕಾರಕವಾದ ಔಷಧಿಗಳು, ರಾಸಾಯನಿಕಗಳು, ಸೂಕ್ಷ್ಮಾಣುಜೀವಿಗಳಿಂದ ಮಾಸು ರಕ್ಷಣೆ ನೀಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಮಾಸು ಹಲವು ಹಾರ್ಮೋನುಗಳನ್ನು ಉತ್ಪಾದಿಸುವ ಅಂಗವಾಗಿಯೂ ಕೆಲಸಮಾಡುತ್ತದೆ. (ಇನ್ಸುಲಿನ್, ಕೊರಿಯೊನಿಕ್ ಗೊನೊಡೊಟ್ರೋಪಿನ ಲಕ್ಟೋಜನ್ ಎ.ಸಿ.ಟಿ.ಎಚ್ ಇತ್ಯಾದಿ ಹಾರ್ಮೋನುಗಳು) ಒಟ್ಟಾರೆ ಮಾಸು ಅಥವಾ ಪ್ಲಾಸೆಂಟಾ ನವಮಾಸವನ್ನು ತಲುಪಿ ಶಿಶುಜನನವಾದ ಮೇಲೆ ತಾನು ಹೊರಬರುವವರೆಗೂ ಗರ್ಭಸ್ಥಶಿಶುವನ್ನು ಉಳಿಸಿ, ಬೆಳೆಸಿ, ಪೋಷಿಸುತ್ತದೆ.

ನೀವು ಕಸ ಕೆಳಗಿದೆ ಎಂದಿದ್ದೀರಾ? ಸಾಮಾನ್ಯವಾಗಿ ಮಾಸು ಗರ್ಭಕೋಶದ ಮೇಲುಭಾಗದಲ್ಲಿ ಅಂಟಿಕೊಂಡಿರುತ್ತದೆ. ಇದು ಸಹಜ ಆದರೆ ಕೆಲವೊಮ್ಮೆ ಮಾಸು ಗರ್ಭದ ಬಾಯಿಯ ಹತ್ತಿರ, ಕೆಳಭಾಗದಲ್ಲಿ ಬೆಳೆಯುತ್ತಿದ್ದರೆ ಇದರಿಂದ ಹೆರಿಗೆಗೂ ಮುನ್ನವೇ ರಕ್ತಸ್ರಾವವಾಗುವ ಸಂಭವವಿರುತ್ತದೆ. ಹೆಚ್ಚಿನ ಗರ್ಭಿಣಿಯರಲ್ಲಿ ಆರಂಭದ ದಿನಗಳಲ್ಲಿ ಮಾಸು ಕೆಳಗಿದ್ದು ನಂತರ ಶಿಶು ಬೆಳೆದ ಹಾಗೆ ಗರ್ಭಕೋಶದ ಮೇಲ್ಭಾಗಕ್ಕೆ ಚಲಿಸುತ್ತದೆ. ಮಾಸು ಕೆಳಗಡೆಯೇ ಇದ್ದು ಗರ್ಭಕೋಶದ ಬಾಯಿಯ ಹತ್ತಿರವಿದ್ದರೆ ಅದನ್ನ ಪ್ಲಾಸೆಂಟಾ ಪ್ರೀವೀಯಾ ಎನ್ನುತ್ತಾರೆ. ಹೀಗೆ ಇದ್ದಾಗ ನೋವುಬರದೇ ಇದ್ದಕ್ಕಿಂದಂತೆ ರಕ್ತಸ್ರಾವ ಉಂಟಾದರೆ ಗರ್ಭಿಣಿಯರಿಗೆ ಅಪಾಯವಾಗುತ್ತದೆ ಶಿಶುವಿಗೂ ಅಪಾಯ. ಕೆಲವೊಮ್ಮೆ ರಕ್ತಸ್ರಾವ ನಿಲ್ಲಿಸಲು ಅವಧಿ ತುಂಬುವ ಮೊದಲೇ ಸಿಸೆರಿಯನ್ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬರಬಹುದು. ಹೆಚ್ಚಿನ ಸಂದರ್ಭದಲ್ಲಿ ಮುಂಜಾಗ್ರತೆಯಿಂದ ಇದ್ದರೆ ಏನುತೊಂದರೆ ಯಾಗುವುದಿಲ್ಲ ವೈದ್ಯರ ಸಲಹೆಯ ಮೇರೆಗೆ ನೀವುಕೂಡ ಅನಗತ್ಯ ಪ್ರಯಾಣಮಾಡದೇ ಸಾಕಷ್ಟು ಜಾಗರೂಕತೆಯಿಂದಿರಿ. ನಿಯಮಿತ ತಪಾಸಣೆ ಚಿಕಿತ್ಸೆ ಪಡೆದುಕೊಳ್ಳಿ. ಕಸ/ಮಾಸು ಮೇಲಕ್ಕೆ ಚಲಿಸಬಹುದು. ಕಸ ಮೇಲಕ್ಕೆ ಹೋಗುವಂತ ಚಿಕಿತ್ಸೆ, ಔಷಧಿ ಏನೂ ಇಲ್ಲ. ಅದು ಸಹಜವಾಗಿ ಆಗುವ ಪ್ರಕ್ರಿಯೆ. ಯಾವುದಕ್ಕೂ ಜಾಗರೂಕರಾಗಿರಿ.

ಹೆಚ್ಚಿನ ಪ್ರಶ್ನೋತ್ತರಗಳಿಗೆ www.prajavani.net/spandana ಜಾಲತಾಣಕ್ಕೆ ಭೇಟಿ ನೀಡಿ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ತಾಳಿಕೆ –ಬಾಳಿಕೆಯ ಷಾಪುರಿ ಸೀರೆ

ರಶ್ಮಿ ಎಸ್

ಫ್ಯಾಷನ್

ಹಿಂದೆಲ್ಲ ಒಂದು ಕಾಲವಿತ್ತು. ನಾಗರ ಪಂಚಮಿಗೆ ತವರು ಮನೆಯಿಂದ ಒಂದು ಸೀರೆ, ದೀಪಾವಳಿಗೆ ಗಂಡನ ಮನೆಯಿಂದ ಒಂದು ಸೀರೆ. ಈ ಎರಡೇ ಸೀರೆಗಳನ್ನು ಕೂಡಿಟ್ಟು ತಮ್ಮ ಸಂಗ್ರಹವನ್ನು ಹೆಂಗಳೆಯರು ಹೆಚ್ಚಿಸಿಕೊಳ್ಳುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ಹೀಗೆ ಹಬ್ಬದ ಸಂಭ್ರಮವೂ, ಜೇಬಿನ ನಿರ್ವಹಣೆಯೂ ಒಟ್ಟಿಗೆ ಮಾಡಬೇಕಾದ ಅನಿವಾರ್ಯ ಇದ್ದಾಗ, ಷಾಪುರಿ ಸೀರೆಗೆ ಎಲ್ಲ ಮುಗಿಬೀಳುತ್ತಿದ್ದರು. ನೂರು ವರ್ಷಗಳ ಇತಿಹಾಸ ಇರುವ ಷಾಪುರಿ ಸೀರೆಗೆ ಪಾಲಿಸ್ಟರ್ ದಾರವೇ ಮೂಲ ವಸ್ತು. ಜೊತೆಗೆ ಜಗಮಗಿಸುವ ಜರಿಯೂ ಇರುತ್ತದೆ. ಕೆಲವೊಮ್ಮೆ ನೂಲನ್ನೂ ಬಳಸುತ್ತಾರೆ.

ಪಾಲಿಸ್ಟರ್ ಆಗಿರುವುದರಿಂದ ಬಣ್ಣ ಹೋಗದು. ಮಗುವಿಗೆ ಲಾಲಿ ಹಾಡಲು ಜೋಳಿಗೆ ಕಟ್ಟಿದರೆ ಪಿಸಿಯುವುದೂ ಇಲ್ಲ. ಅದೆಷ್ಟೇ ತೂಕದ ಮಕ್ಕಳು ಜೋಕಾಲಿ ಆಡಬಹುದಾದಷ್ಟು ಗಟ್ಟಿತನ ಈ ಸೀರೆಯದ್ದು.

ತವರು ಮನೆಯ ಸೀರೆಯುಟ್ಟರೆ ಬಣ್ಣ ಮಾಸದು, ಹರಿದು ಹೋಗದು. ಸವೆದು ಹೋದರೂ, ಕಣ್ಣೀರು ಸೆರಗಿನಂಚಿನಲ್ಲಿ ಹಿಂಗಿ ಹೋದರೂ, ಥಳಥಳ ಎನ್ನುವ ಸೀರೆ ಇದು ಎಂಬರ್ಥ ಬರುವ ಜನಪದದ ಸಾಲುಗಳು ಈ ಕಡೆಯಲ್ಲಿ ಜನಜನಿತವಾಗಿವೆ.

ಕಂಚಿಯ ಸೀರೆಗಳ ವಿನ್ಯಾಸವನ್ನೇ ತಮ್ಮ ಮಗ್ಗಗಳಿಗೆ ಹೊಂದಿಸಿಕೊಳ್ಳುತ್ತ, ಸಮಕಾಲೀನ ಟ್ರೆಂಡ್ ಜೊತೆಗೆ ಹೆಜ್ಜೆ ಹಾಕುತ್ತಿರುವ ಷಾಪುರಿ ಸೀರೆಗೆ ತನ್ನದೇ ಆದ ವಿನ್ಯಾಸ ಅಥವಾ ಸ್ವರೂಪ ಇಲ್ಲ. ಸಣ್ಣ ಗೋಪುರದ ಅಂಚಿನಿಂದ ಆರಂಭಿಸಿ, ಎಲ್ಲ ಬಗೆಯ ಅಂಚುಗಳೂ ಕಂಗೊಳಿಸುತ್ತವೆ.

ಷಾಪುರಿ ಸೀರೆ ಕುರಿತ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಬೆಳಗಾವಿಯ ವಡಗಾಂವ್‌ನಲ್ಲಿ ಸಿದ್ಧವಾಗುವ ಪೈಠಾಣಿ ಸೀರೆ – ಚಿತ್ರ: ಏಕನಾಥ್ ಅಗಸಿಮನಿ

ಒಡಲಿನ ತುಂಬ ಜರಿಯಿರುವುದರಿಂದ ವಿಜ್ರಂಭಣೆಯ ಸೀರೆ ಇದು ಎಂದೆನಿಸುತ್ತದೆ. ದಿನ ಉಡಲು ಅನುವಾಗುವ ಈ ಸೀರೆಗಳು ಎಲ್ಲ ವರ್ಗದವರೂ ಆಸೆ ಪಡುತ್ತಾರೆ. ಕೂಲಿ ಕೆಲಸ ಮಾಡಿದರೂ, ಹೊಲದಲ್ಲಿ ಗೇಯ್ಮೆ ಮಾಡಿದರೂ, ಮದುವೆಯಂಥ ಸಮಾರಂಭ ಗಳಿಗೆ ಹೋದರೂ, ಎಲ್ಲದಕ್ಕೂ ಸಲ್ಲುವ ಗುಣ ಇರುವ ಈ ಸೀರೆ, ಈ ಭಾಗದ ಜನಜೀವನದಲ್ಲಿ ಹಾಸು ಹೊಕ್ಕಿದೆ. ರಾಜ್ಯದ ಗಡಿಗೆ ಹೊಂದಿಕೊಂಡಿರುವ ಗುಳೇದಗುಡ್ಡದ ಖಣಗಳು ಮತ್ತು ಷಾಪುರಿ ಸೀರೆಗಳು, ಅಲ್ಲಿಯ ಶ್ರಮಿಕ ವರ್ಗದ ಹೆಮ್ಮೆಯಾಗಿ ತಮ್ಮ ಅಸ್ತಿತ್ವ ಕಂಡುಕೊಂಡಿವೆ.

ಸೀಮಂತಕ್ಕೆ ನೀಡುವ ಹಸಿರು ಸೀರೆಯಿಂದ ಆರಂಭವಾದರೆ ಒಂದೊಂದು ಸಮಾರಂಭಕ್ಕೆ ಒಂದೊಂದು ಬಣ್ಣಗಳಿವೆ. ಬೀಗರಿಗೆ ಬೇಕಾದ ಬಣ್ಣಗಳೇ ಬೇರೆ. ವಧುವಿಗೆ ನೀಡುವ ಪೀತಾಂಬರ, ಗುಲಾಬಿ ಬಣ್ಣಗಳೂ ಇವೆ. ಬೀಗರಿಗೆ ಎಂದೇ 'ಮೋರ್‌ಪಂಖಿ' ಎಂದು ಕರೆಯುವ ನವಿಲಿನ ಕಂಠದ ನೀಲಿ, ಹಸಿರು ಮಿಶ್ರಿತ ನೀಲಿ ಬಣ್ಣಗಳು ಕಣ್ಮನ ಸೆಳೆಯುತ್ತವೆ. ಇಲ್ಲಿಯ ಬಣ್ಣಗಳ ಹೆಸರೇ ನವನವೀನ. ಅನಾರಿ (ದಾಳಿಂಬೆ ಬಣ್ಣ), ಸಿಂಧೂರಿ (ಕೆಂಪು ಕುಂಕುಮ), ಆನಂದಿ (ನೀಲಗಗನ), ಮೋರ್ ಪಂಖಿ (ನವಿಲಿನ ಕಂಠದ ಅಡಿಯ ನೀಲಿ ಮತ್ತು ಹಸಿರು ಮಿಶ್ರಿತ), ದೂಧಿ (ಹಾಲುಬಿಳುಪು) ಹೀಗೆ ಹೆಸರಿನಲ್ಲಿಯೇ ಬಣ್ಣವನ್ನೂ ವಿವರಿಸುವ ವಿಶೇಷ ಈ ಸೀರೆಗಳದ್ದು.

ಇನ್ನು ಬದುಕಿನಲ್ಲಿ ಒಂದು ಮೈಸೂರು ಸಿಲ್ಕ್ ಸೀರೆ ಇರಬೇಕು ಎಂದು ಕನ್ನಡಿಗರು ಬಯಸುವಂತೆ, ಈ ಕಡೆಯ ವರು ಷಾಪುರಿ ಜೊತೆಗೆ ಪೈಠಣಿ ಸೀರೆಯೂ ಇರಲಿ ಎಂದು ಬಯಸುತ್ತಾರೆ. 'ಬಾಜಿರಾವ್ ಮಸ್ತಾನಿ' ಸಿನಿಮಾದಲ್ಲಿ ಬಣ್ಣ ಭುಟ್ಟಾ ಇರುವ ಸೀರೆಗಳನ್ನು ಉಟ್ಟು, ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡಕೋಣ ನಲಿಯುವ ದೃಶ್ಯ ಯಾರಿಗೂ ಮರೆಯಾಗದು. ಅಂಥ ಸಣ್ಣ ಭುಟ್ಟಾ ಇರುವ, ಚೌಕಡಿಯ ಜರಿ ಅಂಚಿರುವ, ಸೆರಗಿನಲ್ಲಿ ಮೀನಾಕರಿ ಕೆಲಸ ಇರುವ, ಗಾಢ ಸಾಂಪ್ರದಾಯಿಕ ಬಣ್ಣದ ಸೀರೆಗಳಿವು.

ಬಂಗಾರದಷ್ಟೇ ತುಟ್ಟಿಯೆನಿಸುವ ಸೀರೆಗಳು, ಐದಾರು ತಲೆಮಾರು ಕಳೆದರೂ ಬಣ್ಣ ಮಾಸುವುದಿಲ್ಲ. ಸವೆದು ಪಿಸಿಯುವುದೇ ಹೊರತು, ಹಾಳಾಗುವುದಿಲ್ಲ. ಅಂಥ ಪೈಠಣಿ ಸೀರೆಗಳನ್ನೂ ಷಾಪುರಿ ಸೀರೆಯೊಂದಿಗೇ ನೇಯಲಾಗುತ್ತದೆ. ಟಂಕಿಸುವ ಯಂತ್ರದಲ್ಲಿ ಒಂದು ರೂಪಾಯಿಗೂ, ಹತ್ತು ರೂಪಾಯಿಗೂ ಒಂದೇ ಶ್ರಮ. ಆದರೆ ಬೆಲೆ ಮತ್ತು ಮೌಲ್ಯ ಬೇರೆ ಬೇರೆ ಇದ್ದಂತೆ, ಇಲ್ಲಿ ಮಗ್ಗಗಳು ಬದಲಾದಾಗ ವರ್ಣವಿನ್ಯಾಸಗಳೂ ಬದಲಾಗುತ್ತವೆ. ಸೀರೆಯ ಮಾತುಗಳಿಗೆ ಕೊನೆ ಇರುವುದಿಲ್ಲ. ನೆನಪಿನ ಒಡಲು, ಕಾಲದ ಅಂಚು, ಎಲ್ಲವನ್ನೂ ಉಟ್ಟು, ತೊಟ್ಟು, ಸಂಭ್ರಮಿಸುವಾಗ, ಪ್ರತಿ ಸೀರೆಯ ಹಿಂದೆ ಹತ್ತು ಕತೆಗಳು, ಹಲವು ನೆನಪುಗಳು. ಅವನ್ನು ಉಡುವುದಷ್ಟೇ ಅಲ್ಲ, ಜೀವಿಸುವುದೇ ಒಂದು ಆನಂದ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೋಪ, ದ್ವೇಷ ಮತ್ತು ಅಸೂಯೆ ಎಂದಿಗೂ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಪ್ರೀತಿ, ಕಾಳಜಿ ಹಾಗೂ ಗೌರವವಷ್ಟೇ ಆ ಕೆಲಸ ಮಾಡಬಲ್ಲವು. -ದಲೈಲಾಮ

ಕಲಿಕಾ ಮಾಧ್ಯಮ ಕುರಿತ ಶಿಫಾರಸು ಹಿಂದಿ ಪ್ರಾಬಲ್ಯಕ್ಕೆ ಮತ್ತೊಂದು ಯತ್ನ

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ, ಅಧಿಕೃತ ಭಾಷೆಗೆ ಸಂಬಂಧಿಸಿದ ಸಂಸದೀಯ ಸಮಿತಿಯು ಕೆಲವು ಶಿಫಾರಸುಗಳನ್ನು ಈಚೆಗೆ ಸಲ್ಲಿಸಿದೆ. ಇವು ಹಿಂದಿ ಭಾಷೆಯ ಬಳಕೆಗೆ ಸಂಬಂಧಿಸಿದ ಶಿಫಾರಸುಗಳು. ಇವುಗಳನ್ನು ಒಪ್ಪಿಕೊಂಡು ಅನುಷ್ಠಾನಕ್ಕೆ ತಂದಿದ್ದೇ ಆದಲ್ಲಿ, ಬಹುತ್ವದ ಆಧಾರದ ಮೇಲೆ ನಿಂತಿರುವ ಭಾರತದ ಪರಿಕಲ್ಪನೆಯನ್ನೇ ಹಾಳುಮಾಡಿದಂತೆ ಆಗುತ್ತದೆ. ಬಹುತ್ವದಂತಿರುವ ಭಾಷೆಗಳ ಬಹುತ್ವವೂ ಸೇರಿಕೊಂಡಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧನೆಯ ಮಾಧ್ಯಮದ ಕುರಿತಾಗಿ ಸಮಿತಿ ಮಾಡಿರುವ ಶಿಫಾರಸುಗಳು ಇಡೀ ಶಿಕ್ಷಣ ವ್ಯವಸ್ಥೆಯನ್ನು ಕಲುಷಿತಗೊಳಿಸುತ್ತವೆ. ಬೋಧನಾ ಮಾಧ್ಯಮವಾಗಿ ಈಗ ಬಳಕೆಯಲ್ಲಿರುವ ಇಂಗ್ಲಿಷ್ ಭಾಷೆಯ ಬದಲಾಗಿ ಹಂತ ಹಂತವಾಗಿ ಹಿಂದಿ ಅಥವಾ ಸ್ಥಳೀಯ ಭಾಷೆಯನ್ನು ತರಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ. ಹಿಂದಿ ಭಾಷಿಕ ಪ್ರದೇಶಗಳಲ್ಲಿ ಇರುವ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ (ಐಐಟಿ), ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್), ಕೇಂದ್ರೀಯ ವಿಶ್ವವಿದ್ಯಾಲಯಗಳು ಮತ್ತು ಕೇಂದ್ರೀಯ ವಿದ್ಯಾಲಯಗಳಲ್ಲಿನ ಬೋಧನಾ ಮಾಧ್ಯಮ ಹಿಂದಿ ಆಗಬೇಕು, ಇತರ ಪ್ರದೇಶಗಳಲ್ಲಿನ ಈ ಸಂಸ್ಥೆಗಳಲ್ಲಿನ ಬೋಧನಾ ಮಾಧ್ಯಮ ಅಲ್ಲಿನ ಭಾಷೆ ಆಗಿರಬೇಕು ಎಂದು ಕೂಡ ಸಮಿತಿಯು ಹೇಳಿದೆ.



ನೇಮಕಾತಿ ಪರೀಕ್ಷೆಗಳು ಹಿಂದಿಯಲ್ಲಿ ಇರಬೇಕು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (ಡಿಆರ್‌ಡಿಒ) ಹಿಂದಿಯನ್ನೇ ಬಳಸಬೇಕು ಎಂದು ಕೂಡ ಹೇಳಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಹಿಂದಿ ಬಳಕೆಯನ್ನು ಉತ್ತೇಜಿಸುವ ಉದ್ದೇಶದ 112 ಶಿಫಾರಸುಗಳನ್ನು ಸಮಿತಿಯು ಮಾಡಿದೆ.

ಐಐಟಿಗಳು ಹಾಗೂ ಉನ್ನತ ಶಿಕ್ಷಣ ಬೋಧಿಸಲಿಕ್ಕಾಗಿ ಸ್ಥಾಪಿಸಿರುವ ಇತರ ಸಂಸ್ಥೆಗಳಲ್ಲಿ ಹಿಂದಿಯನ್ನು ಅಥವಾ ಸ್ಥಳೀಯ ಭಾಷೆಗಳನ್ನು ಬೋಧನಾ ಮಾಧ್ಯಮವನ್ನಾಗಿ ಬಳಕೆ ಮಾಡುವುದರ ಹಿಂದೆ ಇರುವುದು ದೋಷಪೂರಿತ ಆಲೋಚನೆ. ಉನ್ನತ ಶಿಕ್ಷಣದ ಗುರಿಯನ್ನು ಸಾಧಿಸಲಿಕ್ಕೆ ಇದೇ ಅಡ್ಡಿಯಾಗಿ ನಿಲ್ಲಬಹುದು. ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆ ನಡೆಸಿ ಇಂತಹ ಸಂಸ್ಥೆಗಳಿಗೆ ಪ್ರವೇಶ ಕಲ್ಪಿಸಲಾಗುತ್ತದೆ. ಪ್ರವೇಶ ಪರೀಕ್ಷೆಗಳನ್ನು ಹಿಂದಿ ಅಥವಾ ಇತರ ಭಾಷೆಗಳಲ್ಲಿ ನಡೆಸಿದರೂ, ತೇರ್ಗಡೆ ಆದವರು ಇನ್ನೊಂದು ರಾಜ್ಯದಲ್ಲಿನ ಸಂಸ್ಥೆಗೆ ಪ್ರವೇಶ ಪಡೆದಾಗ ಅಲ್ಲಿನ ಭಾಷೆ ಕಲಿಯಬೇಕಾದ ಅನಿವಾರ್ಯ ಎದುರಾಗುತ್ತದೆ. ಇದು ಅವರ ಕಲಿಕೆಗೆ ತೊಡಕನ್ನು ಉಂಟುಮಾಡುತ್ತದೆ. ಒಂದು ರಾಜ್ಯದಲ್ಲಿ ಪದವಿ ಪಡೆದವರು ಇನ್ನೊಂದು ರಾಜ್ಯದಲ್ಲಿ ಕೆಲಸ ಮಾಡುವುದೂ ಕಷ್ಟವಾಗಬಹುದು. ಅಲ್ಲದೆ, ಯಾವುದೇ ರಾಜ್ಯದಲ್ಲಿ ಪದವಿ ಪಡೆದವರಿಗೆ ದೇಶದಲ್ಲಿ ಅಥವಾ ಹೊರದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯುವುದು ಹಾಗೂ ಕೆಲಸ ಗಿಟ್ಟಿಸುವುದು ಇನ್ನಷ್ಟು ಕಷ್ಟವಾಗಬಹುದು. ಮಾತೃಭಾಷೆಯಲ್ಲಿ (ಪ್ರದೇಶದ ಭಾಷೆಯಲ್ಲಿ) ಶಿಕ್ಷಣ ಪಡೆಯುವುದು ಒಳ್ಳೆಯದೇ. ಆದರೆ, ಅದು ಭಾರತದ ಪರಿಸ್ಥಿತಿಗೆ ಸೂಕ್ತವಾಗಿರುವ ರೀತಿಯಲ್ಲಿ ಇರಬೇಕು. ಪ್ರದೇಶದ ಭಾಷೆಯಲ್ಲಿ ಕಲಿಯುವ ವಿಚಾರದಲ್ಲಿ ಚೀನಾ ಮತ್ತು ಜಪಾನ್‌ನ ಉದಾಹರಣೆಯನ್ನು ಭಾರತಕ್ಕೆ ಅನ್ವಯಿಸುವುದು ಸರಿಯಲ್ಲ. ಏಕೆಂದರೆ ಭಾರತದಲ್ಲಿ ಇರುವಂತಹ ಭಾಷಾ ವೈವಿಧ್ಯ ಆ ದೇಶಗಳಲ್ಲಿ ಇಲ್ಲ.

> ಭಾರತದ ಪರಿಕಲ್ಪನೆಗೆ ಹಾಗೂ ಒಕ್ಕೂಟ ವ್ಯವಸ್ಥೆಗೆ ಈ ಶಿಫಾರಸು ಪೂರಕವಾಗಿ ಇಲ್ಲ

ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹಾಗೂ ಅಲ್ಲಿಂದ ಪದವಿ ಪಡೆದು ಹೊರಬರುವವರಲ್ಲಿ ಈಗ ಒಂದು ಬಗೆಯ ಸಮಾನತೆಯ ಭಾವನೆ ಇದೆ. ಏಕೆಂದರೆ, ಅವರೆಲ್ಲ ಇಂಗ್ಲಿಷ್ ಭಾಷೆಯಲ್ಲಿ ಕಲಿತವರು. ಆದರೆ ಹೊಸ ವ್ಯವಸ್ಥೆಯು ಹಿಂದಿ ಭಾಷೆಯಲ್ಲಿ ಕಲಿತವರ ಪ್ರಾಬಲ್ಯಕ್ಕೆ ದಾರಿ ಮಾಡಿಕೊಡುತ್ತದೆ. ಏಕೆಂದರೆ, ಹಿಂದಿಯಲ್ಲಿ ಕಲಿಯುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಇದು ತಾರತಮ್ಯಕ್ಕೆ ಹಾಗೂ ಇತರ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ಡಿಆರ್‌ಡಿಒ, ಇಸ್ರೊದಂತಹ ಸಂಸ್ಥೆಗಳಲ್ಲಿ ಹಿಂದಿಯಲ್ಲಿ ಕೆಲಸಗಳು ಆಗಬೇಕು ಎಂಬ ಒತ್ತಾಯವಂತೂ ತೀರಾ ತಪ್ಪಾಗುತ್ತದೆ. ಕಚೇರಿಗಳಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು ಎಂಬ ಶಿಫಾರಸು ಹಿಂದಿಯೇತರ ಭಾಷಿಕ ಜನರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ಹಿಂದಿಯ ಜೊತೆಯಲ್ಲಿ ಸ್ಥಳೀಯ ಭಾಷೆಗಳನ್ನು ಕೂಡ ಉಲ್ಲೇಖಿಸಲಾಗಿದೆಯಾದರೂ, ಶಿಫಾರಸುಗಳ ಹಿಂದಿನ ಉದ್ದೇಶವು ಹಿಂದಿಯ ಪ್ರಾಬಲ್ಯಕ್ಕೆ ಅನುಕೂಲ ಕಲ್ಪಿಸುವುದೇ ಆಗಿದೆ. ಇದು ಭಾಷಿಕ ಬಹುಸಂಖ್ಯಾತವಾದದ ಕಡೆ ಸಾಗುತ್ತದೆ. ಭಾರತದ ಪರಿಕಲ್ಪನೆಗೆ ಇದು ವಿರುದ್ಧ. ದೇಶವನ್ನು ಒಟ್ಟಾಗಿ ಇರಿಸಿರುವ ಒಕ್ಕೂಟ ವ್ಯವಸ್ಥೆಗೆ ಕೂಡ ಇದು ಪೂರಕವಾಗಿ ಇಲ್ಲ.

ದಿನದ ಟ್ವೀಟ್

ಒಂದು ಕಸರತ್ತು ಮಾತ್ರ



‘ಭಾರತ್ ಜೋಡೊ ಯಾತ್ರೆ’ಯು ನನ್ನ ಪ್ರಕಾರ ಒಂದು ಕಸರತ್ತು ಮಾತ್ರ. ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ನಮ್ಮ ಜನ ಕೋಮು ಹಾಗೂ ಜಾತಿಗಳ ನೆಲೆಯಲ್ಲಿ ಹೆಚ್ಚು ಧ್ರುವೀಕರಣಗೊಂಡಿದ್ದಾರೆ. ಅವರು ಮತ ಚಲಾಯಿಸಲು ಹೋದಾಗ ಅವರಿಗೆ ಕಾಣಿಸುವುದು ಜಾತಿ, ಧರ್ಮ ಮಾತ್ರ. ನಿರುದ್ಯೋಗ, ಬೆಲೆ ಏರಿಕೆ, ಆರೋಗ್ಯಸೇವೆ ಮುಂತಾದ ವಿಷಯಗಳು ಅಸಂಗತವಾಗುತ್ತವೆ.

ಮಾರ್ಕಂಡೇಯ ಕಾಟ್ಜು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಕಿಡಿನುಡಿ



ಕೊನೆಗೂ, ವರ್ಷಗಳಷ್ಟು ತಡವಾದರೂ ಪ್ರೊಫೆಸರ್ ಜಿ.ಎನ್.ಸಾಯಿಬಾಬಾ ಅವರಿಗೆ ಒಂದಿಷ್ಟು ನ್ಯಾಯ ಸಿಕ್ಕಿದೆ. ಆದರೆ, ನಿಯಮಗಳನ್ನು ಪಾಲಿಸಲು ವಿಫಲರಾಗುವ ಅಥವಾ ಯಾವುದೋ ಹಗೆತನದಿಂದ ಮೊಕದ್ದಮೆಗಳನ್ನು ಹೂಡುವ ತನಿಖಾಧಿಕಾರಿಗಳಿಗೆ ಒಂದು ಸ್ವಲ್ಪವಾದರೂ ಉತ್ತರದಾಯಿತ್ವ ಅನ್ನುವುದು ಬರುವವರೆಗೂ ಯುಎಪಿಎ ಮತ್ತು ಕ್ರಿಮಿನಲ್ ಕಾನೂನಿನ ಈ ರೀತಿಯ ದುರ್ಬಳಕೆ ಕೊನೆಗೊಳ್ಳದು.

ವಕಾಶ ಸಚ್‌ದೇವ್, ಪತ್ರಕರ್ತ, ಲೇಖಕ

25 ವರ್ಷಗಳ ಹಿಂದೆ

ಬುಧವಾರ, 15-10-1997

- **ಜಲಿಯನ್ ವಾಲಾಬಾಗ್: ರಾಣಿ ಗೌರವಾರ್ಪಣೆ**

ಅಮೃತ್‌ಸರ, ಅ. 14 (ಪಿಟಿಐ)– ಐತಿಹಾಸಿಕ ಅಮೃತ್‌ಸರ ನಗರಕ್ಕೆ ಇಂದು ಭೇಟಿ ನೀಡಿದ್ದ ಬ್ರಿಟನ್ನಿನ ರಾಣಿ ಎಲಿಜಬೆತ್–2 ಸ್ವರ್ಣ ಮಂದಿರದಲ್ಲಿ ಪ್ರಣಾಮ ಸಲ್ಲಿಸಿ, ಜಲಿಯನ್ ವಾಲಾಬಾಗ್ ಸ್ಮಾರಕದ ಮೇಲೆ ಹೂಗುಚ್ಛವಿರಿಸಿ ಗೌರವ ಸೂಚಿಸಿದರು.

ರಾಣಿಯ ಕಾರು ಹೋಗಲಿದ್ದ ಸಬ್ಜಿ ಮಂಡಿಯ ಬಳಿ ಮಧ್ಯಾಹ್ನ ಕಪ್ಪು ಬಾವುಟ ಹಿಡಿದು ಪ್ರತಿಭಟನೆ ವ್ಯಕ್ತಪಡಿಸಿದ ಉದ್ರಿಕ್ತರ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು.

ಇದಕ್ಕೂ ಮುನ್ನ, ರಾಣಿ ಭೇಟಿಯನ್ನು ಪ್ರತಿಭಟಿಸಿ ಜಲಿಯನ್ ವಾಲಾಬಾಗ್ ಕಡೆಗೆ ನುಗ್ಗಲು ಯತ್ನಿಸಿದ ಸಿಪಿಐ, ಕ್ರಾಂತಿ ಕಿಸಾನ್ ಯೂನಿಯನ್ ಮತ್ತು ಲೋಕಮಂಚದ ಸುಮಾರು 150 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

- **ಅಗತ್ಯವಿದ್ದಲ್ಲಿ ಮಾತ್ರ ಸೈನಿಕ ಕಾರ್ಯಾಚರಣೆ: ಕರುಣಾನಿಧಿ**

ಚೆನ್ನೈ, ಅ. 14 –ಕುಖ್ಯಾತ ಕಾಡುಗಳ್ಳ ವೀರಪ್ಪನ್‌ನಿಂದ ಒತ್ತೆಯಾಳುಗಳನ್ನು ಬಿಡಿಸುವ ಇತರ ಎಲ್ಲ ಪ್ರಯತ್ನಗಳು ವಿಫಲವಾದರೆ ಮಾತ್ರ ಸೈನಿಕ ಕಾರ್ಯಾಚರಣೆಯನ್ನು ನಡೆಸಲಾಗುವುದು ಎಂದು ಎಂ.ಕರುಣಾನಿಧಿ ಅವರು ಹೇಳಿದ್ದಾರೆ.

ರಾಜ್ಯ ವಿಧಾನಸಭೆಯಲ್ಲಿ ಇಂದು ಮಂಡಿಸಲಾದ ಗಮನ ಸೆಳೆಯುವ ಸೂಚನೆಯೊಂದಕ್ಕೆ ಉತ್ತರಿಸುತ್ತಿದ್ದ ಅವರು, ವೀರಪ್ಪನ್ ಜತೆ ಸಂಧಾನಕ್ಕಾಗಿ ‘ನಕ್ಕೀರನ್’ ಸಂಪಾದಕ ಆರ್.ಆರ್. ಗೋಪಾಲ್ ಅವರನ್ನು ಮತ್ತೆ ಕಳುಹಿಸುವ ಬಗ್ಗೆ ಕರ್ನಾಟಕ ಮುಖ್ಯಮಂತ್ರಿ ಪಟೇಲ್ ದೆಹಲಿಯಿಂದ ಬಂದ ನಂತರ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದರು.

50 ವರ್ಷಗಳ ಹಿಂದೆ

ಭಾನುವಾರ, 15-10-1972

- **ಶಿಕ್ಷಣ ನೀತಿಯಲ್ಲಿ ಸೂಕ್ತ ಬದಲಾವಣೆ ಮಾಡಲು ಕೇಂದ್ರ ಯತ್ನ–ಇಂದಿರಾ**

ಸೇವಾಗ್ರಾಮ, ಅ. 14– ಶಿಕ್ಷಣ ವಿಧಾನವು ಹೆಚ್ಚು ಉದ್ದಿಷ್ಟಪೂರ್ಣವಾಗುವಂತೆ ಮತ್ತು ಜನತೆಯ ಅಗತ್ಯಗಳನ್ನು ಪೂರೈಸುವಂತೆ ಮಾಡಲು ಶಿಕ್ಷಣ ನೀತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಕೇಂದ್ರ ಶಿಕ್ಷಣ ಸಚಿವ ಖಾತೆ ಆಲೋಚಿಸುತ್ತಿದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿದರು.

ಇಲ್ಲಿ ಅಖಿಲ ಭಾರತ ರಾಷ್ಟ್ರೀಯ ಶಿಕ್ಷಣ ಸಮ್ಮೇಳನವನ್ನು ಉದ್ಘಾಟಿಸಿದ ಅವರು, ಶಿಕ್ಷಣವು ಕೇವಲ ಶಾಲಾ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿರಬಾರದು; ಪ್ರತಿಯೊಂದು ಕಾರ್ಯಾಗಾರ ಮತ್ತು ಕೃಷಿ ಜಮೀನು ಸಹ ಶಿಕ್ಷಣ ಕಲಿಕೆಯ ಶಾಲೆ; ಹುಟ್ಟಿನೊಂದಿಗೆ ಆರಂಭವಾಗುವ ಶಿಕ್ಷಣಕ್ಕೆ ಕೊನೆಯೇ ಇಲ್ಲ ಎಂದು ನುಡಿದರು.

- **ಮಾಸ್ಕೊ ಬಳಿ ವಿಮಾನ ಅಪಘಾತ: 160 ಸಾವು**

ಮಾಸ್ಕೊ, ಅ. 14 –ಸರ್ಕಾರಿ ಮಾಲೀಕತ್ವದ ‘ಏರೋಫ್ಲೋಟ್’ ಕಂಪನಿಗೆ ಸೇರಿದ ಸೋವಿಯತ್ ‘ಇಲ್ಯುಷಿನ್–62’ ವಿಮಾನವೊಂದು ನಿನ್ನೆ ಮಾಸ್ಕೊ ವಿಮಾನ ನಿಲ್ದಾಣಕ್ಕೆ 12 ಕಿಲೊ ಮೀಟರ್ ದೂರದಲ್ಲಿ ಅಪಘಾತಕ್ಕೀಡಾಗಿ 160 ಜನರು ಸತ್ತರೆಂದು ವಿಮಾನಯಾನ ಇಲಾಖೆ ಮೂಲಗಳು ಇಂದು ಇಲ್ಲಿ ತಿಳಿಸಿದವು.

ಹೊಸ ಕಾಯಿಲೆಗಳು ಬರುತ್ತಿರುವ ವಿದ್ಯಮಾನಕ್ಕೂ ಭೂಬಿಸಿಯೇರಿಕೆಗೂ ನೇರ ಸಂಬಂಧವಿದೆ

ಜೀವಿವೈವಿಧ್ಯವೇ ಜೀವಾಳವೆಂಬ ಅಂತಿಮಸತ್ಯ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮಲೆನಾಡಿನ ನಮ್ಮ ಪರಿಸರದಲ್ಲಿ ಪ್ರಾಥಮಿಕ ಶಾಲೆಗೆ ಹೋಗುವಾಗ ಬೆಟ್ಟ-ಬ್ಯಾಣದ ಕಾಲುದಾರಿಗಳಲ್ಲಿ ಹೋಗಬೇಕಿತ್ತು. ಎಂಬತ್ತರ ದಶಕದಲ್ಲಿ ಕೃಷಿಯನ್ನು ಯಾಂತ್ರೀಕರಣ ಆವರಿಸಿಕೊಂಡಿರಲಿಲ್ಲ. ಗದ್ದೆ ಹೂಟಿಗೆ ಎತ್ತುಗಳನ್ನು ಬಳಸಲಾಗುತ್ತಿತ್ತು. ಅಡಿಕೆ, ಭತ್ತದ ಬೆಳೆಗಳಿಗೆ ಸಗಣಿಮಿಶ್ರಿತ ಹಸಿಗೊಬ್ಬರವೇ ಮುಖ್ಯ ಮೂಲವಾಗಿತ್ತು. ಗೊಬ್ಬರಕ್ಕಾಗಿಯೇ ಹೇರಳ ಸಂಖ್ಯೆಯಲ್ಲಿ ಜಾನುವಾರುಗಳನ್ನು ಸಾಕುವ ಪರಿಪಾಟ ಆಗ ಇತ್ತು.

ರೈತನ ಮನೆಯಲ್ಲಿ ಜಾನುವಾರು ಸತ್ತರೆ, ಅದರ ಕಳೇಬರವನ್ನು ಬೆಟ್ಟದಲ್ಲಿಟ್ಟು ಬರುವುದು ಆಗಿನ ಸಹಜ ಪದ್ಧತಿಯಾಗಿತ್ತು. ಸತ್ತ ಜಾನುವಾರುಗಳನ್ನು ತಿನ್ನಲು ಭಾರಿ ಗಾತ್ರದ ರಣಹದ್ದುಗಳು ಬರುತ್ತಿದ್ದವು. ರಣಹದ್ದುಗಳ ದೊಡ್ಡ ಗುಂಪು ಒಂದೆರಡು ಗಂಟೆಗಳಲ್ಲಿ ಮಾಂಸವನ್ನು ಹಿಸಿದು ತಿಂದುಹಾಕುತ್ತಿತ್ತು. ರಣಹದ್ದುಗಳು ತಿನ್ನಲಾರದ ಭಾಗವನ್ನು, ರಾತ್ರಿ ವೇಳೆ ಬರುತ್ತಿದ್ದ ನರಿಗಳು ತಿಂದುಹಾಕುತ್ತಿದ್ದವು. ಎರಡು ದಿನ ಉರುಳುವಷ್ಟರಲ್ಲಿ ಸತ್ತ ಜಾನುವಾರುಗಳ ಗಟ್ಟಿ ಮೂಳೆಗಳು ಮಾತ್ರ ಉಳಿದಿರುತ್ತಿದ್ದವು.


ಹೈನುಗಾರಿಕೆಯು ತೀವ್ರ ಬದಲಾವಣೆಗೆ ತೆರೆದುಕೊಂಡಿತು. ವಿದೇಶಿ ತಳಿಯ ಭಾರಿ ಗಾತ್ರದ ಹಸುಗಳು ಕೊಟ್ಟಿಗೆಗೆ ಬಂದವು. ಸ್ಥಳೀಯ ಪ್ರಭೇದಗಳು ರೈತರಿಂದ ಉಪೇಕ್ಷೆಗೊಳಗಾಗಿ ನೇಪಥ್ಯಕ್ಕೆ ಸರಿದವು. ಮಲೆನಾಡು ಗಿಡ್ಡದ ಜೊತೆ ಸಾಕುತ್ತಿದ್ದ ಎಮ್ಮೆಗಳ ಸಂಖ್ಯೆಯೂ ಕ್ರಮೇಣ ಕಡಿಮೆಯಾಯಿತು. ವಿದೇಶಿ ತಳಿಯ, ಹೆಚ್ಚು ತೂಕದ ಜಾನುವಾರು ಸತ್ತರೆ ಅದನ್ನು ಬೆಟ್ಟಕ್ಕೆ ಒಯ್ಯುವುದು ತ್ರಾಸದಾಯಕ ಅನಿಸಿತೋ ಏನೋ, ಗುಂಡಿ ತೋಡಿ ಕಳೇಬರವನ್ನು ಹುಗಿಯುವ ರೂಢಿ ಹುಟ್ಟಿಕೊಂಡಿತು. ಆಹಾರದ ಕಾರಣಕ್ಕೆ ವರ್ಷಂಪೂರ್ತಿ ದರ್ಶನ ನೀಡುತ್ತಿದ್ದ ರಣಹದ್ದುಗಳು ನಮ್ಮ ಹಳ್ಳಿಗೆ ಬರುವುದನ್ನೇ ನಿಲ್ಲಿಸಿದವು. ಸ್ಥಾನಿಕವಾಗಿ ರಣಹದ್ದುಗಳು ಅಳಿದುಹೋದವು. ಈಗ ಇಡೀ ಭಾರತದಲ್ಲಿ ಅವುಗಳ ಸಂಖ್ಯೆ ಕನಿಷ್ಠ ಮಟ್ಟಕ್ಕೆ ಕುಸಿದುಹೋಗಿದೆ.

ಪಕ್ಷಿ ಪ್ರಪಂಚದಲ್ಲೇ ಅತ್ಯಂತ ನಿಪುಣ ವಾಸ್ತುಶಿಲ್ಪಿಯೆಂದು ಕರೆಯಲಾಗುವ ಗೀಜಗಗಳು ಮಲೆನಾಡಿನಲ್ಲಿ ಹೇರಳವಾಗಿದ್ದವು. ಗೂಡು ಕಟ್ಟುವುದರಲ್ಲಿ ಅವುಗಳ ನೈಪುಣ್ಯ ಬೆರಗಾಗಿಸುವಂತಹದು. ಭತ್ತದ ಹಸಿ ಎಲೆಯನ್ನು ಕತ್ತರಿಸಿ ತಂದು ಅಡಿಕೆ ಮರದ ಹಸಿ ಹೆಡದ ತುದಿಯಲ್ಲಿ ನಿರ್ಮಿತವಾಗುತ್ತಿದ್ದ ವಿಶಿಷ್ಟ ಗೂಡುಗಳವು. ಹಸಿರುಕ್ರಾಂತಿಯ ನಂತರದಲ್ಲಿ ರಸಗೊಬ್ಬರಗಳ ಬಳಕೆ ಪ್ರಾರಂಭವಾಯಿತು. ಸೊಕ್ಕಿ ಬೆಳೆದು ಹೆಚ್ಚು ಇಳುವರಿ ನೀಡುವ ತಳಿಗಳು ರೈತ ವಲಯದಲ್ಲಿ ಜನಪ್ರಿಯವಾದವು. ಹೀಗೆ ಬೆಳೆದ ಸಸ್ಯಗಳು ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು, ವಿವಿಧ ರೋಗಗಳಿಗೆ ಬಲಿಯಾದವು. ಇದನ್ನು ನಿಯಂತ್ರಿಸಲು ಮತ್ತಷ್ಟು ರಾಸಾಯನಿಕಗಳು ಬಂದವು. ಅಡಿಕೆಗೆ ಬೆಲೆ ಬರುತ್ತಿದ್ದಂತೆ, ಭತ್ತದ ಗದ್ದೆಗಳು ಮಾಯವಾಗುತ್ತಾ ಬಂದವು. 2000ನೇ ಇಸವಿಯ ಹೊತ್ತಿಗೆ ಗೀಜಗಗಳು ಸ್ಥಾನಿಕವಾಗಿ ಅಳಿದುಹೋದವು. ಕ್ಷೀರಕ್ರಾಂತಿಯೆಂಬ ಬದಲಾವಣೆ ರಣಹದ್ದುಗಳನ್ನು ಬಲಿ ತೆಗೆದುಕೊಂಡರೆ, ಗೀಜಗಗಳು ಹಸಿರುಕ್ರಾಂತಿಗೆ ಬಲಿಯಾದವು.

ಹೇರಳ ಜೀವಿವೈವಿಧ್ಯವು ಆರೋಗ್ಯವಂತ ಪರಿಸರವನ್ನು ಪ್ರತಿಬಿಂಬಿಸುತ್ತದೆ. ಕಾಲ ಕೆಳಗಿನ ಕಪ್ಪೆಗಳು ಸದ್ದು ಮಾಡಲಿಲ್ಲವೆಂದರೆ, ಹತ್ತಿರದಲ್ಲೊಂದು ಅಪಾಯ ಕಾದಿದೆ ಎಂದು ಗ್ರಹಿಸಲು ಅಡ್ಡಿಯಿಲ್ಲ. ಗೀಜಗನ ಗೂಡಿಗಿಂತ ಅದೆಷ್ಟೋ ಪಟ್ಟು ಸಂಕೀರ್ಣವಾದ ಪರಿಸರ ವ್ಯವಸ್ಥೆಯ ಶೇಕಡ 1ರಷ್ಟು ಕೂಡಾ ನಮ್ಮ ಅರಿವಿಗೆ ಇನ್ನೂ ಬಂದಿಲ್ಲ. ಮಾನವನ ಹಸ್ತಕ್ಷೇಪವಿಲ್ಲದ ಪರಿಸರವು ಆಯಾ ಪ್ರದೇಶಕ್ಕೆ ಏನು ಬೇಕು ಎನ್ನುವುದನ್ನು ನಿರ್ಧರಿಸುತ್ತದೆ. ನೆರೆ-ಬರ ಹಾಗೂ ಕಾಡಿನ ಜೀವಿವೈವಿಧ್ಯ ಒಂದು ಅರಣ್ಯ ವ್ಯವಸ್ಥೆಯನ್ನು ಸಮರ್ಥವಾಗಿ ಕಟ್ಟುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಸರ್ಕಾರದ ವತಿಯಿಂದ ಕಾಪಿಡಲ್ಪಟ್ಟ ರಾಷ್ಟ್ರೀಯ ಉದ್ಯಾನಗಳು, ಅಭಯಾರಣ್ಯಗಳು ಇತ್ತೀಚೆಗೆ ಅತಿಯಾದ ಮಾನವ ಹಸ್ತಕ್ಷೇಪದಿಂದ ತಮ್ಮ ಸಹಜತೆಯನ್ನು ಕಳೆದುಕೊಳ್ಳುತ್ತಿವೆ. ಹುಲಿ ಯೋಜನೆಯಡಿಯಲ್ಲಿ ನಾಗರಹೊಳೆಯ 650 ಚದರ ಕಿ.ಮೀ. ವ್ಯಾಪ್ತಿಯ ಅರಣ್ಯ ಪ್ರದೇಶವು ಬಹುಮುಖ್ಯ ಪ್ರವಾಸಿತಾಣವೂ ಆಗಿದೆ. ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ನಾಗರಹೊಳೆಯಲ್ಲಿ ಸಫಾರಿಗೆ ಅವಕಾಶ ಇದೆ. ಹಾಗೆ ಹೋದವರಲ್ಲಿ ಕೆಲವರಿಗೆ ಹುಲಿ ಕಾಣಸಿಗಬಹುದು. ಬೇಸಿಗೆಯಲ್ಲೂ ಪ್ರವಾಸಿಗರಿಗೆ ಹುಲಿ ತೋರಿಸುವ ಇಲಾಖೆಯ ಉಮೇದು ಅಲ್ಲಿನ ಒಣಗಿದ ಕೆರೆಗಳಿಗೆ ನೀರು ತುಂಬಿಸುವ ಕೃತಕ ವ್ಯವಸ್ಥೆ ಮಾಡುತ್ತದೆ. ಇದು, ನೀರಿಲ್ಲದೇ ಬದುಕಲಾರದ ಚುಕ್ಕೆಜಿಂಕೆ, ಹಂದಿಗಳ ಸಂಖ್ಯೆಗಳನ್ನು ನೈಸರ್ಗಿಕ ಸಾಂದ್ರತೆಗಿಂತ ಮೂರು ಪಟ್ಟು ಹೆಚ್ಚು ಮಾಡಿದೆ. ಈ ಕ್ರಮದಿಂದಾಗಿಯೇ ಬರದಲ್ಲೂ ಬದುಕಬಲ್ಲ ಸಾಂಬಾರುಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಕಾಲಕ್ರಮೇಣ ನಾಗರಹೊಳೆ ಕಾಡು ತನ್ನ ಸ್ವಾಭಾವಿಕ ಸಸ್ಯವೈವಿಧ್ಯವನ್ನು ಕಳೆದುಕೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಇಡೀ ಕಾಡು ಕೆಲವೇ ಸಸ್ಯವೈವಿಧ್ಯಗಳಿಗೆ ಸೀಮಿತವಾಗುವ ಸಾಧ್ಯತೆ ಇದೆ.

ವಿಜ್ಞಾನ, ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಕೃತಿಯನ್ನು ಬಗ್ಗಿಸಬಲ್ಲೆ ಎಂಬ ಹುಸಿಭ್ರಮೆಯಲ್ಲಿ ನವನಾಗರಿಕ ಪ್ರಪಂಚವಿದೆ. ಅರಣ್ಯ ನಾಶವೆಂದರೆ, ಅದು ಜೀವಿವೈವಿಧ್ಯಗಳ ಆವಾಸಸ್ಥಾನದ ವಿನಾಶವೂ ಆಗುತ್ತದೆಯಲ್ಲವೆ? ಜೊತೆಗೆ ವ್ಯಾಪಕ ಅರಣ್ಯನಾಶದಿಂದ ಭೂಬಿಸಿಯೇರಿಕೆ ಪ್ರಕ್ರಿಯೆ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಭೂಮಿ ಬಿಸಿಯಿಂದ ಹೆಚ್ಚಿನ ಜೀವಿವೈವಿಧ್ಯ ಸಮೂಹಗಳು ಸಂಕಷ್ಟಗಳನ್ನು ಎದುರಿಸುವ ಸಂದರ್ಭ ಬರುತ್ತದೆಯಾದರೂ, ಬಿಸಿ ವಾತಾವರಣ ಪೀಡೆಕೀಟಗಳ ವಂಶಾಭಿವೃದ್ಧಿಗೆ ಉತ್ತೇಜನ ನೀಡುತ್ತದೆ. ಅಂದರೆ, ನೊಣ, ಸೊಳ್ಳೆ, ಉಣ್ಣೆ ಇತ್ಯಾದಿ ಪೀಡೆಕೀಟಗಳು ಅತಿವೇಗವಾಗಿ ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತವೆ.



ಕರ್ನಾಟಕವನ್ನು ಈಗ ಎರಡು ಗಂಭೀರ ಸಮಸ್ಯೆಗಳು ಕಾಡುತ್ತಿವೆ. ಜಾನುವಾರುಗಳಿಗೆ ಲಂಪಿ ಚರ್ಮ ಗಂಟುರೋಗ ವ್ಯಾಪಕವಾಗಿ ಹಬ್ಬುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಇದುವರೆಗೂ ಸುಮಾರು 600 ಜಾನುವಾರುಗಳು ಈ ರೋಗಕ್ಕೆ ಬಲಿಯಾಗಿವೆ ಎಂಬ ವರದಿಗಳಿವೆ. ದಕ್ಷಿಣ ಆಫ್ರಿಕಾ ಮೂಲದ ಈ ಕಾಯಿಲೆ ಕರ್ನಾಟಕಕ್ಕೆ ಹೊಸದಾಗಿ ಸೇರ್ಪಡೆಯಾದ ಕಾಯಿಲೆಯಾಗಿದ್ದು, ಜಾನುವಾರುಗಳ ಸಾವಿನಿಂದ ರಾಜ್ಯಕ್ಕೆ ಆರ್ಥಿಕವಾಗಿ ದೊಡ್ಡ ಮಟ್ಟದ ನಷ್ಟವಾಗಿದೆ. ಮಲೆನಾಡಿನ ವಾಣಿಜ್ಯ ಬೆಳೆಯಾದ ಅಡಿಕೆಗೆ ಎಲೆಚುಕ್ಕಿಯೆಂಬ ರೋಗ ಬಲುವೇಗವಾಗಿ ಹರಡುತ್ತಿದೆ. ಶೃಂಗೇರಿ ಭಾಗದಲ್ಲಿ ಇಡೀ ಅಡಿಕೆ ತೋಟಕ್ಕೆ ತೋಟವೇ ರೋಗದಿಂದ ನಾಶವಾಗಿದೆ.

ಎಲೆಚುಕ್ಕಿ ರೋಗಕ್ಕೆ ಸಂಬಂಧಿಸಿದಂತೆ ಅಚ್ಚರಿಯ ವಿಷಯವೊಂದು ಬಹಿರಂಗವಾಗುತ್ತಿದೆ. ಯಾವ ತೋಟದಲ್ಲಿ ಕಳೆನಾಶಕವೆಂಬ ರಾಸಾಯನಿಕವನ್ನು ಹೆಚ್ಚು ಬಳಕೆ ಮಾಡಲಾಗಿದೆಯೋ ಅಂತಹ ತೋಟಗಳೇ ಎಲೆಚುಕ್ಕಿ ರೋಗಕ್ಕೆ ಹೆಚ್ಚು ತುತ್ತಾಗುತ್ತಿವೆ. ರಾಸಾಯನಿಕರಹಿತವಾದ ತೋಟಗಳಿಗೆ ಎಲೆಚುಕ್ಕಿ ರೋಗ ಅಷ್ಟೊಂದು ಹಾನಿ ಮಾಡುತ್ತಿಲ್ಲವೆಂಬುದು ರೈತರ ಅನುಭವದ ಮಾತು. ಮಣ್ಣಿನಲ್ಲಿ ಇರುವ ಬಹುಉಪಯೋಗಿ ಸೂಕ್ಷ್ಮಾಣುಗಳು ಅಡಿಕೆ ಎಲೆಗಳಿಗೆ ಪೋಷಕಾಂಶಗಳನ್ನು ಒದಗಿಸುತ್ತವೆ. ನೈಸರ್ಗಿಕ ಪೋಷಕಾಂಶ ಪಡೆದು ಬೆಳೆದ ಗಿಡಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುತ್ತದೆ. ಎಲೆಗಳನ್ನು ತಿಂದು ಹಾಕುವ ಫಂಗಸ್ಸುಗಳ ದಾಳಿಗೆ ಆರೋಗ್ಯವಂತ ಗಿಡಗಳು ಸುಲಭವಾಗಿ ತುತ್ತಾಗಲಾರವು.

ಈ ಹಿಂದೆ, ಸೊಳ್ಳೆಗಳಿಂದ ಹರಡುವ ಮಲೇರಿಯಾ ಎಂಬ ಮಾರಿಯನ್ನು ಸೊಳ್ಳೆಗಳನ್ನು ನಿರ್ಮೂಲನೆ ಮಾಡುವ ಮೂಲಕ ಹತ್ತಿಕ್ಕಬೇಕೆಂದು ಡಿಡಿಟಿ ಎಂಬ ರಾಸಾಯನಿಕವನ್ನು ವ್ಯಾಪಕವಾಗಿ ಬಳಸಲಾಯಿತು. ತಾಯಿಯ ಎದೆಹಾಲಿನಲ್ಲೂ ಡಿಡಿಟಿಯ ಅಂಶಗಳು ಕಂಡುಬಂದ ಮೇಲೆ ಡಿಡಿಟಿಯನ್ನೇ ನಿಷೇಧಿಸಲಾಯಿತು ಎಂಬುದನ್ನು ಬಿಟ್ಟರೆ ಸೊಳ್ಳೆಗಳಿಂದ ಮುಕ್ತಿ ಸಿಗಲೇ ಇಲ್ಲ. ತೋಟದಲ್ಲಿ ಕಳೆಗಳಿದ್ದಲ್ಲಿ ಅದರಿಂದ ಅನೇಕ ಪ್ರಯೋಜನಗಳಿವೆ. ಮಣ್ಣಿನಲ್ಲಿನ ತೇವಾಂಶವನ್ನು ಸುಸ್ಥಿರ ರೀತಿಯಲ್ಲಿ ಕಾಪಾಡಿಕೊಳ್ಳಲು ಕಳೆಗಳಿರಬೇಕು ಹಾಗೂ ಕಳೆಗಳು ಸಾವಯವ ಗೊಬ್ಬರವೂ ಹೌದು. ಅನೇಕ ಉಪಯುಕ್ತ ಕೀಟ ಹಾಗೂ ಸೂಕ್ಷ್ಮಾಣುಗಳಿಗೆ ಕಳೆಗಿಡಗಳೇ ಆಧಾರ. ಇಂತಹ ಸಾವಯವ ಸತ್ಯ ಹಿಂದೆ ಸರಿದ ಕಾರಣಕ್ಕೆ ಬೆಳೆಗಳಿಗೂ ಹೊಸ ಹೊಸ ಕಾಯಿಲೆಗಳು ಅಮರಿಕೊಳ್ಳುತ್ತಿವೆ ಎಂಬುದು ಅನುಭವಸ್ಥ ರೈತರ ಅಳಲಾಗಿದೆ.

ಮಾನವನಿಗೆ, ಜಾನುವಾರುಗಳಿಗೆ, ಸಸ್ಯಗಳಿಗೆ ಹೊಸ ಹೊಸ ಕಾಯಿಲೆಗಳು ಬರುತ್ತಿರುವ ವಿದ್ಯಮಾನಕ್ಕೂ ಮಾನವನಿರ್ಮಿತ ಭೂಬಿಸಿಯೇರಿಕೆಗೂ ನೇರ ಸಂಬಂಧವಿದೆ. ಭೂಬಿಸಿಯೇರಿಕೆಯಿಂದ ಆಗುವ ಸಂಭಾವ್ಯ ಅನಾಹುತಗಳನ್ನು ತಡೆಯಲು ಇರುವ ಏಕೈಕ ಸುಲಭ ಮಾರ್ಗವೆಂದರೆ ಜೀವಿವೈವಿಧ್ಯ ಆವಾಸಸ್ಥಾನಗಳನ್ನು ಕಾಪಿಡುವುದು. ಇಲ್ಲವಾದಲ್ಲಿ ಮತ್ತಷ್ಟು ಅಪಾಯಗಳಿಗೆ ಮಣೆ ಹಾಕಿದಂತೆ.

ಚುರುಮುರಿ



ಒಂದಕ್ಕೆರಡು ಫ್ರೀ!

• ಬಿ.ಎನ್.ಮಲ್ಲೇಶ್

‘ಲೇ ತೆಪರ, ಏನಲೇ ಇವತ್ತಿನ ಹೊಸ ಸುದ್ದಿ?’ ಹರಟೆಕಟ್ಟೆಯಲ್ಲಿ ದುಬ್ಬೀರ ಚಹಾ ಕುಡಿಯುತ್ತ ಚರ್ಚೆಗೆ ಪೀಠಿಕೆ ಹಾಕಿದ.

‘ಹೊಸ ಸುದ್ದಿನಾ? ರಾಜ್ಯದಾಗೀಗ ನಮುನಮೂನಿ ಯಾತ್ರೆಗಳದ್ದೇ ಸುದ್ದಿ. ದೀಪಾವಳಿಗೆ ಮೊದ್ಲೇ ರಾಜಕೀಯದ ಪಟಾಕಿಗಳು ಸಿಡಿಯಾಕತ್ಯಾವು. ಎಲ್ಲ ಕಡಿ ಪಾದ ದೂಳಿ ಎರಚಾಟ, ಬಚ್ಚಾ ಬಡಿದಾಟ, ಅರಳು ಮರಳಾಟ ನಡೆದೇತಿ ನೋಡಪ’ ತೆಪರೇಸಿ ನಕ್ಕ.

‘ಪೇಪರ್ನಾಗೆ ಒಂದಕ್ಕೆ ಎರಡು ಫ್ರೀ, ಮೂರು ಫ್ರೀ ಅಂತ ಜಾಹೀರಾತು ಬರ್ತಾವಲ್ಲ, ಹಂಗೆ ಇವರ ಬೈಗುಳಗಳು. ಒಂದು ಬೈಗುಳಕ್ಕೆ ನೂರು ಬೈಗುಳ ಫ್ರೀ...’ ಗುಡ್ಡೆಗೂ ನಗು.

‘ಅಲ್ಲ, ಈ ರಾಜಕೀಯದ್ದು ಏನರೆ ಇರ್ಲಿ, ಈ ಬಟ್ಟೆಬರೆ ಮೇಲೆ ಶೇಕಡ 70 ತಂಕ ಡಿಸ್ಕೌಂಟ್ ಕೊಡ್ತಾರಲ್ಲ ಹೆಂಗೆ? ಅಷ್ಟು ಕೊಟ್ರೆ ಅವರಿಗೇನ್ ಉಳೀತತಿ?’ ದುಬ್ಬೀರನ ಪ್ರಶ್ನೆ.

‘ದುಬ್ಬೀರ ಅದೆಲ್ಲ ಮೋಸ ಕಣಲೆ, ಒಂದಕ್ಕೆರಡು ರೇಟು ಏರ್ಸಿ ಆಮೇಲೆ ಡಿಸ್ಕೌಂಟ್ ಕೊಡ್ತಾರೆ. ಈಗ ಚಿನ್ನ ತಗಂಡ್ರೆ ಬೆಳ್ಳಿ ಫ್ರೀ ಅಂತಾರೆ, ಅದೇ ಬೆಳ್ಳಿ ತಗಂಡ್ರೆ ಚಿನ್ನ ಯಾಕೆ ಫ್ರೀ ಕೊಡಲ್ಲ?’ ತೆಪರೇಸಿ ತರ್ಕ.

‘ಮಿಕ್ಸಿಗೆ ಜಾರ್ ಫ್ರೀ, ಪ್ಯಾಂಟ್‌ಗೆ ಷರ್ಟ್ ಫ್ರೀ, ವಾಷಿಂಗ್ ಮಷಿನ್‌ಗೆ ಬಕೆಟ್ ಫ್ರೀ, ಗ್ಲಾಸ್ ಸೆಟ್ ಫ್ರೀ, ಹಾಟ್ ಬಾಕ್ಸ್ ಫ್ರೀ ಅಂತ ನೂರೆಂಟು ಕೊಡ್ತಾರೆ. ಹಂಗ್ ನೋಡಿದ್ರೆ ಈ ಫ್ರೀ ಅಂತ ಕೊಡ್ತಾರಲ್ಲ, ಅವೇ ಚೆನ್ನಾಗಿ ಬಾಳಿಕಿ ಬರ್ತಾವು’ ಗುಡ್ಡೆ ನಕ್ಕ.

‘ಈ ಫ್ರೀ ಜಾಹೀರಾತುಗಳ ಕಾಲದಾಗೆ ನಮ್ಮನೇಲಿ ದೊಡ್ಡ ಜಗಳನೇ ಆತು ಕಣ್ರಲೆ. ದಿನ ಬೆಳಗಾದ್ರೆ ನನ್ನೆಂಡ್ತಿ ಸೀರಿ ಕೊಡಿಸ್ರೀ, ಒಡವಿ ಕೊಡಿಸ್ರೀ ಅಂತ ತಲಿ ತಿಂತಾಳೆ. ಈ ಜೀವನಾನೆ ಬ್ಯಾಸರಾಗೇತಿ, ನಾನೂ ಯಾವುದಾರ ಯಾತ್ರೆಗೆ ಹೋಗಾಣ ಅಂತ ಮಾಡೀನಿ...’ ಕಡೆಮನಿ ಕೊಟ್ರೇಶಿ ವೈರಾಗ್ಯದ ಮಾತಾಡಿದ.

‘ಹೌದಾ? ಯಾವ ಯಾತ್ರೆ? ‘ಕೈ’ದೋ ‘ಕಮಲ’ದ್ದೋ? ‘ತೀರ್ಥ’ಯಾತ್ರೆಗೆ ಹೋಗೋದಾದ್ರೆ ನಾವೆಲ್ಲ ಬರ್ತೀವಿ ನೋಡಪ’ ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ವ್ಯಾಪಕ ಅರಿವಿಗಾಗಿ ಅವಿರತ ಹೋರಾಟ

ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತೆ ಮಕ್ಕಳನ್ನು ಹೇಗೆ ಬದಲಿಸಬೇಕು ಎಂಬ ಬಗ್ಗೆ ಗಂಭೀರವಾದ ಚಿಂತನೆ ನಡೆಯಬೇಕಾದದ್ದು ಈ ಹೊತ್ತಿನ ಅಗತ್ಯ

• ಡಾ. ಕೆ.ಎಸ್.ಪವಿತ್ರ

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಮ್ಮೆಲ್ಲರನ್ನೂ ಬೆಚ್ಚಿಬೀಳಿಸುವ ಕುಕೃತ್ಯ ನಡೆದಿದೆ. ಗಾಯದ ಮೇಲೆ ಬರೆ ಎಳೆಯುವಂತೆ, ಲೈಂಗಿಕ ದೌರ್ಜನ್ಯದ ಮೇಲೆ ಮಗುವಿನ ಕೊಲೆ. 10 ವರ್ಷದ ಮಗುವನ್ನು, ಚಾಕೊಲೇಟ್ ಆಸೆ ತೋರಿ ಟ್ಯೂಷನ್ ಶಿಕ್ಷಕ ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡು ಕೊಲೆ ಮಾಡಿರುವ ಪ್ರಕರಣವು ಕೆಲವೇ ದಿನಗಳಲ್ಲಿ ಮಾಧ್ಯಮಗಳಿಂದ, ನಮ್ಮ ಮಾತುಕತೆಯಿಂದ ಮಾಯವಾಗಿಬಿಡಬಹುದು. ಆದರೆ ಇಂತಹ ಸಂಗತಿಗಳು ಮನದಾಳದಲ್ಲಿ ಕುಳಿತು, ಹೆಣ್ಣು ಮಕ್ಕಳ ಸುರಕ್ಷತೆಯ ಬಗ್ಗೆ ಭಯದ ವಾತಾವರಣವನ್ನು ನಿರ್ಮಿಸುವ ಸಾಧ್ಯತೆ ಇದೆ.

ಮೊದಲೇ, ಓದಲು ಶಾಲೆಗೆ ಕಳಿಸಿದರೆ, ಹೊರಗೆ ಓಡಾಡಿದರೆ ಏನಾದೀತೆಂದು ಹೆದರಿ ಹಿಂದೆ ಸರಿಯುವ ಅಪ್ಪ-ಅಮ್ಮಂದಿರನ್ನು ಮತ್ತಷ್ಟು ಹಿಂದಕ್ಕೆಳೆಯಬಹುದು. ಆದ್ದರಿಂದ ಈ ಪ್ರಕರಣವನ್ನು ಕಾರಣವಾಗಿಸಿಕೊಂಡಾದರೂ, ನಾವು ಒಂದು ‘ಸಮಾಜ’ವಾಗಿ ಎಲ್ಲಿ ಸೋತಿದ್ದೇವೆ, ಹೇಗೆ ಸರಿಪಡಿಸಿಕೊಳ್ಳಬೇಕು, ‘ಮಕ್ಕಳು ಮುಗ್ಧರು’ ಎಂಬಷ್ಟಕ್ಕೇ ಮುಕ್ತಾಯ ಮಾಡದೆ, ‘ಮಕ್ಕಳು ಮುಗ್ಧರಾದರೂ ಮಾಹಿತಿಯುಳ್ಳವರು, ತಮ್ಮನ್ನು ತಾವು ರಕ್ಷಿಸಿಕೊಳ್ಳಬಲ್ಲವರು’ ಎಂಬಂತೆ ಹೇಗೆ ಬದಲಿಸಬೇಕು ಎಂಬುದನ್ನು ವಿವರವಾಗಿ ನೋಡಬೇಕಾದುದು ಈ ಹೊತ್ತಿನ ಅಗತ್ಯ.

ಇಂಥ ಪ್ರಕರಣಗಳನ್ನು ನೋಡಿದಾಗ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ನಮ್ಮಲ್ಲಿ ಅರಿವು ಮೂಡಿಸುವ ಕಾರ್ಯ ಇನ್ನೂ ಸಶಕ್ತವಾಗಿ ನಡೆದಿಲ್ಲ ಎಂಬ ಬಗ್ಗೆ ನನ್ನಂತಹ ಮನೋವೈದ್ಯರಿಗೆ ನೋವುಂಟಾಗುತ್ತದೆ, ಅಪರಾಧಿ ಪ್ರಜ್ಞೆ ಮೂಡುತ್ತದೆ. ಲೈಂಗಿಕ ಶಿಕ್ಷಣ ನೀಡುವ ಬಗ್ಗೆ ‘ಬೇಕೆ-ಬೇಡವೆ’ ಎಂಬ ಚರ್ಚೆ ಮಾಡುವ ನಾವು ಸಹಜವಾಗಿ ಮಕ್ಕಳಿಗೆ ‘ಒಳ್ಳೆಯ ಸ್ಪರ್ಶ- ಕೆಟ್ಟ ಸ್ಪರ್ಶಗಳ ಬಗೆಗೆ ಹೇಳಿಕೊಡುವುದಕ್ಕೂ ಹಿಂಜರಿಯುತ್ತೇವೆ. ‘ಕೆಟ್ಟ ಸ್ಪರ್ಶ’ ಎಂದ ತಕ್ಷಣ ಉಳಿದ ಲೈಂಗಿಕ ವಿಷಯಗಳ ಬಗ್ಗೆ ಮಕ್ಕಳು ಪ್ರಶ್ನೆ ಕೇಳಿದರೆ ಉತ್ತರಿಸುವುದು ಹೇಗೆ?! ಹಾಗಾಗಿ ದೇಹದ ಮುಟ್ಟಬಾರದ ಸ್ಥಳಗಳ (ಎದೆ-ಪೃಷ್ಠ-ಜನನಾಂಗ) ಬಗೆಗೆ ನಾವು ಚಿಕ್ಕ ಮಕ್ಕಳ ಬಳಿ ಮಾತನಾಡುವುದು ಬಲು ಕಡಿಮೆ. ಆದರೆ ಈ ಬಗ್ಗೆ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಹೇಳಿಕೊಡಬೇಕಾದ್ದು ಅಪೇಕ್ಷಣೀಯ.

ಲೈಂಗಿಕ ದೌರ್ಜನ್ಯದ ಬಗ್ಗೆ ಶಿಕ್ಷಣ ನೀಡುವ ಶಿಕ್ಷಕರು, ಕಾರ್ಯಕರ್ತರು, ಮನೋವೈದ್ಯರನ್ನು ಸಾಮಾನ್ಯವಾಗಿ ಹಿರಿಯರು ಕೇಳುವ ಪ್ರಶ್ನೆಗಳಿವೆ. ಅವುಗಳಲ್ಲಿ ಬಹುಮುಖ್ಯವಾದದ್ದು, ಇಂತಹ ಅರಿವಿನಿಂದ ನಿರಪರಾಧಿ ಹಿರಿಯರು ದೂಷಣೆಗೊಳಗಾದರೆ ಎಂಬ ಪ್ರಶ್ನೆ ಅಥವಾ ‘ಇಂತಹ ಅನುಭವಗಳೆಲ್ಲ ಬದುಕಿನಲ್ಲಿ ಇದ್ದದ್ದೇ. ಅದನ್ನು ನೀವು ಸುಮ್ಮನೆ ಗಂಭೀರವಾಗಿಸುತ್ತೀರಿ, ಮಕ್ಕಳ ತಲೆಯಲ್ಲಿ ಬೇಡದ ಮಾಹಿತಿ ತುಂಬುತ್ತೀರಿ’ ಎಂಬ ಟೀಕೆ. ಇಂತಹ ಪ್ರಶ್ನೆಗಳು ಎದುರಾದಾಗ ಪ್ರತಿಯೊಬ್ಬರೂ ತಮ್ಮ ಬಾಲ್ಯದ ಅನುಭವಗಳು, ಇಂದಿಗೂ ಜನಜಂಗುಳಿಯಲ್ಲಿ ಉಂಟಾಗಬಹುದಾದ ಕಹಿ ಅನುಭವಗಳನ್ನು ನೆನಪಿಸಿಕೊಳ್ಳಬೇಕು. ಬಾಲ್ಯದಲ್ಲಿ ಯಾವುದಾದರೊಂದು ‘ಕೆಟ್ಟ ಸ್ಪರ್ಶ’ದ ಅನುಭವವಿರುವ ಸಾಧ್ಯತೆ ಎಷ್ಟು ಹೆಚ್ಚೆಂದರೆ ‘ಸಾರ್ವತ್ರಿಕ’ ಎನ್ನುವಷ್ಟು!

ಮನಸ್ಸು ಸುಳ್ಳು ಹೇಳುವುದಿಲ್ಲ! ಸ್ಪರ್ಶವನ್ನು ಗುರುತಿಸುವುದರಲ್ಲಿ ತಪ್ಪು ಮಾಡುವುದಿಲ್ಲ! ಹಾಗಾಗಿ ‘ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ’ ಪರಿಹಾರ ಹುಡುಕಬೇಕಾದ ಗಂಭೀರ ಸಮಸ್ಯೆಯಾಗಿಯೇ ನಿಲ್ಲುತ್ತದೆ.

ಇತರ ಲೈಂಗಿಕ ದೌರ್ಜನ್ಯಗಳಿಗಿಂತ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿವೆ. ವಿಶ್ವ ಆರೋಗ್ಯ ಸಂಸ್ಥೆಯು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಸದ್ದು ಮಾಡದ ಆರೋಗ್ಯದ ತುರ್ತು ಪರಿಸ್ಥಿತಿ ಎಂದು ಗುರುತಿಸುತ್ತದೆ. ಜಗತ್ತಿನಾದ್ಯಂತ ಕಾನೂನು ವ್ಯವಸ್ಥೆಗಳು ಹೇಗೆ ಮಕ್ಕಳಿಗೆ ರಕ್ಷಣೆ ನೀಡುವಲ್ಲಿ ಸೋಲುತ್ತವೆ ಎಂಬುದನ್ನು ಒತ್ತಿ ಹೇಳುತ್ತದೆ. ಅಪರಾಧಕ್ಕೆ ಶಿಕ್ಷೆಯಾಗಲು ಸಾಕ್ಷ್ಯಾಧಾರಗಳ ರುಜುವಾತು ನಿರೂಪಿಸಲ್ಪಡುವ ಅವಧಿಯಲ್ಲಿ ಆಗಬಹುದಾದ ಅಪಾಯಗಳ ಬಗ್ಗೆ ಎಚ್ಚರ ನೀಡುತ್ತದೆ. ಪ್ರಸ್ತುತ ಪ್ರಕರಣದಲ್ಲಿಯೂ ಆರೋಪಿಯ ಬಗ್ಗೆ ಈ ಹಿಂದೆಯೂ ದೂರುಗಳಿದ್ದವು, ಹಲವರು ತೊಂದರೆಗೊಳಗಾಗಿದ್ದಾಗ್ಯೂ ಕಾನೂನು ನೆರವನ್ನು ಪಡೆದಿರಲಿಲ್ಲ ಎನ್ನುವ ಸಂಗತಿ ಈ ಎಚ್ಚರವನ್ನೇ ನಮಗೆ ನೆನಪಿಸಬೇಕು.



ಇಂದು ಮಕ್ಕಳಲ್ಲಿ ಲೈಂಗಿಕ ದೌರ್ಜನ್ಯದ ಬಗ್ಗೆ ವಿಪುಲವಾದ ಮಾಹಿತಿಯಿದೆ. ಮಕ್ಕಳು ಹೇಗೆ ಇಂತಹ ಸನ್ನಿವೇಶಗಳನ್ನು ನಿಭಾಯಿಸಬೇಕು ಎಂಬ ಬಗ್ಗೆಯೂ ಕಾರ್ಟೂನ್ ಚಿತ್ರಗಳಿವೆ. ‘ಚೈಲ್ಡ್ ಲೈನ್’ ಎಂಬ ಸ್ವಯಂ ಸೇವಾ ಸಂಸ್ಥೆಯು ದೇಶದಾದ್ಯಂತ 16 ಭಾಷೆಗಳಲ್ಲಿ ‘ಕೋಮಲ್’ ಎನ್ನುವ 7 ವರ್ಷದ ಮಗುವಿನ ಚಿತ್ರಣವನ್ನು ಶಾಲೆಗಳಲ್ಲಿ ಪ್ರದರ್ಶಿಸುವ ಪ್ರಯತ್ನ ಮಾಡಿದೆ. ಚಾಲಕ, ಶಿಕ್ಷಕ, ತಂದೆ, ಚಿಕ್ಕಪ್ಪ, ಅಪರಿಚಿತ, ಪರಿಚಿತ ಯಾರೇ ಇಂತಹ ನಡವಳಿಕೆ ತೋರಿದಾಗ ಅದನ್ನು ಗುರುತಿಸುವುದು, ಅದು ತನಗೆ ಸಹ್ಯವಲ್ಲ ಎಂದು ಹೇಳಿ ‘ನಿಲ್ಲು’ ಎಂದು ಕೂಗುವುದು, ತಾಯಿಯ ಬಳಿ ತತ್‌ಕ್ಷಣ ಹೇಳುವುದು ಇವುಗಳನ್ನು ಪ್ರಾಯೋಗಿಕವಾಗಿ ಹೇಳುವ ಬಗೆಗಳನ್ನು ಚಿತ್ರಿಸುವ ಕಿರುಚಿತ್ರಗಳು ಬಹಳಷ್ಟಿವೆ. ಆಡಳಿತ ವ್ಯವಸ್ಥೆ ಕನ್ನಡದಲ್ಲಿಯೂ ಇವುಗಳನ್ನು ಪ್ರಚುರಪಡಿಸಿ, ಶಾಲೆಗಳಲ್ಲಿ ಪ್ರದರ್ಶಿಸಬೇಕಾದ್ದು, ಕೊನೇಪಕ್ಷ ತಂದೆ-ತಾಯಿ ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ತೋರಿಸುವ ಬಗ್ಗೆ ಮಾಹಿತಿ ನೀಡಬೇಕಾದ್ದು ಅತ್ಯವಶ್ಯ.

ಮಳವಳ್ಳಿಯಲ್ಲಿ ಅಸುನೀಗಿರುವ ಮಗುವಿನ ಕುಟುಂಬದ ತೀವ್ರ ದುಃಖದಲ್ಲಿ ನಾವೆಲ್ಲರೂ ಪಾಲುದಾರರೇ. ಕಾನೂನಿನ ಶಿಕ್ಷೆಗಷ್ಟೇ ಅಲ್ಲದೆ ಈ ಬಗ್ಗೆ ವ್ಯಾಪಕ ಅರಿವಿಗಾಗಿಯೂ ನಮ್ಮ ಹೋರಾಟ ಈಗ ನಡೆಯಬೇಕಾಗಿದೆ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಇದು ಕೋಳಿ ಜಗಳವಲ್ಲ

‘ಈ ಕೋಳಿ ಜಗಳದಲ್ಲಿ ಈಗ ಇತಿಹಾಸದ ಪುಟಗಳಿಗೆ ಸೇರಿರುವ ನಾಯಕರನ್ನು ಬಳಸಿಕೊಳ್ಳುವುದು ಯಾರಿಗೂ ಶೋಭೆ ತರುವ ವರ್ತನೆಯಲ್ಲ’ ಎಂಬ ಸಂಪಾದಕೀಯ ಬರಹದಲ್ಲಿನ ನುಡಿಗಳು (ಪ್ರ.ವಾ., ಅ. 14) ರಾಜಕೀಯ ರಂಗದಲ್ಲಿರುವ ವ್ಯಕ್ತಿಗಳ ಕಣ್ಣಿಗೂ ಕಾಣುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ. ಏಕೆಂದರೆ ರಾಜಕೀಯ ರಂಗದಲ್ಲಿ ಗದ್ದುಗೆಯನ್ನು ಹಿಡಿಯುವ ಮತ್ತು ಹಿಡಿದ ಗದ್ದುಗೆಯನ್ನು ಕಳೆದುಹೋಗದಂತೆ ಉಳಿಸಿಕೊಳ್ಳುವ ಹೋರಾಟದಲ್ಲಿ ತೆಗಳಿಕೆಯ ನುಡಿಗಳಾದ ಬಯ್ಗುಳಗಳೇ ಹರಿತವಾದ ಆಯುಧಗಳಾಗಿ ಬಳಕೆಯಾಗುತ್ತಿವೆ.

ಜನಸಮುದಾಯದಲ್ಲಿ ಎರಡು ಬಗೆಯ ವ್ಯಕ್ತಿಗಳು ಸಾಮಾಜಿಕವಾದ ಯಾವ ಬಗೆಯ ಹಿಂಜರಿಕೆಯಿಲ್ಲದೆ ಬೀದಿಯಲ್ಲಿ ಬಯ್ಗುಳದ ಮೂಲಕ ತಮ್ಮ ಮನದ ಭಾವನೆಗಳನ್ನು ಹೊರಹಾಕುತ್ತಾರೆ. ಜಾತಿಬಲ, ಜನಬಲ, ತೋಳ್ಬಲ, ಹಣಬಲ ಮತ್ತು ಅಧಿಕಾರದ ಬಲವಿರುವ ವ್ಯಕ್ತಿಗಳು ತಮ್ಮ ಎದುರಾಳಿಗಳ ವ್ಯಕ್ತಿತ್ವವನ್ನು ಅಲ್ಲಗಳೆದು, ಅವರನ್ನು ಮಾನಸಿಕವಾಗಿ ಗಾಸಿಗೊಳಿಸುವ ಉದ್ದೇಶದಿಂದ ಬಯ್ಗುಳವನ್ನು ಆಡಿದಾಗ, ಸಮಬಲವುಳ್ಳ ಎದುರಾಳಿಗಳು ಪ್ರತಿಯಾಗಿ ಬಯ್ಗುಳದ ನುಡಿಗಳ ಮೂಲಕವೇ ಜಗಳ ಮಾಡತೊಡಗುತ್ತಾರೆ. ಈ ಬಗೆಯ ಯಾವೊಂದು ಬಲವಿಲ್ಲದ ವ್ಯಕ್ತಿಗಳು ಅಂದರೆ ಅನ್ನ, ಬಟ್ಟೆ ಮತ್ತು ವಸತಿಯಿಂದ ವಂಚಿತರಾಗಿರುವ ಬಡವರು ತಮ್ಮ ಮೈಮನದ ಸಂಕಟ ಮತ್ತು ಹತಾಶೆಯನ್ನು ಹೊರಹಾಕಲು ಬಯ್ಗುಳವನ್ನು ಬಳಸುತ್ತಾರೆ.

ಸಿ.ಪಿ.ನಾಗರಾಜ, ಬೆಂಗಳೂರು

ಚುನಾವಣೆಯ ಕಾವು ತಾಗದಿರಲಿ

ಜನವರಿ 6ರಿಂದ 8ರವರೆಗೆ ಹಾವೇರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಸಂತಸದಾಯಕ ವಿಷಯ. ಕನ್ನಡವನ್ನು ಮುಕ್ತಮನಸ್ಸುಗಳಲ್ಲಿ ಬಿತ್ತಲು ಸಾಹಿತ್ಯ ಪರಿಷತ್ತಿಗೆ, ಸರ್ಕಾರಕ್ಕೆ ಇರುವ ಬಹುದೊಡ್ಡ ಅವಕಾಶವಾದ ಸಾಹಿತ್ಯ ಸಮ್ಮೇಳನವು ಯೋಜನಾರಹಿತ ನಿರ್ಧಾರಗಳು ಮತ್ತು ರಾಜಕೀಯ ಕಾರಣಗಳಿಂದ ಪದೇ ಪದೇ ಮುಂದೂಡಲ್ಪಡುತ್ತಿದೆ. ಈಗ ದಿನಾಂಕ ನಿಗದಿಯಾಗಿರುವ ಸಾಹಿತ್ಯ ಸಮ್ಮೇಳನವು ಚುನಾವಣೆಯ ಕಾವಿನಿಂದ ಕುದ್ದು ಆವಿಯಾಗದಿದ್ದರಷ್ಟೇ ಸಾಕು.

ಮಂಜುನಾಥ ಮುರಲಾಪುರ, ಮುರಲಾಪುರ

ಮೂಢನಂಬಿಕೆ: ಶಾಲಾ ಪಠ್ಯದಲ್ಲಿರಲಿ ಜಾಗೃತಿ

ಕೇರಳದಲ್ಲಿ ಇತ್ತೀಚೆಗೆ ನಡೆದ ಇಬ್ಬರು ಅಮಾಯಕ ಮಹಿಳೆಯರ ನರಬಲಿ ಅತ್ಯಂತ ಹೇಯ ಕೃತ್ಯವಾಗಿದ್ದು, ನಾಗರಿಕ ಸಮಾಜವನ್ನು ತಲೆತಗ್ಗಿಸುವಂತೆ ಮಾಡಿದೆ. ಇದು ಶಿಲಾಯುಗವಲ್ಲ. ಅಂತೆಯೇ ಮಧ್ಯಯುಗದಲ್ಲಿ ಯುದ್ಧದ ಸಮಯದಲ್ಲಿ ಇಂತಹವು ಸಾಮಾನ್ಯವಾಗಿದ್ದವು ಎಂಬುದನ್ನು ಇತಿಹಾಸ ನಮಗೆ ತಿಳಿಸುತ್ತದೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಮೂಢನಂಬಿಕೆಗಳ ಕಾರಣದಿಂದ ನರಬಲಿ ನೀಡುವುದು ಅನಾಗರಿಕ ವರ್ತನೆಯಾಗಿದೆ. ಕಾಡಿನ ಪ್ರಾಣಿಗಳು ಹಸಿದಾಗ ಮಾತ್ರ ಬೇರೆ ಪ್ರಾಣಿಗಳನ್ನು ಕೊಲ್ಲುತ್ತವೆ, ಆದರೆ ಮನುಷ್ಯ ಮನುಷ್ಯನನ್ನು ಕೊಲ್ಲಲು ಬಲವಾದ ಕಾರಣವೇ ಬೇಕಾಗಿಲ್ಲ ಎಂಬಂತಾಗಿದೆ. ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ನರಬಲಿ ಕೊಡಬೇಕೆಂಬ ಕಾಮುಕನ ಮಾತನ್ನು ಕೇಳಿದ ದಂಪತಿಯೂ ಅಪರಾಧಕ್ಕೆ ಆ ವ್ಯಕ್ತಿಯಷ್ಟೇ ಹೊಣೆಗಾರರು.

ಇಂತಹ ವ್ಯಕ್ತಿಗಳನ್ನು ಸಮಾಜವೇ ಬಹಿಷ್ಕರಿಸಬೇಕು. ಇಂತಹ ಪ್ರಕರಣಗಳಲ್ಲಿ ಆರೋಪಿಗಳಿಗೆ ಶೀಘ್ರವಾಗಿ ದಂಡನೆ ವಿಧಿಸುವಂತಹ ವ್ಯವಸ್ಥೆಯಾಗಬೇಕು. ಪ್ರಾಥಮಿಕ ಹಂತದ ಶಾಲಾ ಪಠ್ಯದಲ್ಲಿ ನರಬಲಿಯಂತಹ ಮೂಢನಂಬಿಕೆಗಳ ಕುರಿತು ಜಾಗೃತಿ ಮೂಡಿಸುವಂತಹ ಅಂಶಗಳನ್ನು ಅಳವಡಿಸಬೇಕು. ಇದರಿಂದ ಜಾಗೃತ ಸಮಾಜವನ್ನು ರೂಪಿಸಲು ಸಾಧ್ಯ.

ರಾಸುಮ ಭಟ್, ಚಿಕ್ಕಮಗಳೂರು

ಪರ– ವಿರೋಧಿ ನಿಲುವಿನ ಪ್ರತಿಬಿಂಬ

ಹಿಜಾಬ್ ವಿವಾದದ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ಭಿನ್ನಮತದ ತೀರ್ಪು ಈ ವಿಚಾರದ ಬಗ್ಗೆ ಸಮಾಜದಲ್ಲಿನ ಪರ ಮತ್ತು ವಿರೋಧಿ ನಿಲುವನ್ನು ಪ್ರತಿಬಿಂಬಿಸಿದೆ. ರಾಜ್ಯದ ಕಾಲೇಜೊಂದರಲ್ಲಿ ಉದ್ಭವಿಸಿದ ಈ ಸಮಸ್ಯೆಯನ್ನು ಸ್ಥಳೀಯವಾಗಿ ಪರಿಹರಿಸಬೇಕಾಗಿತ್ತು. ಆದರೆ ಪ್ರಾರಂಭದಿಂದ ಈ ವಿಷಯದಲ್ಲಿ ವಿಶ್ವಾಸದ ಕೊರತೆ ಕಾಣುತ್ತಿದೆ. ಈ ವಿಷಯದಲ್ಲಿ ಉಂಟಾದ ವಿವಾದಗಳ ಪರಿಣಾಮ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಕುಮ್ಮಕ್ಕಿನ ಕಾರಣದಿಂದ ಇದು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿ ಇದೀಗ ವಿಸ್ತೃತ ಪೀಠಕ್ಕೆ ವರ್ಗಾವಣೆಯಾಗಿದೆ.

ಸೂಕ್ಷ್ಮ ಹಾಗೂ ಬಹು ಚರ್ಚಿತವಾದ ಈ ವಿವಾದದ ಬಗ್ಗೆ ಬೆಸ ಸಂಖ್ಯೆಯ ಪೀಠದಲ್ಲಿ ವಾದ ನಡೆದು ತೀರ್ಪು ಬಂದಿದ್ದರೆ, ಸಮಸ್ಯೆ ಬಹುಮಟ್ಟಿಗೆ ಇತ್ಯರ್ಥವಾಗುತ್ತಿತ್ತೇನೋ. ಆದರೆ ಇದೀಗ ವಿಸ್ತೃತ ಪೀಠಕ್ಕೆ ವರ್ಗಾಯಿಸಿರುವುದರಿಂದ, ಇನ್ನೂ ಕೆಲ ಸಮಯ ಹಿಜಾಬ್ ವಿವಾದ ಕುರಿತು ಚರ್ಚಿಸುವಂತಾಗಿರುವುದು ದುರದೃಷ್ಟಕರ.

ಡಾ. ಟಿ.ಜಯರಾಂ, ಕೋಲಾರ

ಯಶಸ್ವಿನಿಗೆ ದೊರೆಯಲಿ ಯಶ

ಬಡ ರೈತರು, ಮಧ್ಯಮ ವರ್ಗದ ಕುಟುಂಬಗಳಿಗೆ ಆಶಾಕಿರಣವಾಗಿದ್ದ ರಾಜ್ಯ ಸರ್ಕಾರದ ಯಶಸ್ವಿನಿ ಆರೋಗ್ಯ ಯೋಜನೆ ನಾಲ್ಕು ವರ್ಷಗಳ ಹಿಂದೆ ರದ್ದಾಗಿದ್ದು, ಅದನ್ನು ಇದೀಗ ಜನವರಿ 1ರಿಂದ ಪುನರಾರಂಭಿಸುವುದಾಗಿ ಸರ್ಕಾರ ಘೋಷಿಸಿದೆ. ಈ ಯೋಜನೆ ಕಳೆದ ಬಾರಿ ರಾಜ್ಯದ 43 ಲಕ್ಷ ಸದಸ್ಯರನ್ನು ಹೊಂದಿತ್ತಾದರೂ ಖಾಸಗಿ ಆಸ್ಪತ್ರೆ ಹಾಗೂ ಕೆಲ ಅಧಿಕಾರಿಗಳ ಹೊಂದಾಣಿಕೆಯ ಮೂಲಕ ಹಳ್ಳ ಹಿಡಿದಿತ್ತು. ಈಗಲೂ ಈ ಯೋಜನೆ ನಾಮಕಾವಸ್ತೆ ಆಗದೆ ಸರ್ಕಾರವು ಅಧಿಕಾರಿಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಮೂಗುದಾರ ಹಾಕಿ ಆಯಾ ಚಿಕಿತ್ಸೆಗೆ ನಿರ್ದಿಷ್ಟ ದರ ನಿಗದಿಗೊಳಿಸಬೇಕು.

ಗ್ರಾಮೀಣ ಭಾಗದ ಜನರಿಗೆ ಅವಶ್ಯವೆನಿಸುವ ಪ್ರಕರಣಗಳಿಗೆ ಎಲ್ಲೆಡೆ ಚಿಕಿತ್ಸೆ ದೊರೆಯುವಂತೆ ಆಗಬೇಕು. ಆ ಮೂಲಕ ಆ ವರ್ಗಕ್ಕೆ ಆತ್ಮಸ್ಥೈರ್ಯ ಒದಗಿಸಬೇಕು. ಮುಂದೆ ಸರ್ಕಾರದ ನೇತೃತ್ವ ವಹಿಸುವ ಪಕ್ಷ ಬದಲಾದರೂ ಯಾವುದೇ ಕಾರಣಕ್ಕೂ ಈ ಯೋಜನೆ ಸ್ಥಗಿತಗೊಳ್ಳಬಾರದು. ಯಶಸ್ವಿನಿಗೆ ಯಶ ದೊರೆಯುವಂತೆ ಆಗಬೇಕು.

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿಯ ಅಮೃತ ಹಾದಿ...

1948ರ ಅಕ್ಟೋಬರ್ 15ರಂದು ಆರಂಭವಾದ 'ಪ್ರಜಾವಾಣಿ' ಪತ್ರಿಕೆಗೆ ಈಗ 74 ವರ್ಷ ತುಂಬಿದೆ. ಇಂದಿನಿಂದ ಪತ್ರಿಕೆಗೆ ಅಮೃತೋತ್ಸವದ ಸಡಗರ. ಈ ಮಹತ್ತರ ಘಟ್ಟದಲ್ಲಿ, ಪತ್ರಿಕೆಯ ಆರಂಭ, ಪತ್ರಿಕೆ ನಡೆದು ಬಂದ ಹಾದಿ, ಪತ್ರಿಕಾ ಸಂಸ್ಥೆಯು ಕೈಗೊಂಡ ವಿವಿಧ ಕಾರ್ಯಚಟುವಟಿಕೆಗಳತ್ತ ಒಂದು ಹೊರಳು ನೋಟ ಇಲ್ಲಿದೆ:



ಮಹಾತ್ಮ ಗಾಂಧಿ ರಸ್ತೆಯಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಕಚೇರಿ. 1950ರ ಚಿತ್ರ

1940ರ ದಶಕದಲ್ಲಿ ದಂಡಿನ ನಗರವಾಗಿದ್ದ ಬೆಂಗಳೂರು ಬ್ರಿಟಿಷರ ನೇರ ಆಳ್ವಿಕೆಯಲ್ಲಿತ್ತು. ಎರಡನೇ ಮಹಾಯುದ್ಧದ ಆ ದಿನಗಳಲ್ಲಿ ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಸೈನಿಕರೇ ಕಾಣಿಸುತ್ತಿದ್ದರು. ಸೌತ್ ಪರೇಡ್ ಎಂದು ಕರೆಯಲಾಗುತ್ತಿದ್ದ ಈಗಿನ ಮಹಾತ್ಮ ಗಾಂಧಿ ರಸ್ತೆ ಬೆಂಗಳೂರಿನ ಚಟುವಟಿಕೆಯ ಕೇಂದ್ರವಾಗಿತ್ತು. ಫನೆಲ್ಸ್ ಎಂಬುದು ಆಗ ಅತ್ಯಂತ ಖ್ಯಾತವಾಗಿದ್ದ ಡಾನ್ಸ್ ಬಾರ್. ಐರ್ಲೆಂಡ್‌ನ ದಂಪತಿ ಈ ಡಾನ್ಸ್ ಬಾರ್ ನಡೆಸುತ್ತಿದ್ದರು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ, ಈ ದಂಪತಿ ತಮ್ಮ ಊರಿಗೆ ಮರಳಲು ನಿರ್ಧರಿಸಿ, ಫನೆಲ್ಸ್ ಮಾರಾಟಕ್ಕೆ ಇಟ್ಟರು. ಇದನ್ನು ಖರೀದಿಸಿದ್ದು ಕೆ.ಎನ್. ಗುರುಸ್ವಾಮಿ. ಅದನ್ನು ಚಿತ್ರಮಂದಿರ ಮಾಡಬೇಕು ಎಂಬ ಇಚ್ಛೆ ಅವರಿಗೆ ಇತ್ತು. ಆದರೆ, ಅದು ಆಗಲಿಲ್ಲ. ಬದಲಿಗೆ ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದೇ ಉಳಿಯುವಂತಹ ಬೆಳವಣಿಗೆ ನಡೆಯಿತು. ಗುರುಸ್ವಾಮಿ ಅವರು ಪತ್ರಿಕೆ ಆರಂಭಿಸುವ ನಿರ್ಧಾರಕ್ಕೆ ಬಂದರು. 1947ರಲ್ಲಿ 'ಡೆಕ್ಕನ್ ಹೆರಾಲ್ಡ್' ಇಂಗ್ಲಿಷ್ ಪತ್ರಿಕೆ ಆರಂಭವಾದರೆ, 1948ರ ಅಕ್ಟೋಬರ್ 15ರಂದು 'ಪ್ರಜಾವಾಣಿ' ಜನ್ಮ ತಾಳಿತು. ಹಾಗಾಗಿ ಈ ಅಕ್ಟೋಬರ್ 15ರಿಂದ 'ಪ್ರಜಾವಾಣಿ'ಗೆ ಅಮೃತ ಮಹೋತ್ಸವದ ಸಂಭ್ರಮ.

ಆಗ ಕನ್ನಡದಲ್ಲಿ ಸುಮಾರು 130 ಪತ್ರಿಕೆಗಳಿದ್ದವು. ಅವುಗಳ ಪೈಕಿ ಈಗಲೂ ಉಳಿದಿರುವುದು ಎರಡೋ ಮೂರೋ ಮಾತ್ರ. ಪ್ರಜಾವಾಣಿ ಇಲ್ಲಿತನಕ ಸಾಗಿಬಂದ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಆರಂಭದ ದಿನಗಳಲ್ಲಿ ಪತ್ರಿಕೆಯು ಲಾಭದ ಹಾದಿಯಲ್ಲಿ ಇರಲಿಲ್ಲ. 1950ರಲ್ಲಿ ಹಣಕಾಸಿನ ಭಾರಿ ಮುಗ್ಗಟ್ಟಿಗೆ ಒಳಗಾಗಿತ್ತು. ಆದರೆ, 1956ರಲ್ಲಿ ಪತ್ರಿಕೆಯು ನಷ್ಟವಿಲ್ಲದೆ ನಡೆಯುವ ಸ್ಥಿತಿಗೆ ಬಂದಿತ್ತು. ಪತ್ರಿಕೆ ಆರಂಭವಾಗಿ ಎಂಟು ವರ್ಷಗಳ ಬಳಿಕ ಲಾಭ ಗಳಿಸಲು ಆರಂಭಿಸಿತ್ತು.



ದೇವನೂರ ಮಹಾದೇವ ಅವರ ಅತಿಥಿ ಸಂಪಾದಕತ್ವದಲ್ಲಿ ಪ್ರಕಟವಾದ ವಿಶೇಷ ಸಂಚಿಕೆಯ ಮುಖಪುಟ

ಲಾಭ ಅಥವಾ ನಷ್ಟದ ಬಗ್ಗೆ ಗುರುಸ್ವಾಮಿ ಅವರು ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. 1965ರಲ್ಲಿ 'ಸುಧಾ' ವಾರಪತ್ರಿಕೆಯನ್ನು, 1968ರಲ್ಲಿ 'ಮಯೂರ' ಮಾಸಿಕವನ್ನು ಆರಂಭಿಸಲಾಯಿತು.

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಆರಂಭಿಸುವಾಗ ವೃತ್ತಪತ್ರಿಕೆ ವ್ಯಾಪಾರದ ಬಗ್ಗೆ ಗುರುಸ್ವಾಮಿ ಅವರಿಗೆ ಯಾವ ಅನುಭವವೂ ಇರಲಿಲ್ಲ. ಆರಂಭದಲ್ಲಿ ಪತ್ರಿಕೆಯ ಪ್ರಸರಣ ಸಂಖ್ಯೆ ಕಡಿಮೆ ಇತ್ತು ಮತ್ತು ಜಾಹೀರಾತು ವರಮಾನವೂ ದೊಡ್ಡ ಮಟ್ಟದಲ್ಲಿ ಇರಲಿಲ್ಲ. ಆದರೆ, ನಂತರದ ದಿನಗಳಲ್ಲಿ, ಒಂದು ಲಕ್ಷ ಪ್ರಸರಣ ದಾಟಿದ ಕನ್ನಡದ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪ್ರಜಾವಾಣಿ ಪಾತ್ರವಾಯಿತು.

ಸ್ವಾತಂತ್ರ್ಯ ಸಿಕ್ಕ ಒಂದೇ ವರ್ಷದಲ್ಲಿ ಪತ್ರಿಕೆ ಆರಂಭವಾಗಿತ್ತು. ಪ್ರಜಾವಾಣಿಗೆ ಮೊದಲ ಬಹುದೊಡ್ಡ ಸವಾಲು ಎದುರಾದದ್ದು 1975–1977ರ ಅವಧಿಯಲ್ಲಿ. ಅದು ತುರ್ತು ಪರಿಸ್ಥಿತಿ ಕಾಲ. ಮಾಧ್ಯಮದ ಮೇಲೆ ಸವಾರಿ ಆರಂಭವಾಗಿತ್ತು. ಬಹುತೇಕ ಪತ್ರಿಕೆಗಳು ಬಗ್ಗಿ ಅಂದರೆ ತೆವಳಿದವು. ಅಂತಹ ಸಂಕಷ್ಟ ಕಾಲದಲ್ಲಿಯೂ ಪ್ರಜಾವಾಣಿಯು ಓದುಗರ ಕುರಿತು ಇದ್ದ ಬದ್ಧತೆಯನ್ನು ಸಡಿಲಿಸಲಿಲ್ಲ. ವಿಶ್ವಾಸಾರ್ಹತೆಗೆ ಧಕ್ಕೆ ತಂದುಕೊಳ್ಳಲಿಲ್ಲ. ರಾಜಕೀಯವಾಗಿ ತಟಸ್ಥ ಮತ್ತು ಯಾವುದೇ ಸಿದ್ಧಾಂತಕ್ಕೆ ಜೋತು ಬೀಳದ ನಿಲುವನ್ನು ಪತ್ರಿಕೆ ಹೊಂದಿತ್ತು. ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡಲಿಲ್ಲ. ಈ ರೀತಿಯಲ್ಲಿ ನಿಕಷಕ್ಕೆ ಒಡ್ಡಿಕೊಂಡಿದ್ದರ ಪರಿಣಾಮಮೇ ವಸ್ತುನಿಷ್ಠೆ, ಬದ್ಧತೆ, ನಿಷ್ಪಕ್ಷಪಾತ ಮತ್ತು ಎಲ್ಲಕ್ಕೂ ಮಿಗಿಲಾಗಿ ಸತ್ಯದ ಪರ ನಿಲ್ಲುವ ಎದೆಗಾರಿಕೆ ಪ್ರಜಾವಾಣಿಯಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಪ್ರಜಾವಾಣಿ ಸದಾ ಮುಂದೆಯೇ ಇದೆ. ವಿನ್ಯಾಸದ ವಿಚಾರದಲ್ಲಿ ಮುದ್ರಣದ ವಿಚಾರದಲ್ಲಿ... ಎಲ್ಲದರಲ್ಲಿಯೂ ಇದು ನಿಜ. ಪತ್ರಿಕಾ ಕಚೇರಿಯು 1993ರಲ್ಲಿ ಕಂಪ್ಯೂಟರೀಕರಣಗೊಂಡಿತು. ಮಹಾತ್ಮ ಗಾಂಧಿ ರಸ್ತೆಯ ಬೆಂಗಳೂರು ಕೇಂದ್ರ ಕಚೇರಿಯಲ್ಲಿದ್ದ ಮುದ್ರಣ ವಿಭಾಗವನ್ನು 1998ರಲ್ಲಿ ಕುಂಬಳಗೋಡಿನ ವಿಶಾಲ ಪ್ರದೇಶದಲ್ಲಿ ಸ್ಥಾಪಿಸಲಾದ ಅತ್ಯಾಧುನಿಕ ಮುದ್ರಣಾಲಯಕ್ಕೆ ಸ್ಥಳಾಂತರಿಸಲಾಯಿತು. 1995ರಲ್ಲಿ ಪತ್ರಿಕೆಯು ವರ್ಣಮಯವಾಯಿತು. ದಕ್ಷಿಣ ಭಾರತದಲ್ಲಿ ಬಹುವರ್ಣ ಮುದ್ರಣ ಕಂಡ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡಿತು. 2013ರಲ್ಲಿ ಯೂನಿಕೋಡ್ ಫಾಂಟ್‌ಗಳನ್ನು ಅಳವಡಿಸಿಕೊಳ್ಳಲಾಯಿತು.

ಪ್ರಜಾವಾಣಿಗೆ ಸದಾ ಓದುಗರೇ ಕೇಂದ್ರ ಬಿಂದು. ಜನರನ್ನು ತಲುಪುವುದಕ್ಕೆ ಬೇಕಾದ ಎಲ್ಲ ಪ್ರಯತ್ನಗಳನ್ನೂ ಪತ್ರಿಕೆ ಕಾಲಕಾಲಕ್ಕೆ ಮಾಡುತ್ತಲೇ ಬಂದಿದೆ. ನಾಡಿನ ಉದ್ದಗಲಕ್ಕೂ ಹೊಸ ಹೊಸ ಆವೃತ್ತಿಗಳ ಆರಂಭವೂ ಅಂತಹ ಪ್ರಯತ್ನಗಳಲ್ಲಿ ಒಂದು. 1989ರಲ್ಲಿ ಹುಬ್ಬಳ್ಳಿಯಿಂದಲೂ ಮುದ್ರಣ ಆರಂಭಿಸಲಾಯಿತು. ಈಗ, ಮಂಗಳೂರು, ಮೈಸೂರು, ಹೊಸಪೇಟೆ, ದಾವಣಗೆರೆ ಮತ್ತು ಕಲಬುರಗಿಗಳಲ್ಲಿ ಪತ್ರಿಕೆ ಮುದ್ರಣವಾಗುತ್ತಿದೆ. ಪತ್ರಿಕೆಗೆ ಈಗ ಒಟ್ಟು 32 ಆವೃತ್ತಿಗಳಿವೆ.


ಸ್ಪಂದನೆ

ಕನ್ನಡ ನಾಡಿನ ಜನರ ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಬದುಕಿನಲ್ಲಿ ಪ್ರಜಾವಾಣಿಯದ್ದು ಅಚ್ಚಳಿಯದ ಗುರುತು. ಕಾಲಕಾಲಕ್ಕೆ ಆದ ಎಲ್ಲ ಬೆಳವಣಿಗೆಗಳಿಗೂ ಪತ್ರಿಕೆಯು ಸಕ್ರಿಯವಾಗಿ ಸ್ಪಂದಿಸಿದೆ. ಜನ ಚಳವಳಿಗಳನ್ನು ಬೆಂಬಲಿಸಿದೆ. ಪ್ರಜಾವಾಣಿಯ ಸಂಪಾದಕೀಯ ಪುಟದಲ್ಲಿ, ವಿವಿಧ ಪುರವಣಿಗಳಲ್ಲಿ ಸಾರ್ವಜನಿಕ ಸಂವಾದವು ಸದಾ ಇದ್ದೇ ಇದೆ. ಅದರ ಜತೆಗೆ, ಸಮಾಜಕ್ಕೆ ಅಗತ್ಯ ಎಂದು ಕಂಡ ಸಾಮಾಜಿಕ, ಸಾಂಸ್ಕೃತಿಕ ಮತ್ತು ಬೌದ್ಧಿಕ ಸಂವಾದಗಳನ್ನು ಪತ್ರಿಕೆಯೇ ಏರ್ಪಡಿಸಿದೆ. ರಾಜ್ಯದಲ್ಲಿ ಭಾರಿ ಚರ್ಚೆಗೆ ಕಾರಣವಾದ 'ದಲಿತ ಪ್ರಜ್ಞೆ'ಯ ಲೇಖನ ಸರಣಿ ಅವುಗಳಲ್ಲಿ ಒಂದು. 2012ರ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯ ದಿನ ಬಂದ ಪತ್ರಿಕೆ ಎಂದಿನಂತಿರಲಿಲ್ಲ. ಕನ್ನಡದ ಹೆಸರಾಂತ ಕತೆಗಾರ ದೇವನೂರ ಮಹಾದೇವ ಅವರು ಆ ಸಂಚಿಕೆಯ ಅತಿಥಿ ಸಂಪಾದಕರಾಗಿದ್ದರು. ಮುಂದಿನ ಹಲವು ವಾರಗಳ ಕಾಲ ದಲಿತ ಪ್ರಜ್ಞೆಯ ಲೇಖನಗಳು ಪ್ರಕಟವಾದವು. 'ಸಮಾನತೆಯ ಕನಸನ್ನು ಕಾಣುತ್ತ...' ಎಂಬ ಹೆಸರಿನಲ್ಲಿ ಇದು ಪುಸ್ತಕ ರೂಪದಲ್ಲಿಯೂ ಪ್ರಕಟವಾಗಿದೆ.

'ಜಾತಿ ಸಂವಾದ' ಎಂಬ ಸಾರ್ವಜನಿಕ ಚರ್ಚೆ ನಂತರ ನಡೆಯಿತು. 2012ರ ಡಿಸೆಂಬರ್‌ನಿಂದ 2013ರ ಮೇ 27ರವರೆಗೆ ಸತತ 26 ವಾರ ನಡೆದ ಈ ಚರ್ಚೆಗೆ ರಾಜ್ಯದ ಜನ ಸ್ಪಂದಿಸಿದ ರೀತಿ ಅಭೂತಪೂರ್ವವೇ ಆಗಿತ್ತು. ಈ ಸಂವಾದವೂ 'ಜಾತಿ ಸಂವಾದ' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. 2013ರ ಮೇ 24ರಿಂದ ನಡೆದದ್ದು 'ವಚನ ಸಾಹಿತ್ಯ ಸಂವಾದ'. ಸುಮಾರು ಎರಡೂವರೆ ತಿಂಗಳ ಕಾಲ 27 ಲೇಖನಗಳು ಪ್ರಕಟವಾಗಿದ್ದವು. ಇದನ್ನೂ ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಈ ಪುಸ್ತಕಗಳಲ್ಲದೆ ಇತರ ಹಲವು ಪುಸ್ತಕಗಳನ್ನೂ ಪ್ರಜಾವಾಣಿ ಪ್ರಕಾಶನವು ಪ್ರಕಟಿಸಿದೆ.

ಅತಿಥಿ ಸಂಪಾದಕತ್ವದ ಪರಂಪರೆ ಮುಂದುವರಿದಿದೆ. 2016ರ ಮಾರ್ಚ್ 8ರ ಮಹಿಳಾ ದಿನದ ಪತ್ರಿಕೆಯು ಖ್ಯಾತ ರಂಗಕರ್ಮಿ ಮತ್ತು ಗಾಯಕಿ ಬಿ. ಜಯಶ್ರೀ ಅವರ ಸಂಪಾದಕತ್ವದಲ್ಲಿ ಮೂಡಿಬಂದಿತ್ತು. ನೀರು ಸಂರಕ್ಷಣೆಯ ಬಗ್ಗೆ ಜನಜಾಗೃತಿ ಮೂಡಿಸುವುದಕ್ಕಾಗಿ 2017ರ ಮಾರ್ಚ್ 22ರ ವಿಶ್ವ ಜಲದಿನದಂದು ವಿಶೇಷ ಸಂಚಿಕೆ ಹೊರ ತರಲಾಗಿತ್ತು. ಖ್ಯಾತ ಪರಿಸರ ಹೋರಾಟಗಾರ ಶ್ರೀಪಡ್ರೆ ಅವರ ಅತಿಥಿ ಸಂಪಾದಕತ್ವದಲ್ಲಿ ಈ ಸಂಚಿಕೆ ಸಿದ್ಧಪಡಿಸಲಾಗಿತ್ತು. ಮುಂದೆ ಒಂದಿಡೀ ವರ್ಷ ನೀರು ಸಂರಕ್ಷಣೆಯ ಮಹತ್ವವನ್ನು ಸಾರುವ ಲೇಖನಗಳು ಪ್ರಜಾವಾಣಿಯಲ್ಲಿ ಪ್ರಕಟವಾದವು. 'ನೀರ ನೆಮ್ಮದಿಯ ನಾಳೆ' ಎಂಬುದು ಈ ಲೇಖನ ಸರಣಿಯ ಶೀರ್ಷಿಕೆಯಾಗಿತ್ತು.

ಹೊಸ ಹೊಸ ತಂತ್ರಜ್ಞಾನಗಳು ಅಭಿವೃದ್ಧಿಯಾದಂತೆಲ್ಲಾ ಅದನ್ನು ಅಳವಡಿಸಿಕೊಳ್ಳುವಲ್ಲಿ ಪ್ರಜಾವಾಣಿ ಪತ್ರಿಕೆಯು ಮುಂಚೂಣಿಯಲ್ಲಿಯೇ ಇದೆ. ಪತ್ರಿಕೆಯ ವಿನ್ಯಾಸವು ಕಾಲಕಾಲಕ್ಕೆ ಬದಲಾಗುತ್ತಲೇ ಬಂದಿದೆ. ಮುದ್ರಣ ಮತ್ತು ವಿನ್ಯಾಸಕ್ಕಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನೂ ಪಡೆದುಕೊಂಡಿದೆ. ಬದಲಾದ ವಿನ್ಯಾಸದ ಕೆಲವು ಮಾದರಿಗಳು ಇಲ್ಲಿವೆ



ಸಾಹಿತ್ಯ ಸೇತು

ಪ್ರಜಾವಾಣಿ ಮತ್ತು ಕನ್ನಡ ಸಾಹಿತ್ಯ ಲೋಕಕ್ಕೆ ಬಿಡಲಾರದ ನಂಟಿದೆ. ಪ್ರತಿ ಭಾನುವಾರ ಪ್ರಕಟವಾಗುವ 'ಸಾಪ್ತಾಹಿಕ ಪುರವಣಿ'ಯನ್ನು (ಈಗ ಅದು ಭಾನುವಾರದ ಪುರವಣಿ) ಕನ್ನಡ ಸಾಹಿತ್ಯ ಲೋಕವು ತೀರಾ ಗಂಭೀರವಾಗಿಯೇ ಪರಿಗಣಿಸುತ್ತದೆ. 1957ರಲ್ಲಿ ಆರಂಭವಾದ ದೀಪಾವಳಿ ವಿಶೇಷಾಂಕ ಇಂದಿನವರೆಗೂ ನಿರಂತರವಾಗಿ ನಡೆದುಕೊಂಡು ಬಂದಿದೆ. ದೀಪಾವಳಿ ಕಥಾಸ್ಪರ್ಧೆಯನ್ನು ಕನ್ನಡ ಸಾಹಿತ್ಯ ಜಗತ್ತು ಕಾಯ್ದು ನೋಡುತ್ತಿರುತ್ತದೆ. ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಕನ್ನಡ ಸಾಹಿತ್ಯ ಲೋಕದಲ್ಲಿ ಎತ್ತರದ ಸ್ಥಾನಕ್ಕೆ ಏರಿದ್ದಾರೆ. ಸಾಹಿತ್ಯಕ್ಕೇ ಮೀಸಲಾದ 'ದೇಶಕಾಲ ಸಾಹಿತ್ಯ ಪುರವಣಿ'ಯು ಕೆಲಕಾಲವಷ್ಟೇ ಪ್ರಕಟವಾದರೂ ಅದು ಮೂಡಿಸಿದ ಛಾಪು ದೊಡ್ಡದೇ.

ಸಂಕಷ್ಟಗಳಿಗೆ ಸಹಾಯಹಸ್ತ

ದೇಶದ ಮತ್ತು ನಾಡಿನ ಜನರ ಕಷ್ಟಕೋಟಲೆಗಳಿಗೆ ಪ್ರಜಾವಾಣಿ ಸದಾ ಸ್ಪಂದಿಸುತ್ತಲೇ ಬಂದಿದೆ. ಯುದ್ಧದಂತಹ ಮಾನವಕೃತ ವಿಕೋಪಗಳು, ನೆರೆ–ಭೂಕಂಪದಂತಹ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಸಂತ್ರಸ್ತರ ನೆರವಿಗಾಗಿ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಸ್ಪಂದಿಸಿದೆ. 1962ರ ಭಾರತ–ಚೀನಾ ಯುದ್ಧದ ಸಂದರ್ಭದಲ್ಲಿ ಸೈನಿಕರ ಪರಿಹಾರ ನಿಧಿಗಾಗಿ ಪ್ರಜಾವಾಣಿ ದೇಣಿಗೆ ಸಂಗ್ರಹಿಸಿತ್ತು. ಓದುಗರಿಂದ ₹2,75,101 ಮೊತ್ತ ಮತ್ತು ಚಿನ್ನಾಭರಣಗಳನ್ನು ಸಂಗ್ರಹಿಸಿತ್ತು. ಅಂದಿನ ಪ್ರಧಾನಿ ಜವಾಹರ ಲಾಲ್ ನೆಹರೂ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ, ಈ ದೇಣಿಗೆಯ ಚೆಕ್ ಅನ್ನು ನೀಡಲಾಗಿತ್ತು.

2001ರಲ್ಲಿ ಗುಜರಾತ್ ರಾಜ್ಯದ ಕಛ್ ಪ್ರದೇಶದ ಭುಜ್ ಭೂಕಂಪ, 2008ರಲ್ಲಿ ಬಿಹಾರದ ಕೋಸಿ ನದಿ ಪ್ರವಾಹ ಸಂತ್ರಸ್ತರ ನೆರವಿಗೆ ಪ್ರಜಾವಾಣಿ ದೇಣಿಗೆ ಸಂಗ್ರಹಿಸಿತ್ತು. ಆ ದೇಣಿಗೆಯನ್ನು ಸರ್ಕಾರದ ಪರಿಹಾರ ನಿಧಿಗೆ ನೀಡಲಾಗಿತ್ತು. ಭಾರತ ಮಾತ್ರವಲ್ಲ, ನೆರೆ ದೇಶಗಳ ಸಂಕಷ್ಟಗಳಿಗೂ ಪ್ರಜಾವಾಣಿ ಮಿಡಿದಿದೆ. 2017ರಲ್ಲಿ ನೇಪಾಳದಲ್ಲಿ ಸಂಭವಿಸಿದ್ದ ಭೂಕಂಪದಲ್ಲಿ, ಇಡೀ ದೇಶವೇ ನಲುಗಿ ಹೋಗಿತ್ತು. ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ತಮ್ಮ ಓದುಗರಿಂದ ನೇಪಾಳ ಪರಿಹಾರ ನಿಧಿಗಾಗಿ ₹ 1ಕೋಟಿಗೂ ಹೆಚ್ಚು ಮೊತ್ತದ ದೇಣಿಗೆ ಸಂಗ್ರಹಿಸಿದ್ದವು. ಅದನ್ನು ಸರ್ಕಾರದ ಮೂಲಕ ನೇಪಾಳಕ್ಕೆ ಕೊಡಲಾಗಿತ್ತು.

2018ರಲ್ಲಿ ರಾಜ್ಯದ ಕೊಡಗು ಮತ್ತು ಕೇರಳದಲ್ಲಿ ಸುರಿದ ವಿಪರೀತ ಮಳೆಯು, ಜನಜೀವನವನ್ನು ಅಸ್ತವ್ಯಸ್ತವಾಗಿಸಿತ್ತು. ಆ ಜನರ ನೆರವಿಗಾಗಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳು ತಮ್ಮ ಓದುಗರಿಂದ ಒಟ್ಟು ₹1.86 ಕೋಟಿಯಷ್ಟು ದೇಣಿಗೆ ಸಂಗ್ರಹಿಸಿ, ಕರ್ನಾಟಕ ಮತ್ತು ಕೇರಳ ಸರ್ಕಾರಕ್ಕೆ ನೀಡಲಾಗಿತ್ತು.

ಇಡೀ ಜಗತ್ತನ್ನೇ ಹೈರಾಣು ಮಾಡಿದ್ದ ಕೋವಿಡ್, ರಾಜ್ಯದ ಜನರಲ್ಲೂ ಹಲವರನ್ನು ಸಂಕಷ್ಟಕ್ಕೆ ದೂಡಿತ್ತು. ಅಂತಹ ಜನರಿಗೆ ನೆರವು ನೀಡುವ ಉದ್ದೇಶದಿಂದ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ವತಿಯಿಂದ ಕೋವಿಡ್–19 ಪರಿಹಾರ ನಿಧಿ ಸ್ಥಾಪಿಸಲಾಗಿತ್ತು. ಓದುಗರಿಂದ ಈ ನಿಧಿಗೆ ದೇಣಿಗೆ ಸಂಗ್ರಹಿಸಲಾಗಿತ್ತು. ಕೋವಿಡ್ ಸಂತ್ರಸ್ತರ ನೆರವಿಗೆ ಶ್ರಮಿಸುತ್ತಿದ್ದ ಸ್ವಯಂ ಸೇವಾ ಸಂಸ್ಥೆಗಳಿಗೆ ಈ ದೇಣಿಗೆಯನ್ನು ನೀಡಲಾಗಿತ್ತು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಪತ್ರಿಕೆ ವತಿಯಿಂದ ಆರ್ಥಿಕ ನೆರವು ನೀಡಲು ಓದುಗರಿಂದ ದೇಣಿಗೆ ಸಂಗ್ರಹಿಸಲಾಗುತ್ತದೆ. ಅದನ್ನು ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ವತಿಯಿಂದ ವಿದ್ಯಾರ್ಥಿಗಳಿಗಾಗಿ ಕ್ವಿಜ್ ಕಾರ್ಯಕ್ರಮ ನಡೆಸುತ್ತಾ ಬರಲಾಗಿದೆ.

ಆಧಾರ: ಹೇಮದಳ ರಾಮದಾಸ್ ಸಂಪಾದಿಸಿರುವ 'ಹೃದಯವಂತ' ಕೃತಿ, ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾದ ಗೌತಮ್ ಮಾಚಯ್ಯ ಅವರ **#70yearofDH: The Story**

ಕಾಲದ ಜೊತೆಗೆ ನಡಿಗೆ
ಡಿಜಿಟಲ್ ಲೋಕ


1998ರ ಫೆಬ್ರವರಿ 27ರಂದು prajavani.net ಜಾಲತಾಣದ ಮೂಲಕ ಪ್ರಜಾವಾಣಿಯು ಡಿಜಿಟಲ್ ಜಗತ್ತಿಗೆ ಕಾಲಿರಿಸಿತು. ಸಮಕಾಲೀನತೆಗೆ ಸ್ಪಂದಿಸಿ ರೂಪಾಂತರಗೊಳ್ಳುತ್ತಾ, ಹೊಸ ವಿನ್ಯಾಸಗಳಿಗೆ ಬದಲಾಗುತ್ತಾ 2020ರಿಂದೀಚೆಗೆ ಆ್ಯಪ್ ಮೂಲಕವೂ ವಿಶ್ವಾಸಾರ್ಹ ಸುದ್ದಿ ಮಾಹಿತಿಯನ್ನು ಓದುಗರಿಗೆ ತಲುಪಿಸುತ್ತಿದೆ. ಡಿಜಿಟಲ್ ಲೋಕದಲ್ಲಿ ಪ್ರಜಾವಾಣಿಯ ಹೆಜ್ಜೆ ಗುರುತುಗಳು ಹೀಗಿವೆ:

- **ಫೇಸ್‌ಬುಕ್ ಪುಟ (@Prajavani.net): *2011*** ಮಾರ್ಚ್ 8ರಂದು ಆರಂಭ | ಪ್ರಸ್ತುತ ***11*** ಲಕ್ಷಕ್ಕೂ ಹೆಚ್ಚು ಫಾಲೋವರ್‌ಗಳು
- **ಟ್ವಿಟರ್ ಖಾತೆ (@Prajavani): *2010*** ಅಕ್ಟೋಬರ್‌ನಲ್ಲಿ ಆರಂಭ | ***2.34*** ಲಕ್ಷ ಫಾಲೋವರ್‌ಗಳು
- **ಯೂಟ್ಯೂಬ್ ಚಾನೆಲ್ (@Prajavani):** ***2011***ರ ಮಾರ್ಚ್ 09ರಂದು ಆರಂಭ | ***1.46*** ಲಕ್ಷ ಚಂದಾದಾರರು
- **ಇನ್‌ಸ್ಟಾಗ್ರಾಂ ಖಾತೆ (@Prajavani): *2016*** ಫೆಬ್ರವರಿ ತಿಂಗಳಲ್ಲಿ ಆರಂಭ | ***58*** ಸಾವಿರ ಫಾಲೋವರ್‌ಗಳು
- **ಕನ್ನಡ ಧ್ವನಿ ಹೆಸರಿನಲ್ಲಿ ಪಾಡ್‌ಕಾಸ್ಟ್ ಚಾನೆಲ್:** ***2020***ರ ಮೇ ***07***ರಂದು ಆರಂಭ | ಇದುವರೆಗೆ ***10*** ಲಕ್ಷಕ್ಕೂ ಹೆಚ್ಚು ಕೇಳುಗರು
- ಪತ್ರಿಕಾಲೋಕದ ಇತಿಹಾಸದಲ್ಲಿ ಫೇಸ್‌ಬುಕ್‌ನಲ್ಲಿ ಮೊದಲ ಬಾರಿಗೆ ರಾಜಕೀಯ ಚರ್ಚಾ ಸರಣಿ ಪ್ರಜಾಮತ, ಬರೆಯದ ಕಥೆಗಳು, ಮಿಸಳ್ ಹಾಪ್ಚಾ, ಕ್ಯಾಚ್ ಇಟ್ ಕ್ರೀಡಾ ಕಥೆಗಳು, ಸಿನಿ ಸಿಪ್, ರಾಜಕೀಯ ರಸಪ್ರಸಂಗ, ಕರುನಾಡ ಸವಿಯೂಟ, ಗ್ರಾಮಾರೋಗ್ಯ, ಜಸ್ಟ್ ಮ್ಯೂಸಿಕ್, ಗ್ರೀನ್ ಟಾಕ್, ಸೌಹಾರ್ದ ಕರ್ನಾಟಕ ಮುಂತಾದ ವಿಡಿಯೊ ಸರಣಿಗಳು ಜನಪ್ರಿಯ.
- ಪತ್ರಿಕೆಯಂತೆಯೇ ಆನ್‌ಲೈನ್‌ನಲ್ಲಿ ಓದಲು ಇ-ಪೇಪರ್
- ಕೊರೊನಾ ಕಾಲದಲ್ಲಿ ಲೈಫ್ ಡೌನ್ ಕಥೆಗಳು ಸರಣಿಯ ಮೂಲಕ ಜನರ ಸಂಕಷ್ಟವನ್ನು ಆಡಳಿತಾರೂಢರ ಮುಂದಿಡುವ ವಿನೂತನ ಪ್ರಯತ್ನ
- ಕೊರೊನಾ ಕಾಲದಲ್ಲಿ ಮನರಂಜನಾ ಕಾರ್ಯಕ್ರಮಗಳ ಆಯೋಜನೆ, ನೇರ ಪ್ರಸಾರ
- 2020ರಲ್ಲಿ ಪ್ರಜಾವಾಣಿ ಓದುಗರಿಗೆ ಸುದ್ದಿಯನ್ನು ವೇಗವಾಗಿ ತಲುಪಿಸಲು ಆಂಡ್ರಾಯ್ಡ್ ಮತ್ತು ಆ್ಯಪಲ್ ಫೋನ್‌ಗಳಿಗಾಗಿ ಆ್ಯಪ್
- 2021ರಲ್ಲಿ ಯುವ ಜನಾಂಗದ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾಹಿತಿ ಉದ್ದೇಶದ ಮಾಸ್ಟರ್‌ಮೈಂಡ್ ಇ-ಪೇಪರ್ ಪ್ರಾರಂಭ.

ಕನ್ನಡ ಧ್ವನಿ ಪಾಡ್‌ಕಾಸ್ಟ್

ಕನ್ನಡ ಪತ್ರಿಕಾ ಲೋಕದಲ್ಲೇ ಮೊದಲ ಬಾರಿಗೆ ಪಾಡ್‌ಕಾಸ್ಟ್ ಮೂಲಕ ಜನರನ್ನು ತಲುಪಿದ ಮಾಧ್ಯಮ ಎಂಬ ಹೆಗ್ಗಳಿಕೆ ಪ್ರಜಾವಾಣಿಯದ್ದು. ಕೊರೊನಾ ಕಾಲದಲ್ಲಿಯೇ ಈ ಪ್ರಯೋಗಕ್ಕೆ ಚಾಲನೆ ದೊರೆತು 2020ರ ಮೇ ತಿಂಗಳಲ್ಲಿ ಕನ್ನಡ ಧ್ವನಿ ಹೆಸರಿನಲ್ಲಿ ಪ್ರಾರಂಭವಾದ ಪಾಡ್‌ಕಾಸ್ಟ್ ಚಾನೆಲ್‌ನಲ್ಲಿ ಸುದ್ದಿ ಬುಲೆಟಿನ್, ಆರೋಗ್ಯ, ಸಿನಿಮಾ, ಸಂವಾದ, ಪ್ರಚಲಿತ, ವಚನವಾಣಿ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ಮೂಡಿಬಂದಿವೆ. ಇದುವರೆಗೆ 10 ಲಕ್ಷಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಓದುಗರು ಆಲಿಸಿರುವುದು ಕನ್ನಡ ಪತ್ರಿಕಾ ಲೋಕದಲ್ಲಿ ಅನನ್ಯ ಸಾಧನೆ.






ಮಹಾತ್ಮ ಗಾಂಧಿ ರಸ್ತೆಯಲ್ಲಿನ ಕಚೇರಿಯಲ್ಲಿ ಮೊಳೆ ಜೋಡಿಸುವ ಕೆಲಸದಲ್ಲಿ ನಿರತರಾಗಿದ್ದ ನೌಕರರು (ಎಡಚಿತ್ರ) 1969ರಲ್ಲಿ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿದ್ದ ಕಚೇರಿಯಲ್ಲಿ 'ಲೆಟರ್ ಪ್ರೆಸ್ ರೋಟರಿ ಪ್ರಿಂಟಿಂಗ್' ಯಂತ್ರಗಳಲ್ಲಿ ಪತ್ರಿಕೆಗಳನ್ನು ಮುದ್ರಿಸಲಾಗುತ್ತಿತ್ತು –ಚಿತ್ರಗಳು: ಪ್ರಜಾವಾಣಿ ಆರ್ಕೈವ್

ಪದಬಂಧ 5109

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ರಣಧೀರ ಕಾಳಗ ನಡೆಸಿದ ಜಾಗ (4)
5.ಯಜಮಾನನ ಸ್ವಭಾವ (4)
6.ದಾರಿಯಲ್ಲಿ ನಡೆದು ಹೋಗುತ್ತಿರುವವನು (4)
8.ಕಳ್ಳನ ಬಗ್ಗೆ ಇಷ್ಟು ಆಸಕ್ತಿಯೇ? (4)
11. ಜೇನುನೊಣ ಹೀರುತ್ತಿರುವ ಹೂವಿನ ಸಿಹಿರಸ (4)
13.ಸವಿಯಾದ ವಿವರಗಳನ್ನೊಳಗೊಂಡಿದ್ದು! (4)
15.ಪ್ರಯಾಣದ ನಡುವೆ ಕರವಿಟ್ಟ ಘಟನೆ (4)
16.ನಡುವೆ ಗರ ತಿರುಗಿಸಿದರೆ ಅಧೀನ (4)

ಮೇಲಿಂದ ಕೆಳಕ್ಕೆ
1.ಇದು ನಡುಮನೆ (3)
2.ನಡುವಿರುವ ಮಾಣಿ ಬಲು ನಂಬಿಕಸ್ತ (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠಕಬ್ಬು (4)
4.ಗಣಕ್ಕೆಲ್ಲಾ ಗಣಿತ ಕಲಿಸಿದ ಕರಣಿಕ (3)
7.ಹೇಳಿಕೆಯಿಂದಲೇ ಮಾಡಿದ ಸಾಮ್ಯ! (3)
9.ಕಳ್ಳನಿಗೆ ದೋಷ ಅಂಟಿಕೊಂಡಿದೆಯಲ್ಲ (3)
10. ಕೊಡದಂತಹ ದೊಡ್ಡ ಪಾತ್ರೆ (3)
11.ಮರದ ಕೆಳಗೆ ಸಿಕ್ಕಿರುವ ಪಚ್ಚೆ (4)
12.ಕಸರತ್ತು ಮಾಡಿ ಹಾಕಿದ ಸಹಿ (4)
13.ಸರಿಗೆ ತಂದವ ಸರಿಸಮನಾದವನು (3)
14.ಪರಿಣಯಕ್ಕೆ ತಿರುಗಿದ ಪ್ರೀತಿ (3)



5108ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲಾಯನ 3.ವರ್ಣಮಾಲೆ
5.ಕಕವ 7.ಸಮಗಾರ
9.ಶೋಕ 10.ಕ್ಷಭ
11.ರವಿಚಂದ್ರ 13.ಭವನ
17.ದಿಗಂಬರ 18.ಹಸುಗೂಸು

ಮೇಲಿಂದ ಕೆಳಕ್ಕೆ:
1.ಪದಕ 2.ನನ್ನಿ
3.ವನಸುಮ 4.ಲೆಕ್ಕ
6.ಕನಿಕರ 7.ಸಮುದ್ರ
8.ರಕ್ತಸ್ರಾವ 12.ಚಂದಾದಾರ
14.ನನಸು 15.ಹಾದಿ
16.ದೇಹ

ಸುಡೊಕು 5495

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

5494 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಷಷ್ಠಿ ಅಹೋರಾತ್ರ **ನಕ್ಷತ್ರ:** ಮೃಗಶಿರ ಗಂ. 23-22 **ಯೋಗ:** ವರಿಯಾನ್ ಗಂ. 14-24, **ಕರಣ:** ಗರಜೆ ಗಂ. 17-56, ಕನ್ಯಾ ಮಾಸದ 28 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10:30
ಸೂರ್ಯೋದಯ : 06-24 **ಸೂರ್ಯಾಸ್ತ :** 06-08
ಮುಸ್ಲಿಂ ದಿನಾಂಕ : 18 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 3, 11

ಮೇಷ: ಬಂಧುಗಳ ನೆರವಿನಿಂದ ಬರಬೇಕಿದ್ದ ಹಳೆಯ ಬಾಕಿ ಹಣ ನಿಮ್ಮ ಕೈ ಸೇರಲಿದೆ. ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯವಾಗಬೇಕಾಗುವುದು. ಕೃಷಿ ಕಾರ್ಯಗಳು ಈ ದಿನ ಬಿಡುವಿಲ್ಲದೆ ನಡೆಯಲಿದೆ.

ವೃಷಭ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು ಅಥವಾ ಅಭಿವೃದ್ಧಿಯಾಗುವುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನಗಳಿಸುವಲ್ಲಿ ಸಫಲರಾಗುವಿರಿ.

ಮಿಥುನ: ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಸಮಸ್ಯೆ ಪರಿಹಾರವಾಗುವುದು. ಪ್ರಭಾವಿ ವ್ಯಕ್ತಿಗಳ ಭೇಟಿ ಮಾಡುವ ಸಂದರ್ಭ ಬರಲಿದೆ. ಮಂಗಳಕಾರ್ಯಗಳಿಗೆ ಇಂದು ಸಕಾಲ.

ಕರ್ಕಾಟಕ: ಯಾವುದೇ ರೀತಿಯಲ್ಲಿ ಹಣಕಾಸಿನ ಕೊರತೆ ಇರುವುದಿಲ್ಲ. ಹೊಸ ಉದ್ಯಮ ಆರಂಭಿಸಲು ಬಂಡವಾಳ ಹೂಡಿಕೆ ಮಾಡಬಹುದು. ಆದರೆ ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗುವುದನ್ನು ಕಡಿಮೆ ಮಾಡಿ.

ಸಿಂಹ: ಸರ್ಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಆಫೀಸಿನ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪುನಃ ಪರಾಮರ್ಶಿಸಲೇಬೇಕಾದ ಸಮಯವಿದು.

ಕನ್ಯಾ: ಧಾರ್ಮಿಕ ಕಾರ್ಯಕ್ರಮಗಳಿಗೆ ಭೇಟಿ ನೀಡುವಿರಿ. ಆಹಾರ ಪದ್ಧತಿಯಲ್ಲಿಯೇ ರಕ್ತದೊತ್ತಡವನ್ನು ನಿಯಂತ್ರಿಸಿಕೊಳ್ಳುವ ಪ್ರಯತ್ನವಿರಲಿ. ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯ ಪಡೆದು ಮುಂದುವರಿಯುವಿರಿ.

ತುಲಾ: ಎಂಜಿನಿಯರಿಂಗ್ ಹಾಗೂ ಮೆಡಿಕಲ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮದ ಅಗತ್ಯವಿದೆ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗುವುದು. ಆಹಾರದ ವಿಚಾರದಲ್ಲಿ ದಾಕ್ಷಿಣ್ಯ ಪ್ರವೃತ್ತರಾಗಿ ಸಿಕ್ಕಿಕೊಳ್ಳಬೇಡಿ.

ವೃಶ್ಚಿಕ: ಹಿಂದೆ ನಡೆದುಹೋದಂತಹ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸುವುದು ಉತ್ತಮ. ಅನಿರೀಕ್ಷಿತ ಪ್ರಯಾಣದ ಸಂಭವವಿದೆ. ಮಕ್ಕಳಿಗೆ ವ್ಯವಹಾರ ಒಪ್ಪಿಸಿ ವಿಶ್ರಾಂತಿ ಜೀವನದಲ್ಲಿ ಇರಲು ಇಚ್ಛಿಸುವಿರಿ.

ಧನು: ನಿಮ್ಮ ಅನ್ವೇಷಣೆಯ ಸ್ವಭಾವವು ವೃತ್ತಿ ಬದುಕಿನಲ್ಲಿ ಹೊಸ ತಿರುವನ್ನು ತರಲಿದೆ. ನಿಮ್ಮ ಭಾವನೆಗಳ ಜೊತೆಗೆ ನಿಮ್ಮ ಅಭಿಪ್ರಾಯವು ಬದಲಾಗುವ ಕಾಲ ಹಾಗಾಗಿ ಯಾವುದೇ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ.

ಮಕರ: ವೈವಾಹಿಕ ವಿಚಾರದಲ್ಲಿ ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಜನರೊಂದಿಗೆ ಬೆರೆತು ಬಾಳುವ ಅಭ್ಯಾಸವನ್ನು ಮಾಡಿಕೊಳ್ಳಿರಿ.

ಕುಂಭ: ತಂದೆ ತಾಯಿಯ ಆರೋಗ್ಯವು ಉತ್ತಮವಾಗಿ ಸುಧಾರಿಸುವುದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ನಿಮ್ಮ ಗಮನ ಹರಿಯಲಿದೆ.

ಮೀನ: ನಿಮ್ಮ ದೊಡ್ಡ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಲು ಈ ದಿನ ಸೂಕ್ತ. ಜಯದ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಸಾಗುವಿರಿ. ಕ್ರಾಂತಿಕಾರಿ ಸ್ವಭಾವವು ಈ ದಿನ ಹೆಚ್ಚಿನ ಲಾಭವನ್ನು ತರಲಿದೆ.

ಅತಿವೃಷ್ಟಿ ಪರಿಹಾರ, ದುರಸ್ತಿಗೆ ₹ 191.50 ಕೋಟಿ ಬಿಡುಗಡೆ

ಬೆಂಗಳೂರು: ಅತಿವೃಷ್ಟಿ, ಪ್ರವಾಹದಿಂದಾದ ಹಾನಿಯ ದುರಸ್ತಿ ಹಾಗೂ ಪರಿಹಾರ ಧನ ವಿತರಿಸಲು ಸರ್ಕಾರ ₹191.50 ಕೋಟಿ ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರ ಹೊರಡಿಸಿದ ಪರಿಷ್ಕೃತ ಮಾರ್ಗಸೂಚಿ ಅನ್ವಯ 2021–22ನೇ ಸಾಲಿನ ರಾಜ್ಯ ವಿಪತ್ತು ಪರಿಹಾರ ನಿಧಿಯಲ್ಲಿ ₹ 124.50 ಕೋಟಿ, ಪ್ರವಾಹ ಪರಿಹಾರಗಳನ್ನು ಪರಿಷ್ಕೃತ ದರದಲ್ಲಿ ಪಾವತಿಸಲು ₹ 67 ಕೋಟಿ ನೀಡಲಾಗಿದೆ.

ಬೆಳಗಾವಿ ಜಿಲ್ಲೆಗೆ ಅತಿಹೆಚ್ಚು ಅಂದರೆ, ₹ 15 ಕೋಟಿ, ರಾಯಚೂರು ಜಿಲ್ಲೆಗೆ ಕಡಿಮೆ ಅಂದರೆ, ₹ 1.51 ಕೋಟಿ ಹಂಚಿಕೆ ಮಾಡಲಾಗಿದೆ.

ಕೇಂದ್ರದ ಪಾಲು ₹ 664 ಕೋಟಿ ಬಂದಿದೆ. ಮಾನವ, ಜಾನುವಾರುಗಳ ಜೀವಹಾನಿ, ಮೂಲ ಸೌಕರ್ಯಗಳ ಹಾನಿಗೆ ಈ ನೆರವು ಬಳಸಿಕೊಳ್ಳಲು ಕಂದಾಯ ಇಲಾಖೆ ಸೂಚಿಸಿದೆ.

ರಾಜ್ಯ ಅಲ್ಪಸಂಖ್ಯಾತ ಆಯೋಗದ ವರದಿ • ಸಿಖ್ಖರು, ಶ್ವೇತಾಂಬರರನ್ನು ಹಿಂದುಳಿದ ಪಟ್ಟಿಗೆ ಸೇರಿಸಿ

ಜೈನ ಧರ್ಮಕ್ಕೆ ಪ್ರತ್ಯೇಕ ನಿಗಮ: ಶಿಫಾರಸು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಜೈನರಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ, ವಿಧಾನ ಪರಿಷತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ನಾಮನಿರ್ದೇಶನದ ಮೂಲಕ ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯ, ಶಾಲಾ ಪಠ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಧಾರ್ಮಿಕ ವಿಚಾರಗಳನ್ನೂ ಸೇರಿಸುವುದು ಸೇರಿ ಹಲವು ಶಿಫಾರಸುಗಳನ್ನು ಒಳಗೊಂಡಿರುವ ವರದಿಯನ್ನು ರಾಜ್ಯ ಅಲ್ಪಸಂಖ್ಯಾತರ ಆಯೋಗ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

ಮೂರು ವರ್ಷಗಳ ತಮ್ಮ ಅಧಿಕಾರದ ಅವಧಿಯ ಕೊನೆಯ ದಿನವಾದ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವರದಿಯನ್ನು ಬಿಡುಗಡೆ ಮಾಡಿದ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ, 'ಆಯೋಗದ ಅಧ್ಯಕ್ಷನಾಗಿ ಸರ್ಕಾರದ ವಿವಿಧ ಇಲಾಖೆಗಳಿಗೆ 3,500 ಪತ್ರಗಳನ್ನು ಬರೆದಿದ್ದೇನೆ. ಈಗ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ವಿಸ್ತೃತವಾದ ವರದಿ ಸಲ್ಲಿಸಿದ್ದೇನೆ' ಎಂದರು.

ಸಿಖ್ಖರು ಮತ್ತು ಶ್ವೇತಾಂಬರರನ್ನು ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕು. ಶೈಕ್ಷಣಿಕ ಸಂಸ್ಥೆಗಳು ಅಥವಾ ಆಸ್ಪತ್ರೆ ಪ್ರಾರಂಭಿಸಲು ಆಸಕ್ತಿ ತೋರುವ ಅಲ್ಪಸಂಖ್ಯಾತರಿಗೆ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಜಮೀನು ಮಂಜೂರು ಮಾಡಬೇಕು. ಜೈನ ವೈಯಕ್ತಿಕ ಕಾನೂನಿನ ಅಡಿಯಲ್ಲಿ ಜೈನರಿಗೆ ಅವರ ಧಾರ್ಮಿಕ ಸ್ಥಳಗಳ ಆಡಳಿತ ನಿರ್ವಹಣೆ ಅಧಿಕಾರ ನೀಡಬೇಕು. ಅಲ್ಪಸಂಖ್ಯಾತ ಸಮುದಾಯಗಳ ಧಾರ್ಮಿಕ ಸ್ಥಳಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಮಂಜೂರು ಮಾಡಬೇಕೆಂಬ ಶಿಫಾರಸುಗಳು ವರದಿಯಲ್ಲಿವೆ ಎಂದು ವಿವರಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಈ ಹಿಂದೆ ಆರಂಭಿಸಿ, ಸ್ಥಗಿತಗೊಳಿಸಿರುವ ಎಲ್ಲ ಯೋಜನೆಗಳ ಪುನರಾರಂಭಕ್ಕೆ ಅಗತ್ಯ ಅನುದಾನ ಒದಗಿಸಬೇಕು. 2001ರ ಜನಗಣತಿ ಪ್ರಕಾರ, ರಾಜ್ಯದಲ್ಲಿ 4 ಲಕ್ಷದಷ್ಟಿದ್ದ ಬೌದ್ಧ ಧರ್ಮೀಯರ ಸಂಖ್ಯೆ 2011ರ ಜನಗಣತಿಯಲ್ಲಿ 75,000 ಎಂದು ಉಲ್ಲೇಖಿಸಲಾಗಿದೆ. ಈ ಕುರಿತು ಪರಿಶೀಲನೆಗೆ ಶಿಫಾರಸು ಮಾಡಲಾಗಿದೆ ಎಂದರು.

'ಮುಸ್ಲಿಮರ ಮೀಸಲಾತಿ ಹೆಚ್ಚಳ ಅಗತ್ಯ'



ಅಬ್ದುಲ್ ಅಜೀಂ

'ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹಿಂದಿನ ಜನಗಣತಿ ಆಧಾರದಲ್ಲಿ ಅಲ್ಪಸಂಖ್ಯಾತರಿಗೆ ಶೇ 5ರಷ್ಟು ಮೀಸಲಾತಿ ನೀಡಲಾಗಿತ್ತು. ಅದನ್ನು ಶೇ 6ಕ್ಕೆ ಹೆಚ್ಚಿಸುವ ಅಗತ್ಯವಿದೆ. ಈ ಬಗ್ಗೆ ಆಯೋಗ ಸರ್ಕಾರದ ಗಮನ ಸೆಳೆಯಲಿದೆ' ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ತಿಳಿಸಿದರು.

'ಅಲ್ಪಸಂಖ್ಯಾತರ ಮೀಸಲಾತಿ ಕಡಿತಕ್ಕೆ ಕೆಲವರು ಆಗ್ರಹಿಸಿರಬಹುದು. ಆದರೆ, ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಆ ಬಗ್ಗೆ ಈಗಲೇ ಏನನ್ನೂ ಹೇಳಲಾಗದು' ಎಂದರು.

'ಹಿಜಾಬ್ ವಿಚಾರದಲ್ಲಿ ಕೆಲವರ ಸ್ವಾರ್ಥದಿಂದ ವಿವಾದ ಸೃಷ್ಟಿಯಾಯಿತು. ಅದನ್ನು ತಿಳಿಗೊಳಿಸಲು ಆಯೋಗ ಪ್ರಯತ್ನಿಸಿತ್ತು. ಆದರೆ, ಕೆಲವರ ಚಿತಾವಣೆಯಿಂದ ವಿವಾದ ನ್ಯಾಯಾಲಯಕ್ಕೆ ತಲುಪಿತು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮತಾಂತರ ನಿಷೇಧ ಕಾಯ್ದೆ ಜಾರಿಯಲ್ಲಿದ್ದು, ಅದು ಎಲ್ಲರಿಗೂ ಅನ್ವಯವಾಗುತ್ತದೆ. ಕೇಂದ್ರ ಸರ್ಕಾರವು ಕಾನೂನಿನ ಪ್ರಕಾರ ಪಿಎಫ್ಐ ಸಂಘಟನೆಯನ್ನು ನಿಷೇಧಿಸಿದ್ದು, ಅದನ್ನು ಸ್ವಾಗತಿಸುತ್ತೇನೆ' ಎಂದರು.

ಪ್ರಮುಖ ಶಿಫಾರಸುಗಳು

- ಬೌದ್ಧ ಧರ್ಮೀಯರಿಗೆ ಜಾತಿ ಪ್ರಮಾಣಪತ್ರ ವಿತರಣೆಗೆ ಇರುವ ತೊಡಕು ನಿವಾರಿಸಬೇಕು.
- ಪಾರ್ಸಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು ಮೀಸಲಿಡುವುದನ್ನು ಪುನರಾರಂಭಿಸಬೇಕು.
- ರಾಮನಗರದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳನ್ನು ಸಕ್ರಮಗೊಳಿಸುವುದು.
- ಗುರುನಾನಕ್ ಜಯಂತಿ ಮತ್ತು ಬುದ್ಧ ಪೂರ್ಣಿಮೆಗೆ ಸರ್ಕಾರಿ ರಜೆ ಘೋಷಣೆ.
- ಅಲ್ಪಸಂಖ್ಯಾತರು ಸರ್ಕಾರಿ ಸೌಲಭ್ಯ ಪಡೆಯಲು ನಿಗದಿಪಡಿಸಿರುವ ಆರ್ಥಿಕ ಮಿತಿ ಸಡಿಲಿಕೆ.

ಸುದ್ದಿ 2 ನಿಮಿಷ

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಕಾರು ಅಡ್ಡಗಟ್ಟಿ ಬೆದರಿಕೆ

ಮಂಗಳೂರು: ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಕಾರನ್ನು ಬೆನ್ನಟ್ಟಿ ಮಾರಕಾಸ್ತ್ರ ತೋರಿಸಿ ಬೆದರಿಕೆ ಹಾಕಲಾಗಿದೆ ಎಂದು ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಂಗಳೂರಿನಿಂದ ಗುರುವಾರ ಮಂಗಳೂರಿಗೆ ಮರಳಿದ್ದೆ. ಬಳಿಕ ಸರ್ಕೀಟ್ ಹೌಸ್‌ಗೆ ತೆರಳಿ ಅಲ್ಲಿಂದ ಬೆಳ್ತಂಗಡಿಗೆ ಪ್ರಯಾಣಿಸಲು ರಾತ್ರಿ 10. 45ಕ್ಕೆ ಹೊರಟಿದ್ದೆವು. ನನ್ನ ಇನೋವಾ ಕಾರು ಹಾಗೂ ಸ್ನೇಹಿತರ ಹ್ಯುಂಡೈ ಐ 20 ಕಾರುಗಳಲ್ಲಿ ಒಟ್ಟೊಟ್ಟಿಗೆ ಹೊರಟಿದ್ದೆವು. ನನ್ನ ಇನ್ನೋವಾ ಕಾರಿನ ಬದಲು ಸ್ನೇಹಿತನ ಹ್ಯುಂಡೈ ಐ 20 ಕಾರಿನಲ್ಲಿ ನಾನಿದ್ದೆ. ಸ್ಕಾರ್ಪಿಯೊ ವಾಹನವೊಂದು ನಮ್ಮ ಕಾರುಗಳನ್ನು ಹಿಂಬಾಲಿಸಿತ್ತು' ಎಂದು ಶಾಸಕ ಹರೀಶ್ ಪೂಂಜ ತಿಳಿಸಿದರು.

ಸ್ಕಾರ್ಪಿಯೊ ವಾಹನ ಪತ್ತೆ–ಚಾಲಕ ವಶಕ್ಕೆ: 'ಶಾಸಕರ ಕಾರನ್ನು ಹಿಂಬಾಲಿಸಿ ಬೆದರಿಕೆ ಹಾಕಿದ ಪ್ರಕರಣದಲ್ಲಿ ಬಳಕೆ ಆಗಿದೆ ಎನ್ನಲಾದ ಸ್ಕಾರ್ಪಿಯೊ ವಾಹನವನ್ನು ಹಾಗೂ ಅದನ್ನು ಗುರುವಾರ ರಾತ್ರಿ ಚಲಾಯಿಸಿದ್ದ ನಗರದ ಫಳ್ನೀರ್‌ನ ರಿಯಾಜ್ (38)ನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ತಿಳಿಸಿದ್ದಾರೆ.



'ಮೇಲ್ನೋಟಕ್ಕೆ ಕಾರನ್ನು ಹಿಂದಿಕ್ಕುವ ವಿಚಾರದಲ್ಲಿ ಚಾಲಕರ ನಡುವೆ ಚಕಮಕಿ ನಡೆದಂತೆ ತೋರುತ್ತಿದ್ದು ತನಿಖೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ನ್ಯಾಯಾಧೀಶೆ ಕಡೆಗೆ ಶೂ ಎಸೆದ ವ್ಯಕ್ತಿ

ಚಿಕ್ಕಮಗಳೂರು: ಏಕಾಏಕಿ ಕೋರ್ಟ್ ಸಭಾಂಗಣಕ್ಕೆ ಶುಕ್ರವಾರ ನುಗ್ಗಿ ನ್ಯಾಯಾಧೀಶರ ಕಡೆಗೆ ಎರಡು ಬಾರಿ ಶೂ ಎಸೆದಿದ್ದ ಪಾನಮತ್ತ ವ್ಯಕ್ತಿಯೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಭಾಂಗಣದ ಬಳಿ ಇದ್ದವರು ಆರೋಪಿಯನ್ನು ಹಿಡಿದು ಥಳಿಸಿದ್ದಾರೆ. ಅರವಿಂದ ನಗರದ ನಿವಾಸಿ ವಾಹನ ಚಾಲಕ ಬಿ.ಎಸ್. ಲೋಕೇಶ್ ಕೃತ್ಯ ಎಸಗಿದ ಆರೋಪಿ. ಈ ಕುರಿತು ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

'ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ್ದಕ್ಕೆ ದಂಡ ವಿಧಿಸಿ ಕಿರುಕುಳ ನೀಡಿದ್ದಾರೆ, ತನಗೆ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿ ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ದೂರಿನಲ್ಲಿ ಏನಿದೆ?: 'ಮಧ್ಯಾಹ್ನ 3.30ರ ಹೊತ್ತಿನಲ್ಲಿ ಘಟನೆ ನಡೆದಿದೆ. ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಎನ್.ಚಾಂದಿನಿ ಅವರು ಕಲಾಪ ನಡೆಸುವಾಗ ಆರೋಪಿ ದಿಢೀರನೆ ನುಗ್ಗಿದ್ದಾನೆ. ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳಿ, ನ್ಯಾಯಾಧೀಶರ ಪೀಠದ ಕಡೆಗೆ ಎರಡು ಬಾರಿ ಶೂ ಎಸೆದಿದ್ದಾನೆ. ಒಂದು ಬೆಂಚ್ ಕ್ಲರ್ಕ್ ಮೇಜಿನ ಮೇಲೆ ಬಿದ್ದಿದೆ. ಇನ್ನೊಂದು ಪೀಠದ ಮುಂದಿನ ಗಾಜಿಗೆ ಬಡಿದು ಕೆಳಕ್ಕೆ ಬಿದ್ದಿದೆ. ಕರ್ತವ್ಯಕ್ಕೆ ಅಡ್ಡಿಪಡಿಸಿ, ಕೋರ್ಟ್ ಗೌರವಕ್ಕೆ ಚ್ಯುತಿ ತಂದಿರುವ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಕೋರಲಾಗಿದೆ.



ಪ್ರಜಾವಾಣಿ ದೀಪಾವಳಿ ವಿಶೇಷಾಂಕ ಬಿಡುಗಡೆ

ಪ್ರಜಾವಾಣಿ ದೀಪಾವಳಿ ವಿಶೇಷಾಂಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. 'ಪ್ರಜಾವಾಣಿ', ಡೆಕ್ಕನ್ ಹೆರಾಲ್ಡ್‌ನ ಜಾಹೀರಾತು ವಿಭಾಗದ ಸಹಾಯಕ ವ್ಯವಸ್ಥಾಪಕಿ ರಂಜಿತಾ ವಿ.ಪಿ. ಮತ್ತು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಚಿತ್ರದಲ್ಲಿದ್ದಾರೆ.

ಮೀಸಲಾತಿ ಹೆಚ್ಚಳ: ಸುಗ್ರೀವಾಜ್ಞೆ ಮೂಲಕ ಜಾರಿಗೆ ಸಲಹೆ

ಒಂದನೇ ಪುಟದಿಂದ...

ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ವರದಿ ನೀಡಿದ್ದ ಆಯೋಗದ ಮುಖ್ಯಸ್ಥರಾಗಿದ್ದ ನಾಗಮೋಹನ ದಾಸ್ ಅವರೊಂದಿಗೆ ಮುಖ್ಯಮಂತ್ರಿಯವರು ಶುಕ್ರವಾರ ಚರ್ಚೆ ನಡೆಸಿ, ಸಲಹೆ ಪಡೆದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

'ಸರ್ಕಾರಿ ಆದೇಶದ ಮೂಲಕ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯದಲ್ಲಿ ಹಿನ್ನಡೆಯಾಗಬಹುದು. ಮಸೂದೆ ರೂಪಿಸಿ, ಸಂಪುಟ ಸಭೆಯ ಒಪ್ಪಿಗೆ ಪಡೆಯಬೇಕು. ಬಳಿಕ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಬೇಕು. ಆರು ತಿಂಗಳೊಳಗೆ ತಿದ್ದುಪಡಿ ಮಸೂದೆಗೆ ವಿಧಾನಮಂಡಲದ ಒಪ್ಪಿಗೆ ಪಡೆಯಬೇಕು. ನಂತರ ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂಬ ಸಲಹೆಯನ್ನು ನಾಗಮೋಹನ ದಾಸ್ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ತಿದ್ದುಪಡಿ ಮಸೂದೆಯ ಕರಡನ್ನು ತಕ್ಷಣವೇ ಸಿದ್ಧಪಡಿಸುವಂತೆ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಗುರುವಾರ ನಡೆಯುವ ಸಂಪುಟ ಸಭೆಯಲ್ಲೇ ತಿದ್ದುಪಡಿ ಮಸೂದೆಗೆ ಸಂಪುಟದ ಒಪ್ಪಿಗೆ ಪಡೆದು, ಸುಗ್ರೀವಾಜ್ಞೆಯನ್ನು ಜಾರಿಗೊಳಿಸಲು ರಾಜ್ಯಪಾಲರ ಅನುಮತಿ ಕೋರಲು ಬೊಮ್ಮಾಯಿ ನಿರ್ಧರಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಅತ್ಯಾಚಾರ ಯತ್ನ; ಬಿಜೆಪಿ ಮುಖಂಡನ ವಿರುದ್ಧ ಪ್ರಕರಣ ದಾಖಲು

ಪಿರಿಯಾಪಟ್ಟಣ: ಮಹಿಳೆಯೊಬ್ಬರ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದ ಮೇಲೆ ಬಿಜೆಪಿ ಮುಖಂಡ ನೇರಳೆಕುಪ್ಪೆ ನವೀನ್ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

'ಮಹಿಳೆಯ ದೂರದ ಸಂಬಂಧಿಯಾಗಿರುವ ಆರೋಪಿಯು, ಆಕೆಯ ಪತಿಗೆ ಅವರ ಮನೆಯಲ್ಲೇ ಮದ್ಯಪಾನ ಮಾಡಿಸಿ, ಆತ ಎಚ್ಚರ ತಪ್ಪಿದ ನಂತರ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಯು ಸಂಬಂಧಿಯಾಗಿರುವುದರಿಂದ ಸಂಧಾನ ಮಾಡೋಣ ಎಂದು ಪತ್ನಿಯನ್ನು ಪತಿ ಸಮಾಧಾನಪಡಿಸಿದ್ದರು. 'ಯಾವುದೇ ಕ್ರಮ ಆಗದಿದ್ದರಿಂದ ಶುಕ್ರವಾರ ತಡವಾಗಿ ದೂರು ನೀಡುತ್ತಿದ್ದೇವೆ' ಎಂದಿದ್ದಾರೆ.



ಆಳ್ವಾಸ್ ಪ್ರಗತಿ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ ಅಭ್ಯರ್ಥಿಗಳು

ಉದ್ಯೋಗ ಮೇಳ: 5,818 ಅಭ್ಯರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ 12ನೇ ಆವೃತ್ತಿಯ ಆಳ್ವಾಸ್ ಪ್ರಗತಿ ಬೃಹತ್ ಎರಡು ದಿನಗಳ ಉದ್ಯೋಗ ಮೇಳಕ್ಕೆ ವಿದ್ಯಾಗಿರಿಯ ಶ್ರೀಮತಿ ಸುಂದರಿ ಆನಂದ ಆಳ್ವ ಕ್ಯಾಂಪಸ್‌ನಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ಈ ಬಾರಿಯ ಆಳ್ವಾಸ್ ಪ್ರಗತಿಯಲ್ಲಿ 12 ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ಅವಕಾಶವಿದ್ದು, 216 ಕಂಪನಿಗಳು ನೇಮಕಾತಿ ನಡೆಸುತ್ತಿವೆ.

ಶುಕ್ರವಾರದ ವರೆಗೆ 8,248 ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. 792 ಅಭ್ಯರ್ಥಿಗಳು ಸ್ಥಳದಲ್ಲೇ ನೋಂದಣಿ ಮಾಡಿಸಿಕೊಂಡರು. ಮೊದಲ ದಿನ ಒಟ್ಟು 5,818 ಉದ್ಯೋಗಾಕಾಂಕ್ಷಿಗಳು ಹಾಜರಾಗಿದ್ದರು. ಮೇಳ ಶನಿವಾರವೂ ನಡೆಯಲಿದೆ.

ಪ್ರಸ್ತಾವಿಕವಾಗಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ, 'ದೇಶದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಸಾಕಷ್ಟು ಅವಕಾಶಗಳಿದ್ದರೂ, ಕೆಲಸ ಹುಡುಕುವ ಹಾಗೂ ಸಂದರ್ಶನ ಎದುರಿಸುವ ಛಲ ಹೆಚ್ಚಾಗಬೇಕಾಗಿದೆ. ಆಳ್ವಾಸ್ ಪ್ರಗತಿಯಂತಹ ಉದ್ಯೋಗ ಮೇಳ ಏಕಕಾಲಕ್ಕೆ ನೂರಾರು ಕಂಪನಿಗಳನ್ನು ಒಂದೇ ಕಡೆ ಸೇರಿಸಿ, ಅಭ್ಯರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಕೆಲಸ ಮಾಡುತ್ತಿದೆ' ಎಂದರು.

ಮಳೆ: ಕೊಚ್ಚಿಹೋದ ಇಬ್ಬರು

95 ಮನೆಗಳಿಗೆ ಹಾನಿ • ಜಮೀನುಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಜಯನಗರ, ಧಾರವಾಡ, ವಿಜಯಪುರ, ಕಲಬುರಗಿ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಗಿದೆ.

ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಹಲವೆಡೆ ಗುರುವಾರ ರಾತ್ರಿ ಧಾರಾಕಾರ ಮಳೆ ಸುರಿದಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಜಮೀನುಗಳಿಗೆ, ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ. ರಸ್ತೆ, ಸೇತುವೆಗಳು ಮುಳುಗಿವೆ.

ಗೌರಿಬಿದನೂರು ತಾಲ್ಲೂಕಿನ ದಿನ್ನೆಹುಣಸೇನಹಳ್ಳಿ ಬಳಿಯ ಮೇಳ್ಯ ಕೆರೆ ಕೋಡಿ ನೀರಿನಲ್ಲಿ ಮಂಜುನಾಥ್ (38) ಎಂಬ ಯುವಕ ಗುರುವಾರ ಕೊಚ್ಚಿ ಹೋಗಿದ್ದು ಇದುವರೆಗೂ ಪತ್ತೆಯಾಗಿಲ್ಲ. ಮಂಡ್ಯ ತಾಲ್ಲೂಕಿನ ಹೊಡಾಘಟ್ಟ ಕೆರೆ ತುಂಬಿ ಕೋಡಿ ಹರಿದಿದ್ದು, ಶಿವಾರ ಗ್ರಾಮದ ಪುಟ್ಟಸ್ವಾಮಿ (65) ಎಂಬುವವರು ನೀರಿನಲ್ಲಿ ಶುಕ್ರವಾರ ಕೊಚ್ಚಿ ಹೋಗಿದ್ದಾರೆ.

ಗುರುವಾರ ರಾತ್ರಿ ಸುರಿದ ಮಳೆಗೆ ವಿಜಯನಗರ ಜಿಲ್ಲೆಯಲ್ಲಿ 61 ಮನೆಗಳು, 70 ಹೆಕ್ಟೇರ್ ಶೇಂಗಾ, ಮೆಕ್ಕೆಜೋಳ ಬೆಳೆ ಹಾನಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ 34 ಮನೆಗಳಿಗೆ ಹಾನಿಯಾಗಿದೆ. ಚಾಮರಾಜನಗರದ 15ನೇ ವಾರ್ಡ್‌ನ ಸೋಮಣ್ಣ ಲೇಔಟ್‌ನಲ್ಲಿ 100ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿದ್ದರಿಂದ, ನಿವಾಸಿಗಳು ಜಿಲ್ಲಾಡಳಿತದ ಭವನದ ಮುಂದೆ ಪ್ರತಿಭಟಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.24	19,792	18,933
ಹಾರಂಗಿ	2,859	2,853.32	1,390	1,150
ಕಬಿನಿ	2,284	2,282.28	3,190	800
ಹೇಮಾವತಿ	2,922	2,921.85	6,875	2,342
ಲಿಂಗನಮಕ್ಕಿ	1,819	1,814	5,452	5,367
ಸೂಪಾ (ಮೀ)	564	553.71	1,574	311
ಮಾಣಿ	594	589	557	745
ತುಂಗಭದ್ರಾ	1,633	1,632.87	56,553	56,002
ಮಲಪ್ರಭಾ	2,079.50	2,079.50	3,294	3,294
ಘಟಪ್ರಭಾ	2,175	2,174.90	1,151	184
ಭದ್ರಾ	186	186	5,783	5,783
ಆಲಮಟ್ಟಿ (ಮೀ)	519.60	519.47	95,915	1,17,951
ನಾರಾಯಣಪುರ (ಮೀ)	492.25	491.48	1,60,000	1,70,800

*ನೆಲಮಟ್ಟದಿಂದ

ರಾಜ್ಯದ ವಿವಿಧೆಡೆ ನಾಲ್ಕು ದಿನ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಇದೇ 18ರವರೆಗೂ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 15 ಜಿಲ್ಲೆಗಳಿಗೆ ಶನಿವಾರ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಒಳನಾಡಿನ ಜಿಲ್ಲೆಗಳಲ್ಲಿ ಒಂದೆರಡು ಕಡೆ ಶನಿವಾರ, ಭಾನುವಾರ ಗುಡುಗು ಸಹಿತ ಮಳೆಯಾಗಲಿದೆ. ಕರಾವಳಿ ತೀರದಲ್ಲಿ ಬಿರುಗಾಳಿ ವೇಗ ಗಂಟೆಗೆ 45 ರಿಂದ 55 ಕಿ. ಮೀ. ಇರುವ ಸಾಧ್ಯತೆಯಿದೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಬಾರಿ ಗುಡುಗು ಸಹಿತ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.



ಕೆ.ಆರ್‌.ಪೇಟೆಯ ತ್ರಿವೇಣಿ ಸಂಗಮದಲ್ಲಿ ಶುಕ್ರವಾರ ಕುಂಭಮೇಳವನ್ನು ಉದ್ಘಾಟಿಸಿ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿದರು.

ಕುಂಭಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ತ್ರಿವೇಣಿ ಸಂಗಮ (ಮಂಡ್ಯ ಜಿಲ್ಲೆ): ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ನದಿಗಳು ಕೂಡುವ ಕೆ.ಆರ್.ಪೇಟೆ ತಾಲ್ಲೂಕಿನ ತ್ರಿವೇಣಿ ಸಂಗಮದಲ್ಲಿ ಶುಕ್ರವಾರ ಕುಂಭಮೇಳ ಉದ್ಘಾಟನೆಯಾಗುತ್ತಿದ್ದಾಗ, ಕಣ್ಣು ಹಾಯಿಸಿದಷ್ಟೂ ದೂರ ಅಪಾರ ಜಲರಾಶಿ ದರ್ಶನವಾಗುತ್ತಿತ್ತು. ಕೆಆರ್‌ಎಸ್ ಜಲಾಶಯ ಭರ್ತಿಯಾಗಿದ್ದು, ಹಿನ್ನೀರು ಪ್ರದೇಶವೂ ಆಗಿರುವ ಕ್ಷೇತ್ರದ ಸೌಂದರ್ಯ ಇಮ್ಮಡಿಗೊಂಡಿತ್ತು.

ಸಂಗಮಕ್ಕೆ ಸಾಕ್ಷಿಯಾದ ಅಂಬಿಗರ ಹಳ್ಳಿ, ಪುರ, ಸಂಗಾಪುರದಲ್ಲಿ ಸಾವಿರಾರು ಭಕ್ತರು ನೆರೆದು, ನದಿ ತೀರದಲ್ಲಿ ನಿರ್ಮಿಸಿರುವ ಸ್ನಾನಘಟ್ಟಗಳಲ್ಲಿ ಪುಣ್ಯಸ್ನಾನ ಮಾಡಿ ಪುಳಕಗೊಂಡರು. ವಿವಿಧ ಜಿಲ್ಲೆ ಹಾಗೂ ಹೊರರಾಜ್ಯಗಳ ಸಾವಿರಾರು ಭಕ್ತರೂ ಸಂಗಮ ಕ್ಷೇತ್ರವನ್ನು ಸಂಪನ್ನಗೊಳಿಸಿದರು.

ಮೊದಲ ದಿನ ತ್ರಿವೇಣಿ ಸಂಗಮಕ್ಕೆ ಬಾಗಿನ ಅರ್ಪಿಸಲಾಯಿತು. ನದಿ ತೀರದಲ್ಲಿ ನಿರ್ಮಿಸಿರುವ ಮಲೆ ಮಹದೇಶ್ವರ ದೇವಾಲಯದಲ್ಲಿ ಪೂಜಾ ಕಾರ್ಯಗಳು ಶುರುವಾದವು. ಮಹಾ ಮಂಗಳಾರತಿಯಷ್ಟೇ ಅಲ್ಲದೆ, ವಾರಾಣಸಿ ಮಾದರಿಯ ಗಂಗಾರತಿಯೂ ಗಮನ ಸೆಳೆಯಿತು.

ಅತಿವೃಷ್ಟಿಯಲ್ಲೂ ನೀರಿಗೆ ತತ್ವಾರ: ಕುಂಭಮೇಳಕ್ಕೆ ಚಾಲನೆ ನೀಡಿದ ಧರ್ಮಸ್ಥಳ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ, 'ಅತಿವೃಷ್ಟಿಯಾದರೂ ಮೇ, ಜೂನ್ ತಿಂಗಳು ಬಂದರೆ ನೀರಿಗೆ ತತ್ವಾರ ತಪ್ಪುವುದಿಲ್ಲ. ಧರ್ಮಸ್ಥಳದಲ್ಲಿ ನೇತ್ರಾವತಿ ನದಿ ತುಂಬಿ ಹರಿದರೂ ಬೇಸಿಗೆಯಲ್ಲಿ ನೀರು ಪಾತಾಳಕ್ಕಿಳಿಯುತ್ತದೆ. ಭಕ್ತರು ಗಬ್ಬು ನೀರಿನಲ್ಲೇ ಸ್ನಾನ ಮಾಡುತ್ತಾರೆ' ಎಂದು ವಿಷಾದಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ, ರೇಷ್ಮೆ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಇದ್ದರು.

ರಾಜ್ಯದ ಗಡಿಯಲ್ಲಿ ಕಾರನ್ನೇರಿದ ರಾಹುಲ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಭಾರತ್ ಜೋಡೊ ಯಾತ್ರೆ ಕೈಗೊಂಡಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಬಳ್ಳಾರಿ ಗಡಿಯ ಓಎಂಸಿ ರೈಲ್ವೆ ಗೇಟ್ ಬಳಿ ಶುಕ್ರವಾರ ಸಂಜೆ ಸ್ವಾಗತಿಸಲಾಯಿತು.

ಪೂರ್ವನಿಗದಿತ ಕಾರ್ಯಕ್ರಮದಂತೆ ರಾಹುಲ್ ಗಾಂಧಿ ಅಲ್ಲಿಂದ 3 ಕಿ.ಮೀ ದೂರದಲ್ಲಿರುವ ಹಲಕುಂದಿ ಮಠಕ್ಕೆ ನಡೆದು ಬರಬೇಕಿತ್ತು. ಆದರೆ, ಯಾವುದೇ ಮುನ್ಸೂಚನೆ ನೀಡದೆ ಕಾರನ್ನೇರಿ ಮಠಕ್ಕೆ ಪ್ರಯಾಣಿಸಿದರು.

ರಾಹುಲ್ ಅವರನ್ನು ಬಳ್ಳಾರಿ ಜಿಲ್ಲೆಗೆ ಸ್ವಾಗತಿಸಲು ಕಾದು ನಿಂತಿದ್ದ ಸಾವಿರಕ್ಕೂ ಹೆಚ್ಚು ಕಲಾವಿದರು ತಮ್ಮ ಕಲಾ ಪ್ರದರ್ಶನಕ್ಕೆ ಅವಕಾಶ ಸಿಗದಿದ್ದರಿಂದ ನಿರಾಶರಾದರು. ಅಲ್ಲದೆ, ಒಂದೇ ಬಣ್ಣ, ವಿನ್ಯಾಸದ ಸೀರೆಯುಟ್ಟು ನಿಂತಿದ್ದ ಲೈಂಗಿಕ ಅಲ್ಪಸಂಖ್ಯಾತರು ಪೆಚ್ಚುಮೋರೆ ಹಾಕಿಕೊಂಡು ಹಿಂತಿರುಗಿದರು.



ರಾಹುಲ್ ಗಾಂಧಿ ಶುಕ್ರವಾರ ಸಂಜೆ ಬಳ್ಳಾರಿ ಗಡಿಯ ಓಎಂಸಿ ರೈಲ್ವೆ ಗೇಟ್ ಬಳಿ ಬಂದಾಗ ಸ್ವಾಗತಿಸಲು ನೆರೆದಿದ್ದ ಜನರತ್ತ ಕೈ ಬೀಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದಾರೆ

ಗಡಿ ಭಾಗದಿಂದ ಹಲಕುಂದಿ ಮಠದವರೆಗೂ ರಾಹುಲ್ ಗಾಂಧಿ ಅವರನ್ನು ನೋಡಲು ಕಾದು ಕುಳಿತಿದ್ದ ಜನರೂ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂತಿರುಗಿದರು. ಆ ಸ್ಥಳದಲ್ಲಿ 20 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು.

ಚಿತ್ರದುರ್ಗದ ರಾಂಪುರದಿಂದ ಬೆಳಿಗ್ಗೆ ಪಾದಯಾತ್ರೆ ಆರಂಭಿಸಿದ ರಾಹುಲ್ 11 ಗಂಟೆ ಸುಮಾರಿಗೆ ಜಾಜಿರಕಲ್ಲು ಟೋಲ್ ಪ್ಲಾಜಾಕ್ಕೆ ಬಂದರು. ಅಲ್ಲಿ ಕೆಲಕಾಲ ವಿಶ್ರಾಂತಿ ಪಡೆದ ಬಳಿಕ ಸಂಜೆ ಪಾದಯಾತ್ರೆ ಪುನರಾರಂಭಿಸಿದರು. ರಾಜ್ಯದ ಫೈರಿಂಗ್ ಝೋನ್ ಇರುವ ಜಾಗದಲ್ಲಿ ಕತ್ತಲು ಆವರಿಸಿದ್ದರಿಂದ ಭದ್ರತೆ ದೃಷ್ಟಿಯಿಂದ ರಾಹುಲ್ ಅವರನ್ನು ಕಾರು ಹತ್ತಿಸಿ ಕಳುಹಿಸಲಾಯಿತು ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಸರ್ಕಾರದ ಮಧ್ಯಪ್ರವೇಶಕ್ಕೆ ಕೋರಿಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಶಿವಮೂರ್ತಿ ಮುರುಘಾ ಶರಣರು ಬಂಧನದಲ್ಲಿರುವುದರಿಂದ ರಾಜ್ಯ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ನೂತನ ಪೀಠಾಧ್ಯಕ್ಷರ ನೇಮಕಕ್ಕೆ ಮುಂದಾಗಬೇಕು ಎಂದು ವೀರಶೈವ ಲಿಂಗಾಯತ ಸಮಾಜದ ಮುಖಂಡರ ನಿಯೋಗ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಮನವಿ ಮಾಡಿದೆ.

ಮಾಜಿ ಸಚಿವ ಎಚ್.ಏಕಾಂತಯ್ಯ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ನೇತೃತ್ವದಲ್ಲಿ 25ಕ್ಕೂ ಹೆಚ್ಚು ಜನರ ನಿಯೋಗ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಭೇಟಿ ಮಾಡಿದೆ. ಶಾಸಕ ಬಿ.ಎಸ್.ಯಡಿಯೂರಪ್ಪ ಅವರೊಂದಿಗೂ ಚರ್ಚಿಸಿದೆ.

'ಶಿವಮೂರ್ತಿ ಮುರುಘಾ ಶರಣರು ನ್ಯಾಯಾಂಗ ಬಂಧನದಲ್ಲಿರುವುದರಿಂದ ಮುರುಘಾ ಮಠದ ದೈನಂದಿನ ಧಾರ್ಮಿಕ ಕೈಂಕರ್ಯ ಹಾಗೂ ಆಡಳಿತಾತ್ಮಕ ಚಟುವಟಿಕೆಗೆ ತೊಂದರೆ ಆಗುತ್ತಿದೆ. ಮುರುಘರಾಜೇಂದ್ರ ಪೀಠದ ಉಳಿವಿಗೆ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಮುರುಘಾ ಮಠಕ್ಕೆ ಹೊಸ ಪೀಠಾಧ್ಯಕ್ಷರ ನೇಮಕ ಮಾಡಬೇಕು ಎಂಬ ಮನವಿ ಮಾಡಲಾಗಿದೆ' ಎಂದು ಸಮುದಾಯದ ಮುಖಂಡ ಎಸ್.ಷಣ್ಮುಖಪ್ಪ ಮಾಹಿತಿ ನೀಡಿದ್ದಾರೆ.

ಜಾಮೀನು ಕೋರಿ ಮುರುಘಾ ಶ್ರೀ ಹೈಕೋರ್ಟ್‌ಗೆ ಮೇಲ್ಮನವಿ

ಬೆಂಗಳೂರು: ಪ್ರೌಢಶಾಲಾ ವಿದ್ಯಾರ್ಥಿನಿಯರ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು ಜಾಮೀನು ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಜೆ.ಎ.ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿದೆ. ಚಿತ್ರದುರ್ಗ ಗ್ರಾಮಾಂತರ ಠಾಣಾಧಿಕಾರಿ ಹಾಗೂ ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿದೆ.

ಸಂತ್ರಸ್ತ ಮಕ್ಕಳ ತಾಯಿ ದೂರು • ಮುರುಘಾ ಶರಣರ ವಿರುದ್ಧ ಮತ್ತೊಂದು ಎಫ್ಐಆರ್


'ಋತುಮತಿಯಾಗುವವರೆಗೆ ಶರಣರಿಂದ ಅತ್ಯಾಚಾರ'

• ಕೆ.ನರಸಿಂಹಮೂರ್ತಿ

ಮೈಸೂರು: 'ಚಿತ್ರದುರ್ಗದ ಮುರುಘಾ ಮಠದ ವಿದ್ಯಾರ್ಥಿನಿಲಯದಲ್ಲಿ ಓದುತ್ತಿದ್ದ ನನ್ನ ಇಬ್ಬರು ಹೆಣ್ಣುಮಕ್ಕಳು ಋತುಮತಿಯರಾಗುವವರೆಗೂ ಶಿವಮೂರ್ತಿ ಮುರುಘಾ ಶರಣರು ಸತತ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಸಂತ್ರಸ್ತ ಮಕ್ಕಳ ತಾಯಿ ಇಲ್ಲಿನ ನಜರಾಬಾದ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಶರಣರು ಸೇರಿ ಏಳು ಮಂದಿ ವಿರುದ್ಧ ಎಫ್ಐಆರ್ ದಾಖಲಾಗಿದೆ.

'ದೌರ್ಜನ್ಯ ನಡೆಸಲು ಶರಣರು, ಮಹಿಳಾ ವಾರ್ಡನ್ ಮೂಲಕ ತಮ್ಮ ಖಾಸಗಿ ಕೊಠಡಿಗೆ ಕರೆಸಿಕೊಳ್ಳುತ್ತಿದ್ದರು' ಎಂಬ ದೂರಿನ ಮೇರೆಗೆ ಶರಣರನ್ನು ಮೊದಲ ಆರೋಪಿಯನ್ನಾಗಿಸಲಾಗಿದೆ. ನಂತರದ ಆರೋಪಿಗಳನ್ನಾಗಿ ಮಹಿಳಾ ವಾರ್ಡನ್, ಮೈಸೂರಿನ ಭಕ್ತರಾದ ಪರಮಶಿವಯ್ಯ ಮತ್ತು ಗಂಗಾಧರಯ್ಯ, ಮಠದ ಬಾಲಕ, ಸ್ವಾಮೀಜಿಯ ಸಹಾಯಕ ಮಹಾಲಿಂಗ ಮತ್ತು ಅಡುಗೆ ಭಟ್ಟ ಕರಿಬಸಪ್ಪ ಅವರನ್ನು ಹೆಸರಿಸಲಾಗಿದೆ.

'ತನ್ನ ಇಬ್ಬರು ಮಕ್ಕಳನ್ನಷ್ಟೇ ಅಲ್ಲದೆ, ಇನ್ನಿಬ್ಬರ ಮಕ್ಕಳ ಮೇಲೂ ಶರಣರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಮಹಿಳೆಯು ದೂರಿದ್ದಾರೆ. ಹೀಗಾಗಿ 14 ವರ್ಷದ ಇಬ್ಬರು, 15 ವರ್ಷ ಹಾಗೂ 12 ವರ್ಷದ ಒಬ್ಬರು ಸೇರಿ ನಾಲ್ವರು ಬಾಲಕಿಯರನ್ನು ಸಂತ್ರಸ್ತರನ್ನಾಗಿ ಎಫ್ಐಆರ್‌ನಲ್ಲಿ ನಮೂದಿಸಲಾಗಿದೆ. ಈ ಪ್ರಕರಣವೂ ಚಿತ್ರದುರ್ಗದ ಗ್ರಾಮೀಣ ಪೊಲೀಸ್ ಠಾಣೆಗೆ ವರ್ಗಾವಣೆಯಾಗಿದೆ.



ಶಿವಮೂರ್ತಿ ಮುರುಘಾ ಶರಣರು

ಮಹಿಳೆಯು ಮಠದಲ್ಲೇ ಕೆಲಸ ಮಾಡಿಕೊಂಡಿದ್ದು, ಅಲ್ಲಿಯೇ ಅವರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಡತನದ ಕಾರಣಕ್ಕೆ ತನ್ನ ಮಕ್ಕಳನ್ನೂ ಮಠದ ಶಾಲೆ ಹಾಗೂ ವಸತಿನಿಲಯಕ್ಕೆ ದಾಖಲಿಸಿದ್ದರು. 'ಮಧ್ಯಾಹ್ನದ ಊಟದ ವೇಳೆಯಲ್ಲಿ ಹಾಗೂ ವಸತಿ ನಿಲಯದ ಕಡೆಗೆ ತೆರಳಿದಾಗಷ್ಟೇ ಮಕ್ಕಳನ್ನು ನೋಡಲು ಅವಕಾಶ ಸಿಗುತ್ತಿತ್ತು' ಎಂದು ತಿಳಿಸಿದ್ದಾರೆ.

ಆರು ವರ್ಷದ ಹಿಂದೆ ಮಹಿಳೆಯು ತನ್ನ ಇಬ್ಬರು ಮಕ್ಕಳನ್ನು ಕ್ರಮವಾಗಿ 3ನೇ ಮತ್ತು 1ನೇ ತರಗತಿಗೆ ಸೇರಿಸಿದ್ದರು. 'ಒಬ್ಬ ಮಗಳನ್ನು 2019ರಲ್ಲಿ ಮತ್ತು ಇನ್ನೊಬ್ಬ ಮಗಳನ್ನು 2020ರ ಕೋವಿಡ್ ಅವಧಿಯಲ್ಲಿ ಶರಣರು ಮೊದಲಿಗೆ ಲೈಂಗಿಕ ದೌರ್ಜನ್ಯಕ್ಕೆ ಬಳಸಿಕೊಂಡಿದ್ದರು' ಎಂದು ಮಹಿಳೆಯು ಆರೋಪಿಸಿದ್ದಾರೆ.

'ವಸತಿ ನಿಲಯದಲ್ಲಿದ್ದ 14 ಮತ್ತು 15ರ ವಯಸ್ಸಿನ ಇನ್ನಿಬ್ಬರು ಬಾಲಕಿಯರು ಶರಣರಿಂದ ದೌರ್ಜನ್ಯಕ್ಕೆ ಒಳಗಾದ ಬಗ್ಗೆ ಮುಕ್ತವಾಗಿ ಹೇಳಿಕೊಂಡಿದ್ದಾರೆ' ಎಂದೂ ಆರೋಪಿಸಿದ್ದಾರೆ.

ಹೆದರಿಸುತ್ತಿದ್ದರು: ಮುರುಘಾ ಶರಣರ ಬಳಿಗೆ ಹೋಗಲು ನಿರಾಕರಿಸುವ ಮಕ್ಕಳನ್ನು ಮಠದ ಬಾಲಕನೊಬ್ಬ, ಭಕ್ತರಾದ ಪರಮಶಿವಯ್ಯ, ಗಂಗಾಧರಯ್ಯ ಹೆದರಿಸುತ್ತಿದ್ದರು. ಸ್ವಾಮೀಜಿಯ ಸಹಾಯಕ ಮಹಾಲಿಂಗ ಮತ್ತು ಅಡುಗೆಭಟ್ಟ ಕರಿಬಸಪ್ಪ ಅವರು ಶರಣರ ಖಾಸಗಿ ಕೊಠಡಿಗೆ ಕರೆದುಕೊಂಡು ಹೋಗಿ ಬಿಡುವುದು, ಕೊಠಡಿಗೆ ಬೇರೆ ಯಾರೂ ಹೋಗದಂತೆ ಬಾಗಿಲಲ್ಲಿ ನಿಂತು ಕಾಯ್ದುಕೊಳ್ಳುತ್ತಿದ್ದುದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ' ಎಂದು ಮಹಿಳೆಯು ಆರೋಪಿಸಿದ್ದಾರೆ.

'ಆರ್ಥಿಕವಾಗಿ ದುರ್ಬಲಳಾಗಿರುವ ನಾನು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಇದುವರೆಗೆ ದೂರು ನೀಡಿರಲಿಲ್ಲ' ಎಂದೂ ಹೇಳಿದ್ದಾರೆ.

ಬಾಲನ್ಯಾಯಮಂಡಳಿಗೆ ಶರಣು: ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಸಿಲುಕಿರುವ 17 ವರ್ಷದ ಬಾಲಕ ಶುಕ್ರವಾರ ಬಾಲನ್ಯಾಯಮಂಡಳಿ ಎದುರು ಶರಣಾಗಿದ್ದಾನೆ.

'ನನ್ನ ಮಕ್ಕಳನ್ನು ಬಿಟ್ಟುಬಿಡಿ ಎಂದಿದ್ದೆ'

'ಮಠಕ್ಕೆ ಕೆಲಸಕ್ಕೆ ಸೇರಿದ ಕೆಲ ಕಾಲದ ಬಳಿಕ, ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿರುವುದು ಗೊತ್ತಾಗಿತ್ತು. ಬಡವಳೂ, ಅಸಹಾಯಕಳೂ ಆಗಿದ್ದ ನಾನು ಅದನ್ನು ಪ್ರಶ್ನಿಸಿ, ಎದುರಿಸಿ ನಿಲ್ಲುವಂತಿರಲಿಲ್ಲ. ಆದರೆ, ನನ್ನ ಮಕ್ಕಳನ್ನು ಮಾತ್ರ ಸ್ವಾಮೀಜಿ ಬಳಿಗೆ ಕಳುಹಿಸಬೇಡಿ ಎಂದು ಮಹಿಳಾ ವಾರ್ಡನ್‌ಗೆ ಮನವಿ ಮಾಡಿದ್ದೆ. ಆದರೂ ಕಳಿಸಿ ಅವರು ಅನ್ಯಾಯ ಮಾಡಿದರು ಎಂದು ಮಹಿಳೆಯು ಆಪ್ತಸಮಾಲೋಚನೆ ಸಮಯದಲ್ಲಿ ತಿಳಿಸಿದ್ದಾರೆ' ಎಂದು ಒಡನಾಡಿ ಸಂಸ್ಥೆಯ ಎಂ.ಎಲ್.ಪರಶುರಾಂ ಹೇಳಿದ್ದಾರೆ.

ಮಹಿಳೆಗೆ ದೌರ್ಜನ್ಯ ವಿರೋಧಿ ಒಕ್ಕೂಟದ ಸಾಂತ್ವನ

ಗುರುವಾರ ಬೆಳಿಗ್ಗೆ ಒಡನಾಡಿ ಸಂಸ್ಥೆಗೆ ತನ್ನ ಕಿರಿಮಗಳೊಂದಿಗೆ ಬಂದ ಮಹಿಳೆಯೊಂದಿಗೆ ಆಪ್ತ ಸಮಾಲೋಚನೆ ನಡೆಸಿದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪ್ರಮುಖರು ಸಾಂತ್ವನ ಹೇಳಿ ಧೈರ್ಯ ತುಂಬಿದರು.

'ಒಕ್ಕೂಟದ ಸುಶೀಲಮ್ಮ, ರತಿರಾವ್, ರಾಮೇಶ್ವರಿ ವರ್ಮ, ಮಹಿಳೆಯಿಂದ ಮಾಹಿತಿ ಪಡೆದರು. ಬಳಿಕ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡಲಾಯಿತು' ಎಂದು ಪರಶುರಾಂ ತಿಳಿಸಿದರು.


‘ಸುಪ್ರೀಂ’ ನ್ಯಾಯಪೀಠದ ಎದುರು ಕೇಂದ್ರ ಸರ್ಕಾರದ ಪ್ರತಿಪಾದನೆ

‘ಚುನಾವಣಾ ಬಾಂಡ್ ಪಾರದರ್ಶಕ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಹಣ ನೀಡುವ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಕಪ್ಪುಹಣವನ್ನು ಈ ಮೂಲಕ ಪಕ್ಷಗಳು ಪಡೆಯಲು ಅವಕಾಶವಿಲ್ಲ’ ಎಂದು ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

‘ಬಾಂಡ್ ನೀಡುವ ಪ್ರತಿ ಹಂತದಲ್ಲಿಯೂ ಪಾರದರ್ಶಕತೆ ಇರಲಿದೆ’ ಎಂದು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್



ತುಷಾರ್ ಮೆಹ್ತಾ ಅವರು ‘ಸುಪ್ರೀಂ’ ನ್ಯಾಯಪೀಠಕ್ಕೆ ತಿಳಿಸಿದರು.

ಕಪ್ಪುಹಣ ಎಂಬುದು ಇಲ್ಲ. ಪ್ರತಿಯೊಂದು ಪಾರದರ್ಶಕವಾಗಿದೆ ಎಂದರು.

ಹಣ ಯಾವ ಮೂಲದಿಂದ ಬಂದಿದೆ ಎಂಬ ಮಾಹಿತಿ ಸಿಗಲಿದೆಯೇ ಎಂಬ ಪೀಠದ ಪ್ರಶ್ನೆಗೆ, ‘ಖಂಡಿತವಾಗಿ’ ಎಂದು ಮೆಹ್ತಾ ಪ್ರತಿಕ್ರಿಯಿಸಿದರು.

ಸಿಪಿಎಂ ಮತ್ತು ಅಸೋಸಿಯೇಷನ್ ಆಫ್ ಡೆಮಾಕ್ರಾಟಿಕ್ ರೀಫಾರ್ಮ್ಸ್ ಸಂಸ್ಥೆಯು ಸಲ್ಲಿಸಿದ್ದ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು ನಡೆಸುತ್ತಿದೆ.

ಎನ್‌ಜಿಒ ಅನ್ನು ಪ್ರತಿನಿಧಿಸಿದ್ದ ವಕೀಲ ಪ್ರಶಾಂತ್ ಭೂಷಣ್, ‘ಇದು ಪ್ರಜಾಪ್ರಭುತ್ವದ ಮೇಲೆ ಪರಿಣಾಮ ಬೀರಲಿದೆ’ ಎಂದರು.

ವಿದೇಶಿ ಹಣ ಹರಿದುಬರುವ ಸಂಭವವು ಇದೆ ಎಂದು ಕಳವಳ ವ್ಯಕ್ತಪಡಿಸಿದರು. ಮತ್ತೊಬ್ಬರು ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲ ಕಪಿಲ್ ಸಿಬಲ್ ಅವರು, ‘ಈ ಪ್ರಕರಣವನ್ನು ಉನ್ನತ ಪೀಠದ ವಿಚಾರಣೆಗೆ ಒಪ್ಪಿಸಬೇಕು’ ಎಂದು ಕೋರಿದರು.

ಅಭಿಪ್ರಾಯಗಳಲ್ಲಿ ಭಿನ್ನಮತ ಇರದ ಹೊರತು ಉನ್ನತ ಪೀಠಕ್ಕೆ ಒಪ್ಪಿಸಲಾಗದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಬಳಿಕ ಪ್ರಕರಣದ ವಿಚಾರಣೆಯನ್ನು ಡಿಸೆಂಬರ್ 6ಕ್ಕೆ ಮುಂದೂಡಿತು.

ಸಾಯಿಬಾಬಾ ಬಿಡುಗಡೆಗೆ ಆದೇಶ

ನಕ್ಸಲರ ನಂಟು: ಜೀವಾವಧಿ ಶಿಕ್ಷೆಯಿಂದ ಖುಲಾಸೆಗೊಳಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಮುಂಬೈ: ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ, ಗಾಲಿಕುರ್ಚಿಯಲ್ಲಿರುವ ಜಿ.ಎನ್. ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಲಾಗಿದ್ದು ತಕ್ಷಣ ಬಿಡುಗಡೆ ಮಾಡುವಂತೆ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠವು ಶುಕ್ರವಾರ ಆದೇಶಿಸಿದೆ. ನಕ್ಸಲರ ಜತೆಗೆ ನಂಟು ಇದೆ ಎಂಬ ಕಾರಣಕ್ಕೆ ಎಂಟು ವರ್ಷಗಳ ಹಿಂದೆ ಅವರನ್ನು ಬಂಧಿಸಲಾಗಿತ್ತು.

ದೆಹಲಿ ವಿಶ್ವವಿದ್ಯಾಲಯದ ರಾಮ್ ಲಾಲ್ ಆನಂದ್ ಕಾಲೇಜ್‌ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಸಾಯಿಬಾಬಾ (55) ಅವರು ಈಗ ನಾಗಪುರ ಕೇಂದ್ರ ಕಾರಾಗೃಹದಲ್ಲಿ ಇದ್ದಾರೆ. ಭಾರತೀಯ ದಂಡ ಸಂಹಿತೆ ಮತ್ತು ಕಾನೂನುಬಾಹಿರ

> **ತಡೆಯಾಜ್ಞೆಗೆ ‘ಸುಪ್ರೀಂ’ ನಿರಾಕರಣೆ**
>
> ನವದೆಹಲಿ: ತೀರ್ಪು ಪ್ರಕಟವಾದ ಕೆಲವೇ ತಾಸುಗಳಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ಮಹಾರಾಷ್ಟ್ರ ಸರ್ಕಾರವು, ತೀರ್ಪಿಗೆ ತಡೆ ಕೊಡುವಂತೆ ಕೋರಿತು.
>
> ಆದರೆ, ನ್ಯಾಯಾಲಯವು ಸರ್ಕಾರದ ಮನವಿಯನ್ನು ಒಪ್ಪಲಿಲ್ಲ. ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ನ್ಯಾಯಪೀಠವು ಈ ಅರ್ಜಿಯ ವಿಚಾರಣೆಯನ್ನು ಶನಿವಾರ ನಡೆಸುವುದಾಗಿ ಹೇಳಿತು.

ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಇತರ ಐವರನ್ನೂ ಖುಲಾಸೆ ಮಾಡಲಾಗಿದೆ.

ಮಾನವ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ಹೋರಾಟಗಾರ ಸಾಯಿಬಾಬಾ ಅವರನ್ನು 2014ರ ಮೇ 9ರಂದು ಮಹಾರಾಷ್ಟ್ರ ಪೊಲೀಸರು ಬಂಧಿಸಿದ್ದರು.

ಸಾಯಿಬಾಬಾ ಮತ್ತು ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಮಹೇಶ್ ಟಿರ್ಕಿ, ಪಾಂಡು ನರೋಟೆ, ಹೇಮ್ ಮಿಶ್ರಾ, ಪ್ರಶಾಂತ್ ರಾಹಿ ಮತ್ತು ವಿಜಯ ಟಿರ್ಕಿ ಅವರಿಗೆ 2017ರ ಮಾರ್ಚ್ 7ರಂದು ಗಡ್‌ಚಿರೋಲಿ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಶಿಕ್ಷೆ ವಿಧಿಸಿತ್ತು. ನರೋಟೆ ಅವರು ಕೆಲ ಸಮಯದ ಹಿಂದೆ ಸೆರೆಮನೆಯಲ್ಲಿಯೇ ಮೃತಪಟ್ಟಿದ್ದಾರೆ.

ಪ್ರಕರಣದ ತನಿಖೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯೂ ಭಾಗಿಯಾಗಿತ್ತು.

ನಿಷೇಧಿತ ಸಂಘಟನೆ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ (ಮಾವೋವಾದಿ) ರೆವಲ್ಯೂಷನರಿ ಡೆಮಾಕ್ರಟಿಕ್ ಫ್ರಂಟ್‌ನ (ಆರ್‌ಡಿಎಫ್) ಕಾರ್ಯದರ್ಶಿಯಾಗಿ ಸಾಯಿಬಾಬಾ ಅವರು ಕೆಲಸ ಮಾಡಿದ್ದಾರೆ ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿತ್ತು.

ರಾಮ್ ಲಾಲ್ ಆನಂದ್ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆಯಿಂದ ಅವರನ್ನು 2021ರ ಏಪ್ರಿಲ್‌ನಲ್ಲಿ ವಜಾ ಮಾಡಲಾಗಿತ್ತು.

ಅಧಿಕಾರ ಸಿಕ್ಕರೆ ಹಳೇ ಪಿಂಚಣಿ ಜಾರಿ

ಪರಿವರ್ತನಾ ಪ್ರತಿಜ್ಞಾ ರ‍್ಯಾಲಿಯಲ್ಲಿ ಪ್ರಿಯಾಂಕಾ ಭರವಸೆ

ಶಿಮ್ಲಾ: ‘ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಲಾಗುವುದು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಭರವಸೆ ನೀಡಿದ್ದಾರೆ.

ಹಿಮಾಚಲ ಪ್ರದೇಶದ ಸೋಲನ್‌ನ ಥೋಡೊ ಮೈದಾನದಲ್ಲಿ ಶುಕ್ರವಾರ ನಡೆದ ಪಕ್ಷದ ಚುನಾವಣಾ ‘ಪರಿವರ್ತನಾ ಪ್ರತಿಜ್ಞಾ’ ರ‍್ಯಾಲಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಮೊದಲ ಸಚಿವ ಸಂಪುಟ ಸಭೆಯಲ್ಲೇ ಹಳೆಯ ಪಿಂಚಣಿ ಯೋಜನೆ ಮರುಜಾರಿಗೊಳಿಸಲಾಗುವುದು ಹಾಗೂ ನಿರುದ್ಯೋಗಿ ಯುವಜನರಿಗೆ ಒಂದು ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಎಂದರು.

ಇದಕ್ಕೂ ಮುನ್ನ ಪ್ರಿಯಾಂಕಾ ಅವರು, ಸೋಲನ್‌ನಲ್ಲಿರುವ ಮಾ ಶೂಲಿನಿ ದೇವಸ್ಥಾನಕ್ಕೆ ಭೇಟಿ



ಹಿಮಾಚಲ ಪ್ರದೇಶದ ಸೋಲನ್‌ನ ಥೋಡೊ ಮೈದಾನದಲ್ಲಿ ಶುಕ್ರವಾರ ಕಾಂಗ್ರೆಸ್ ಪಕ್ಷದ ಚುನಾವಣಾ ‘ಪರಿವರ್ತನಾ ಪ್ರತಿಜ್ಞಾ’ ರ‍್ಯಾಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಪಾಲ್ಗೊಂಡಿದ್ದರು– ಪಿಟಿಐ ಚಿತ್ರ

ನೀಡಿದರು. ಬಳಿಕ ಅವರು ಪಕ್ಷದ ಚುನಾವಣಾ ರ‍್ಯಾಲಿಯಲ್ಲಿ ಪಕ್ಷದ ಸಿದ್ಧಾಂತ ಪ್ರತಿಪಾದಿಸುವ ಗೀತೆಯನ್ನೂ ಅವರು ಬಿಡುಗಡೆ ಮಾಡಿದರು.

ಊನಾ ಮತ್ತು ಚಂಬಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ರ‍್ಯಾಲಿಗಳನ್ನು ನಡೆಸಿದ ಒಂದು ದಿನದ ಬಳಿಕ ಪ್ರಿಯಾಂಕಾ ಪಕ್ಷದ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದಾರೆ. ರ‍್ಯಾಲಿ ಸಂದರ್ಭದಲ್ಲಿ ಮೋದಿ ಅವರು, ಊನಾದಲ್ಲಿ ಭಾರತದ 4ನೇ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಚಾಲನೆ ನೀಡುವುದರ ಜತೆಗೆ, ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೇರವೇರಿಸಿದ್ದಾರೆ.

ಘೋಷಣೆಯಾಗದ ವೇಳಾಪಟ್ಟಿ: ಆಕ್ಷೇಪ

ಒಂದನೇ ಪುಟದಿಂದ...

ತಾಂತ್ರಿಕವಾಗಿ, ನವೆಂಬರ್–ಡಿಸೆಂಬರ್‌ನಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಸಲು ಸಾಧ್ಯವಿದೆ. 2017ರಲ್ಲಿ ಹಿಮಾಚಲ ಪ್ರದೇಶದಲ್ಲಿ ನವೆಂಬರ್ 9ರಂದು ಹಾಗೂ ಗುಜರಾತ್‌ನಲ್ಲಿ ಎರಡು ಹಂತಗಳಲ್ಲಿ (ಡಿಸೆಂಬರ್ 9 ಮತ್ತು 14) ಮತದಾನ ನಡೆದಿತ್ತು. ಮತ ಎಣಿಕೆ ಒಂದೇ ದಿನ ನಡೆದಿತ್ತು. ಹಿಮಾಚಲ ಪ್ರದೇಶ ವಿಧಾನಸಭೆಯ ಅವಧಿ 2023ರ ಜನವರಿ 8ರಂದು ಕೊನೆಗೊಳ್ಳಲಿದೆ. ಗುಜರಾತ್ ವಿಧಾನಸಭೆಯ ಅವಧಿ 2023ರ ಫೆಬ್ರುವರಿ 18ರ ವರೆಗೆ ಇದೆ.

‘ಎರಡು ವಿಧಾನಸಭೆಗಳ ಅವಧಿಯ ಅಂತರ 40 ದಿನಗಳು ಇವೆ. ಕಣಿವೆ ರಾಜ್ಯದ ಹವಾಮಾನವನ್ನು ಪರಿಗಣಿಸಿ ಅವಲಂಬಿಸಿ ಚುನಾವಣಾ ದಿನಾಂಕ ಘೋಷಣೆ ಮಾಡಲಾಗಿದೆ’ ಎಂದು ಚುನಾವಣಾ ಆಯುಕ್ತರು ಹೇಳಿಕೊಂಡರು. ಆದರೆ, ಈ ವರ್ಷದ ಆರಂಭದಲ್ಲಿ ಉತ್ತರ ಪ್ರದೇಶ ಹಾಗೂ ಗೋವಾ ರಾಜ್ಯಗಳಿಗೆ ಒಂದೇ ದಿನ ಚುನಾವಣಾ ದಿನಾಂಕ ಘೋಷಣೆ ಮಾಡಲಾಗಿತ್ತು.

ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಾನು ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆ ಇಟ್ಟಿದ್ದೇನೆ. ನನ್ನೊಬ್ಬನ ಕೈಯಿಂದ ಎಲ್ಲವೂ ಸಾಧ್ಯವಿಲ್ಲ’ ಎಂದು ಎಐಸಿಸಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಕೆಪಿಸಿಸಿ ಅಧ್ಯಕ್ಷನಾಗಿದ್ದ ವೇಳೆಯೂ ಇದನ್ನೇ ಹೇಳಿದ್ದೆ. ಕೆಲವರು ನಾನು ಅಂತ ಹೇಳುತ್ತಾರೆ. ಅದರ ಬದಲು ನಾವು ಎಂದರೆ ಪಕ್ಷಕ್ಕೆ ಒಳ್ಳೆಯದು’ ಎಂದರು.

‘ನಾನು ಅಪೇಕ್ಷೆ ಪಟ್ಟು ನಿಂತಿರುವ ಚುನಾವಣೆ ಅಲ್ಲ. ನಮ್ಮ ನಾಯಕರು ಒತ್ತಾಯ ಮಾಡಿದ ಮೇಲೆ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಇದು ವೈಯಕ್ತಿಕ ಹೋರಾಟ ಅಲ್ಲ. ರಾಜಸ್ಥಾನದ ಉದಯಪುರದಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಜಾರಿ ಮಾಡುವುದಕ್ಕೆ ಮೊದಲ ಆದ್ಯತೆ ನೀಡುತ್ತೇನೆ’ ಎಂದರು.

‘ಅಭ್ಯರ್ಥಿಯಾಗಿ ಹತ್ತು ರಾಜ್ಯಗಳಲ್ಲಿ ಪ್ರವಾಸ ಮಾಡಿ ಮತ ಕೇಳಿದ್ದೇನೆ. ಇನ್ನು ಒಂದಷ್ಟು ರಾಜ್ಯಗಳು ಬಾಕಿ ಇವೆ. ರಾಜ್ಯದ ಹಲವು ನಾಯಕರಿಗೆ ಕರೆ ಮಾಡಿ ಮಾತನಾಡಿದ್ದೇನೆ’ ಎಂದರು.

‘ಕಾಂಗ್ರೆಸ್ ಪಕ್ಷಕ್ಕಾಗಿ ಗಾಂಧಿ ಪರಿವಾರ ತ್ಯಾಗ ಮಾಡಿದೆ. ಸೋನಿಯಾ ಗಾಂಧಿ ಕೂಡಾ ಸಾಕಷ್ಟು ಹೋರಾಟ ಮಾಡಿದ್ದಾರೆ. ಬಿಜೆಪಿಯು ನಮ್ಮ ಸರ್ಕಾರಗಳನ್ನು ಉರುಳಿಸುವ ಪ್ರಯತ್ನ ಮಾಡಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಗಾಂಧಿ ಕುಟುಂಬದ ಸಲಹೆ, ಮಾರ್ಗದರ್ಶನ ಪಡೆಯುತ್ತೇನೆ. ಇದರಲ್ಲಿ ನಾಚಿಕೆ ಪಡುವಂಥದ್ದು ಏನಿದೆ. ತಪ್ಪುಗಳಿದ್ದರೆ ತಿದ್ದಿಕೊಳ್ಳುತ್ತೇನೆ’ ಎಂದರು.

‘ಗಾಂಧಿ ಪರಿವಾರ ಬಿಟ್ಟು ರಾಜಕೀಯ ಮಾಡಲು ಸಾಧ್ಯವಿಲ್ಲ. ಗಾಂಧಿ ಕುಟುಂಬ ಪವರ್ ಸೆಂಟರ್ ಅಲ್ಲ, ಅವರ ಅನುಭವವನ್ನು ಪಡೆಯುವುದರಲ್ಲಿ ತಪ್ಪಿಲ್ಲ’ ಎಂದು ಅವರು ಹೇಳಿದರು.

‘ನಾನು ಐವತ್ತು ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿದ್ದೇನೆ. ನಾಯಕರು ಬಂದು ಭೇಟಿ ಮಾಡಿ ಬೆಂಬಲ ನೀಡಿದ್ದಾರೆ. ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಶಶಿ ತರೂರ್ ಕಡೆಗೆ ಹೋಗಬೇಡಿ, ಅವರಿಗೆ ಮತ ನೀಡಬೇಡಿ ಎಂದು ನಾನು ಹೇಳಿಲ್ಲ. ಅವರಿಗೆ ಶಕ್ತಿ ಇದ್ದರೆ ನಾಯಕರನ್ನು ಕರೆಸಿಕೊಳ್ಳಲಿ, ನನ್ನ ತಕರಾರು ಇಲ್ಲ’ ಎಂದರು.

‘ಪಕ್ಷದ ಜಿ– 23 ನಾಯಕರು ನನ್ನ ಬೆಂಬಲಕ್ಕೆ ನಿಂತಿದ್ದಾರೆ. ನಮ್ಮದು ಪ್ರಧಾನಿ ನರೇಂದ್ರ ಮೋದಿ–ಗೃಹ ಸಚಿವ ಅಮಿತ್ ಶಾ ತತ್ವದ ವಿರುದ್ಧ ಹೋರಾಟ. ಶಾಸಕರ ಖರೀದಿ, ಹಿಂಬಾಗಿಲ ಮೂಲಕ ಸರ್ಕಾರ ರಚನೆಯ ವಿರುದ್ಧ ನಾವು ಹೋರಾಟ ಮಾಡಲಿದ್ದೇವೆ’ ಎಂದು ಅವರು ತಿಳಿಸಿದರು.

ರಾಜೀವ್ ಹಂತಕಿ ನಳಿನಿ ಅರ್ಜಿ ಅ.17ಕ್ಕೆ ವಿಚಾರಣೆ

ನವದೆಹಲಿ(ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ನಳಿನಿ, ಅವಧಿಪೂರ್ವ ಬಿಡುಗಡೆಯನ್ನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಅಕ್ಟೋಬರ್ 17ಕ್ಕೆ ಮುಂದೂಡಿತು.

ಸಮಯದ ಕೊರತೆಯಿಂದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲಿಲ್ಲ. ನಳಿನಿ ಸೇರಿ ಏಳು



ಅಪರಾಧಿಗಳು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದು, 23 ವರ್ಷದಿಂದ ಜೈಲಿನಲ್ಲಿದ್ದಾರೆ.

ತಮಿಳುನಾಡು ಸರ್ಕಾರ ಅವಧಿಪೂರ್ವದಲ್ಲಿ ಬಿಡುಗಡೆ ಮಾಡುವುದರ ಪರವಾಗಿದ್ದು, ಪ್ರಕರಣದ ಏಳು ಅಪರಾಧಿಗಳ ಕ್ಷಮಾದಾನ ಅರ್ಜಿ ಕುರಿತು ಸಂವಿಧಾನದ 161ನೇ ವಿಧಿಯಡಿ ದತ್ತವಾಗಿರುವ ಅಧಿಕಾರ ಬಳಸಿ ತೀರ್ಮಾನಿಸಬೇಕು ಎಂದು ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು.

ಅಲ್ಲದೆ, ಈ ಸಂಬಂಧ ಎರಡು ಪ್ರತ್ಯೇಕ ಪ್ರಮಾಣಪತ್ರಗಳನ್ನು ಸೆ. 9, 2018ರಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತ್ತು.

ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಚಂಡೀಗಢ (ಪಿಟಿಐ): ಪಾಕಿಸ್ತಾನದ ಕಡೆಯಿಂದ ಭಾರತದ ಗಡಿಯೊಳಗೆ ನುಗ್ಗಿದ ಡ್ರೋನ್ ಅನ್ನು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪಂಜಾಬ್‌ನ ಅಮೃತಸರ ಸಮೀಪ ಶುಕ್ರವಾರ ಮುಂಜಾನೆ ಹೊಡೆದುರುಳಿಸಿದೆ.

ಪಾಕ್ ಕಡೆಯಿಂದ ಡ್ರೋನ್ ಬರುತ್ತಿರುವುದನ್ನು ಮುಂಜಾನೆ 4.30ರ ಸುಮಾರಿಗೆ ಗಮನಿಸಿದ ಶಾಹಪುರ ಗಡಿ ಹೊರಠಾಣೆಯ ಬಿಎಸ್‌ಎಫ್ ಸಿಬ್ಬಂದಿ 17 ಸುತ್ತು ಗುಂಡು ಹಾರಿಸಿ, ಅದನ್ನು ಹೊಡೆದುರುಳಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾರತದ ಗಡಿ ಪ್ರದೇಶವಾದ ಅಮೃತಸರದ ಭೈನಿ ಗಿಲ್ ಬಳಿ ಡ್ರೋನ್ ನುಗ್ಗಿದ ಕೂಡಲೇ ಅದರ ಮೇಲೆ ದಾಳಿ ನಡೆಸಲಾಯಿತು ಎಂದು ಅವರು ಹೇಳಿದ್ದಾರೆ.

ಬಳಿಕ ನಡೆಸಿದ ಶೋಧದ ವೇಳೆ ಸುಮಾರು 4 ಕೆ.ಜಿ ತೂಕದ ಅತ್ಯಾಧುನಿಕ ‘ಕ್ವಾಡ್‌ಕಾಪ್ಟರ್’ ಡ್ರೋನ್ (ಡಿಜೆಐ ಮ್ಯಾಟ್ರಿಸ್) ಅನ್ನು ವಶಕ್ಕೆ ಪಡೆಯಲಾಗಿದೆ. ರೆಕ್ಕೆಗಳು ಮುರಿದು ಬಿದ್ದಿದ್ದ ಡ್ರೋನ್‌ನಲ್ಲಿ ನೈಲಾನ್ ಹಗ್ಗ, ಆರು ಪ್ರತಿಫಲಕ ದೀಪಗಳು ಮತ್ತು ಹಸಿರು ಪಟ್ಟಿ ಪತ್ತೆಯಾಗಿದೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಬಿಎಸ್‌ಎಫ್ ಪ್ರಕಟಣೆ ತಿಳಿಸಿದೆ.

ಐಎನ್‌ಎಸ್ ಅರಿಹಂತ: ಕ್ಷಿಪಣಿ ಯಶಸ್ವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲಾಂತರ್ಗಾಮಿ ‘ಐಎನ್‌ಎಸ್ ಅರಿಹಂತ’ ದಿಂದ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು (ಎಸ್‌ಎಲ್‌ಬಿಎಂ) ಬಂಗಾಳ ಕೊಲ್ಲಿಯಲ್ಲಿ ಶುಕ್ರವಾರ ಯಶಸ್ವಿಯಾಗಿ ಉಡಾಯಿಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

‘ಬಂಗಾಳ ಕೊಲ್ಲಿಯಲ್ಲಿ ಪೂರ್ವನಿರ್ಧರಿತ ಗುರಿಯನ್ನು ಈ ಕ್ಷಿಪಣಿಯು ಬಹಳ ನಿಖರವಾಗಿ ತಲುಪಿತು. ಈ ಕ್ಷಿಪಣಿ ವ್ಯವಸ್ಥೆಯ ಕಾರ್ಯಾಚರಣೆ ಹಾಗೂ ತಾಂತ್ರಿಕ ಪರಿಮಾಣಗಳನ್ನು ಈ ಪರೀಕ್ಷೆ ಸಾಬೀತುಪಡಿಸಿತು. ಇದು ಭಾರತದ ಪಡೆಗಳ ದಾಳಿ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿದೆ’ ಎಂದು ಸಚಿವಾಲಯ ಹೇಳಿದೆ.

ಈ ಕ್ಷಿಪಣಿ ವ್ಯವಸ್ಥೆಯನ್ನು ‘ಜಲಾಂತರ್ಗಾಮಿಯಿಂದ ಉಡಾಯಿಸಿದ ಬ್ಯಾಲಿಸ್ಟಿಕ್ ಕ್ಷಿಪಣಿ’ (ಎಸ್‌ಎಲ್‌ಬಿಎಂ) ಎನ್ನಲಾಗುತ್ತದೆ.

ಅಣ್ವಸ್ತ್ರ ದಾಳಿಗೆ ಪ್ರತಿರೋಧ ಒಡ್ಡುವ ಸಾಮರ್ಥ್ಯವನ್ನು ಈ ಕ್ಷಿಪಣಿ ವ್ಯವಸ್ಥೆ ಹೊಂದಿದೆ. ಇದು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಮೊದಲ ಇಂಥ ಕ್ಷಿಪಣಿ ವ್ಯವಸ್ಥೆಯೂ ಆಗಿದೆ.

‘ಐಎನ್‌ಎಸ್ ಅರಿಹಂತ’ ಜಲಾಂತರ್ಗಾಮಿಯು 750 ಕಿ.ಮೀ. (ಕೆ–15) ಹಾಗೂ 3,500 ಕಿ.ಮೀ. (ಕೆ–4) ದೂರಕ್ಕೆ ಚಿಮ್ಮಬಲ್ಲ ಕ್ಷಿಪಣಿಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.

ಡೇರಾ ಸಚ್ಚಾ ಮುಖ್ಯಸ್ಥನಿಗೆ 40 ದಿನ ಪೆರೋಲ್

ಚಂಡೀಗಢ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿ ಹರಿಯಾಣದ ಸುನಾರಿಯಾ ಜೈಲಿನಲ್ಲಿರುವ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್ ಅವರಿಗೆ 40 ದಿನಗಳ ಪೆರೋಲ್ ನೀಡಲಾಗಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಆದಂಪುರ ಉಪಚುನಾವಣೆ ನವೆಂಬರ್ 3ರಂದು ನಡೆಯಲಿದ್ದು, ಅದಕ್ಕೂ ಮುನ್ನ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಜೂನ್‌ನಲ್ಲಿ ಒಂದು ತಿಂಗಳ ಪೆರೋಲ್ ಮೇಲೆ ಗುರ್ಮೀತ್ ಹೊರಬಂದಿದ್ದರು.

ಇಬ್ಬರು ಶಿಷ್ಯೆಯರ ಮೇಲೆ ಅತ್ಯಾಚಾರ ಎಸಗಿದ್ದಕ್ಕಾಗಿ ಗುರ್ಮೀತ್ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ.

ಪಂಚಕುಲದ ಸಿಬಿಐ ವಿಶೇಷ ನ್ಯಾಯಾಲಯವು 2017ರ ಆಗಸ್ಟ್‌ನಲ್ಲಿ ಅವರನ್ನು ದೋಷಿ ಎಂಬುದಾಗಿ ಘೋಷಿಸಿತ್ತು.

ಬಂಗಾಳದಲ್ಲಿ ಗಮನಸೆಳೆದ ಕುವೆಂಪು ಚಿತ್ರ

ಒಂದನೇ ಪುಟದಿಂದ...

ರಾಷ್ಟ್ರಕವಿ ಕುವೆಂಪು, ಪೆರಿಯಾರ್, ತಮಿಳುನಾಡು ಮಾಜಿ ಮುಖ್ಯಮಂತ್ರಿಗಳಾದ ಅಣ್ಣಾದೊರೈ, ಕರುಣಾನಿಧಿ ಅವರ ಚಿತ್ರ, ಕೆಲ ಘೋಷಣೆಗಳನ್ನು ಪ್ರತಿಭಟನಕಾರರು ಹಿಡಿದಿದ್ದರು.

ಈ ಸಂಬಂಧಿಸಿದ ವಿಡಿಯೊ, ಫೋಟೊಗಳನ್ನು ‘ಬಾಂಗ್ಲಾ ಪೊಕ್ಕೋ’ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಗರಗ್ ಚಟರ್ಜಿ ಸಾಮಾಜಿಕ ಮಾಧ್ಯಮ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.



ಕುವೆಂಪು ಚಿತ್ರ ಹಿಡಿದು ಗಮನಸೆಳೆದ ಪ್ರತಿಭಟನಕಾರ –ಟ್ವಿಟರ್ ಚಿತ್ರ

ಗರಗ್ ಚಟರ್ಜಿ ಅವರ ಟ್ವೀಟ್ ಅನ್ನು ಕನ್ನಡ ಮತ್ತು ತಮಿಳು ಹೋರಾಟಗಾರರು ಭಾರಿ ಸಂಖ್ಯೆಯಲ್ಲಿ ರೀಟ್ವೀಟ್ ಮಾಡಿದ್ದಾರೆ.

ರೀಟ್ವೀಟ್ ಮಾಡಿರುವ ಜೆಡಿಎಸ್ ವಕ್ತಾರ ಪ್ರತಾಪ್ ಕಣಗಾಲ್ ಅವರು, ‘ಕೇಂದ್ರ ಸರ್ಕಾರದ ಪ್ರಾಯೋಜಿತ ಹಿಂದಿ ಹೇರಿಕೆಯ ವಿರುದ್ಧದ ಹೋರಾಟದಲ್ಲಿ ಕರ್ನಾಟಕ, ತಮಿಳುನಾಡಿನ ನಂತರ ಈಗ ಪಶ್ಚಿಮ ಬಂಗಾಳವೂ ಸೇರಿಕೊಂಡಿದೆ’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ದೆಹಲಿ ಅಬಕಾರಿ ನೀತಿ ಹಗರಣ: 25 ಕಡೆ ಇ.ಡಿ ಶೋಧ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿಯ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾಗಿರುವ ಹಣ ಅಕ್ರಮ ವರ್ಗಾವಣೆ ಆರೋಪಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ದೆಹಲಿಯ 25 ಕಡೆಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯ ಮಾರಾಟ ಮತ್ತು ವಿತರಣೆಗೆ ಸಂಬಂಧಿಸಿದ ಖಾಸಗಿ ಘಟಕಗಳ ಸ್ಥಳಗಳಲ್ಲಿ ಈ ಶೋಧ ನಡೆದಿದೆ ಎಂದು ಅವರು ಹೇಳಿದ್ದಾರೆ.

ಜಾರಿ ನಿರ್ದೇಶನಾಲಯವು ಈ ಹಗರಣಕ್ಕೆ ಸಂಬಂಧಿಸಿ ಇದುವರೆಗೂ ಹಲವು ಬಾರಿ ಶೋಧ ನಡೆಸಿದೆ. ಅಲ್ಲದೆ, ಕಳೆದ ತಿಂಗಳು ‘ಇಂಡೊಸ್ಪಿರಿಟ್’ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ, ಉದ್ಯಮಿ ಸಮೀರ್ ಮಹಾಂದ್ರು ಅವರನ್ನು ಬಂಧಿಸಿದೆ.

ಬಾಂಬ್ ಬೆದರಿಕೆ: ರಷ್ಯಾ ವಿಮಾನ ತುರ್ತು ಭೂಸ್ಪರ್ಶ


ನವದೆಹಲಿ (ಪಿಟಿಐ): ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ರಷ್ಯಾದ ಮಾಸ್ಕೊದಿಂದ ದೆಹಲಿಗೆ ಬರುತ್ತಿದ್ದ ವಿಮಾನವು ಶುಕ್ರವಾರ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ತುರ್ತು ಭೂಸ್ಪರ್ಶ ಮಾಡಿತು.

‘ಏರೊಫ್ಲೋಟ್ ವಿಮಾನದಲ್ಲಿ 386 ಮಂದಿ ಪ್ರಯಾಣಿಕರು ಹಾಗೂ 14 ಮಂದಿ ಸಿಬ್ಬಂದಿ ಸೇರಿ ಒಟ್ಟು 400 ಮಂದಿ ಪ್ರಯಾಣಿಸುತ್ತಿದ್ದರು. ಗುರುವಾರ ತಡರಾತ್ರಿ 2.48 ಹೊತ್ತಿಗೆ ವಿಮಾನವು ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿಯಿತು’ ಎಂದು ಅಧಿಕಾರಿಗಳು ತಿಳಿಸಿದರು.

‘ಕೇಂದ್ರೀಯ ಕೈಗಾರಿಕಾ ಸುರಕ್ಷಾ ಪಡೆಗೆ (ಸಿಐಎಸ್‌ಎಫ್) ಇ–ಮೇಲ್ ಮೂಲಕ ವಿಮಾನದಲ್ಲಿ ಬಾಂಬ್ ಇರುವುದಾಗಿ ಗುರುವಾರ ರಾತ್ರಿ ಬೆದರಿಕೆ ಸಂದೇಶ ಬಂದಿತ್ತು’ ಎಂದರು.

‘ತಕ್ಷಣದಲ್ಲೇ 400 ಮಂದಿ ವಿಮಾನದಿಂದ ಕೆಳಗಿಳಿಸಿ, ತಪಾಸಣೆ ಮಾಡಲಾಯಿತು. ಆದರೆ, ಬಾಂಬ್ ಮಾಹಿತಿ ದೊರೆಯಲಿಲ್ಲ’ ಎಂದರು.

ಷೇರುಪೇಟೆ ವಹಿವಾಟು ▲ 685



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,014
ಇಂದಿನ ಅಂತ್ಯ	17,185
▲	171
ದಿನದ ಗರಿಷ್ಠ	17,348

ವಿನಿಮಯ ದರ

$ ಡಾಲರ್	82.19
£ ಪೌಂಡ್	92.54
€ ಯುರೊ	80.15
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1660 (1660)
ಸೋಯಾ (ರಿಫೈಂಡ್)	₹1290 (1282)
ಸೂರ್ಯಕಾಂತಿ (ರಿಫೈಂಡ್)	₹1500 (1475)
ಪಾಮೋಲಿನ್	₹940 (930)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹136

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರ 261 ಇಳಿಕೆ ಕಂಡು ₹51,098 ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹692 ಇಳಿಕೆಯಾಗಿ ₹57,477ರಂತೆ ಮಾರಾಟವಾಯಿತು.


ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಮುಖ ಆಗಿರುವುದರಿಂದ ದೇಶದಲ್ಲೂ ಚಿನ್ನದ ದರ ಇಳಿಕೆ ಕಂಡಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

685 ಅಂಶ ಏರಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಇನ್ಫೊಸಿಸ್, ಬ್ಯಾಂಕಿಂಗ್ ಮತ್ತು ಹಣಕಾಸು ಷೇರುಗಳ ಉತ್ತಮ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ವಹಿವಾಟಿನ ನಡುವಿನಲ್ಲಿ 1,200 ಅಂಶಗಳವರೆಗೆ ಏರಿಕೆ ಕಂಡಿತ್ತು. ವಹಿವಾಟಿನ ಅಂತ್ಯದ ವೇಳೆಗೆ 685 ಅಂಶಗಳ ಗಳಿಕೆಯೊಂದಿಗೆ 57,920 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 171 ಅಂಶ ಏರಿಕೆ ಆಗಿ 17,185 ಅಂಶಗಳಿಗೆ ತಲುಪಿತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭವು



ನಿರೀಕ್ಷೆಗಿಂತಲೂ ಹೆಚ್ಚು ಏರಿಕೆ ಕಂಡಿದೆ. ಹೀಗಾಗಿ ಸೆನ್ಸೆಕ್ಸ್‌ನಲ್ಲಿ ಇನ್ಫೊಸಿಸ್ ಷೇರು ಮೌಲ್ಯ ಶೇ 3.82ರಷ್ಟು ಏರಿಕೆ ಕಂಡಿತು. ಐ.ಟಿ. ಸೂಚ್ಯಂಕ ಶೇ 1.72ರಷ್ಟು, ಬ್ಯಾಂಕಿಂಗ್ ಶೇ 1.71ರಷ್ಟು ಏರಿಕೆ ಕಂಡವು.

ಮಧ್ಯಾಹ್ನದ ಬಳಿಕ ಹೂಡಿಕೆದಾರರು ಲಾಭ ಗಳಿಸಿಕೊಳ್ಳಲು ಮುಂದಾಗಿದ್ದರಿಂದ ಸೂಚ್ಯಂಕಗಳು ಆರಂಭದಲ್ಲಿ ಕಂಡಿದ್ದ ಏರಿಕೆಯಲ್ಲಿ ಒಂದಿಷ್ಟನ್ನು ಕಳೆದುಕೊಳ್ಳುವಂತೆ ಆಯಿತು. ಬ್ಯಾಂಕಿಂಗ್ ಮತ್ತು ಐ.ಟಿ. ಷೇರುಗಳ ಖರೀದಿ ಹೆಚ್ಚಿತ್ತು ಎಂದು ಹೆಮ್ ಸೆಕ್ಯುರಿಟೀಸ್‌ನ ನಿಧಿ ನಿರ್ವಾಹಕ ಮೋಹಿತ್ ನಿಗಮ್ ಹೇಳಿದ್ದಾರೆ.

ಬ್ರೆಂಟ್ ತೈಲ ದರ ಶೇ 0.81ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 93.80 ಡಾಲರ್‌ಗೆ ತಲುಪಿತು.

ರೂಪಾಯಿ ಮೌಲ್ಯ ಹೆಚ್ಚಳ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 5 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹82.19ರಂತೆ ವಿನಿಮಯಗೊಂಡಿತು.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹251-619
ದ್ವಿತಳಿ (ಬಿ.ವಿ)	₹492-765

ಮುಂಬೈ ಧಾರಣೆ

ಶೇಂಗಾ

14–10-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1200 (1182)
ಪಾಮ್ ವಾರದ ಡೆಲಿವರಿ	938 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1385)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,150 (50,300)

ಬೆಳ್ಳಿ ಕೆ.ಜಿ 56,000 (56,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಕುಮಟ	
ಚಿಪ್ಪು	28099-33269
ಕೋಕ	20509-31019
ಹೊಸಚಾಲಿ	37299-42209
ಹಳೆಚಾಲಿ	50000-56000
ಪುತ್ತೂರು	
ಹೊಸತು	35500-48500
ಹೊಸನಗರ	
ಬಿಳಿಗೋಟು	28189-28189
ಚಾಲಿ	38600-38600
ಕೆಂಪುಗೋಟು	32000-38699
ರಾಶಿ	48099-50699
ಸಿದ್ದಾಪುರ	
ಬಿಳಿಗೋಟು	28099-33899
ಚಾಲಿ	37549-42144
ಕೋಕ	26099-32499
ಕೆಂಪುಗೋಟು	32089-34089
ರಾಶಿ	48249-50609
ತಟ್ಟಿಬೆಟ್ಟೆ	38109-46209
ಶಿರಸಿ	
ಬೆಟ್ಟೆ	37099-46999
ಬಿಳಿಗೋಟು	20011-35899
ಚಾಲಿ	36299-43500
ಕೆಂಪುಗೋಟು	14199-34131
ರಾಶಿ	41699-49808
ಯಲ್ಲಾಪುರ	
ಬಿಳಿಗೋಟು	25699-36499
ಚಾಲಿ	38099-43131
ಕೋಕ	20088-32281
ಕೆಂಪುಗೋಟು	30699-35687
ರಾಶಿ	48667-52469
ತಟ್ಟಿಬೆಟ್ಟೆ	38119-47829

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15700	16100	202.15 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2099 ಡಾಲರ್ಸ್

ಜೈಪ್ರಕಾಶ್ ಸಿಮೆಂಟ್ ಉದ್ಯಮ ಖರೀದಿ ಇಲ್ಲ: ಅದಾನಿ

ಬೆಂಗಳೂರು (ರಾಯಿಟರ್ಸ್): ಜೈಪ್ರಕಾಶ್ ಅಸೋಸಿಯೇಟ್ಸ್ ಲಿಮಿಟೆಡ್‌ನ ಸಿಮೆಂಟ್ ಉದ್ದಿಮೆಯನ್ನು ಖರೀದಿಸುವ ಆಲೋಚನೆ ಇಲ್ಲ ಎಂದು ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಶುಕ್ರವಾರ ತಿಳಿಸಿದೆ.

ಸಾಲದ ಸುಳಿಯಲ್ಲಿ ಇರುವ ಜೈಪ್ರಕಾಶ್ ಸಮೂಹದ ಸಿಮೆಂಟ್ ಕಂಪನಿಗಳನ್ನು ₹ 5 ಸಾವಿರ ಕೋಟಿಗೆ ಖರೀದಿಸಲು ಅದಾನಿ ಸಮೂಹವು ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿದ್ದವು.

ಈ ವರದಿಯ ಬೆನ್ನಲ್ಲೇ ಸಿಮೆಂಟ್ ಉದ್ದಿಮೆಯನ್ನು ಖರೀದಿಸುವ ಯಾವುದೇ ನಿರ್ಧಾರ ಇಲ್ಲ ಎಂದು ಅದಾನಿ ಸಮೂಹವು ಷೇರುಪೇಟೆಗೆ ಮಾಹಿತಿ ನೀಡಿದೆ.

ತುಸು ತಗ್ಗಿದೆ ಆಹಾರ, ಇಂಧನ, ತಯಾರಿಸಿದ ಉತ್ಪನ್ನಗಳ ಬೆಲೆ ಏರಿಕೆ

ಶೇ 10.7ಕ್ಕೆ ತಗ್ಗಿದ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧಾರಿತ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ 18 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಆಹಾರ, ಇಂಧನ ಮತ್ತು ತಯಾರಿಸಿದ ಉತ್ಪನ್ನಗಳ ಬೆಲೆ ಏರಿಕೆ ತಗ್ಗಿರುವ ಕಾರಣ ಸಗಟು ಹಣದುಬ್ಬರ ಪ್ರಮಾಣವು ಶೇಕಡ 10.7ಕ್ಕೆ ತಗ್ಗಿದೆ.

ಸಗಟು ಹಣದುಬ್ಬರವು ಸತತ ನಾಲ್ಕು ತಿಂಗಳುಗಳಿಂದ ಇಳಿಕೆಯ ಹಾದಿಯಲ್ಲಿ ಇದೆ. ಹೀಗಿದ್ದರೂ, ಇದು ಎರಡಂಕಿ ಪ್ರಮಾಣಕ್ಕಿಂತ ಕೆಳಗೆ ಬಂದಿಲ್ಲ.

‘ಸೆಪ್ಟೆಂಬರ್‌ನಲ್ಲಿ ಖನಿಜ ತೈಲ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು, ಮೂಲ ಲೋಹ, ವಿದ್ಯುತ್, ಜವಳಿ ವಸ್ತುಗಳ ಬೆಲೆ ಏರಿಕೆಯು ಸಗಟು ಹಣದುಬ್ಬರಕ್ಕೆ ಕೊಡುಗೆ ನೀಡಿವೆ’ ಎಂದು ಪ್ರಕಟಣೆ ತಿಳಿಸಿದೆ.

ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 11.80ರಷ್ಟು ಇತ್ತು.

> **ಮುಖ್ಯಾಂಶಗಳು**
>
> - ಎರಡಂಕಿ ಮಟ್ಟದಲ್ಲೇ ಸಗಟು ಹಣದುಬ್ಬರ
> - 9 ತಿಂಗಳುಗಳಿಂದ ಗರಿಷ್ಠ ಮಟ್ಟದಲ್ಲಿ ಚಿಲ್ಲರೆ ಹಣದುಬ್ಬರ
> - ಮುಂದಿನ ದಿನಗಳಲ್ಲಿ ಸಗಟು ಹಣದುಬ್ಬರ ಇಳಿಕೆ ಸಾಧ್ಯತೆ



ಸಗಟು ಹಣದುಬ್ಬರದ ಲೆಕ್ಕಾಚಾರದಲ್ಲಿ ಆಹಾರ ವಸ್ತುಗಳನ್ನು ಪರಿಗಣಿಸುವುದು, ಚಿಲ್ಲರೆ ಹಣದುಬ್ಬರ ಪ್ರಮಾಣ ಲೆಕ್ಕಹಾಕುವಾಗ ಪರಿಗಣಿಸುವುದಕ್ಕಿಂತ ಕಡಿಮೆ ಎಂದು ಆಕ್ಯೂಟ್ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ಮುಖ್ಯ ವಿಶ್ಲೇಷಣಾ ಅಧಿಕಾರಿ ಸುಮನ್ ಚೌಧರಿ ತಿಳಿಸಿದ್ದಾರೆ.

ರೆಪೊ ದರವನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ತೀರ್ಮಾನ ಕೈಗೊಳ್ಳಲು ಆರ್‌ಬಿಐ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ. ಚಿಲ್ಲರೆ ಹಣದುಬ್ಬರವು ಸತತ ಒಂಬತ್ತು ತಿಂಗಳುಗಳಿಂದ ಗರಿಷ್ಠ ಮಟ್ಟಕ್ಕಿಂತ ಹೆಚ್ಚಾಗಿದೆ.

‘ಅರ್ಥ ವ್ಯವಸ್ಥೆಯ ಚೇತರಿಕೆಯು ನಿಧಾನಗತಿಗೆ ತಿರುಗಿರುವ ಕಾರಣದಿಂದಾಗಿ ಹಾಗೂ ಸರಕುಗಳ ಬೆಲೆ ಹೆಚ್ಚಳದ ಸಾಧ್ಯತೆ ಕಡಿಮೆ ಇರುವ ಕಾರಣದಿಂದಾಗಿ ಸಗಟು ಹಣದುಬ್ಬರವು ಮುಂದಿನ ದಿನಗಳಲ್ಲಿ ತಗ್ಗಬಹುದು ಎಂಬುದು ನಮ್ಮ ನಿರೀಕ್ಷೆ’ ಎಂದು ಚೌಧರಿ ಹೇಳಿದ್ದಾರೆ.

ಬಿಪಿಸಿಎಲ್: ತ್ವರಿತ ಇ.ವಿ. ಚಾರ್ಜಿಂಗ್ ಕಾರಿಡಾರ್

ಬೆಂಗಳೂರು–ಮೈಸೂರು–ಕೊಡಗು, ಬೆಂಗಳೂರು–ಚೆನ್ನೈ ಹೆದ್ದಾರಿಯಲ್ಲಿ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್), ಬೆಂಗಳೂರು-ಚೆನ್ನೈ ಮತ್ತು ಬೆಂಗಳೂರು-ಮೈಸೂರು-ಕೊಡಗು ಹೆದ್ದಾರಿಗಳಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ತ್ವರಿತ ಚಾರ್ಜಿಂಗ್ ಸೌಲಭ್ಯ ಒದಗಿಸುವ ಕಾರಿಡಾರ್‌ಗಳಿಗೆ ಶುಕ್ರವಾರ ಚಾಲನೆ ನೀಡಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಎಸ್. ರವಿ, ‘ಹೆದ್ದಾರಿಯ ಎರಡೂ ಕಡೆಗಳಲ್ಲಿ, 100 ಕಿಲೋ ಮೀಟರ್ ಅಂತರದಲ್ಲಿ ಒಟ್ಟು 9 ಪೆಟ್ರೋಲ್ ಪಂಪ್‌ಗಳಲ್ಲಿ 25 ಕಿಲೋವಾಟ್‌ನ ತ್ವರಿತ ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದರು.

ಬೆಂಗಳೂರು–ಮೈಸೂರು–ಬಂಡೀಪುರ–ಊಟಿ, ಬೆಂಗಳೂರು–ತಿರುಪತಿ ಹಾಗೂ ಬೆಂಗಳೂರು–ಕೊಡೈಕೆನಾಲ್ ಮಾರ್ಗಗಳಲ್ಲಿಯೂ ಈ ವ್ಯವಸ್ಥೆ ಕಲ್ಪಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಎರಡನೇ ಹಂತದ ಯೋಜನೆ ಇದಾಗಿದ್ದು, ಮೊದಲ ಹಂತದಲ್ಲಿ ಚೆನ್ನೈ–ತಿರುಚ್ಚಿ–ಮಧುರೆ ಹೆದ್ದಾರಿಯಲ್ಲಿ ಜಾರಿಯಾಗಿದೆ. ಆರು ತಿಂಗಳಿನಲ್ಲಿ ದೇಶದಾದ್ಯಂತ ಹಂತ ಹಂತವಾಗಿ ಒಟ್ಟು 200 ಕಾರಿಡಾರ್‌ಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಇಡ್ರೈವ್ (eDrive) ಆ್ಯಪ್ ಮೂಲಕ ಕಂಪನಿಯ ಚಾರ್ಜಿಂಗ್ ಕೇಂದ್ರಗಳ ಬಗ್ಗೆ ಮಾಹಿತಿ ಪಡೆಯಬಹುದು. ಚಾರ್ಜಿಂಗ್ ಸ್ಲಾಟ್ ಸಹ ಬುಕ್ ಮಾಡಬಹುದು. 30 ನಿಮಿಷ ಚಾರ್ಜ್ ಮಾಡಿದರೆ 125 ಕಿಲೋ ಮೀಟರ್‌ವರೆಗೆ ಚಲಾಯಿಸಬಹುದು. HelloBPCL ಆ್ಯಪ್ ಮೂಲಕ ಹಣ ಪಾವತಿಸಬಹುದು.

ತನ್ನ 7 ಸಾವಿರ ಪೆಟ್ರೋಲ್ ಪಂಪ್‌ಗಳನ್ನು ಬಹುಬಗೆಯ ಇಂಧನ ಪೂರೈಕೆ ಮಾಡುವ ಕೇಂದ್ರಗಳಾಗಿ ಪರಿವರ್ತಿಸಲು ಕಂಪನಿಯು ಉದ್ದೇಶಿಸಿದೆ. ಇ.ವಿ. ಚಾರ್ಜಿಂಗ್ ಸೌಲಭ್ಯವನ್ನೂ ಇದು ಒಳಗೊಂಡಿರಲಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಕೌಟುಂಬಿಕ ವಿಚಾರಕ್ಕೆ ಕೊಲೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ಮಾರುತಿ (26) ಎಂಬುವವರನ್ನು ಶುಕ್ರವಾರ ಕೊಲೆ ಮಾಡಲಾಗಿದ್ದು, ಈ ಸಂಬಂಧ ಸೋದರ ಸಂಬಂಧಿ ಅಶೋಕ (27) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮಾರುತಿ ದ್ವಿಚಕ್ರ ವಾಹನ ದುರಸ್ತಿ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಅಶೋಕ, ಆಟೊ ಚಾಲಕರು. ಇವರಿಬ್ಬರೂ ಸೋದರ ಸಂಬಂಧಿಕರು. ಕೌಟುಂಬಿಕ ವಿಚಾರವಾಗಿ ಇಬರಿಬ್ಬರ ನಡುವೆ ಜಗಳವಾಗಿ ಕೊಲೆಯಲ್ಲಿ ಅಂತ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ತಿಪ್ಪಸಂದ್ರ ಕೆರೆ ಬಳಿಯ 80 ಅಡಿ ರಸ್ತೆಯಲ್ಲಿ ಮಾರುತಿ ಹಾಗೂ ಅಶೋಕ ನಡುವೆ ಗುರುವಾರ ಜಗಳ ಆಗಿತ್ತು. ಇದೇ ಸಂದರ್ಭ ದಲ್ಲೇ ಆರೋಪಿ ಚಾಕುವಿನಿಂದ ಮಾರುತಿ ಅವರಿಗೆ ಇರಿದು ಕೊಂದಿರುವುದು ಪ್ರತ್ಯಕ್ಷದರ್ಶಿಗಳಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ಸಮವಸ್ತ್ರ ತೆಗೆಸಿದ್ದಕ್ಕೆ' ಬೆಂಕಿ ಹಚ್ಚಿಕೊಂಡ ಬಾಲಕಿ

ಜೆಮ್‌ಶೆಡ್‌ಪುರ, ಜಾರ್ಖಂಡ (ಪಿಟಿಐ): ಪರೀಕ್ಷೆ ವೇಳೆ ನಕಲು ಮಾಡುತ್ತಿದ್ದ ಶಂಕೆ ಮೇಲೆ ಕೊಠಡಿ ಮೇಲ್ವಿಚಾರಕಿ 'ಬಲವಂತದಿಂದ ಸಮವಸ್ತ್ರ ತೆಗೆಸಿದ್ದಕ್ಕಾಗಿ' ಬಾಲಕಿಯೊಬ್ಬಳು ಬೆಂಕಿ ಹಚ್ಚಿ ಕೊಂಡಿದ್ದಾಳೆ ಎನ್ನಲಾದ ಘಟನೆ ನಡೆದಿದೆ.

ತೀವ್ರ ಸುಟ್ಟಗಾಯಗಳಾಗಿರುವ ಬಾಲಕಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಲಕಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

'ನಕಲು ಮಾಡುವುದಕ್ಕಾಗಿ ಚೀಟಿಗಳನ್ನು ತಂದು, ಅವುಗಳನ್ನು ನಾನು ಸಮವಸ್ತ್ರದಲ್ಲಿ ಬಚ್ಚಿಟ್ಟಿ-ಕೊಂಡಿದ್ದೇನೆ ಎಂದು ಶಂಕಿಸಿದ ಮೇಲ್ವಿಚಾರಕಿ, ಪರಿಶೀಲಿಸಲು ನನ್ನನ್ನು ಪರೀಕ್ಷಾ ಕೊಠಡಿ ಪಕ್ಕದ ಕೋಣೆಗೆ ಕರೆದೊಯ್ದರು. ನಾನು ಭಾರಿ ಪ್ರತಿರೋಧ ಒಡ್ಡಿದೆ. ಆದರೂ, ಅವರು ನನ್ನ ಸಮವಸ್ತ್ರ ತೆಗೆಸಿದರು' ಎಂದು ಅಧಿಕಾರಿಗಳಿಗೆ ಬಾಲಕಿ ಹೇಳಿಕೆ ನೀಡಿದ್ದಾಳೆ.

ಪರೀಕ್ಷಾ ಮೇಲ್ವಿಚಾರಣೆಗೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಶಿಕ್ಷಕಿ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

550 ಸ್ಥಳದಲ್ಲಿ ರಾಜಕಾಲುವೆ ಒತ್ತುವರಿ: ಪ್ರಕ್ರಿಯೆ ಪೂರ್ಣಕ್ಕೆ ತಹಶೀಲ್ದಾರ್‌ಗೆ ಬಿಬಿಎಂಪಿ ಮನವಿ

ಅ.31ರೊಳಗೆ ಸರ್ವೆ, ತೆರವು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿಯ ಸರ್ವೆ ನಡೆಸಿ, ನೋಟಿಸ್ ನೀಡಿ, ತೆರವಿಗೆ ಆದೇಶ ನೀಡುವ ಪ್ರಕ್ರಿಯೆಯನ್ನು ಕಂದಾಯ ಇಲಾಖೆ ಅ.31ರೊಳಗೆ ಪೂರ್ಣಗೊಳಿಸಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ನಾವು 550 ಸ್ಥಳಗಳಲ್ಲಿ ಒತ್ತು-ವರಿಯನ್ನು ಗುರುತಿಸಿ ಅದಕ್ಕೆ ಸಂಬಂಧಿಸಿದ ನಕ್ಷೆ ಹಾಗೂ ತೆರವಿನ ಆದೇಶ ನೀಡಬೇಕು ಎಂದು ಕಂದಾಯ ಇಲಾಖೆಗೆ ಅ.10ರಂದು ಪಟ್ಟಿ ನೀಡಿದ್ದೇವೆ. 15 ದಿನಗಳಲ್ಲಿ ಅದನ್ನು ಮುಗಿಸಬೇಕು ಎಂದು ಹೇಳಿದ್ದೇವೆ. ಇನ್ನೈದು ದಿನ ಹೆಚ್ಚಾಗಬಹುದು. ಅದೆಲ್ಲ ಆದೇಶವಾದ ನಂತರ ಎಲ್ಲ ಒತ್ತುವರಿಯನ್ನೂ ತೆರವು ಮಾಡಲಾಗುತ್ತದೆ' ಎಂದು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

'ಸರ್ವೆ ಮಾಡಲು ಭೂಮಾಪಕರನ್ನು ಅವರೂ ನೇಮಿ-ಸಬೇಕಾಗುತ್ತದೆ. ಬೇರೆ ಜಿಲ್ಲೆಗಳಿಂದ ಕರೆತಂದು ಸರ್ವೆ ನಡೆಸುವುದಾಗಿ ತಹಶೀಲ್ದಾರ್ ತಿಳಿಸಿದ್ದಾರೆ. ಮಹದೇವಪುರ, ಬೆಂಗಳೂರು ದಕ್ಷಿಣ, ಕೆ.ಆರ್.ಪುರ ವಿಧಾನಸಭೆ ಕ್ಷೇತ್ರಗ-ಳಲ್ಲಿ ಸರ್ವೆ ಕಾರ್ಯ ನಡೆಸುತ್ತೇವೆ ಎಂದು ಹೇಳಿದ್ದಾರೆ. ಯಲಹಂಕದಲ್ಲೂ ಹೆಚ್ಚಿನ ಒತ್ತುವರಿ ಇದೆ ಎಂದು ನಾವು ತಿಳಿಸಿದ್ದೇವೆ. ಎಲ್ಲವನ್ನೂ ಶೀಘ್ರ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ' ಎಂದರು ವಿವರ ನೀಡಿದರು.

'ನ್ಯಾಯಾಲಯದಲ್ಲಿ ಒತ್ತುವರಿ ತೆರವಿಗೆ ತಡೆಯಾಜ್ಞೆ ಇದ್ದ ಸ್ಥಳದಲ್ಲೂ ಕೋರ್ಟ್ ಆದೇಶದಂತೆ ಜಂಟಿ ಸರ್ವೆ ನಡೆಸಲಾಗುತ್ತದೆ. ಮೊದಲು ರಾಜಕಾಲುವೆ ಒತ್ತುವರಿ ತೆರವಿಗೆ ಒತ್ತು ನೀಡುತ್ತೇವೆ. ನಾವು ನೀಡಿರುವ 550 ಸ್ಥಳಗಳಲ್ಲಿ ಬಫರ್ ಝೋನ್‌ನ ಮಾಹಿತಿಯೂ ಇದೆ. ರಾಷ್ಟ್ರೀಯ ಹಸಿರುಪೀಠ (ಎನ್‌ಜಿಟಿ) ಆದೇಶ ನೀಡಿದ್ದು ಯಾವಾಗ, ಎಂದಿನಿಂದ ಅನ್ವಯ ಎಂಬುದನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿ ಬಫರ್ ಝೋನ್‌ನಲ್ಲಿರುವ ಒತ್ತುವರಿಯನ್ನೂ ತೆರವು ಮಾಡುವ ಕಾರ್ಯವನ್ನು ಎರಡನೇ ಹಂತದಲ್ಲಿ ತೆಗೆದುಕೊಳ್ಳಲಾಗುತ್ತದೆ' ಎಂದರು.

'ಬೆಂಗಳೂರು ವಿಶ್ವವಿದ್ಯಾಲಯ ಆವರಣದ ರಸ್ತೆಯಲ್ಲಿ ಪೊಲೀಸರು ಸಲಹೆ ನೀಡಿದರೆ, ಅವರು ಎಲ್ಲಿ ಹೇಳುತ್ತಾರೋ ಅಲ್ಲಿ ರಸ್ತೆ ಉಬ್ಬು ನಿರ್ಮಿಸಲಾಗುತ್ತದೆ. ಅವರು ಬೇಡ ಎಂದ ಕಡೆ ತೆಗೆಯಲಾಗುತ್ತದೆ. ಸಂಚಾರ ಪೊಲೀಸರ ಸಲಹೆ ಮೇರೆಗೆ ಬಿಬಿಎಂಪಿ ರಸ್ತೆ ಉಬ್ಬು ಹಾಕುವ ಅಥವಾ ತೆಗೆಯುವ ಕೆಲಸ ಮಾಡುತ್ತದೆ' ಎಂದು ಹೇಳಿದರು.

ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ನಿಂತಿಲ್ಲ. ಆದರೆ ಮಳೆ ಪೂರ್ಣವಾಗಿ ನಿಂತಿಲ್ಲ. ಕಳೆದ ಒಂದು ವಾರದಿಂದಲೂ ಮುಂದಿನ 10 ದಿನ ಭಾರಿ ಮಳೆ ಎಂಬ ಮುನ್ಸೂಚನೆ ಇದೆ. ಮಳೆ ಏರುಪೇರಿನಿಂದ ಸ್ವಲ್ಪ ಹಿನ್ನಡೆಯಾಗಿದೆ. ವೆಟ್ ಮಿಕ್ಸ್, ಮರಳು ಮಿಶ್ರಣವನ್ನು ಹಾಕುತ್ತಿದ್ದೇವೆ. ಬೇರೆ ಮಿಶ್ರಣ ಹಾಕಲು ಮಳೆಯಿಂದ ತೊಂದರೆಯಾಗಿದೆ ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

ನಿರ್ಮಾಣ 10 ದಿನಗಳಲ್ಲಿ ಆರಂಭ: ತುಷಾರ್ ಗಿರಿನಾಥ್

ರಾಜಕಾಲುವೆ ನಿರ್ಮಾಣ ಕಾಮಗಾರಿಯನ್ನು ಇನ್ನು 10–15 ದಿನದಲ್ಲಿ ಆರಂಭಿಸಲಾಗುತ್ತದೆ. ರಾಜ್ಯ ಸರ್ಕಾರ ₹1,614 ಕೋಟಿ ವೆಚ್ಚದ ರಾಜಕಾಲುವೆ ನಿರ್ಮಾಣಕ್ಕೆ ಸಮ್ಮತಿಸಿದೆ. ಶೇ 50ರಷ್ಟು ಕಾರ್ಯಾದೇಶಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಉಳಿದ ಕಾರ್ಯಾದೇಶಕ್ಕೂ ಅನುಮೋದನೆ ಸದ್ಯದಲ್ಲಿಯೇ ಸಿಗಲಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಇದಲ್ಲದೆ, ಮಹದೇವಪುರ, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಯಲಹಂಕ, ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ₹313 ಕೋಟಿ ವೆಚ್ಚದಲ್ಲಿ ರಾಜಕಾಲುವೆ ನಿರ್ಮಾಣ ಕಾರ್ಯಕ್ಕೆ ಟೆಂಡರ್ ಕರೆಯಲಾಗಿದೆ. ಈ ಕಾರ್ಯವೂ ಶೀಘ್ರ ಆರಂಭವಾಗಲಿದೆ ಎಂದರು.

ಖಾಲಿ ಜಾಗಕ್ಕೆ ಆದೇಶ ಬೇಕಿಲ್ಲ..

'ಮಹದೇವಪುರ ವಲಯಕ್ಕೆ ಸಂಬಂಧಿಸಿದಂತೆ 188 ಒತ್ತುವರಿ ಪ್ರಕರಣಗಳಿಗೆ ಈಗಾಗಲೇ ತೆರವು ಆದೇಶ ನೀಡಲಾಗಿದೆ. ಬಿಬಿಎಂಪಿ ನೀಡಿರುವ ಒತ್ತುವರಿ ಪಟ್ಟಿಯಲ್ಲಿ ಖಾಲಿ ಜಾಗವೂ ಸೇರಿದೆ. ಇದಕ್ಕೆ ತೆರವು ಆದೇಶ ಬೇಕಿಲ್ಲ. ಬಿಬಿಎಂಪಿ ರಾಜಕಾಲುವೆ ನಿರ್ಮಿಸಬಹುದು. ನಮ್ಮ ವ್ಯಾಪ್ತಿಗೆ ಬರುವ ಬಹುತೇಕ ಪ್ರಕರಣಗಳಿಗೆ ತೆರವು ಆದೇಶ ನೀಡಿಯಾಗಿದೆ. ಕೆಲವು ಪ್ರಕರಣಗಳಷ್ಟೇ ಬಾಕಿ ಇದ್ದು ಅವುಗಳನ್ನೂ ಶೀಘ್ರ ವಿಲೇವಾರಿ ಮಾಡಲಾಗುತ್ತದೆ' ಎಂದು ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಎಸ್. ಅಜಿತ್‌ಕುಮಾರ್ ರೈ ತಿಳಿಸಿದರು.

'ಸಾಲ ಕೊಡದಿದ್ದಕ್ಕೆ ಮಾಲೀಕನ ಕೊಂದು ಕಳ್ಳತನ'

'ದೀಪಂ ಎಲೆಕ್ಟ್ರಿಕಲ್ಸ್' ಮಳಿಗೆಯ ಜುಗರಾಜ್ ಜೈನ್ ಕೊಲೆ: ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ



ಜುಗರಾಜ್ ಜೈನ್

ಬೆಂಗಳೂರು: ಚಿಕ್ಕಪೇಟೆಯ-ಲ್ಲಿರುವ 'ದೀಪಂ ಎಲೆಕ್ಟ್ರಿಕಲ್ಸ್' ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಚಾಮರಾಜಪೇಟೆ ಪೊಲೀಸರು, ನ್ಯಾಯಾಲಯಕ್ಕೆ 345 ಪುಟಗಳ ದೋಷಾರೋಪ ಪಟ್ಟಿಯನ್ನು ಇತ್ತೀಚೆಗೆ ಸಲ್ಲಿಸಿದ್ದಾರೆ.

'ಜುಗರಾಜ್ ಅವರನ್ನು ಮೇ 24ರಂದು ಕೊಲೆ ಮಾಡಲಾಗಿತ್ತು. ಮನೆಯಲ್ಲಿದ್ದ 10 ಕೆ.ಜಿ.ಗೂ ಹೆಚ್ಚು ಚಿನ್ನಾಭರಣ ಹಾಗೂ ₹50 ಲಕ್ಷಕ್ಕೂ ಹೆಚ್ಚು ನಗದು ಕದ್ದೊಯ್ಯಲಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ, ಕೆಲಸಗಾರ ಬಿಜೋರಾಮ್ (24) ಎಂಬಾತ ಕೃತ್ಯ ಎಸಗಿದ್ದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ಬಿಜೋರಾಮ್‌ನನ್ನು ಗುಜರಾತ್‌ನಲ್ಲಿ ಬಂಧಿಸಲಾಯಿತು. ಕೃತ್ಯಕ್ಕೆ ಸಹಕರಿಸಿದ್ದ ಪೂರನ್ ರಾಮ್ ದೇವಸಿ (26), ಮಹೇಂದ್ರ ದೇವಸಿ (27) ಸೇರಿ ನಾಲ್ವರನ್ನೂ ಸೆರೆಹಿಡಿಯಲಾ-ಗಿತ್ತು. ಇವರೆಲ್ಲರ ವಿರುದ್ಧ ಇದೀಗ ದೋಷರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಪತ್ನಿ, ಮಗುವಿಗೆ ಅನಾರೋಗ್ಯ: 'ಆರೋಪಿ ಬಿಜೋರಾಮ್, ಕೆಲಸಕ್ಕೆಂದು ನಗರಕ್ಕೆ ಬಂದಿದ್ದ. ಜುಗರಾಜ್ ಜೈನ್ ಬಳಿ ಕೆಲಸಕ್ಕೆ ಸೇರಿದ್ದ. ಬಿಜೋರಾಮ್ ಕುಟುಂಬ ರಾಜಸ್ಥಾನದಲ್ಲಿತ್ತು. ಮೊದಲ ಹೆರಿಗೆ ಮಾಡಿಸಿಕೊಂಡಿದ್ದ ಆತನ ಪತ್ನಿ ಹಾಗೂ ಮಗುವಿಗೆ ಆರೋಗ್ಯ ಸಮಸ್ಯೆ ಎದುರಾಗಿತ್ತು' ಎಂಬ ಸಂಗತಿ ಪಟ್ಟಿಯಲ್ಲಿದೆ.

'ತಿಂಗಳಿಗೆ ₹ 16 ಸಾವಿರ ಸಂಬಳ ಪಡೆಯುತ್ತಿದ್ದ ಬಿಜೋರಾಮ್, ಮೂರು ಸಾವಿರ ಮಾತ್ರ ಪತ್ನಿಗೆ ಕಳುಹಿಸುತ್ತಿದ್ದ. ಇದು ಪತ್ನಿ ಹಾಗೂ ಮಗುವಿನ ಚಿಕಿತ್ಸೆಗೆ ಸಾಕಾಗುತ್ತಿರಲಿ-ಲ್ಲ. ಬೇಸತ್ತ ಪತ್ನಿ, 'ಹಣ ಸಾಲುತ್ತಿಲ್ಲ. ಚಿಕಿತ್ಸೆ ಪಡೆಯಲು ₹ 5 ಲಕ್ಷ ಕಳುಹಿಸು' ಎಂದಿದ್ದರು.'

'ಮಾಲೀಕ ಜುಗ್ಗುರಾಜ್ ಹಾಗೂ ಅವರ ಪುತ್ರ ಆನಂದ್ ಬಳಿ ಹೋಗಿದ್ದ ಬಿಜೋರಾಮ್, ₹ 5 ಲಕ್ಷ ಸಾಲು ನೀಡುವಂತೆ ಕೇಳಿದ್ದ. ಅವರು ಕೊಟ್ಟಿರಲಿಲ್ಲ. ಅವಾಗಲೇ ಬಿಜೋರಾಮ್, ಮಾಲೀಕರ ಮನೆಯಲ್ಲಿರುವ ಚಿನ್ನಾಭರಣ ಹಾಗೂ ನಗದು ಕದಿಯಲು ಸಹಚರರ ಜೊತೆ ಸೇರಿ ಸಂಚು ರೂಪಿಸಿದ್ದ. ಮೇ 24ರಂದು ಮಾಲೀಕರ ಮನೆಗೆ ನುಗ್ಗಿದ್ದ ಆರೋಪಿಗಳು, ಜುಗರಾಜ್ ಜೈನ್ ಅವರನ್ನು ಕೊಂದು ಚಿನ್ನಾಭರಣ ಹಾಗೂ ನಗದು ಕದ್ದು ಪರಾರಿ-ಯಾಗಿದ್ದರು' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮಳವಳ್ಳಿ ಪ್ರಕರಣ: ಮಕ್ಕಳ ಆಯೋಗಕ್ಕೆ ಎಎಪಿ ದೂರು

ಬೆಂಗಳೂರು: ಮಳವಳ್ಳಿಯಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಹಾಗೂ ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಸರ್ಕಾರಕ್ಕೆ ಶಿಫಾರಸು ಮಾಡುವಂತೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗಕ್ಕೆ ಆಮ್ ಆದ್ಮಿ ಪಕ್ಷ(ಎಎಪಿ) ದೂರು ನೀಡಿದೆ.

ಮಂಡ್ಯ ಜಿಲ್ಲೆ ಮಳವಳಿಯಲ್ಲಿ ಹತ್ತು ವರ್ಷ ವಯಸಿನ ಬಾಲಕಿ ಮೇಲೆ ದೌರ್ಜನ್ಯ ಎಸಗಿ ಕೊಲೆ ಮಾಡಲಾಗಿದೆ. ಘಟನೆ ಸಂಬಂಧ ಕಾಂತರಾಜು ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ದುಷ್ಕೃತ್ಯದ ಬಗ್ಗೆ ಆತ ಒಪ್ಪಿಕೊಂಡಿದ್ದಾನೆ. ಇದಕ್ಕೂ ಮುನ್ನ ಇದೇ ರೀತಿಯ ದುಷ್ಕೃತ್ಯ ಎಸಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಎಎಪಿ ಬೆಂಗಳೂರು ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ ಒತ್ತಾಯಿಸಿದರು.

'ಮೇಲ್ನೋಟಕ್ಕೆ ಪೊಲೀಸ್ ವೈಫಲ್ಯ ಎದ್ದು ಕಾಣಿಸುತ್ತಿದೆ. ಆದ್ದರಿಂದ ಹೆಚ್ಚಿನ ತನಿಖೆ ಅಗತ್ಯವಿದೆ. ಬಾಲಕಿ ಮೇಲಿನ ಅತ್ಯಾಚಾರ ಮತ್ತು ಕೊಲೆಗೆ ಕಾರಣವಾದ ಎಲ್ಲರ ವಿರುದ್ಧ ಕಠಿಣ ಶಿಕ್ಷೆಯಾಗಬೇಕು' ಎಂದು ಆಗ್ರಹಿಸಿದರು.

ಬಾಲಕಿ ಮೇಲೆ ಅತ್ಯಾಚಾರ

ಕನಕಪುರ: ಹಾರೋಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 16 ವರ್ಷದ ಬಾಲಕನೊಬ್ಬ ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವುದು ಬೆಳಕಿಗೆ ಬಂದಿದೆ.

ಇದೇ 11ರಂದು ಬಾಲಕಿಯನ್ನು ಪಾಠ ಹೇಳಿ ಕೊಡುವ ನೆಪದಲ್ಲಿ ಮನೆಗೆ ಕರೆದೊಯ್ದ ಬಾಲಕ ಅತ್ಯಾಚಾರ ಎಸಗಿದ್ದಾನೆ. ಬಾಲಕಿಯು ತನ್ನ ತಾಯಿ ಸಂಜೆ ಕೆಲಸ ಮುಗಿಸಿ ಮನೆಗೆ ಬಂದಾಗ ತನಗೆ ಆದ ನೋವಿನ ಕುರಿತು ಹೇಳಿಕೊಂಡಿದ್ದಾಳೆ. ವೈದ್ಯಕೀಯ ಪರೀಕ್ಷೆ ನಡೆಸಿದಾಗ ಅತ್ಯಾಚಾರ ಎಸಗಿರುವುದು ಬೆಳಕಿಗೆ ಬಂದಿದೆ.

ಸದ್ಯ ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬೆಂಗಳೂರಿನ ಸರ್ಕಾರಿ ಬಾಲಮಂದಿರದಲ್ಲಿ ಬಿಡಲಾಗಿದೆ.

ಮನೆ ಖಾಲಿ ಮಾಡಲಿಲ್ಲವೆಂದು ಅತ್ತೆ ಕೊಲೆ

ಪ್ರಜಾವಾಣಿ ವಾರ್ತೆ



ರಾಣಿಯಮ್ಮ

ಬೆಂಗಳೂರು: ಶ್ರೀರಾಮಪುರ ಠಾಣೆ ವ್ಯಾಪ್ತಿಯಲ್ಲಿ ರಾಣಿಯಮ್ಮ (76) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಅವರ ಸೊಸೆ ಸುಗುಣಾ (46) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಶ್ರೀರಾಮಪುರ 7ನೇ ಮುಖ್ಯರಸ್ತೆಯ ನಿವಾಸಿ ರಾಣಿಯಮ್ಮ ಅವರನ್ನು ಆರೋಪಿ ಸುಗುಣಾ ಅ. 12ರಂದು ರಾತ್ರಿ ಕೊಲೆ ಮಾಡಿದ್ದರು. ಸ್ಥಳೀಯರು ಹಾಗೂ ಸಂಬಂಧಿಕರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಣಿಯಮ್ಮ ಅವರ ಪತಿ ಹಲವು ವರ್ಷಗಳ ಹಿಂದೆಯೇ ತೀರಿಕೊಂಡಿದ್ದರು. ರಾಣಿಯಮ್ಮ ಅವರ ಹೆಸರಿನಲ್ಲಿ ಎರಡು ಮಹಡಿ ಮನೆ ಇತ್ತು. ತನ್ನಿಬ್ಬರು ಗಂಡು ಮಕ್ಕಳು ಹಾಗೂ ಸೊಸೆಯಂದಿರ ವಾಸಕ್ಕೆಂದು ಎರಡೂ ಮಹಡಿಗಳನ್ನು ಬಿಟ್ಟುಕೊ-ಟ್ಟಿದ್ದರು. ನೆಲಮಹಡಿಯ ಮನೆಯಲ್ಲಿ ರಾಣಿಯಮ್ಮ, ಒಬ್ಬಂಟಿಯಾಗಿ ವಾಸವಿದ್ದರು' ಎಂದು ತಿಳಿಸಿದರು.

'ತಮ್ಮನ ಮಗಳಾಗಿದ್ದ ಆರೋಪಿ ಸುಗುಣಾ ಅವರನ್ನು ಎರಡನೇ ಮಗನಿಗೆ ಮದುವೆ ಮಾಡಿಸಿದ್ದ ರಾಣಿಯಮ್ಮ, ಮಗಳಂತೆ ನೋಡಿಕೊಳ್ಳುತ್ತಿದ್ದರು. ಆದರೆ, ಆಸ್ತಿಗಾಗಿ ಸುಗುಣಾ ಜಗಳ ತೆಗೆದಿದ್ದರು. ಅತ್ತೆ ಜೊತೆ ದಿನಂಪ್ರತಿ ಜಗಳ ತೆಗೆಯುತ್ತಿದ್ದ ಆರೋಪಿ ಹಲ್ಲೆ ಸಹ ಮಾಡುತ್ತಿದ್ದಳು' ಎಂದು ಪೊಲೀಸರು ಹೇಳಿದರು.

ಮನೆ ಬಿಡಿಸಲು ಹಲವು ಬಾರಿ ಪ್ರಯತ್ನ: 'ರಾಣಿಯಮ್ಮ ಅವರನ್ನು ಮನೆ ಬಿಡಿಸಲು ಹಲವು ಬಾರಿ ಪ್ರಯತ್ನಿಸುತ್ತಿದ್ದ ಸುಗುಣಾ, 'ನೀನು ಮನೆ ಬಿಟ್ಟು ಹೋಗಬೇಕು. ಇಲ್ಲದಿದ್ದರೆ, ಕೊಲೆ ಮಾಡುತ್ತೇನೆ' ಎಂದು ಬೆದರಿಸಿದ್ದರು. 'ಇದು ನನ್ನ ಗಂಡನ ಮನೆ. ಬಿಟ್ಟು ಹೋಗುವುದಿಲ್ಲ' ಎಂದು ರಾಣಿಯಮ್ಮ ಹೇಳಿದ್ದರು. ಅ. 12ರಂದು ರಾತ್ರಿ ರಾಣಿಯಮ್ಮ ಜೊತೆ ಜಗಳ ತೆಗೆದಿದ್ದ ಸುಗುಣಾ, ಹಲ್ಲೆ ಮಾಡಿದ್ದರು. ಕತ್ತು ಹಿಸುಕಿ ಎಳೆದಾಡಿದ್ದರು. ಇದರಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದ ವೃದ್ಧೆಯನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ತಿಳಿಸಿದರು.

'ನೆಲಮಹಡಿಯಲ್ಲಿ ಅತ್ತೆ ವಾಸವಿರುವುದು ನನಗೆ ಇಷ್ಟ-ವಿರಲಿಲ್ಲ. ಅದಕ್ಕೇ ಮನೆ ಖಾಲಿ ಮಾಡುವಂತೆ ಹೇಳಿದ್ದೆ. ಖಾಲಿ ಮಾಡದೇ ಹಠ ಮಾಡಿದ್ದಕ್ಕಾಗಿ ಕೊಲೆ ಮಾಡಿದೆ' ಎಂಬುದಾಗಿ ಆರೋಪಿ ಸುಗುಣಾ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಚಾಕುವಿನಿಂದ ಇರಿದು ಕಾರ್ಮಿಕನ ಕೊಲೆ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯಲ್ಲಿ ಶಿವಂ (24) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಸ್ಥಳೀಯ ಕೆಲ ಕಾರ್ಮಿಕರು ಕೃತ್ಯ ಎಸಗಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದೆ.

'ಮಧ್ಯಪ್ರದೇಶದ ಶಿವಂ, ಕೆಲ ತಿಂಗಳು ಹಿಂದೆಯಷ್ಟೇ ಕೆಲಸಕ್ಕಾಗಿ ನಗರಕ್ಕೆ ಬಂದಿದ್ದರು. ಜಿಯೊ ಮೊಬೈಲ್ ಸೇವಾ ಕಂಪನಿಯ ಕೇಬಲ್ ಅಳವಡಿಕೆ ಕೆಲಸ ಮಾಡುತ್ತಿದ್ದರು. ಕೆ.ಆರ್. ಪುರದ ಬಾಡಿಗೆ ಶೆಡ್‌ನಲ್ಲಿ ಉಳಿದುಕೊಂಡಿದ್ದರು. ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ ಮೃತದೇಹ ನೋಡಿದ್ದ ಸ್ಥಳೀಯರು, ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಸಂಬಂಧಿಕರು ಬಂದ ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಕೊಲೆಯಲ್ಲಿ ಅಂತ್ಯವಾದ ಜಗಳ: 'ಶಿವಂ ಅವರು ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ಗುರುವಾ ರಾತ್ರಿ ಹೊರಟಿದ್ದರು. ಇದೇ ವೇಳೆ ಕೆಲ ಕಾರ್ಮಿಕರು, ಕ್ಷುಲ್ಲಕ ಕಾರಣಕ್ಕಾಗಿ ಜಗಳ ತೆಗೆದು ಶಿವಂ ಅವರನ್ನು ಕೊಲೆ ಮಾಡಿರುವ ಮಾಹಿತಿ ಇದೆ. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

'ಬನ್ನಿ ಮುಡಿಯೋಣ ಬನ್ನಿ' ಹಬ್ಬ ನಾಳೆ

ಪೀಣ್ಯ ದಾಸರಹಳ್ಳಿ: 8ನೇ ಮೈಲಿಯ ಬಳಿಯ ಅಂಬರ ಹೋಟೆಲ್ ಸಭಾಂಗಣದಲ್ಲಿ ಅ.16ರ ಸಂಜೆ 4ಕ್ಕೆ ಉತ್ತರ ಕರ್ನಾಟಕ ಜನಪರ ವೇದಿಕೆ ವತಿಯಿಂದ 'ಬನ್ನಿ ಮುಡಿಯೋಣ ಬನ್ನಿ' ಹಬ್ಬ ನಡೆಯಲಿದೆ.

ವಿಭೂತಿಪುರ ವೀರ ಸಿಂಹಾಸನ ಸಂಸ್ಥಾನ ಮಠದ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿವಗಂಗಾ ಕ್ಷೇತ್ರ ಮೇಲಣಗವಿ ವೀರ ಸಿಂಹಾಸನ ಸಂಸ್ಥಾನ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಅವರು ನೇತೃತ್ವ ವಹಿಸಲಿದ್ದಾರೆ. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಿ.ಸೋಮಶೇಖರ್, ಶಾಸಕರಾದ ಆರ್. ಮಂಜುನಾಥ್, ರಮೇಶ್ ಬಿ. ಬೂಸನೂರ, ಮಾಜಿ ಶಾಸಕ ಎಸ್. ಮುನಿರಾಜು ಮತ್ತು ಜನಪರ ವೇದಿಕೆ ಅಧ್ಯಕ್ಷ ಎಂ.ಜಿ. ಮಠ ಭಾಗವಹಿಸಲಿದ್ದಾರೆ.

ಹಬ್ಬದ ನಂತರ ಪ್ರತಿಭಾ ಪುರಸ್ಕಾರ, ಸಂಗೀತ ಸುಧೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಪದಾಧಿಕಾರಿ ಶಶಿಧರ್ ಎಸ್. ಹುನಕುಂಟಿ ತಿಳಿಸಿದ್ದಾರೆ.

ಬಿ-ಪ್ಯಾಕ್‌ನಿಂದ ಪೌರಕಾರ್ಮಿಕರಿಗೆ ಸಿಹಿ



ಬೆಂಗಳೂರು: ದೀಪಾವಳಿ ಹಬ್ಬದ ಅಂಗವಾಗಿ ಪೌರಕಾರ್ಮಿಕರಿಗೆ ಬಿ-ಪ್ಯಾಕ್ ಸಂಸ್ಥೆ ವತಿಯಿಂದ ಸಿಹಿ ವಿತರಣೆ ಕಾರ್ಯಕ್ರಮಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಶುಕ್ರವಾರ ಚಾಲನೆ ನೀಡಿದರು.

ನಗರವನ್ನು ಸ್ವಚ್ಛ, ಸುಂದರವಾಗಿಡಲು ಕಾರ್ಯನಿರ್ವಹಿಸುವ ಸ್ವಚ್ಛತಾ ಯೋಧರಾದ ಪೌರಕಾರ್ಮಿಕರ ಶ್ರಮವನ್ನು ಗುರುತಿಸಿ ಬಿ-ಪ್ಯಾಕ್ ಈ ವರ್ಷವೂ ನಗರದಲ್ಲಿರುವ ಪೌರಕಾರ್ಮಿಕರು, ಆಟೋ-ಟಿಪ್ಪರ್, ಕಾಂ-ಪ್ಯಾಕ್ಟರ್‌ಗಳ ಚಾಲಕ-ಸಿಬ್ಬಂದಿ ಹಾಗೂ ಘನತ್ಯಾಜ್ಯ ನಿರ್ವಹಣೆಯ ಸಿಬ್ಬಂದಿ ಸೇರಿ ಸುಮಾರು 28,000 ಪೌರಕಾರ್ಮಿಕರಿಗೆ ಸಿಹಿ ತಿನಿಸು ವಿತರಣಾ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕಾರ್ಯಕ್ರಮದ ಮುಖ್ಯಸ್ಥರಾದ ಎಚ್.ಎಸ್. ರಾಘವೇಂದ್ರ, ಸಂಪಂ-ಗಿರಾಮನಗರ ಬಿ.ಕ್ಲಿಪ್ ನಾಯಕರಾದ ಪ್ರೇಮ್ ಕುಮಾರ್, ವಿನೋದ್ ಸಿ. ಮತ್ತಿತರರು ಉಪಸ್ಥಿತರಿದ್ದರು.

ಕಳ್ಳತನ: ಅಣ್ಣ–ತಮ್ಮನ ಸೆರೆ

ಬೆಂಗಳೂರು: ತಮಿಳುನಾಡಿನಿಂದ ಆಗಾಗ ಬೆಂಗಳೂರಿಗೆ ಬಂದು ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿ-ದ್ದ ಅಣ್ಣ–ತಮ್ಮ ಸೇರಿ ಮೂವರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗುಣಶೇಖರ್ ಅಲಿಯಾಸ್ ಕೊರಂಗು (21), ಈತನ ಅಣ್ಣ ಎಂ. ಅಜಿತ್ (22) ಹಾಗೂ ಸಹಚರ ಕೆ. ಮುತ್ತುಕುಮಾರ್ (27) ಬಂಧಿತರು. ಇವರಿಂದ ₹ 49.17 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳು ತಮಿಳು-ನಾಡಿನವರು. ಆಗಾಗ ಬೆಂಗಳೂರಿಗೆ ಬಂದು, ಪರಪ್ಪನ ಅಗ್ರಹಾರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸುತ್ತಿದ್ದರು. ಆರೋಪಿ ಗುಣಶೇಖರ್ ಬಾಲ್ಯದಿಂದಲೇ ಕಳ್ಳತನ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ. ಅಣ್ಣ ಹಾಗೂ ಸಹಚರ ಸಹ ಕೃತ್ಯಕ್ಕೆ ಸಹಕರಿ-ಸುತ್ತಿದ್ದರು' ಎಂದೂ ತಿಳಿಸಿದರು.

'ಅಂಗಳದಲ್ಲಿ ರಂಗೋಲಿ ಹಾಕಿರದ ಹಾಗೂ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ಕೆಲ ದಿನ ಮನೆ ಬಳಿ ಸುತ್ತಾಡಿ, ಮಾಹಿತಿ ಕಲೆ ಹಾಕುತ್ತಿದ್ದರು. ಯಾರೂ ಇಲ್ಲವೆಂಬುದು ಗೊತ್ತಾಗುತ್ತಿದ್ದಂತೆ, ಹಗಲು ಹಾಗೂ ರಾತ್ರಿ ವೇಳೆ ಬಾಗಿಲು ಮೀಟಿ ಒಳನುಗ್ಗಿ ಕಳ್ಳತನ ಮಾಡಿಕೊಂಡು ಪರಾರಿಯಾ-ಗುತ್ತಿದ್ದರು' ಎಂದು ಹೇಳಿದರು.

'ಕದ್ದ ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಹಲವೆಡೆ ಮಾರಾಟ ಮಾಡುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ತಿಳಿಸಿದರು.

'ಹೆಣ್ಣೂರು, ರಾಮಮೂರ್ತಿನ-ಗರ, ಕೊತ್ತನೂರು ಹಾಗೂ ಯಲಹಂಕ ಠಾಣೆ ವ್ಯಾಪ್ತಿಯ ಮನೆಗಳಲ್ಲಿ ಕಳ್ಳತನ ನಡೆದಿತ್ತು. ಈ ಬಗ್ಗೆ ತನಿಖೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ಪೊಲೀಸರು ಹೇಳಿದರು.

ವಂಚನೆ: ಖಾಸಗಿ ಏಜೆಂಟ್ ಬಂಧನ



ಗಂಗರಾಜು

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಂದ ಹೆಚ್ಚುವರಿ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ಆರೋಪಿ ಗಂಗರಾಜು (61) ಎಂಬುವರನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

'ಬೊಮ್ಮಸಂದ್ರದ ಗಂಗರಾಜು, ಖಾಸಗಿ ಬಸ್ ಏಜೆಂಟ್. ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಜಾಗೃತ ದಳದ ಸಿಬ್ಬಂದಿಗೆ ಸಿಕ್ಕಿಬಿದ್ದಿದ್ದ. ಕೆಎಸ್‌ಆರ್‌ಟಿ ಸಹಾಯಕ ಭದ್ರತಾ ನಿರೀಕ್ಷಕ ದಾಸರಾಜ್ ಅವರು ಆರೋಪಿ ವಿರುದ್ಧ ದೂರು ನೀಡಿದ್ದರು. ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರಯಾಣಿಕರಹ ಯಾವ ಊರಿಗೆ ಹೊರಟಿದ್ದಾರೆಂದು ತಿಳಿದುಕೊಂಡು, 'ಬಸ್ ಸೀಟುಗಳು ಭರ್ತಿ ಆಗಿವೆ. ಹೆಚ್ಚು ಹಣ ಕೊಟ್ಟರೆ ನಾನೇ ಸೀಟು ಕೊಡಿಸುತ್ತೇನೆ' ಎನ್ನುತ್ತಿದ್ದ. ಆರೋಪಿ ಮಾತು ನಿಜವೆಂದು ತಿಳಿಯುತ್ತಿದ್ದ ಪ್ರಯಾಣಿಕರು, ₹ 2 ಸಾವಿರದಿಂದ ₹ 4 ಸಾವಿರದವರೆಗೂ ಹಣ ನೀಡುತ್ತಿದ್ದರು. ಪ್ರಯಾಣಿಕರನ್ನು ಆರೋಪಿ ನಿಗದಿತ ಬಸ್‌ಗಳ ಬಳಿ ಕರೆದೊಯ್ಯುತ್ತಿದ್ದ. ತಾನೇ ಸೀಟು ಕೊಡಿಸುವಂತೆ ನಟಿಸಿ, ಬಸ್ ಹತ್ತಿಸಿ ಬರುತ್ತಿದ್ದ. ನಂತರ, ಪ್ರಯಾಣಿಕರು ಯಥಾಪ್ರಕಾರ ಕೆಎಸ್‌ಆರ್‌ಟಿಸಿ ಪ್ರಯಾಣ ದರ ಪಾವತಿಸಿ ಪ್ರಯಾಣಿಸುತ್ತಿದ್ದರು. ಹೀಗೆ, ನಿತ್ಯವೂ ಪ್ರಯಾಣಿಕರನ್ನು ವಂಚಿಸುತ್ತಿದ್ದ' ಎಂದರು.



ಶಾಖೆ ಉದ್ಘಾಟನೆ

ಬ್ಯಾಂಕ್ ಆಫ್ ಬರೋಡ ಬ್ಯಾಟರಾಯನಪುರ ಶಾಖೆಯನ್ನು ಬ್ಯಾಂಕ್‌ನ ಬೆಂಗಳೂರು ವಲಯದ ಜನರಲ್ ಮ್ಯಾನೇಜರ್ ಸುಧಾಕರ ಡಿ. ನಾಯಕ್, ಉತ್ತರ ವಲಯದ ಪ್ರಾದೇಶಿಕ ಮುಖ್ಯಸ್ಥ ಕಪಿಲೇಶ್ ಆರ್. ರೇಣುಕೆ ಮತ್ತಿತರರ ಸಮ್ಮುಖದಲ್ಲಿ ಉದ್ಘಾಟಿಸಲಾಯಿತು

ನಗರದಲ್ಲಿ ಇಂದು

'ಮಾನವ ಸಂಪನ್ಮೂಲ ನಿನ್ನೆ, ಇಂದು, ನಾಳೆ' ವಿಚಾರಸಂಕಿರಣ: ಆಯೋಜನೆ ಹಾಗೂ ಸ್ಥಳ: ಎಕ್ಸ್‌ಐಎಂಇ ಬೆಂಗಳೂರು ಕ್ಯಾಂಪಸ್, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 9

ಕರ್ನಾಟಕ ಶಿಕ್ಷಣ ಮತ್ತು ಆವಿಷ್ಕಾರ ಸಮ್ಮೇಳನ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಐಎಸ್‌ಡಿಸಿ, ಸ್ಥಳ: ಶಾಂಗ್ರಿಲಾ ಹೋಟೆಲ್, ಬೆಳಿಗ್ಗೆ 9.30

'ಸಮಗ್ರ ಸಾವರ್ಕರ್' ವಿಚಾರ ಸಂಕಿರಣ: ಉಪನ್ಯಾಸಕರು: ಜಿ.ಬಿ. ಹರೀಶ್, ಉದಯ್ ಮಹುರ್ಕರ್, ಎಸ್.ಆರ್. ಲೀಲಾ, ಪಿ. ರಾಜೀವ್, ಅರುಣ್ ಕುಮಾರ್, ನರೇಂದ್ರ ಕುಮಾರ್, ಹರ್ಷ ಸಮೃದ್ಧ, ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ಶ್ರೀ ವಾದಿರಾಜ ಕಲಾ ಭವನ, ಅಕ್ಷಯ ನಗರ, ಬೆಳಿಗ್ಗೆ 10

ರಾಜ್ಯಮಟ್ಟದ ತೃತೀಯ ಅಂಚೆ ನೌಕರರ ಸಾಹಿತ್ಯ ಸಮ್ಮೇಳನ ಹಾಗೂ ಅಂಚೆ ರತ್ನ ಪ್ರಶಸ್ತಿ ಪ್ರದಾನ: ಸಮ್ಮೇಳನಾಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಉದ್ಘಾಟನೆ: ಮಹೇಶ ಜೋಶಿ, ಅಂಚೆ ರತ್ನ ಪ್ರಶಸ್ತಿ ಪ್ರದಾನ: ಎಸ್. ರಾಜೇಂದ್ರಕುಮಾರ್, ಆಯೋಜನೆ: ಕರ್ನಾಟಕ ಅಂಚೆ ನೌಕರರ ಸಾಹಿತ್ಯ ಬಳಗ, ಸುಮಂಗಲಿ ಸೇವಾ ಆಶ್ರಮ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 10.30

ಪ್ರತಿಭಾ ಪುರಸ್ಕಾರ 2022: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಚಾಲನೆ: ಶಂಕರ ಪಾಟೀಲ ಮುನೇನಕೊಪ್ಪ, ಮುಖ್ಯ ಅತಿಥಿಗಳು: ವಿ. ಸೋಮಣ್ಣ, ಗೋಪಾಲಯ್ಯ, ಮಂಜುನಾಥ್ ಪ್ರಸಾದ್, ಸಿ. ಸೋಮಶೇಖರ್, ತಾರಾ ಅನೂರಾಧ, ಅಧ್ಯಕ್ಷತೆ: ಶಿವಾನಂದ ತಗಡೂರು, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಪ್ರೆಸ್ ಕ್ಲಬ್ ಆವರಣ, ಬೆಳಿಗ್ಗೆ 10.30

'ಯಾತ್ರಾ 22' ಗಾಯನ, ನೃತ್ಯ: ಆಯೋಜನೆ: ಶುಭಂ–ಎ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಶಂಕರ ಫೌಂಡೇಷನ್, ಕನಕಪುರ ರಸ್ತೆ, ಬೆಳಿಗ್ಗೆ 11.30

ಗ್ಲೋಬಲ್ ಮಾಲ್‌ಗೆ ಪ್ರಥಮ ವರ್ಷದ ಸಂಭ್ರಮ: ಸಂಗೀತ ಕಾರ್ಯಕ್ರಮ: ಸ್ವರಾತ್ಮ, ಆಯೋಜನೆ: ಲುಲು ಗ್ರೂಪ್ ಇಂಟರ್‌ನ್ಯಾಷನಲ್, ಸ್ಥಳ: ಗ್ಲೋಬಲ್ ಮಾಲ್, ರಾಜಾಜಿನಗರ, ಸಂಜೆ 6

'ಊಂಜಲ್ ಸಂಗೀತೋತ್ಸವ': ವೈಷ್ಣವಿ ದತ್ತ, ಪಿಟೀಲು: ಶಶಿಧರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ:ತಿರುಮಲ ತಿರುಪತಿ ದೇವಸ್ಥಾನಗಳ ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಸಂಜೆ 6

ಭಜನೆ–ಪ್ರವಚನ–ಸಂಕೀರ್ತನ: 'ಭಾಗವತ ದಶಮ ಸ್ಕಂದ' ಪ್ರವಚನ: ಕಲ್ಲಾಪುರ ಪವಮಾನಾಚಾರ್, ಹರಿನಾಮ ಸಂಕೀರ್ತನೆ: ಎಸ್.ಆರ್. ಅನುಷಾ, ಪಿಟೀಲು: ಗೋವಿಂದಸ್ವಾಮಿ, ಮೃದಂಗ: ವೆಂಕಟಸುಬ್ಬು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳ ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ಕಾಶಿ ಮಠ, ಮಲ್ಲೇಶ್ವರ, ಸಂಜೆ 6.30


17ನೇ ಧ್ವನಿ: ಬಿಕೆಎಫ್–ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಸಂಗೀತೋತ್ಸವ: ಪಂ. ಅಜಯ್ ಚಕ್ರವರ್ತಿ, ಮುಖ್ಯ ಅತಿಥಿಗಳು: ನ್ಯಾ. ಕೃಷ್ಣ ಎಸ್. ದೀಕ್ಷಿತ್, ಪಂ. ನಾಗರಾಜ್ ರಾವ್ ಹವಾಲ್ದಾರ್, ಜಿ.ಎ. ಶ್ರೀನಿವಾಸ್, ಗಾಯನ: ಧನಂಜಯ ಹೆಗಡೆ, ಅಜಯ್ ಚಕ್ರವರ್ತಿ, ತಬಲಾ ವಾದನ: ರಾಜೇಂದ್ರ ನಾಕೋಡ್, ಯೋಗೇಶ್ ಸಂಸಿ, ಸಾರಂಗಿ ವಾದನ: ಸರ್ಫರಾಜ್ ಖಾನ್, ಅಜಯ್ ಜೋಗ್ಲೇಕರ್, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 6.45

'ಜೂಪಿಟರ್' ನಾಟಕ ಪ್ರದರ್ಶನ: ಪ್ರಚಾರ ವಿನ್ಯಾಸ: ಭಟ್ ಕಾರ್ತಿಕೇಯ, ನಾಟಕ ರಚನೆ: ಎಸ್.ವಿ. ಕೃಷ್ಣಶರ್ಮ, ನಿರ್ದೇಶನ: ಹ.ನು. ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



ಬಿ.ಎ. ವಿವೇಕ ರೈ

'ಕನ್ನಡವೆಂದರೆ ಬರಿ ನುಡಿಯಲ್ಲ' ರಾಜ್ಯಮಟ್ಟದ ವಿಚಾರ ಸಂಕಿರಣ: ಉದ್ಘಾಟನೆ: ಬಿ.ಎ. ವಿವೇಕ ರೈ, ಅಧ್ಯಕ್ಷತೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಉಪಸ್ಥಿತಿ: ಸಿ.ಕೆ. ರಾಮೇಗೌಡ, ನ. ರವಿಕುಮಾರ್, ಸಂವಾದ ಗೋಷ್ಠಿ: 'ಅಸ್ಮಿತೆಯ ಭಾಷೆಯಾಗಿ ಕನ್ನಡ', ನಿರ್ದೇಶನ: ರಾಜೇಂದ್ರ ಚೆನ್ನಿ, ಹಳಗನ್ನಡ ಕಾವ್ಯಗಳ ಪ್ರಸ್ತುತಿ: ಎಂ.ಆರ್. ಸತ್ಯನಾರಾಯಣ, 'ಕನ್ನಡ ಭಾಷೆ ಬಹುತ್ವದ ಚಹರೆಗಳು', ಉಪನ್ಯಾಸ: ರಹಮತ್ ತರೀಕೆರೆ, 'ಅಧ್ಯಾತ್ಮದ ಭಾಷೆಯಾಗಿ ಕನ್ನಡ', ಉಪನ್ಯಾಸ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10



ದೊಡ್ಡರಂಗೇಗೌಡ

ಮಾಸ್ತಿ ಕಾದಂಬರಿ–ಕಥಾ ಪುರಸ್ಕಾರ ಪ್ರದಾನ: ದೊಡ್ಡರಂಗೇಗೌಡ, ಪ್ರಸ್ತಾವನೆ: ಮಾವಿನಕೆರೆ ರಂಗನಾಥನ್, ಕಾದಂಬರಿ ಬಗ್ಗೆ: ರಘುನಾಥ ಚ.ಹ., ಕಥಾಸಂಕಲನದ ಬಗ್ಗೆ: ಎಸ್.ಆರ್. ವಿಜಯಶಂಕರ, ಆಯೋಜನೆ: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಕಲಾಗ್ರಾಮದಲ್ಲಿ ವಿಶೇಷ ಸಾಮರ್ಥ್ಯವುಳ್ಳವರ ಸಾಧನೆ ಅನಾವರಣ

ಆತ್ಮವಿಶ್ವಾಸದ ನುಡಿ... ಭಾವುಕ ಕ್ಷಣ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲತ್ತಹಳ್ಳಿಯ ಜ್ಞಾನಭಾರತಿ ಆವರಣದ ಕಲಾ-ಗ್ರಾಮದಲ್ಲಿ ಶುಕ್ರವಾರ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಹಯೋಗದಲ್ಲಿ ನಡೆದ ವಿಶೇಷಚೇತನ ಮತ್ತು ಸಾಹಿತಿಗಳ ಸಾಹಿತ್ಯ ಸಮ್ಮಿಲನವು ಅಂಗವಿಕಲರ ಪ್ರತಿಭಾ ಪ್ರದರ್ಶನ ಹಾಗೂ ಭಾವುಕ ಕ್ಷಣಕ್ಕೆ ಸಾಕ್ಷಿ ಆಯಿತು.

ವಿಶೇಷ ಸಾಮರ್ಥ್ಯವುಳ್ಳವರ ಆತ್ಮವಿಶ್ವಾಸದ ನುಡಿಗಳಿಗೆ ಸಭಿಕರೂ ಚಪ್ಪಾಳೆಯ ಮೂಲಕ ಪ್ರೋತ್ಸಾಹ ತುಂಬಿದರು. ಎಲ್ಲರೂ ತಮ್ಮ ಬದುಕಿನ ಕಥೆಗಳನ್ನು ವಿವರಿಸಿದರು. ಸಂಕಷ್ಟಗಳ ನಡುವೆಯೂ ಸಾಧನೆ ತೋರಿದ ಬಗೆ ಹೇಳಿದರು.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಅನುಷಾ ಅವರು, 'ನಾನು ಜನಿಸಿದಾಗ ಯಾವ ಸಮಸ್ಯೆಯೂ ಇರಲಿಲ್ಲ. ಬಳಿಕ ಬೆನ್ನುಹುರಿ ಸಮಸ್ಯೆ ಕಾಣಿಸಿಕೊಂಡಿತು. ಇದರಿಂದ ಆಘಾತಕ್ಕೆ ಒಳಗಾದೆ. ತಂದೆಯೇ ನನ್ನನ್ನು ಶಾಲೆಗೆ ಕರೆದೊ-ಯ್ಯುತ್ತಿದ್ದರು. ಪಿಯುಸಿಯಲ್ಲಿ ಉತ್ತಮ ಅಂಕದೊಂದಿಗೆ ಉತ್ತೀರ್ಣಗೊಂಡೆ. ಬಳಿಕ ಡಿ.ಇಡಿ ಪ್ರವೇಶಕ್ಕೆ ಕೆಲವು ಸಂಸ್ಥೆಗಳು ನಿರಾಕರಿಸಿದವು. ಆಗ ಬೇಸರ ಆಯಿತು. ಇದೀಗ ಡಿ.ಇಡಿ ಶಿಕ್ಷಣವನ್ನೂ ಪೂರ್ಣಗೊಳಿಸಿದ್ದೇನೆ. ಎಪಿಡಿ ಸಂಸ್ಥೆಯ-ಲ್ಲಿದ್ದು, ಅಂಗವಿಲಕರ ಕ್ರೀಡಾಕೂಟದ-ಲ್ಲೂ ಪಾಲ್ಗೊಂಡಿದ್ದೇನೆ' ಎಂದರು.

ರಾಯಚೂರಿನ ಸುರೇಶ ಭಂಡಾರಿ ಅವರದ್ದು ಮತ್ತೊಂದು ಸಾಧನೆಯ ಕಥೆ. 'ಚಿಕ್ಕ ವಯಸ್ಸಿನಲ್ಲಿ ಜ್ವರ ಬಂದ ಬಳಿಕ ನನಗೆ ಸಮಸ್ಯೆ ಕಾಣಿಸಿಕೊಂಡಿತು. ಈಗ ವ್ಹೀಲ್‌ಚೇರ್ ಸಹಾಯ ಬೇಕಿದೆ. ಸ್ನೇಹಿತರ ಸಹಾಯದಿಂದ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಸ್ನೇಹಿತರಿಗಾಗಿ ಸ್ವಂತ ನಾಟಕ ರಚಿಸಿದ್ದೇನೆ' ಎಂದು ಹೇಳಿದರು.

ಬಳ್ಳಾರಿಯ ಗಿರೀಶ್ ಅವರು ಫೋಟೊ ಸ್ಟುಡಿಯೊ ನಡೆಸುತ್ತ ಬದುಕು ನಡೆಸುತ್ತಿರುವ ಬಗ್ಗೆ ವಿವರಿಸಿದರು. 'ಮುಂಜಾನೆಯ ಸೂರ್ಯನಂತೆ ಬೆಳದಿಂಗಳ ಚಂದ್ರನಂತೆ...' ಎಂಬ ಸ್ವರಚಿತ ಕವನ ವಾಚಿಸಿದರು.

ಪುಟ್ಟ ಬಾಲಕ ಅಬ್ದುಲ್, 'ಮುಂದೆ ಸಾಫ್ಟ್‌ವೇರ್ ಎಂಜಿನಿಯರ್ ಆಗುತ್ತೇನೆ' ಎಂಬ ಅಭಿಲಾಷೆ ವ್ಯಕ್ತಪಡಿಸಿದ.

ಅಂಗವಿಕಲರ ಬ್ಯಾಸ್ಕೆಟ್‌ಬಾಲ್‌ನಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸುತ್ತಿರುವ ತುಮಕೂರಿನ ಗಂಗಾ ಅವರು, ಸಂಕಷ್ಟ ಹಾಗೂ ಅಂಗವಿಕಲತೆ ಮೀರಿ ಸಾಧನೆ ಮಾಡಿದ ಬಗೆಯನ್ನು ವಿವರಿಸಿದರು. 'ಎರಡು ಬಾರಿ ಆತ್ಮಹತ್ಯೆಗೂ ಯತ್ನಿಸಿದ್ದೆ. ಬಳಿಕ ನಿರ್ಧಾರ ಬದಲಿಸಿ ಸಾಧನೆ ಮಾಡಿದ್ದೇನೆ' ಎಂದು ಭಾವುಕರಾದರು.

ದಾವಣಗೆರೆಯ ಹೊನ್ನಪ್ಪ ಅವರು ತಾವು ಪ್ರೇಮ ವಿವಾಹ ಆದದ್ದು ಹಾಗೂ ಎದುರಿಸಿದ ಕಷ್ಟವನ್ನು ತೆರೆದಿಟ್ಟರು. 'ಆರಂಭದಲ್ಲಿ ಹೊತ್ತಿನ ಊಟಕ್ಕೂ ಕಷ್ಟ ಪಡುತ್ತಿದ್ದೆ. ಈಗ ನಾಲ್ವರಿಗೆ ನಾನೇ ಕೆಲಸ ನೀಡಿದ್ದೇನೆ' ಎಂದರು.

ರಮ್ಯಾ ಹೊಸಕೋಟೆ, ಲಕ್ಷ್ಮಿ ರಾಥೋಡ್ ಅವರೂ ತಮ್ಮ ಸಾಧನೆಗಳ ಬಗ್ಗೆ ವಿವರಿಸಿದರು.

ಅಕಾಡೆಮಿ ಹೊರತಂದಿರುವ 55 ಪುಸ್ತಕ ಬಿಡುಗಡೆ ಮಾಡಿ ಸಾಹಿತಿ ಪ್ರೊ. ಎಚ್.ಎಸ್.ಶಿವಪ್ರಕಾಶ್ ಮಾತನಾಡಿ, 'ಪ್ರತಿಯೊಬ್ಬರೂ ತಮ್ಮ ಚೇತನವನ್ನು ಜಾಗೃತಿಗೊಳಿಸಬೇಕು. ಸಾಹಿತ್ಯವು ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುತ್ತದೆ ಹಾಗೂ ಒಗ್ಗಟ್ಟು ಪ್ರದರ್ಶಿಸುತ್ತದೆ' ಎಂದರು.

ಎಪಿಡಿ ಸಂಸ್ಥೆಯ ಸಹಾಯಕ ನಿರ್ದೇಶಕ ಎಸ್.ಬಾಬು ಪ್ರಾಸ್ತಾವಿಕವಾ-ಗಿ ಮಾತನಾಡಿ, 'ರಾಜ್ಯದಲ್ಲಿ ಅಂದಾಜಿನ ಪ್ರಕಾರ 30 ಲಕ್ಷ ಅಂಗವಿಕಲರಿದ್ದಾರೆ. ಶೇ 2ರಿಂದ 3ರಷ್ಟು ಮಂದಿಗೆ ಮಾತ್ರ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾ-ಗುತ್ತಿದೆ. ಉದ್ಯೋಗಸ್ಥರ ಸಂಖ್ಯೆಯೂ ಕಡಿಮೆಯಿದೆ' ಎಂದು ತಿಳಿಸಿದರು.

ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಡಾ.ಎ.ಮುರಿಗೆಪ್ಪ, ಸಾಹಿತಿ ಡಾ.ಬೈರಮಂಗಲ ರಾಮೇಗೌಡ, ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ-ಕುಮಾರ್, ಚಿಂತಕ ಡಾ.ಜಿ.ಬಿ.ಹರೀಶ, ಗೋಕಾಕ್ ಸಮಗ್ರ ಸಾಹಿತ್ಯ ಪ್ರಕಟಣೆಯ ಸಲಹೆಗಾರ ಅನಿಲ್ ವಿ.ಗೋಕಾಕ್, ಡಾ.ದೇವರಕೊಂಡಾರೆಡ್ಡಿ, ಡಾ.ಕೆ. ಆರ್.ಗಣೇಶ್, ಡಾ.ಜಿ.ಬಿ.ಹರೀಶ್. ಡಾ.ಎಂ.ಉಷಾ, ಗಣೇಶ ಅಮೀನಗಡ, ರಾಜಲಕ್ಷ್ಮಿ ಕೋಡಿಬೆಟ್ಟು ಹಾಜರಿದ್ದರು.



ಬೆಂಗಳೂರಿನ ಮಲ್ಲತ್ತಹಳ್ಳಿಯ ಕರ್ನಾಟಕ ಕಲಾಗ್ರಾಮದ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಹಿತ್ಯ ಸಮ್ಮಿಲನದಲ್ಲಿ ಚಾಮರಾಜನಗರದ ವಿಶೇಷ ಸಾಮರ್ಥ್ಯವುಳ್ಳ ಮಗು ಅಬ್ದುಲ್ ತನ್ನ ಅನುಭವ ಹಂಚಿಕೊಂಡ –ಪ್ರಜಾವಾಣಿ ಚಿತ್ರ

ಒಳನಾಡು ಮೀನು ಉತ್ಪಾದಕರ ಸಮಾವೇಶ ನಾಳೆ: ಅಂಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳನಾಡು ಮೀನು ಉತ್ಪಾದಕರ ಸಮಾವೇಶ ಇದೇ 16 ರಂದು ನಗರದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯಲಿದೆ.

ಫ್ರೀಡಂ ಆ್ಯಪ್ ಸಹಯೋಗದಲ್ಲಿ ಈ ಸಮಾವೇಶ ಆಯೋಜಿಸಲಾಗಿದ್ದು, ಸುಮಾರು 8 ಸಾವಿರದಿಂದ 10 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ತಜ್ಞರು ರೈತರಿಗೆ ಮಾರ್ಗದರ್ಶನ ಮಾಡಲಿದ್ದಾರೆ ಎಂದು ಮೀನುಗಾರಿಕೆ ಸಚಿವ ಎಸ್. ಅಂಗಾರ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಫ್ರೀಡಂ ಆ್ಯಪ್ ಸಂಸ್ಥಾಪಕ ಮತ್ತು ಸಿಇಒ ಸಿ.ಎಸ್. ಸುಧೀರ್ ಮಾತನಾಡಿ, 'ಪ್ರತಿಯೊಬ್ಬ ರೈತ ಮೀನು ಸಾಕಾಣಿಕೆಯಲ್ಲಿ ತೊಡಗಬೇಕು. ಇದರಿಂದ ಅವರ ಆದಾಯ ಹೆಚ್ಚಾಗಬೇಕು ಎನ್ನುವುದು ಸಮಾವೇಶದ ಆಶಯ' ಎಂದು ಹೇಳಿದರು.

'ಸಮಾವೇಶದಲ್ಲಿ ಮೀನಿನ ತಳಿಗಳು, ಆಧುನಿಕ ತಂತ್ರಜ್ಞಾನಗಳು ಮತ್ತು ಮೌಲ್ಯವರ್ಧನೆ ಮಾಡುವ ಮೂಲಕ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಮಾರಾಟ ಕುರಿತು ಸಮಾವೇಶದಲ್ಲಿ ರೈತರಿಗೆ ಮಾರ್ಗದರ್ಶನ ದೊರೆಯಲಿದೆ. ಜತೆಗೆ ಹತ್ತು ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ವಿವರಿಸಿದರು.

'ಸಮಾವೇಶದಲ್ಲಿ ಭಾಗವಹಿಸಲು ಫ್ರೀಡಂ ಆ್ಯಪ್‌ನಲ್ಲಿ ಅಗತ್ಯ ಮಾಹಿತಿ ನೀಡಿ ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಣಿ ಅನುಮೋದನೆಗೊಂಡ ನಂತರ ವಾಟ್ಸ್‌ಆ್ಯಪ್ ಮೂಲಕ ಅಧಿಕೃತ ಪ್ರವೇಶದ ಪಾಸ್ ಅನ್ನು ಕಳುಹಿಸಲಾಗುತ್ತದೆ' ಎಂದು ವಿವರಿಸಿದರು.

16ರಂದು ಬೆಳಿಗ್ಗೆ 9ಕ್ಕೆ ಸಮಾವೇಶಕ್ಕೆ ಚಾಲನೆ ದೊರೆಯಲಿದ್ದು, ಕೇಂದ್ರದ ಮೀನುಗಾರಿಕೆ ಖಾತೆ ರಾಜ್ಯ ಸಚಿವ ಎಲ್. ಮುರುಗನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಳ್ಳಲಿದ್ದಾರೆ.





ಮಹಾತ್ಮ ಗಾಂಧಿ ರಸ್ತೆಯಲ್ಲಿ ಮಳೆಯಲ್ಲೇ ವ್ಯಾಪಾರ (ಎಡಚಿತ್ರ) ವೀರನಪಾಳ್ಯದಲ್ಲಿ ನೀರು ನಿಂತಿದ್ದ ರಸ್ತೆಯಲ್ಲಿ ಸಂಚಾರಕ್ಕೆ ಪರದಾಡಿದ ಸವಾರರು — ಪ್ರಜಾವಾಣಿ ಚಿತ್ರಗಳು

ತ್ಯಾಜ್ಯದಿಂದ ಕಟ್ಟಿಕೊಂಡ ಎಚ್‌ಎಎಲ್ ಮೂಲಕ ಹಾದುಹೋಗಿರುವ ರಾಜಕಾಲುವೆ: ಪರದಾಡಿದ ಜನರು

ಹಗಲು, ರಾತ್ರಿ ಮಳೆ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ಮಧ್ಯಾಹ್ನದಿಂದ ಮಳೆ ಮುಂದುವರಿದ್ದು, ತಡರಾತ್ರಿಯವರೆಗೆ ಆಗಾಗ್ಗೆ ಭಾರಿ ಮಳೆಯಾಯಿತು.

ಶುಕ್ರವಾರ ಮಧ್ಯಾಹ್ನದ ನಂತರ ಮಳೆಯಿಂದಾಗಿ ರಸ್ತೆಗಳಲ್ಲಿ ನೀರು ನಿಂತು ಹಲವೆಡೆ ಸಮಸ್ಯೆ ಉಂಟಾಯಿತು. ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ನಗರದ ಕೆಲವು ಕಡೆ ಜಂಕ್ಷನ್‌ಗಳಲ್ಲಿ ದಟ್ಟಣೆ ಉಂಟಾಯಿತು. ಆಗಾಗ ಕೆಲವು ಸಮಯ ಬಿಡುವು ನೀಡಿ ಮಳೆ ಸುರಿಯಿತು.

ಬಿಬಿಎಂಪಿ ದಕ್ಷಿಣ, ರಾಜರಾಜೇಶ್ವರಿನಗರ ವಲಯದಲ್ಲಿ ಶುಕ್ರವಾರ ಮಧ್ಯಾಹ್ನದಿಂದ ರಾತ್ರಿವರೆಗೆ ಅತಿ ಹೆಚ್ಚು ಮಳೆ (5 ಸೆಂ.ಮೀ) ಆಗಿದೆ. ದಾಸರಹಳ್ಳಿ, ಪಶ್ಚಿಮ ದಾಸರಹಳ್ಳಿ ವಲಯದಲ್ಲೂ ಹೆಚ್ಚು ಮಳೆಯಾಯಿತು.

ಗುರುವಾರ ರಾತ್ರಿ ಆರಂಭವಾದ ಮಳೆ ಶುಕ್ರವಾರ ಬೆಳಿಗ್ಗೆಯವರೆಗೆ ಸುರಿಯಿತು. ಯಲಹಂಕ ವಲಯದ ವಿದ್ಯಾರಣ್ಯಪುರದಲ್ಲಿ ಅತಿ ಹೆಚ್ಚು ಮಳೆ (7.55 ಸೆಂ.ಮೀ) ಆಗಿದೆ. ಅಟ್ಟೂರು (7.1 ಸೆಂ.ಮೀ), ಯಲಹಂಕ ಉಪನಗರ (7.1 ಸೆಂ.ಮೀ), ಚೌಡೇಶ್ವರಿ (6.7 ಸೆಂ.ಮೀ), ಎಚ್‌ಎಂಟಿ (6.5 ಸೆಂ.ಮೀ) ಮಳೆಯಾಯಿತು. ಉಲ್ಲಾಳು, ಹೆಮ್ಮಿಗೆಪುರ, ರಾಜರಾಜೇಶ್ವರಿನಗರ, ಜ್ಞಾನಭಾರತಿ, ದಾಸರಹಳ್ಳಿ, ಬಾಗಲಗುಂಟೆ, ಗಂಗಾನಗರ, ಸಂಜಯನಗರ, ಕೆಂಗೇರಿ, ರಾಧಾಕೃಷ್ಣ ದೇವಸ್ಥಾನ, ಕೊಡಿಗೇಹಳ್ಳಿ, ಶೆಟ್ಟಿಹಳ್ಳಿ, ದೊಡ್ಡ ಬೊಮ್ಮಸಂದ್ರ, ದೊಮ್ಮಲೂರು, ಸಂಪಂಗಿರಾಮನಗರ, ಜೆ.ಪಿ.ನಗರದಲ್ಲಿ 5 ಸೆಂ.ಮೀ.ಗೂ ಹೆಚ್ಚಿನ ಮಳೆಯಾಗಿದೆ.

ಫಸಲು ಕುಸಿಯುವ ಭೀತಿ

ದಾಬಸ್‌ಪೇಟೆ: ಸೋಂಪುರ ಹೋಬಳಿಯುದ್ದಕ್ಕೂ ಗುರುವಾರ ರಾತ್ರಿ ಭಾರಿ ಮಳೆ ಬಿದ್ದಿದೆ.

ಬೆಳಿಗ್ಗಿಯಿಂದ ಬಿಸಿಲು ಜೋರಾಗಿತ್ತು. ರಾತ್ರಿ 8 ಗಂಟೆಗೆ ಆರಂಭವಾದ ಮಳೆ ಇಡೀ ರಾತ್ರಿ ಗುಡುಗು ಮಿಂಚು ಸಹಿತ ಸುರಿಯಿತು.

ಮಳೆಯಿಂದಾಗಿ ದಾಬಸ್‌ಪೇಟೆ ಪಟ್ಟಣದ ಶಿವಗಂಗೆ ವೃತ್ತದ ಬೆಸ್ಕಾಂ ಕೇಂದ್ರದ ಎದುರು ಶಿವಗಂಗೆ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆಯಾಗಿತ್ತು.

ಮಳೆ ಬಂದಾಗಲೆಲ್ಲ ಈ ರಸ್ತೆ ಜಲಾವೃತಗೊಳ್ಳುತ್ತಿದ್ದರೂ ಇದುವರೆಗೆ ಸಂಬಂಧಿಸಿದವರು ಸರಿಪಡಿಸಿಲ್ಲ ಎಂದು ದೂರುತ್ತಾರೆ ಇಲ್ಲಿ ಸಂಚರಿಸುವ ವಾಹನ ಸವಾರರು. ಹೋಬಳಿಯಲ್ಲಿ ಐದಾರು ದಿನಗಳಿಂದ ಮಳೆ ಸುರಿಯುತ್ತಿದ್ದು, ಮಳೆಯಿಂದ ತಗ್ಗು ಪ್ರದೇಶದ ಹೊಲಗಳಲ್ಲಿ ನೀರು ನಿಂತಿದೆ. ಇದರಿಂದ ಪೈರು ಕೊಳೆಯುವ ಆತಂಕವನ್ನು ರೈತರು ವ್ಯಕ್ತಪಡಿಸುತ್ತಾರೆ.

ರಾಗಿ, ತೊಗರಿ, ಅವರೆ, ಅಲಸಂದೆ ಎಲ್ಲ ಬೆಳೆಗಳ ಹೂ ಬಿಡುವ ಸಮಯ ಇದು. ಈ ಭಾಗದ ಪ್ರಮುಖ ಬೆಳೆಯಾದ ರಾಗಿ ಹೂಕಚ್ಚುವ ಹಂತದಲ್ಲಿದೆ.



ಬೆಸ್ಕಾಂ ಕೇಂದ್ರದ ಮುಂದೆ ನೀರು ನಿಂತಿರುವುದು

ನಿರಂತರ ಹಾಗೂ ಜೋರು ಮಳೆಯಿಂದ ಸರಿಯಾಗಿ ಹೂ ಕಚ್ಚುವುದಿಲ್ಲ, ಇಳುವರಿ ಕಡಿಮೆಯಾಗುತ್ತದೆ ಎನ್ನುತ್ತಾರೆ ರೈತ ಗಂಗಯ್ಯ.

ಸಂಚಾರ ಸ್ಥಗಿತ: ಭಾರಿ ಮಳೆಯಿಂದ ಯಮಲೂರಿನಿಂದ ಕೆಂಪಾಪುರ ಮೂಲಕ ಚಲ್ಲಘಟ್ಟ ಹಾಗೂ ನಾಗಸಂದ್ರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಎಚ್‌ಎಎಲ್ ಹಿಂಭಾಗದ ರಸ್ತೆಯಲ್ಲಿ ಮೂರು ಅಡಿಗೂ ಹೆಚ್ಚು ಮಳೆ ನೀರು ತುಂಬಿಕೊಂಡು ಸಂಚಾರ ಸ್ಥಗಿತಗೊಂಡಿತ್ತು.

ಮುರುಗೇಶಪಾಳ್ಯದಿಂದ ಎಚ್‌ಎಎಲ್ ಮೂಲಕ ಹಾದು ಹೋಗಿರುವ ರಾಜಕಾಲುವೆ ಕಸಕಡ್ಡಿ, ಪ್ಲಾಸ್ಟಿಕ್ ತ್ಯಾಜ್ಯದಿಂದ ಕಟ್ಟಿಕೊಂಡಿದ್ದರಿಂದ ಮಳೆ ನೀರು ಸರಾಗವಾಗಿ ಹರಿಯದೇ ಸಂಚಾರ ದಟ್ಟಣೆ ಉಂಟಾಯಿತು. ಮಧ್ಯಾಹ್ನ ಆದರೂ ಮಳೆ ನೀರು ತಗ್ಗದೇ ಇರುವುದರಿಂದ ರಸ್ತೆಯಲ್ಲಿ ಸಂಚರಿಸುವ ಸವಾರರು ಪರದಾಡಿದರು.

ಈ ರಸ್ತೆಯಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಸಂಸ್ಥೆ ಸೇರಿ ಹಲವಾರು ಕಾರ್ಖಾನೆಗಳಿವೆ. ಈ ರಸ್ತೆ ಬಂದ್ ಆದರೆ ಹೆಚ್ಚುವರಿಯಾಗಿ ಸುಮಾರು ನಾಲ್ಕರಿಂದ ಐದು ಕಿ.ಮೀ. ಸುತ್ತಬೇಕಾಗಿದೆ. ಸಮಯಕ್ಕೆ ಸರಿಯಾಗಿ ಕಚೇರಿಗೆ ತಲುಪಲಾಗದೆ ಸಂಚಾರ ದಟ್ಟಣೆಯ ಮಧ್ಯೆ ಸಿಲುಕಿ ಗಂಟೆಗಟ್ಟಲೇ ಪರಿತಪಿಸುವ ಸ್ಥಿತಿ ನಿರ್ಮಾಣವಾಗುತ್ತಿದೆ.

ಮುರುಗೇಶಪಾಳ್ಯದಿಂದ ಎಚ್‌ಎಎಲ್ ಮೂಲಕ ಹಾದುಹೋಗಿರುವ ರಾಜಕಾಲುವೆ ಹಲವು ವರ್ಷಗಳಿಂದ ನಿರ್ವಹಣೆ ಆಗದೇ ಆಳೆತ್ತರದ ಗಿಡಗಂಟೆ ಬೆಳೆದಿದ್ದು, ಹೂಳು ತುಂಬಿಕೊಂಡಿದೆ. ಸಣ್ಣ ಮಳೆ ಬಿದ್ದರೂ ನೀರು ಸರಾಗವಾಗಿ ಹರಿಯದೆ ರಸ್ತೆಗೆ ಪ್ರತಿ ಸಲ ಪ್ರವಾಹ ಸೃಷ್ಟಿಯಾಗಿ ಅಡಚಣೆ ಉಂಟಾಗುತ್ತಿದೆ ಎಂದು ವಾಹನ ಸವಾರ ದುರುಗೇಶ್ ಹೇಳಿದರು.

'ಪ್ರತಿನಿತ್ಯ ಇದೇ ರಸ್ತೆಯಲ್ಲಿ ಸಂಚರಿಸುವ ಪರಿಸ್ಥಿತಿ ಇದೆ. ಸಣ್ಣ ಪ್ರಮಾಣದ ಮಳೆಯಾದರೂ ಪ್ರವಾಹ ಸೃಷ್ಟಿಯಾಗುತ್ತದೆ. ಪ್ರವಾಹದಂತಹ ಮಳೆ ನೀರಿನಲ್ಲಿ ವಾಹನಗಳು ಮುಳುಗಿ ಕೆಟ್ಟು ನಿಲ್ಲುತ್ತವೆ. ಎಚ್‌ಎಎಲ್ ಹಾಗೂ ಖಾಸಗಿ ವಲಯದ ಕಂಪನಿಗಳು ಈ ಭಾಗದಲ್ಲಿ ಹೆಚ್ಚಾಗಿ ಇರುವುದರಿಂದ ಇಲ್ಲಿಂದ ತೆರಳಲು ಸಂಚಾರ ನರಕವೆನಿಸಿದೆ' ಎಂದು ಖಾಸಗಿ ಸಂಸ್ಥೆಯ ಉದ್ಯೋಗಿ ಮಣಿ ಹೇಳಿದರು.

ಖರ್ಗೆ ಬೆಂಬಲಿಸಲು ಮನವಿ

ಬೆಂಗಳೂರು: ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರದೇಶ ಕಾಂಗ್ರೆಸ್ ಸಮಿತಿ ಮತದಾರರು ಬೆಂಬಲಿಸಬೇಕು ಎಂದು ಮುಖಂಡ ವಿ.ಆರ್.ಸುದರ್ಶನ್ ಮನವಿ ಮಾಡಿದರು.

ಎಸ್.ನಿಜಲಿಂಗಪ್ಪ ಅವರ ನಂತರ ಕರ್ನಾಟಕದಿಂದ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿಯ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿದ್ದಾರೆ. ಅ.17ರಂದು ನಡೆಯಲಿರುವ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಒಮ್ಮತದಿಂದ ಬೆಂಬಲಿಸಬೇಕು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಎಸ್.ಎಂ.ಕೃಷ್ಣ, ಡಿ.ಬಿ.ಚಂದ್ರೇಗೌಡ, ಎಚ್.ಡಿ. ದೇವೇಗೌಡರ ನಂತರ ಎರಡೂ ಸದನದಲ್ಲಿ ಕಾರ್ಯ ನಿರ್ವಹಿಸಿದ ಶ್ರೇಯಸ್ಸು ಖರ್ಗೆ ಅವರಿಗೆ ಸಲ್ಲುತ್ತದೆ. ಮೌಲ್ಯಾಧಾರಿತ ರಾಜಕಾರಣ ಮಾಡಿಕೊಂಡು ಬಂದಿರುವ ಖರ್ಗೆ ಅವರನ್ನು ಆಯ್ಕೆ ಮಾಡಬೇಕು ಎಂದರು.

ವಿಧಾನ ಪರಿಷತ್ತಿನ ಸದಸ್ಯ ಯು.ಬಿ.ವೆಂಕಟೇಶ್ ಮಾತನಾಡಿ, 'ಎಐಸಿಸಿ ಚುನಾವಣೆಯಲ್ಲಿ ರಾಷ್ಟ್ರವ್ಯಾಪಿ 9,100 ಮತದಾರರಿದ್ದಾರೆ. ಈ ಪೈಕಿ ರಾಜ್ಯದಲ್ಲಿ 494 ಮತದಾರರಿದ್ದಾರೆ. 15 ಜನ ಸಿಎಲ್‌ಪಿ ಸದಸ್ಯರೂ ಮತದಾನದ ಹಕ್ಕು ಪಡೆದಿದ್ದಾರೆ' ಎಂದು ವಿವರಿಸಿದರು.

ರಾಹುಲ್ ಗಾಂಧಿ ಅವರು ನಡೆಸುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಹಲವರು ಭಾಗವಹಿಸಿದ್ದಾರೆ. ಅವರಿಗೆ ಮತದಾನಕ್ಕೆ ಅನುಕೂಲ ಆಗುವಂತೆ ಯಾತ್ರೆ ನಡೆಯುವ ಸ್ಥಳದಲ್ಲೂ ಮತ ಕೇಂದ್ರ ತೆರೆಯಲಾಗುವುದು ಎಂದು ತಿಳಿಸಿದರು. ಶಾಸಕರಾದ ಎಂ.ಕೃಷ್ಣಪ್ಪ, ಎನ್.ಎ. ಹ್ಯಾರೀಸ್, ಬೈರತಿ ಸುರೇಶ್, ಬಿ.ಶಿವಣ್ಣ, ಮುಖಂಡರಾದ ರಾಣಿ ಸತೀಶ್ ಇದ್ದರು.

ಅಂಬೇಡ್ಕರ್ ಮ್ಯೂಸಿಯಂ ನಿರ್ಮಾಣ

ಮುಖ್ಯಮಂತ್ರಿ ಭರವಸೆ • ಅಂಬೇಡ್ಕರ್ ಭೇಟಿ ನೀಡಿದ್ದ 10 ಸ್ಥಳಗಳ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗಸೇನಾ ವಿದ್ಯಾಲಯದ ಆವರಣದಲ್ಲಿ ಅಂಬೇಡ್ಕರ್ ಅವರ ಜೀವನಚರಿತ್ರೆ ಬಿಂಬಿಸುವ ವಸ್ತುಸಂಗ್ರಹಾಲಯ (ಮ್ಯೂಸಿಯಂ) ನಿರ್ಮಿಸಲು ಅಗತ್ಯ ಅನುದಾನ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ನಾಗಸೇನಾ ವಿದ್ಯಾಲಯದಲ್ಲಿ ಬುದ್ಧ, ಅಂಬೇಡ್ಕರ್ ಮಂಟಪ ಉದ್ಘಾಟನೆ ಮತ್ತು ಅಂಬೇಡ್ಕರ್ ವಸ್ತು ಸಂಗ್ರಹಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಭೇಟಿ ನೀಡಿದ್ದ ಹತ್ತು ಸ್ಥಳಗಳನ್ನು ಸರ್ಕಾರ ಅಭಿವೃದ್ಧಿಪಡಿಸುತ್ತಿದ್ದು, ಈ ಯೋಜನೆಯಡಿ ನಾಗಸೇನಾ ವಿದ್ಯಾಲಯದ ಆವರಣದ ವಸ್ತು ಸಂಗ್ರಹಾಲಯಕ್ಕೂ ಅನುದಾನ ಒದಗಿಸಲಾಗುವುದು ಎಂದರು.

'ಅಂಬೇಡ್ಕರ್ ಅವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಸದಾಶಿವನಗರ ವ್ಯಾಪ್ತಿಯಲ್ಲಿ ಐದು ಎಕರೆ ಜಾಗವನ್ನು ಮೈಸೂರಿನ ಒಡೆಯರು ನೀಡಿದ್ದರು. ಪೀಪಲ್ಸ್ ಎಜುಕೇಷನ್ ಸೊಸೈಟಿಯನ್ನು ಅಂಬೇಡ್ಕರ್ ಸ್ಥಾಪನೆ ಮಾಡಿದ್ದಾರೆ. ಅಂತಹ ಸಂಸ್ಥೆ ನಗರದಲ್ಲಿರುವುದು ನಮ್ಮೆಲ್ಲರ ಹೆಮ್ಮೆ. ಈ ಸಂಸ್ಥೆಯ ಅಡಿಯಲ್ಲಿರುವ ನಾಗಸೇನಾ ವಿದ್ಯಾಲಯ ಇನ್ನಷ್ಟು ಎತ್ತರಕ್ಕೆ ಬೆಳೆಯಬೇಕಿದೆ' ಎಂದು ಹೇಳಿದರು.

'ಬೆಂಗಳೂರಿನ ಕೇಂದ್ರ ಸ್ಥಾನದಲ್ಲಿದ್ದರೂ ನಿರೀಕ್ಷೆಗೆ ತಕ್ಕಂತೆ ಬೆಳೆದಿಲ್ಲ. ಮುಂದಿನ ದಿನಗಳಲ್ಲಿ ಈ ಶಿಕ್ಷಣ ಸಂಸ್ಥೆ ಬೆಳೆಸಲು ಸೂಕ್ತ ಸಹಕಾರ ನೀಡಲಾಗುವುದು. ಮುಂದಿನ ವರ್ಷದಿಂದಲೇ ಪಿಯು ತರಗತಿ ಮತ್ತು ಅದರ ಮುಂದಿನ ವರ್ಷ ಪದವಿ ಕೋರ್ಸ್‌ಗಳನ್ನು ಆರಂಭಿಸಬೇಕು. ಈ ಷರತ್ತುಗಳನ್ನು ವಿಧಿಸಿ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ತಿಳಿಸಿದರು.



ನಾಗಸೇನಾ ವಿದ್ಯಾಲಯದ ಆವರಣದಲ್ಲಿ ನಿರ್ಮಾಣವಾಗಿರುವ ಅಂಬೇಡ್ಕರ್ ಮಂಟಪ —ಪ್ರಜಾವಾಣಿ ಚಿತ್ರ

ಸಿ.ಎಂ ಭರವಸೆ

- ನಾಗಸೇನಾ ವಿದ್ಯಾಲಯ ಅಭಿವೃದ್ಧಿಗೆ ಸೂಕ್ತ ಸಹಕಾರ ನೀಡಲಾಗುವುದು
- ಮುಂದಿನ ವರ್ಷ ಪಿಯು, ನಂತರದ ವರ್ಷದಲ್ಲಿ ಪದವಿ ಕೋರ್ಸ್ ಆರಂಭ
- ವಿದ್ಯಾಲಯದ ಆವರಣದಲ್ಲಿ ಅಂಬೇಡ್ಕರ್ ವಿದ್ಯಾರ್ಥಿನಿಲಯ ನಿರ್ಮಾಣ

ರಾಜ್ಯದಲ್ಲಿ 100 ಅಂಬೇಡ್ಕರ್ ವಿದ್ಯಾರ್ಥಿನಿಲಯ ತೆರೆಯಲಾಗುವುದು. ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದಾದರೆ ಈ ಸಂಸ್ಥೆಯ ಆವರಣದಲ್ಲೂ ಒಂದು ವಿದ್ಯಾರ್ಥಿ ನಿಲಯ ನಿರ್ಮಿಸಲಾಗುವುದು ಎಂದರು.

ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ್ ಆಠವಲೆ ಮಾತನಾಡಿ, 'ನಾಗಸೇನಾ ಸಂಸ್ಥೆಗೆ ಅಗತ್ಯ ಸಹಕಾರವನ್ನು ಸರ್ಕಾರ ನೀಡಬೇಕು. ವಸ್ತು ಸಂಗ್ರಹಾಲಯ ನಿರ್ಮಾಣಕ್ಕೆ ಅನುದಾನ ನೀಡಬೇಕು' ಎಂದು ಮನವಿ ಮಾಡಿದರು.

ಪಿಟಿಸಿಎಲ್ ಕಾಯ್ದೆ: ಕಾನೂನು ತಜ್ಞರೊಂದಿಗೆ ಚರ್ಚೆ

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ವಿಷಯದಲ್ಲಿ ಕಾನೂನು ತಜ್ಞರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಸೇರಿ ಹಲವು ಬೇಡಿಕೆಗಳ ಮನವಿಪತ್ರವನ್ನು ನಾಗಸೇನಾ ವಿದ್ಯಾಲಯದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಕಾಯ್ದೆ ತಿದ್ದುಪಡಿ ಬೇಡಿಕೆ ಬಗ್ಗೆ ಮನವರಿಕೆಯಾಗಿದೆ. ಕಾನೂನಿನ ಅಂಶಗಳನ್ನು ನೋಡಿಕೊಂಡು, ಸಮುದಾಯದ ಮುಖಂಡರೊಂದಿಗೂ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಅನಧಿಕೃತ 2 ಡೈಯಿಂಗ್ ಘಟಕ ಬಂದ್

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಬಿಲ್ವರ್ಧನಹಳ್ಳಿಯಲ್ಲಿ ಅಕ್ರಮವಾಗಿ ಬಟ್ಟೆಗಳಿಗೆ ಡೈಯಿಂಗ್ ಹಾಕುತ್ತಿದ್ದ ಕಾರ್ಖಾನೆಗಳ ಮೇಲೆ ತಹಶೀಲ್ದಾರ್ ಶಿವಪ್ಪ ಎಚ್. ಲಮಾಣಿ ನೇತೃತ್ವದ ತಂಡ ಶುಕ್ರವಾರ ದಾಳಿ ನಡೆಸಿದ್ದು, ಎರಡು ಬಣ್ಣ ಹಾಕುವ ಕಾರ್ಖಾನೆಗಳನ್ನು ತೆರವುಗೊಳಿಸಿದೆ. ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಂದಾಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಾಚರಣೆ ನಡೆಸಿ ಬಟ್ಟೆಗಳಿಗೆ ಬಣ್ಣ ಹಾಕುವ ಅಕ್ರಮ ಕಾರ್ಖಾನೆಗಳನ್ನು ತೆರವುಗೊಳಿಸಿದರು. ಕಾರ್ಖಾನೆಯಲ್ಲಿ ಬಣ್ಣ ಹಚ್ಚುವ ಯಂತ್ರಗಳು, ಬಾಯ್ಲರ್‌ಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು. ₹ 10 ಲಕ್ಷಕ್ಕೂ ಹೆಚ್ಚು ಬೆಲೆಬಾಳುವ ಸೀರೆಗಳನ್ನು ವಶಕ್ಕೆ ಪಡೆದು ಕಾರ್ಖಾನೆ ಮಾಲೀಕರು ಮತ್ತು ಜಮೀನು ಬಾಡಿಗೆ ನೀಡಿರುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಬಿಲ್ವರ್ಧನಹಳ್ಳಿಯ ಸರ್ವೆ ನಂ. 62ರ ಜಮೀನನ್ನು ಬಾಡಿಗೆಗೆ ಪಡೆದ ತಮಿಳುನಾಡು ಮೂಲದವರು ಅನಧಿಕೃತವಾಗಿ ಡೈಯಿಂಗ್ ಕಾರ್ಖಾನೆ ನಡೆಸುತ್ತಿದ್ದರು. ಅಕ್ರಮವಾಗಿ ಕಾರ್ಖಾನೆ ನಡೆಸುತ್ತಿದ್ದ ಮೂರ್ತಿ (65), ಮರಿಯಪ್ಪ (39), ಗೋವಿಂದರಾಜು (45) ಮತ್ತು ಜ್ಞಾನೇಶ್ವರ್ (33) ವಿರುದ್ಧ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮಡಿವಾಳ ಸಮುದಾಯ ಎಸ್‌ಸಿಗೆ ಸೇರಿಸಲು ಒತ್ತಾಯ

ಬೆಂಗಳೂರು: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಕರ್ನಾಟಕ ರಾಜ್ಯ ಮಡಿವಾಳರ ಸಂಘ ಆಗ್ರಹಿಸಿದೆ.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸಿ.ನಂಜಪ್ಪ, '17 ರಾಜ್ಯಗಳು ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಡಿವಾಳ ಸಮುದಾಯ ಎಸ್‌ಸಿ ಪಟ್ಟಿಯಲ್ಲಿದೆ. ಪ್ರೊ. ಅನ್ನಪೂರ್ಣಮ್ಮ ಸಮಿತಿಯು ಕುಲ ಶಾಸ್ತ್ರೀಯ ಅಧ್ಯಯನ ನಡೆಸಿದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸದೆ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಯಲ್ಲಪ್ಪ ಮಾತನಾಡಿ, 'ಸರ್ಕಾರ ಇದೇ ರೀತಿ ನಿರ್ಲಕ್ಷ್ಯ ವಹಿಸಿದರೆ ಉಗ್ರ ಹೋರಾಟ ನಡೆಸಲಾಗುವುದು' ಎಂದು ತಿಳಿಸಿದರು.

'ಪರೋಟಕ್ಕೆ ತೆರಬೇಕು ಶೇ 18ರಷ್ಟು ತೆರಿಗೆ'

ನವದೆಹಲಿ (ಪಿಟಿಐ): ಪ್ಯಾಕ್ ಮಾಡಿರುವ, ಫ್ರೋಜನ್ 'ಪರೋಟ'ವು 'ರೋಟಿ'ಗೆ ಸಮ ಅಲ್ಲ; ಇದಕ್ಕೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಶೇಕಡ 5ರಷ್ಟು ಮಾತ್ರ ತೆರಿಗೆ ವಿಧಿಸಲಾಗದು ಎಂದು ಗುಜರಾತ್ ಮೇಲ್ಮನವಿ ಪ್ರಾಧಿಕಾರ (ಜಿಎಎಎಆರ್) ಹೇಳಿದೆ.

ಮಲಬಾರ್, ಮೇಥಿ, ಆಲೂ, ಲಚ್ಚಾ, ಮೂಲಿ ಅಥವಾ ಇನ್ಯಾವುದೇ ಹೆಸರಿನ ಇಂತಹ ಪರೋಟಗಳಲ್ಲಿ ಹೆಚ್ಚುವರಿ ಪದಾರ್ಥಗಳನ್ನು ಸೇರಿಸಲಾಗುತ್ತದೆ. ಉಪ್ಪು, ಎಣ್ಣೆ, ಆಲೂಗಡ್ಡೆ, ಹೂಕೋಸು ಇವುಗಳಲ್ಲಿ ಇರುತ್ತದೆ. ರೋಟಿ ಅಥವಾ ಚಪಾತಿಗಳಲ್ಲಿ ಇರುವುದು ಗೋಧಿ ಹಿಟ್ಟು ಮಾತ್ರ. ಈ ಕಾರಣಗಳಿಗಾಗಿ ಪರೋಟಗಳಿಗೆ ಶೇ 5ರಷ್ಟು ಮಾತ್ರ ತೆರಿಗೆ ವಿಧಿಸಲಾಗದು ಎಂದಿದೆ.

ಅಹಮದಾಬಾದ್ ಮೂಲದ ವಾದಿಲಾಲ್ ಇಂಡಸ್ಟ್ರೀಸ್ ಕಂಪನಿಯು, ಜಿಎಎಆರ್ ಆದೇಶ ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರದ (ಜಿಎಎಎಆರ್) ಮೆಟ್ಟಿಲೇರಿತ್ತು. 2021ರ ಜೂನ್‌ನಲ್ಲಿ ಜಿಎಎಆರ್, ಕಂಪನಿ ಮಾರಾಟ ಮಾಡುತ್ತಿರುವ ಪರೋಟವು ರೋಟಿ ಅಥವಾ ಚಪಾತಿಯಂತೆ ಅಲ್ಲ. ಹೀಗಾಗಿ, ಪರೋಟದ ಮೇಲೆ ಶೇ 18ರಷ್ಟು ತೆರಿಗೆ ವಿಧಿಸಬೇಕು ಎಂದು ಹೇಳಿತ್ತು.

ಎಎಆರ್‌ನ ಕರ್ನಾಟಕದ ಪೀಠವು ಕೂಡ ಐಡಿ ಫ್ರೆಶ್ ಫುಡ್ಸ್ ಪ್ರಕರಣದಲ್ಲಿ, ಫ್ರೋಜನ್ ಪರೋಟಗಳಿಗೆ ಶೇ 18ರಷ್ಟು ತೆರಿಗೆ ವಿಧಿಸಬೇಕು ಎಂದಿತ್ತು.

ಪಿಎಸ್‌ಐ ನೇಮಕಾತಿ ಅಕ್ರಮ: ಸಿಐಡಿ ಅಧಿಕಾರಿಗಳ ತಂಡದಿಂದ ಪತ್ತೆ

ಬ್ಲೂಟೂತ್ ಬಳಸಿ ರ್‍ಯಾಂಕ್ ಪಡೆದ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆ ಕೈಗೊಂಡಿರುವ ಸಿಐಡಿ ಅಧಿಕಾರಿಗಳ ತಂಡಕ್ಕೆ ಬ್ಲೂಟೂತ್ ಬಳಸಿ ಕಲ್ಯಾಣ ಕರ್ನಾಟಕ ಕೋಟಾದಲ್ಲಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಲಕ್ಕಪ್ಪ 6ನೇ ರ್‍ಯಾಂಕ್ ಪಡೆದಿದ್ದು ಅಚ್ಚರಿ ಮೂಡಿಸಿದೆ. ಪರೀಕ್ಷೆಯಲ್ಲಿ ಅತ್ಯಧಿಕ 135 ಅಂಕ ಗಳಿಸಲು ಬ್ಲೂಟೂತ್ ಬಳಕೆಯೇ ಕಾರಣ ಎಂಬುದನ್ನು ಪತ್ತೆ ಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಹೆಡ್‌ಕಾನ್‌ಸ್ಟೆಬಲ್ ಆಗಿರುವ ಲಕ್ಕಪ್ಪ, ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕೆರೂರದ ಶ್ರೀಶೈಲ ಬಿರಾದಾರ ಶ್ರೀಶೈಲ ಬಿರಾದಾರ ಮತ್ತು ಇಂಡಿ ತಾಲ್ಲೂಕಿನ ಶ್ರೀಮಂತ ಸಾತಾಪುರ ಎಂಬುವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಇವರು ಮತ್ತು ಅಫಜಲಪುರ ತಾಲ್ಲೂಕಿನ ನಾರಾಯಣಪುರದ ಲಕ್ಕಪ್ಪ ಕುರಿತು ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ.

ಆರ್.ಡಿ. ಪಾಟೀಲ ಸಹಚರರ ಕೈವಾಡ: ರಾಜ್ಯದಲ್ಲಿ ನಡೆದ ಅಕ್ರಮಗಳಲ್ಲೇ ಬ್ಲೂಟೂತ್ ಸಾಧನ ಬಳಸಿದ್ದು ಕಲಬುರಗಿಯಲ್ಲಿ ಮಾತ್ರ ಪತ್ತೆಯಾಗಿತ್ತು. ಒಡಿಶಾದಿಂದ ತರಿಸಿದ್ದ ಅತ್ಯಾಧುನಿಕ ಉಪಕರಣ ಬಳಸಿ ಬೇರೆಡೆ ಕೂತ ನುರಿತ ವ್ಯಕ್ತಿಗಳು ಹಣ ಕೊಟ್ಟ ಅಭ್ಯರ್ಥಿಗಳಿಗೆ ಬ್ಲೂಟೂತ್ ಮೂಲಕ ಉತ್ತರ ಹೇಳಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸುವಂತೆ ನೋಡಿಕೊಂಡರು. ಇದರ ತನಿಖೆ ಕೈಗೊಂಡ ಕಲಬುರಗಿಯ ಸಿಐಡಿ ಅಧಿಕಾರಿಗಳಿಗೆ ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಸಹಚರರು ಬ್ಲೂಟೂತ್ ಬಳಸಿದ ಸುಳಿವು ಸಿಕ್ಕಿತು.

ಹೀಗಾಗಿ ಕಲಬುರಗಿ, ವಿಜಯಪುರ ಜಿಲ್ಲೆಯವರು ಬೇರೆ ಜಿಲ್ಲೆಗಳ ಕೇಂದ್ರಗಳಲ್ಲಿ ಪರೀಕ್ಷೆ ಬರೆದು ಉತ್ತೀರ್ಣರಾಗಿರಬಹುದು ಎಂಬ ಶಂಕೆಯಿಂದ ಸಿಐಡಿ ಅಧಿಕಾರಿಗಳು ಎರಡೂ ಜಿಲ್ಲೆಗಳ ಅಭ್ಯರ್ಥಿಗಳ ಮಾಹಿತಿ ಸಂಗ್ರಹಿಸಿದರು. ಮೊದಲ ಪತ್ರಿಕೆ ಅಷ್ಟೇನೂ ಚೆನ್ನಾಗಿ ಮಾಡದ ಅಭ್ಯರ್ಥಿಗಳು ಎರಡನೇ ಪತ್ರಿಕೆ ಉತ್ತಮವಾಗಿ ಮಾಡಿದ್ದನ್ನು ಕಂಡು ಅಚ್ಚರಿಪಟ್ಟರು. ಲಚ್ಚಪ್ಪ ಒಂದೂವರೆ ಗಂಟೆ ಅವಧಿಯ ಪರೀಕ್ಷೆಯಲ್ಲಿ 135 ಅಂಕ ಗಳಿಸಿದ್ದು ಹೇಗೆ ಎಂಬುದರ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ಕೈಗೊಂಡರು.

'ಆರೋಪಿ ಆರ್.ಡಿ. ಪಾಟೀಲ ಸ್ವಗ್ರಾಮ ಅಫಜಲಪುರ ತಾಲ್ಲೂಕಿನ ಸೊನ್ನ ಗ್ರಾಮದ ಮತ್ತು ಹಾಸ್ಟೆಲ್ ವಾರ್ಡನ್ ಆಗಿದ್ದ ರಾವುತಪ್ಪ ಬಸವಂತ್ರಾಯ ವಾಲೀಕಾರ (35) ಎಂಬಾತ ನೀಡಿದ ಸುಳಿವಿನ ಮೇರೆಗೆ ಅಕ್ರಮ ನಡೆಸಿದ ಅಭ್ಯರ್ಥಿಗಳನ್ನು ಪತ್ತೆ ಮಾಡಲು ಸಾಧ್ಯವಾಯಿತು. ಈ ಅಕ್ರಮದಲ್ಲಿ ರಾವುತಪ್ಪನ ಸಹೋದರನ ಪಾತ್ರವೂ ಇದೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕಲಬುರಗಿ ಸಿಐಡಿ ಅಧಿಕಾರಿಗಳ ತಂಡವು ನೀಡಿದ ಮಾಹಿತಿ ಆಧರಿಸಿ ಬೆಂಗಳೂರಿನ ರಾಮಮೂರ್ತಿ ನಗರ, ತುಮಕೂರಿನ ಕ್ಯಾತ್ಸಂದ್ರ ಮತ್ತು ಧಾರವಾಡದಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆದಿದ್ದ ಮೂವರನ್ನ ಬಂಧಿಸಲಾಗಿದೆ.

ಬ್ಲೂಟೂತ್ ಬಳಸಿದ ಅಭ್ಯರ್ಥಿ ಬಂಧನ

ಧಾರವಾಡ: ಪಿಎಸ್‌ಐ ಪರೀಕ್ಷೆಯಲ್ಲಿ ಬ್ಲೂಟೂತ್ ಸಾಧನ ಬಳಸಿ ಉತ್ತರ ಪಡೆದು 95ನೆಯ ರ್‍ಯಾಂಕ್ ಪಡೆದ ಆರೋಪದ ಮೇಲೆ ಶ್ರೀಮಂತ ಸತಾಪುರ ಎಂಬಾತನನ್ನು ಇಲ್ಲಿನ ಉಪನಗರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದು, ಆರೋಪಿಯನ್ನು ಅ.17ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

2021ರ ಅ.3ರಂದು ನಡೆದ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಶ್ರೀಮಂತ ಇಲ್ಲಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ. ಈ ಸಂದರ್ಭದಲ್ಲಿ ಬೆಳಿಗ್ಗೆ 11ರಿಂದ 12.30ರವರೆಗೆ ನಡೆದ ಒಂದನೇ ಪತ್ರಿಕೆ ಪರೀಕ್ಷೆ ಸಂದರ್ಭದಲ್ಲಿ ಬೆಂಗಳೂರಿನ ಕೋಡಿಹಳ್ಳಿ ಪ್ರದೇಶದಿಂದ ಸಿದ್ದಪ್ಪ ಗೊಂಡಲಿ ಎಂಬುವವರಿಗೆ ಸೇರಿದ 81234 01613 ಮೊಬೈಲ್ ಸಂಖ್ಯೆಯಿಂದ ಧಾರವಾಡದ ಸೇಂಟ್ ಜೋಸೆಫ್ ಶಾಲೆಯ ಪ್ರದೇಶದಲ್ಲಿರುವ ಶ್ರೀಮಂತನ ಮೊಬೈಲ್ ಸಂಖ್ಯೆ 99012 45785ಗೆ 42ಸೆ., 4ಸೆ., 1,568ಸೆ. ಮತ್ತು 77ಸೆಕೆಂಡುಗಳ ಕಾಲ ನಿರಂತರ ಸಂಪರ್ಕದಲ್ಲಿತ್ತು.

ಹಾಗೆಯೇ ಮಧ್ಯಾಹ್ನ ನಡೆದ ದ್ವಿತೀಯ ಪತ್ರಿಕೆಯ ಪರೀಕ್ಷೆ ಸಂದರ್ಭದಲ್ಲಿ 3ರಿಂದ 4.30ರವರೆಗೆ 39ಸೆ., 15ಸೆ., 637ಸೆ., 436ಸೆ ಮತ್ತು 13ಸೆಕೆಂಡುಗಳ ನಿರಂತರ ಸಂಪರ್ಕ ಕಂಡುಬಂದಿದೆ. ಇವುಗಳಲ್ಲಿ ಶ್ರೀಮಂತ ಸತಾಪುರ ಅಕ್ರಮವಾಗಿ ಬ್ಲೂಟೂತ್ ಸಾಧನ ಬಳಸಿ ಪರೀಕ್ಷೆ ಬರೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಸಿಸಿಡಿ ವಿಭಾಗದ ಸಬ್ ಇನ್‌ಸ್ಪೆಕ್ಟರ್ ಟಿ.ಎಸ್.ಚಂದ್ರಹಾಸ್ ದೂರಿನಲ್ಲಿ ಹೇಳಿದ್ದಾರೆ.

KEA

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23460460 (5 ಲೈನ್ಸ್), ಫ್ಯಾಕ್ಸ್: 080–23461576, ಇ–ಮೇಲ್: keauthority-ka@nic.in, ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–06/2022–23 ದಿನಾಂಕ: 14–10–2022

ಎಂಬಿಎ / ಎಂಸಿಎ /ಎಂಇ /ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಮೊದಲನೆ ವರ್ಷದ / 1ನೇ ಸೆಮಿಸ್ಟರ್‌ಗಳ ಪ್ರವೇಶಕ್ಕೆ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ–2022

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 17 ಟಿಇಸಿ 2018 ಬೆಂಗಳೂರು, ದಿನಾಂಕ 13–03–2018 ರ ಅನ್ವಯ ಅರ್ಹ ಕರ್ನಾಟಕ ಮತ್ತು ಕರ್ನಾಟೇಕತರ ಅಭ್ಯರ್ಥಿಗಳಿಂದ 2022–23ನೇ ಸಾಲಿನ ಮೊದಲನೆ ವರ್ಷದ / 1ನೇ ಸೆಮಿಸ್ಟರ್‌ಗಳ (ಪೂರ್ಣಾವಧಿ / ಅರೆಕಾಲಿಕ) ಎಂಬಿಎ / ಎಂಸಿಎ /ಎಂಇ /ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸುವ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ–2022 ಕ್ಕೆ ಹಾಜರಾಗುವವರು ಈ ಮೇಲಿನ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು Karnataka Selection of Candidates for Admission to Master of Business Administration and Master of Computer Application Courses Rules, 2005, Karnataka Selection of Candidates for Admission to Master of Engineering (ME) and Master of Technology (M.Tech) courses, Rules, 2005 ರ ಅನ್ವಯ ಅರ್ಹರಾಗಿರುತ್ತಾರೆ.
2. **ಇಂಜಿನಿಯರಿಂಗ್ ಹಾಗು ಟೆಕ್ನಾಲಜಿ ವಿಭಾಗದ GATE ಅರ್ಹ ಅಭ್ಯರ್ಥಿಗಳು ಮಾತ್ರ ವಿಟಿಯು, ಬೆಳಗಾವಿ ಅಡಿಯಲ್ಲಿನ ವಿವಿಧ ಎಂ.ಟೆಕ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.** ಗೇಟ್ ಪರೀಕ್ಷೆಯಲ್ಲಿ ಮಾನ್ಯತೆ ಅಂಕಗಳನ್ನು ಹೊಂದಿರುವವರು (Valid GATE Score) ಎಂಇ / ಎಂ.ಟೆಕ್ / ಎಂ. ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕಾಗಿ, ಪಿಜಿಸಿಇಟಿ–2022ಕ್ಕೆ ಹಾಜರಾಗಬೇಕಾಗಿರುವುದಿಲ್ಲ, ಆದರೆ ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿ ಶುಲ್ಕವನ್ನು ಪಾವತಿಸಿ ಪ್ರವೇಶಕ್ಕೆ ಅರ್ಹರಾಗಬಹುದು. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
3. ಕರ್ನಾಟಕೇತರ ಅಭ್ಯರ್ಥಿಗಳು ಎಂಬಿಎ ಮತ್ತು ಎಂಸಿಎ ಪ್ರವೇಶಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಬಿಟ್ಟುಕೊಡುವ ಸೀಟುಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು. ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಆದ್ದರಿಂದ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ (50%) ಅರ್ಹತೆಯನ್ನು ಪಡೆಯಬಹುದಾಗಿದೆ ಹಾಗು ಪ್ರವೇಶಕ್ಕಾಗಿ ನೊಂದಣಿಯನ್ನು ಮಾಡಿ ಕೊಳ್ಳಬಹುದಾಗಿದೆ. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕದ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
4. ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಒಟ್ಟು ಕನಿಷ್ಠ ಶೇ.50%, ಹಾಗು ಕರ್ನಾಟಕದ ಎಸ್.ಸಿ., ಎಸ್.ಟಿ., ಪ್ರವರ್ಗ–1 ರ ಅಭ್ಯರ್ಥಿಗಳು ಕನಿಷ್ಠ ಶೇ.45% ಅಂಕಗಳನ್ನು ಪಡೆದಿರಬೇಕು. CGPA / SGPA ಗ್ರೇಡ್‌ಗಳ ಮಾದರಿಯಲ್ಲಿ ನಿಗದಿಪಡಿಸಿರುವ ಅರ್ಹತಾ ಪರೀಕ್ಷೆಯ ಅಂಕಗಳು, ಅಗತ್ಯವಿರುವ ಕನಿಷ್ಠ ಅರ್ಹತಾ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗ್ರೇಡ್‌ಗಳ ಅಂಕಗಳು ಸೂಚಿಸುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಿ.
5. ಶೈಕ್ಷಣಿಕ ವಿದ್ಯಾರ್ಹತೆ, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು ಹಾಗು ವಿವರವಾದ ಅರ್ಹತಾ ಮಾನದಂಡಗಳನ್ನೊಳಗೊಂಡ ಮಾಹಿತಿ ಪುಸ್ತಕ 2022 ಅನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ. ಅಭ್ಯರ್ಥಿಗಳು ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಸೂಚಿಸಿದೆ.
6. **ಪಿಜಿಸಿಇಟಿ–2022ಕ್ಕೆ** ಆನ್‌ಲೈನ್ ಮೂಲಕ ನೊಂದಣಿ ಹಾಗು ಅರ್ಜಿ ಸಲ್ಲಿಸಲು ಪೋರ್ಟಲ್‌ಅನ್ನು 15–10–2022 ರಿಂದ ತೆರೆಯಲಾಗಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ದಿನಾಂಕ 24–10–2022 ರ ಸಂಜೆ 4.00 ರೊಳಗಾಗಿ ಆನ್‌ಲೈನ್ ಮೂಲಕ ನೊಂದಣಿ ಮಾಡಿ ಶುಲ್ಕವನ್ನು ಪಾವತಿಸಿ, 26–10–2022 ರ ರಾತ್ರಿ 11.59 ರ ವರೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
7. ಶುಲ್ಕ: ಸಾಮಾನ್ಯ ಮತ್ತು ಇತರ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಪ್ರತಿ ಕೋರ್ಸಿಗೆ ರೂ.650/– (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ವರ್ಗ–1ಕ್ಕೆ ಸೇರಿದ ಕರ್ನಾಟಕದ ಅಭ್ಯರ್ಥಿಗಳಿಗೆ ಮಾತ್ರ ರೂ.500/–).
8. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಪಿಜಿಸಿಇಟಿ–2022ಕ್ಕೆ ದಾಖಲಿಸಿದ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ, ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
9. **ಪಿಜಿಸಿಇಟಿ–2022 ರ ವೇಳಾಪಟ್ಟಿ**

ದಿನಾಂಕ / ದಿನ	ಕೋರ್ಸುಗಳು	ವಿಷಯ	ಸಮಯ	ಅಂಕಗಳು
ನಂತರ ಪ್ರಕಟಿಸಲಾಗುವುದು	M.E. / M. Tech / M. Arch	**Type-A:** Courses offered by VTU, UVCE, UBDTCE.	2:30 p.m. to 4:30 p.m.	100
	MCA	Admission to 1st Year / 1st Semester	10:30 a.m. to 12:30 p.m.	100
	MBA	Admission to 1st Year / 1st Semester	2:30 p.m. to 4:30 p.m.	100

ಗಮನಿಸಿ:

1. All the admissions and undergraduate Degrees to claim eligibility for admission to any of the PG courses are subject to approval of the Government / VTU / other respective Universities.
2. As per the letter from VTU, Belgaum dated 12-08-2014, to pursue M.Tech course on the basis of undergraduate programme from Aeronautical Society of India is ***NOT*** approved.
3. As per the letter from VTU, Belgaum dated 30-05-2014, who have acquired B.E. Degree through Distance Education Mode are ***NOT*** eligible for admission to M.Tech Courses.
4. Candidates who have passed the qualifying examination from Aeronautical Society of India and Associate Membership Examination of Institution of Electronics and Telecommunication (AMIET) will not be permitted to seek admission to M.Tech. as per VTU, Belgaum letter dated 14-05-2018 .

ಹೆಚ್ಚಿನ ನಿಯಮಾವಳಿಗಳು, ಅರ್ಹತೆ ಇತ್ಯಾದಿಗಳಿಗಾಗಿ ಕೆಇಎ ವೆಬ್‌ಸೈಟ್ **http://kea.kar.nic.in** ಗೆ ಭೇಟಿ ನೀಡಿ.

ಸಹಿ/– (ಎಸ್. ರಮ್ಯ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

DIPR/CP/RO2615/2022-23

ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಇಂದಿನಿಂದ

ಅಭಿನ್, ಅಮ್ಲಾನ್ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪ್ರಿಂಟರ್‌ಗಳಾದ ಕರ್ನಾಟಕದ ಅಭಿನ್ ದೇವಾಡಿಗ ಮತ್ತು ಸರ್ವಿಸಸ್ ತಂಡ ಪ್ರತಿನಿಧಿಸುವ ಅಮ್ಲಾನ್ ಬೊರ್ಗೊಹೈನ್ ಅವರು ಶನಿವಾರದಿಂದ ಇಲ್ಲಿ ನಡೆಯಲಿರುವ 61ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ-ಲ್ಲಿ ಸ್ಪರ್ಧಿಸಲಿದ್ದು, ಪ್ರಮುಖ ಆಕರ್ಷಣೆ ಎನಿಸಿದ್ದಾರೆ.

ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ (ಕೆಎಎ) ಆಶ್ರಯದಲ್ಲಿ ಕಂಠೀರವ ಕ್ರೀ-ಡಾಂಗಣದಲ್ಲಿ ಅ. 19ರವರೆಗೆ ಚಾಂಪಿಯನ್‌ಷಿಪ್ ಆಯೋಜ ನೆಯಾಗಿದೆ.

ಇತ್ತೀಚೆಗೆ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಇತ್ತೀಚೆಗೆ 200 ಮೀ. ಓಟದಲ್ಲಿ ಬೆಳ್ಳಿ ಪದಕ ಜಯಿಸಿರುವ ಅಭಿನ್ ದೇವಾಡಿಗ ಉತ್ತಮ ಲಯದಲ್ಲಿದ್ದಾರೆ.

ಹರ್ಡಲ್ಸ್ ಪಟು ಜ್ಯೋತಿ ಯರಾಜಿ ಕೂಡ ಪ್ರಮುಖ ಅಥ್ಲೀಟ್ ಎನಿಸಿದ್ದಾರೆ. ಜ್ಯೋತಿ ಅವರು ರೈಲ್ವೇಸ್ ಪರ ಕಣಕ್ಕಿಳಿಯುವರು.


ಅಭಿನ್ ದೇವಾಡಿಗ

ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಅಮ್ಲಾನ್ ಮತ್ತು ಜ್ಯೋತಿ ತಲಾ ಎರಡು ಚಿನ್ನದ ಪದಕ ಗೆದ್ದುಕೊಂಡಿದ್ದರು. ಅಮ್ಲಾನ್ 100 ಮತ್ತು 200 ಮೀಟರ್ಸ್ ಓಟಗಳಲ್ಲಿ ಸ್ಪರ್ಧಿಸಲಿದ್ದರೆ, ಜ್ಯೋತಿ 100 ಮೀ. ಓಟ ಮತ್ತು ಹರ್ಡಲ್ಸ್‌ನಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ.

ಜಾವೆಲಿನ್ ಪಟು ಡಿ.ಪಿ. ಮನು ಕೂಡ ಪ್ರಮುಖ ಸ್ಪರ್ಧಿಯಾಗಿದ್ದಾರೆ.

ಲಾಂಗ್‌ಜಂಪ್ ಪಟುಗಳಾದ ಮುರಳಿ ಶ್ರೀಶಂಕರ್, ಮುಹಮ್ಮದ್ ಅನೀಸ್ ಯಾಹ್ಯಾ, ಸ್ಟೀಪಲ್‌ಚೇಸರ್ ಅವಿನಾಶ್ ಸಬ್ಳೆ, ಟ್ರಿಪಲ್ ಜಂಪ್ ಸ್ಪರ್ಧಿಗಳಾದ ಎಲ್ದೋಸ್ ಪಾಲ್ ಮತ್ತು ಅಬ್ದುಲ್ಲಾ ಅಬೂಬಕರ್ ವಿವಿಧ ಕಾರಣಗಳಿಗಾಗಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

31 ತಂಡಗಳ ಒಟ್ಟು 868 ಅಥ್ಲೀಟ್‌ಗಳು ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಕರ್ನಾಟಕದ ಯುವ ಅಥ್ಲೀಟ್‌ಗಳಾದ ಚೇತನ್ ಮತ್ತು ಎನ್.ಎಸ್.ಸಿಮಿ ಅವರು ತಮ್ಮ ಸಾಮರ್ಥ್ಯ ತೋರಲು ಸಜ್ಜಾಗಿದ್ದಾರೆ. ನಾಲ್ಕು ದಿನಗಳಲ್ಲಿ ಪುರುಷ ಹಾಗೂ ಮಹಿಳೆಯರ ವಿಭಾಗಗಳಲ್ಲಿ 47 ಸ್ಪರ್ಧೆಗಳು ನಡೆಯಲಿವೆ.

ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಏಷ್ಯನ್ ಗೇಮ್ಸ್‌ಗೆ ಭಾರತ ತಂಡದ ಪೂರ್ವಸಿದ್ಧತಾ ಶಿಬಿರಕ್ಕೆ ಆಯ್ಕೆ ಟ್ರಯಲ್ಸ್ ಆಗಿಯೂ ಈ ಚಾಂಪಿಯ-ನ್‌ಷಿಪ್‌ಅನ್ನು ಪರಿಗಣಿಸಲಾಗುತ್ತದೆ.

‘ಸ್ಪರ್ಧೆಗಿಂತ ಮೊದಲು ಪಿಚ್ ಬಳಸುವಂತಿಲ್ಲ’

ಕಂಠೀರವ ಕ್ರೀಡಾಂಗಣದಲ್ಲಿ ಜಾವೆಲಿನ್ ಥ್ರೊ ಪಟುಗಳ ತಾಲೀಮಿಗೆ ಅವಕಾಶ ನೀಡುತ್ತಿಲ್ಲ ಎಂಬುದು ವಿವಾದಕ್ಕೆ ಕಾರಣಕ್ಕೆ ಕಾರಣವಾಗಿತ್ತು.

ಈ ಕುರಿತು ಮಾತನಾಡಿರುವ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ (ಕೆಎಎ) ಕಾರ್ಯದರ್ಶಿ ಎ. ರಾಜವೇಲು ಅವರು ‘ಚಾಂಪಿಯನ್‌ಷಿಪ್ ನಿಯಮದ ಪ್ರಕಾರ ಸ್ಪರ್ಧೆಗಳಿಗಿಂತ ಮೊದಲು ಮುಖ್ಯ ಪಿಚ್‌ಅನ್ನು ಬಳಸುವಂತಿಲ್ಲ. ಕ್ರೀಡಾ ಇಲಾಖೆಯು ಮೈದಾನದ ನಿರ್ವಹಣೆ ಮಾಡುತ್ತಿದೆ. ತಾಲೀಮಿನ ಮೂಲಕ ಪಿಚ್‌ಅನ್ನು ಹಾಳು ಮಾಡಲು ಸಾಧ್ಯವಿಲ್ಲ" ಎಂದಿದ್ದಾರೆ.

ಅಕ್ಟೋಬರ್ 15ರಿಂದ 19ರವರೆಗೆ ಮಾತ್ರ ಕ್ರೀಡಾಂಗಣವನ್ನು ಚಾಂಪಿಯನ್‌ಷಿಪ್‌ಗೆ ಕಾಯ್ದಿರಿಸಲಾಗಿದೆ.

ಮುಂಬಾ, ಪ್ಯಾಂಥರ್ಸ್‌ಗೆ ಜಯ

ಪ್ರೊ ಕಬಡ್ಡಿ ಲೀಗ್ ಟೂರ್ನಿ: ರೇಡಿಂಗ್‌ನಲ್ಲಿ ಗುಮನ್, ಅರ್ಜುನ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ರೇಡಿಂಗ್ ಮಾಡಿದ ಗುಮನ್ ಸಿಂಗ್ ಮತ್ತು ಆಶಿಶ್ ಅವರು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಯು ಮುಂಬಾ ತಂಡಕ್ಕೆ ಗೆಲುವು ತಂದುಕೊಟ್ಟರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಹಣಾಹಣಿಯಲ್ಲಿ ಯು ಮುಂಬಾ 39–32ರಿಂದ ತಮಿಳ್ ತಲೈವಾಸ್ ತಂಡಕ್ಕೆ ಸೋಲುಣಿಸಿತು.

ಗುಮನ್ ಸಿಂಗ್ 12 ಮತ್ತು ಆಶಿಶ್ 10 ಪಾಯಿಂಟ್ಸ್ ಗಳಿಸಿ ಮಿಂಚಿದರು. ಜೈ ಭಗವಾನ್ (8 ಪಾಯಿಂಟ್ಸ್) ಕೂಡ ಮುಂಬಾ ಗೆಲುವಿಗೆ ಕಾಣಿಕೆ ನೀಡಿದರು.

ತಮಿಳ್ ತಲೈವಾಸ್ ತಂಡಕ್ಕಾಗಿ ನರೇಂದರ್ ಗಳಿಸಿದ 15 ಪಾಯಿಂಟ್ಸ್ ವ್ಯರ್ಥವಾದವು.

ಉಭಯ ತಂಡಗಳು ಆರಂಭದಿಂದಲೇ ಭಾರಿ ಪೈಪೋಟಿ ನಡೆಸಿದವು. ಮೊದಲಾರ್ಧದ ವೇಳೆಗೆ ತಲೈವಾಸ್ 16 ಪಾಯಿಂಟ್ಸ್ ಗಳಿಸಿದ್ದರೆ, ಮುಂಬಾ 15 ಪಾಯಿಂಟ್ಸ್ ಕಲೆಹಾಕಿತ್ತು. ಆದರೆ ಬಳಿಕ ಒತ್ತಡ ಮೀರಿ ನಿಲ್ಲುವಲ್ಲಿ ತಮಿಳ್ ವಿಫಲವಾಯಿತು.


ಯು ಮುಂಬಾ ತಂಡದ ಆಶಿಶ್ ಅವರು ತಮಿಳ್ ತಲೈವಾಸ್ ಆಟಗಾರರಿಂದ ತಪ್ಪಿಸಿಕೊಳ್ಳಲು ಯತ್ನಿಸಿದರು– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ದಿನದ ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 44–31ರಿಂದ ಹರಿಯಾಣ ಸ್ಟೀಲರ್ಸ್ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಅರ್ಜುನ್ ದೇಸ್ವಾಲ್ 14 ಪಾಯಿಂಟ್ಸ್ ಗಳಿಸಿದರು. ಹರಿಯಾಣದ ಮೀತು(16)ಆಟ ವ್ಯರ್ಥವಾಯಿತು.

ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 47–37ರಿಂದ ಪುಣೇರಿ ಪಲ್ಟನ್ ಎದುರು ಗೆದ್ದಿತು.

ಇಂದಿನ ಪಂದ್ಯಗಳು:
ಜೈಪುರ ಪಿಂಕ್ ಪ್ಯಾಂಥರ್ಸ್–ಗುಜರಾತ್ ಜೈಂಟ್ಸ್
ತೆಲುಗು ಟೈಟನ್ಸ್–ದಬಂಗ್ ಡೆಲ್ಲಿ
ಬೆಂಗಾಲ್ ವಾರಿಯರ್ಸ್– ಪುಣೇರಿ ಪಲ್ಟನ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	3	3	0	0	15
ಜೈಪುರ	3	2	1	0	11
ಬೆಂಗಾಲ್	3	2	1	0	10
ಹರಿಯಾಣ	3	2	1	0	10
ಮುಂಬಾ	3	2	1	0	10
ಬೆಂಗಳೂರು	3	2	1	0	10

ಏಕದಿನ ವಿಶ್ವಕಪ್ ಕ್ರಿಕೆಟ್: ಬಿಸಿಸಿಐಗೆ ₹955 ಕೋಟಿ ತೆರಿಗೆ?

ನವದೆಹಲಿ (ಪಿಟಿಐ): ಮುಂದಿನ ವರ್ಷ ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪ್ರಸಾರ ಆದಾಯದ ಮೇಲೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಸುಮಾರು ₹ 955 ಕೋಟಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸುವ ಸಾಧ್ಯತೆ ಇದೆ.

ಐಸಿಸಿ ನಿಯಮಾವಳಿ ಪ್ರಕಾರ, ವಿಶ್ವಕಪ್ ಆತಿಥ್ಯ ವಹಿಸುವ ದೇಶವು ಸ್ಥಳೀಯ ಸರ್ಕಾರದಿಂದ ತೆರಿಗೆ ವಿನಾಯಿತಿ ಪಡೆಯಬೇಕು. ಆದರೆ, ಭಾರತದ ತೆರಿಗೆ ನಿಯಮಗಳಲ್ಲಿ ಅಂತಹ ವಿನಾಯಿತಿಗಳಿಗೆ ಅವಕಾಶ ಇಲ್ಲ. ಇದೇ ಕಾರಣಕ್ಕಾಗಿ 2016ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿ ಆಯೋಜನೆಗೆ ಬಿಸಿಸಿಐ ₹193 ಕೋಟಿ ತೆರಿಗೆ ಪಾವತಿಸಿತ್ತು.

'ಭಾರತದಲ್ಲಿ 2023ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಆಯೋಜಿಸಲಾಗಿದೆ. ಐಸಿಸಿ ಟೂರ್ನಿ ಗೆ ತೆರಿಗೆ ವಿನಾಯಿತಿ ಪಡೆಯುವ ಹೊಣೆಯು ಬಿಸಿಸಿಐ ಮೇಲಿದೆ’ ಎಂದು ರಾಜ್ಯ ಘಟಕಗಳಿಗೆ ಕಳುಹಿಸಿರುವ ಪತ್ರದಲ್ಲಿ ಉಲ್ಲೇಖಿಸಲಾ-ಗಿದೆ.

‘ಭಾರತದ ತೆರಿಗೆ ಅಧಿಕಾರಿಗಳಿಂದ 2023ರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಸಾರ ಆದಾಯದ ಮೇಲೆ ಶೇಕಡ 20 ತೆರಿಗೆ(ಹೆಚ್ಚುವರಿ ಶುಲ್ಕ ಹೊರತುಪಡಿಸಿ) ಕುರಿತಾದ ಆದೇಶ ಐಸಿಸಿಗೆ ತಲುಪಿದೆ. ಇದರಿಂದಾಗಿ ಐಸಿಸಿಯಿಂದ ಬಿಸಿಸಿಐಗೆ ಬರಲಿರುವ ಆದಾಯದಲ್ಲಿ ಕಡಿತವಾಗಲಿದೆ’ ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಇದೇ 18ರಂದು ಮುಂಬೈನಲ್ಲಿ ಬಿಸಿಸಿಐ ಸರ್ವ-ಸದಸ್ಯರ ಮಹಾಸಭೆ ನಡೆಯಲಿದ್ದು, ಈ ಕುರಿತು ಚರ್ಚೆ ನಡೆಯಲಿದೆ.

ವಿಶ್ವಕಪ್: ಬೂಮ್ರಾ ಸ್ಥಾನಕ್ಕೆ ಶಮಿ

ನವದೆಹಲಿ: ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡಕ್ಕೆ ವೇಗದ ಬೌಲರ್ ಮೊಹಮ್ಮದ್ ಶಮಿ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯ್ಕೆ ಮಾಡಿದೆ. ಗಾಯಗೊಂಡು ಹೊರಗುಳಿದಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಸ್ಥಾನಕ್ಕೆ ಶಮಿ ಅವರನ್ನು ಆಯ್ಕೆ ಮಾಡ ಲಾಗಿದೆ.

‘ಬೂಮ್ರಾ ಅವರ ಸ್ಥಾನಕ್ಕೆ ಶಮಿ ಅವರನ್ನು ಆಯ್ಕೆ ಮಾಡಲಾಗಿದೆ. ಶಮಿ ಅವರು ಈಗಾಗಲೇ ಆಸ್ಟ್ರೇಲಿಯಾ ತಲುಪಿದ್ದು, ಬ್ರಿಸ್ಬೇನ್‌ನಲ್ಲಿರುವ ತಂಡವನ್ನು ಸೇರಿಕೊಳ್ಳಲಿದ್ದಾರೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ಏಷ್ಯಾಕಪ್ ಟಿ20 ಕ್ರಿಕೆಟ್ ಫೈನಲ್ ಇಂದು

7ನೇ ಪ್ರಶಸ್ತಿ ಮೇಲೆ ಭಾರತ ಕಣ್ಣು

ಸಿಲೆಟ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ತಂಡವು ಶನಿವಾರ ಇಲ್ಲಿ ನಡೆಯಲಿರುವ ಮಹಿಳೆಯರ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಶ್ರೀಲಂಕಾ ತಂಡಕ್ಕೆ ಸವಾಲೊಡ್ಡಲಿದೆ.

ಏಳನೇ ಸಲ ಪ್ರಶಸ್ತಿ ಜಯದ ಮೇಲೆ ಕಣ್ಣಿಟ್ಟಿರುವ ಭಾರತ ತಂಡವು ಲಂಕಾ ಬಳಗಕ್ಕಿಂತ ಬಲಾಢ್ಯ ಹಾಗೂ ಅನುಭವಿ ಆಟಗಾರ್ತಿಯರನ್ನು ಒಳಗೊಂಡಿದೆ. ಸೆಮಿಫೈನಲ್‌ನಲ್ಲಿ ಭಾರತವು ಥಾಯ್ಲೆಂಡ್ ಎದುರು ಸುಲಭವಾಗಿ ಗೆದ್ದಿತ್ತು. ಆದರೆ, ಇನ್ನೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ಕಠಿಣ ಸವಾಲನ್ನು ಮೆಟ್ಟಿ ನಿಂತಿದ್ದ ಲಂಕಾ ತಂಡವು ಕೇವಲ 1 ರನ್ ಅಂತರದ ರೋಚಕ ಜಯಸಾಧಿಸಿತ್ತು. ಆದ್ದರಿಂದ ಭಾರತ ತಂಡಕ್ಕೆ ಲಂಕಾ ಬಳಗವು ದಿಟ್ಟ ಸವಾಲು ಒಡ್ಡುವ ನಿರೀಕ್ಷೆ ಇದೆ.

ಭಾರತದ ಆರಂಭಿಕ ಜೋಡಿ ಶಫಾಲಿ ವರ್ಮಾ ಹಾಗೂ ಸ್ಮತಿ ಮಂದಾನ ಉತ್ತಮ ಲಯದಲ್ಲಿರುವುದು ಸಮಾಧಾನಕರ ವಿಷಯ. ಅಲ್ಲದೇ ಮಧ್ಯಮಕ್ರಮಾಂಕದಲ್ಲಿ ಹರ್ಮನ್‌ಪ್ರೀತ್, ಜೆಮಿಮಾ ರಾಡ್ರಿಗಸ್ ಹಾಗೂ ರಿಚಾ ಘೋಷ್ ಅವರು ಮಿಂಚುವ ವಿಶ್ವಾಸ ಮೂಡಿಸಿದ್ದಾರೆ. ಬೌಲಿಂಗ್‌ನಲ್ಲಿ ದೀಪ್ತಿ ಶರ್ಮಾ, ಸ್ನೇಹಾ ರಾಣಾ ಅವರು ಎದುರಾಳಿ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸಮರ್ಥ ಬೌಲರ್‌ಗಳಾಗಿದ್ದಾರೆ. ವಿಜಯಪುರದ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ ಎದುರಾಳಿಗಳ ರನ್ ಗಳಿಕೆಗೆ ಕಡಿವಾಣ ಹಾಕುವ ಸಾಮರ್ಥ್ಯ ಹೊಂದಿದ್ದಾರೆ.

ಚಾಮರಿ ಅಟಪಟ್ಟು ನಾಯಕತ್ವದ ಲಂಕಾ ತಂಡದ ಆಟಗಾರ್ತಿಯರೂ ಭಾರತಕ್ಕೆ ಆಘಾತ ನೀಡುವ ಛಲದಲ್ಲಿದ್ದಾರೆ. ತಂಡವು ಸೆಮಿಫೈನಲ್ ಜಯಿಸಿದಾಗ ಆಟಗಾರ್ತಿಯರು ನರ್ತಿಸಿ ಸಂಭ್ರಮಿಸಿದ ವಿಡಿಯೊ ಈಗ ವೈರಲ್ ಆಗಿದೆ. ಅಂತಹದ್ದೇ ಮತ್ತೊಂದು ಸಂಭ್ರಮಕ್ಕಾಗಿ ಲಂಕಾ ತಂಡವು ತಂತ್ರಗಾರಿಕೆ ರೂಪಿಸಿದೆ. ಆದರೆ ಹಾದಿ ಕಠಿಣವಾಗಿದೆ.


ಹರ್ಮನ್‌ಪ್ರೀತ್ ಕೌರ್

ಪಂದ್ಯ ಆರಂಭ: ಮಧ್ಯಾಹ್ನ 1
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನೆಟ್ಟಕಲ್ಲಪ್ಪನವರ ಪ್ರೋತ್ಸಾಹ ಸ್ಮರಿಸಿದ ಪಡುಕೋಣೆ

ಬ್ಯಾಡ್ಮಿಂಟನ್ ತಾರೆಗೆ ಎಸ್‌ಜೆಎಫ್‌ಐ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ಸಂಜೆಯು ಕ್ರೀಡಾ ದಿಗ್ಗಜರ ಸಮಾಗಮಕ್ಕೆ ಸಾಕ್ಷಿಯಾಯಿತು. ಈ ಹೊತ್ತಿನಲ್ಲಿ ಕೆಎಸ್‌ಸಿಎ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ್ ಪಡುಕೋಣೆಯ-ವರಿಗೆ ಭಾರತ ಕ್ರೀಡಾ ಪತ್ರಕರ್ತರ ಫೆಡರೇಷನ್ (ಎಸ್‌ಜೆಎಫ್‌ಐ) ಗೌರವ ಆಜೀವ ಸದಸ್ಯತ್ವವನ್ನು ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕ್ರಿಕೆಟ್ ದಿಗ್ಗಜ ಜಿ.ಆರ್. ವಿಶ್ವನಾಥ್ ಅವರು ಪಡು-ಕೋಣೆಯವರಿಗೆ ಎಸ್‌ಜೆಎಫ್‌ಐ ಪದಕ ಪ್ರದಾನ ಮಾಡಿ ಗೌರವಿಸಿದರು. ವಿವಿಎಸ್ ಲಕ್ಷ್ಮಣ್ ಆಜೀವ ಸದಸ್ಯತ್ವ ಪ್ರಮಾಣಪತ್ರ ನೀಡಿದರು. ಭಾರತ ಹಾಕಿ ತಂಡದ ಮಾಜಿ ಆಟಗಾರರಾದ ಧನರಾಜ್ ಪಿಳ್ಳೆ, ಅರ್ಜುನ್ ಹಾಲಪ್ಪ ಹಾಗೂ ಬ್ಯಾಡ್ಮಿಂಟನ್ ಆಟಗಾರ್ತಿ ತೃಪ್ತಿ ಮುರ್ಗುಂಡೆ, ಟೇಬಲ್ ಟೆನಿಸ್ ಕೋಚ್ ವಸಂತ್ ಭಾರದ್ವಾಜ್ ಅವರು ಪ್ರಕಾಶ್ ಅವರನ್ನು ಅಭಿನಂದಿಸಿದರು.

ಇದು 2019ನೇ ಸಾಲಿನಲ್ಲಿ ಪ್ರಕಟವಾಗಿದ್ದ ಗೌರವ ಸದಸ್ಯತ್ವ. ಕೋವಿಡ್ ಕಾರಣದಿಂದ ಕಾರ್ಯಕ್ರಮ ಮುಂದೂಡಲಾಗಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾಜಿ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್ ಪ್ರಕಾಶ್, ಕ್ರೀಡಾ ಪ್ರೋತ್ಸಾಹಕರು, ಆಡಳಿತಗಾರರು ಹಾಗೂ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕಾ ಬಳಗದ ವ್ಯವಸ್ಥಾಪಕ ನಿರ್ದೇ-ಶಕರಾಗಿದ್ದ ಕೆ.ಎ. ನೆಟ್ಟಕಲ್ಲಪ್ಪ ಅವರ ನೆರವನ್ನೂ ಸ್ಮರಿಸಿದರು.

‘ಇವತ್ತು ಭಾರತದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯು ಬೆಳೆಯುತ್ತಿರುವುದನ್ನು ನೋಡಲು ಅಪಾರ ಹೆಮ್ಮೆಯಾಗುತ್ತ-ದೆ. 1962ರಲ್ಲಿ ನಾನು ಬ್ಯಾಡ್ಮಿಂಟನ್ ಆಡಲು ಆರಂಭಿಸಿದೆ. ಆಗ ದಕ್ಷಿಣ ಭಾರತದಲ್ಲಿ ಬಾಲ್ ಬ್ಯಾಡ್ಮಿಂಟನ್ ತುಂಬಾ ಜನಪ್ರಿಯವಾಗಿತ್ತು. ಶಟಲ್ ಬ್ಯಾಡ್ಮಿಂಟನ್ ಹೆಚ್ಚು ಜನರಿಗೆ ತಿಳಿದಿರಲಿಲ್ಲ. ಬೆಂಗಳೂರು ನಗರದಲ್ಲಿ ಬೌರಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಕ್ಲಬ್, ಕೆನರಾ ಯೂನಿಯನ್ ಮತ್ತು ಐಟಿಐನಲ್ಲಿ ಬ್ಯಾಡ್ಮಿಂಟನ್ ಅಂಗಣಗಳಿ-ದ್ದವು. ಮದುವೆ ಸಭಾಂಗಣವೊಂದರಲ್ಲಿ ಬ್ಯಾಡ್ಮಿಂಟನ್ ಅಭ್ಯಾಸ ಮಾಡುತ್ತಿದ್ದೆ. ಆಗ ಮೈಸೂರು ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಗೆ ನೆಟ್ಟಕಲ್ಲಪ್ಪನವರು ಅಧ್ಯಕ್ಷರು ಹಾಗೂ ನನ್ನ ತಂದೆ ರಮೇಶ್ ಕಾರ್ಯದರ್ಶಿ-ಯಾಗಿದ್ದರು. ಇವರಿಬ್ಬರೇ ರಾಜ್ಯದಲ್ಲಿ ಬ್ಯಾಡ್ಮಿಂಟನ್ ಸಂಸ್ಥೆ ಆರಂಭಿಸಿದವರು.

‘ನನಗೆ ಈಗಲೂ ನೆನಪಿದೆ. 19 ವರ್ಷದೊಳಗಿನವರ ಬ್ಯಾಡ್ಮಿಂಟನ್ ಟೂರ್ನಿ ಆಡಲು ಮೊದಲ ಬಾರಿ ಆಯ್ಕೆಯಾಗಿದ್ದೆ. ಆಗ ನನಗೆ 12 ವರ್ಷ. ಚೆನ್ನೈನಲ್ಲಿ ನಡೆದ ಆ ಟೂರ್ನಿಗೆ ಸ್ವಂತ ಖರ್ಚಿನಲ್ಲಿ ಹೋಗಬೇಕಿತ್ತು. ಅಷ್ಟೊಂದು ವೆಚ್ಚ ಭರಿಸುವ ಶಕ್ತಿ ತಮಗಿಲ್ಲ ಎಂದು ತಂದೆ ಹೇಳಿದ್ದರು. ಆಗ ನೆಟ್ಟಕಲ್ಲಪ್ಪನವರು ‘ನೀನು ಆಡಲು ಹೋಗುತ್ತಿದ್ದಿ’ ಎಂದು ಹೇಳಿ ಪ್ರಾಯೋಜಕತ್ವ ನೀಡಿದರು. ನನಗೆ ನೆನಪಿರುವಂತೆ ₹ 150 ಅಥವಾ ₹200 ಕೊಟ್ಟರು. ಅದರಲ್ಲಿ ನನ್ನ ಹಾಗೂ ಸಹೋದರನ ಎಲ್ಲ ವೆಚ್ಚಗಳನ್ನು ಭರಿಸಲು ಸಾಧ್ಯವಾಗಿತ್ತು’ ಎಂದು ಸ್ಮರಿಸಿದರು.

ಬೆಂಗಳೂರು ಕ್ರೀಡಾ ಬರಹಗಾರರ ಸಂಸ್ಥೆ (ಸ್ವಾಬ್) ಅಧ್ಯಕ್ಷೆ ಮನುಜಾ ವೀರಪ್ಪ ಕಾರ್ಯಕ್ರಮ ನಿರ್ವಹಿಸಿದರು. ಎಸ್‌ಜೆಎಫ್‌ಐ ಅಧ್ಯಕ್ಷ ಎ. ವಿನೋದ್, ಕಾರ್ಯದರ್ಶಿ ಪ್ರಶಾಂತ್ ಖೇಣಿ ಹಾಜರಿದ್ದರು.



ಬೆಂಗಳೂರಿನ ಕೆಎಸ್‌ಸಿಎಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ್ ಪಡುಕೋಣೆ ಅವರಿಗೆ ಭಾರತ ಕ್ರೀಡಾ ಪತ್ರಕರ್ತರ ಫೆಡರೇಷನ್ (ಎಸ್‌ಜೆಎಫ್‌ಐ) ಗೌರವ ಆಜೀವ ಸದಸ್ಯತ್ವವನ್ನು ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಭಾರತ ಹಾಕಿ ತಂಡದ ಮಾಜಿ ನಾಯಕ ಧನರಾಜ್ ಪಿಳ್ಳೆ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಕುಂದಾಪುರದಲ್ಲಿ ಇಂದಿನಿಂದ ರ‍್ಯಾಪಿಡ್ ಚೆಸ್

ಕುಂದಾಪುರ (ಉಡುಪಿ ಜಿಲ್ಲೆ): ಟೊರ್ಪೆಡೋಸ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿರುವ ಅಖಿಲ ಭಾರತ ಫಿಡೆ ರೇಟೆಡ್ ರ‍್ಯಾಪಿಡ್ ಚೆಸ್ ಟೂರ್ನಿ ಅ.15 ಹಾಗೂ 16ರಂದು ಇಲ್ಲಿನ ನಾರಾಯಣ ಗುರು ಸಭಾಂಗಣದಲ್ಲಿ ನಡೆಯಲಿದೆ.

ಅಂತರರಾಷ್ಟ್ರೀಯ ಮಾಸ್ಟರ್ ಆಗುವತ್ತ ಹೆಜ್ಜೆ ಇರಿಸಿರುವ ಫಿಡೆ ಮಾಸ್ಟರ್ ಮಂಗಳೂರಿನ ಶರಣ್ ರಾವ್, ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಇಶಾ ಶರ್ಮಾ, ಇಂಟರ್‌ನ್ಯಾಷನಲ್ ಮಾಸ್ಟರ್ ಕೇರಳದ ರತ್ನಾಕರನ್, ತೆಲಂಗಾಣದ ಚಕ್ರವರ್ತಿ ರೆಡ್ಡಿ, ಛತ್ತೀಸ್‌ಘಡದ ಶ್ರೀನಾಥ್ ರಾವ್ ಮುಂತಾದವರು ಟೂರ್ನಿಯ ಪ್ರಮುಖ ಆಕರ್ಷಣೆಯಾ-ಗಿದ್ದು, ಮುಖ್ಯ ಆರ್ಬಿಟರ್ ಆಗಿ ವಸಂತ್ ಬಿ.ಎಚ್ ಕಾರ್ಯನಿರ್ವಹಿಸಲಿದ್ದಾರೆ ಎಂದು ಟೊರ್ಪೆಡೋಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಗೌತಮ್ ಶೆಟ್ಟಿ ತಿಳಿಸಿದ್ದಾರೆ.

ಶೂಟಿಂಗ್: ಚಿನ್ನಕ್ಕೆ ಗುರಿಯಿಟ್ಟ ರುದ್ರಾಕ್ಷ್

ಕೈರೊ, ಈಜಿಪ್ಟ್ (ಪಿಟಿಐ): ಭಾರತದ ರುದ್ರಾಕ್ಷ್ ಪಾಟೀಲ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ.

ಪುರುಷರ 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸುವ ಮೂಲಕ ಅವರು ಈ ಸಾಧನೆ ಮಾಡಿದ ಭಾರತದ ಎರಡನೇ ಶೂಟರ್ ಎನಿಸಿಕೊಂಡರು. ಈ ಹಿಂದೆ ಅಭಿನವ್ ಬಿಂದ್ರಾ ಈ ಶ್ರೇಯ ಗಳಿಸಿದ್ದರು.

2008ರ ಬೀಜಿಂಗ್ ಒಲಿಂಪಿಕ್ ಚಾಂಪಿಯನ್ ಬಿಂದ್ರಾ, ಕ್ರೊವೇಷ್ಯಾದ ಜಾಗ್ರೆಬ್‌ನಲ್ಲಿ ನಡೆದ 2006ರ ವಿಶ್ವ ಕೂಟದ 10 ಮೀ. ಏರ್ ರೈಫಲ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. 18 ವರ್ಷದ ರುದ್ರಾಕ್ಷ್, ಇಲ್ಲಿ ಚಿನ್ನ ಗೆಲ್ಲುವ ಮೂಲಕ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಗಳಿಸಿದರು. ಫೈನಲ್‌ನಲ್ಲಿ ರುದ್ರಾಕ್ಷ್ ಅವರು 17–13ರಿಂದ ಇಟಲಿಯ ಡ್ಯಾನಿಲೊ ಡೆನಿಸ್ ಸೊಲಾಜೊ ಸವಾಲು ಮೀರಿದರು.


ಭಾರತಕ್ಕೆ ಸೋಲು

ಭುವನೇಶ್ವರ (ಪಿಟಿಐ): ಭಾರತ ತಂಡವು 17 ವರ್ಷದೊಳಗಿನ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಮೊರಕ್ಕೊ ಎದುರು 0–3ರಿಂದ ಸೋತಿತು. ಇದರೊಂದಿಗೆ ಕ್ವಾರ್ಟರ್‌ಫೈನಲ್ ರೇಸ್‌ನಿಂದ ಹೊರಬಿತ್ತು.

ಕ್ರಿಕೆಟ್: ಕರ್ನಾಟಕಕ್ಕೆ ಸುಲಭ ಜಯ

ಚಂಡೀಗಡ: ಮಧ್ಯಮವೇಗಿ ವಿಜಯಕುಮಾರ್ ವೈಶಾಖ (5ಕ್ಕೆ3) ಅವರ ಉತ್ತಮ ಬೌಲಿಂಗ್ ಬಲದಿಂದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೇಘಾಲಯ ವಿರುದ್ಧ ಸುಲಭ ಗೆಲುವು ದಾಖಲಿಸಿತು.

ಮಲ್ಲನಪುರದಲ್ಲಿರುವ ಮಹಾರಾಜ ಯಾದವಿಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮೇಘಾಲಯ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವೈಶಾಖ್ ದಾಳಿಯ ಮುಂದೆ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 89 ರನ್ ಮಾತ್ರ ಗಳಿಸಿತು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡವು 10.1 ಓವರ್‌ಗಳಲ್ಲಿ 1 ವಿಕೆಟ್‌ಗೆ 90 ರನ್ ಗಳಿಸಿತು. 9 ವಿಕೆಟ್‌ಗಳಿಂದ ಜಯಿಸಿತು.


ವೈಶಾಖ

ಟೂರ್ನಿಯ ಸಿ ಗುಂಪಿನಲ್ಲಿ ಕರ್ನಾಟಕಕ್ಕೆ ಇದು ಎರಡನೇ ಜಯ. ಮೊದಲ ಪಂದ್ಯದಲ್ಲಿ ಮಹಾರಾಷ್ಟ್ರದ ವಿರುದ್ಧ ಗೆದ್ದಿತ್ತು. ಎರಡನೇಯದ್ದರಲ್ಲಿ ಕೇರಳದ ಎದುರು ಸೋತಿತ್ತು. ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಜಮ್ಮು–ಕಾಶ್ಮೀರ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಮೇಘಾಲಯ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 89 (ಲ್ಯಾರಿ ಸಂಗ್ಮಾ 34, ಯೋಗೇಶ್ ತಿವಾರಿ 22, ವಿಜಯಕುಮಾರ್ ವೈಶಾಖ 5ಕ್ಕೆ3) ಕರ್ನಾಟಕ; 10.1 ಓವರ್‌ಗಳಲ್ಲಿ 1 ವಿಕೆಟ್‌ಗೆ 90 (ಮಯಂಕ್ ಅಗರವಾಲ್ ಔಟಾಗದೆ 47, ಮನೀಷ್ ಪಾಂಡೆ ಔಟಾಗದೆ 42, ಅಭಿಷೇಕ್ ಕುಮಾರ್ 15ಕ್ಕೆ1) ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ.

ಕೆರ್ಸಾನ್ ನಾಗರಿಕರು ರಷ್ಯಾಕ್ಕೆ

ಉಕ್ರೇನ್ ಪ್ರತಿದಾಳಿ ತೀವ್ರ

ಕೀವ್ (ಎಪಿ): ಭಾಗಶಃ ಆಕ್ರಮಿತ ಕೆರ್ಸಾನ್ ಪ್ರದೇಶದಿಂದ ಸ್ಥಳಾಂತರ ಬಯಸುತ್ತಿರುವ ನಾಗರಿಕರಿಗೆ ರಷ್ಯಾ ಉಚಿತ ವಸತಿ ಸೌಲಭ್ಯದ ಭರವಸೆ ನೀಡಿದೆ. ಇದು ಉಕ್ರೇನ್ ಸೇನೆಯು ದಕ್ಷಿಣದಲ್ಲಿ ತೀವ್ರ ಪ್ರತಿರೋಧ ತೋರಿಸಿ, ಸ್ಥಿರ ಮುನ್ನಡೆ ಸಾಧಿಸುತ್ತಿರುವುದು ರಷ್ಯಾವನ್ನು ಚಿಂತೆಗೀಡುಮಾಡಿರುವ ಸೂಚನೆಯಂತೆ ಕಾಣಿಸುತ್ತಿದೆ.

ರಷ್ಯಾ ಕಳೆದ ತಿಂಗಳು ಸ್ವಾಧೀನ ಪಡಿಸಿಕೊಂಡ ಉಕ್ರೇನ್‌ನ ನಾಲ್ಕು ಪ್ರದೇಶಗಳಲ್ಲಿ ಒಂದೆನಿಸಿದ ಕೆರ್ಸಾನ್‌ನ ರಷ್ಯಾ ಬೆಂಬಲಿತ ನಾಯಕ ಈ ಪ್ರದೇಶದ ನಾಲ್ಕು ನಗರಗಳಿಂದ ನಾಗರಿಕರನ್ನು ಸ್ಥಳಾಂತರಿಸಲು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್‌ಗೆ ಮನವಿ ಮಾಡಿದ ಸ್ವಲ್ಪ ಸಮಯದ ನಂತರ, ರಷ್ಯಾದ ಉಪ ಪ್ರಧಾನಿ ಮರಾಟ್ ಖುಸ್ನುಲ್ಲಿನ್ ಈ ಘೋಷಣೆ ಮಾಡಿದರು.

ಅಣುಸ್ಥಾವರ ನಿಯಂತ್ರಣಕ್ಕೆ ಸೇನಾ ಬಲ ಹೆಚ್ಚಳ: ಕ್ರಿಮಿಯಾ ಮತ್ತು ರಷ್ಯಾ ಸಂಪರ್ಕಿಸುವ ಕೆರ್ಚ್ ಸೇತುವೆ ಸ್ಫೋಟಿಸಿದಕ್ಕೆ ಪ್ರತೀಕಾರವಾಗಿ ಉಕ್ರೇನ್‌ನ ಪ್ರತಿ ಪ್ರದೇಶದ ಮೇಲೆ ರಷ್ಯಾ ಪಡೆಗಳು ಸಂಘಟಿತ ದಾಳಿ ನಡೆಸುತ್ತಿವೆ.

ಝುಪೊರಿಝಿಯಾ ಅಣು ವಿದ್ಯುತ್ ಸ್ಥಾವರದ ನಿಯಂತ್ರಣಕ್ಕಾಗಿ ರಷ್ಯಾ ಮತ್ತಷ್ಟು ಸೈನಿಕರನ್ನು ಸ್ಥಾವರದ ಸುತ್ತಲೂ ಜಮಾವಣೆ ಮಾಡುತ್ತಿದೆ. ಜತೆಗೆ ಈ ನಗರದ ಮೇಲೆ ಗುರುವಾರ ತಡರಾತ್ರಿ ಮತ್ತು ಶುಕ್ರವಾರ ನಸುಕಿನಲ್ಲಿ ಹಲವು ಕ್ಷಿಪಣಿಗಳನ್ನು ಉಡಾಯಿಸಿದೆ. ಅಣು ವಿದ್ಯುತ್ ಸ್ಥಾವರ ಸುರಕ್ಷತೆಯ ಬಗ್ಗೆ ಆತಂಕ ಎದುರಾಗಿದೆ.


ರಷ್ಯಾ ಶುಕ್ರವಾರ ನಡೆಸಿದ ಕ್ಷಿಪಣಿ ದಾಳಿಯಿಂದ ಉಕ್ರೇನ್‌ನ ಡೊನೆಟ್‌ಸ್ಕ್ ಪ್ರಾಂತ್ಯದ ಕಾನ್‌ಸ್ಟಾಂಟಿನೊವ್ಕಾದ ವಸತಿ ಸಮುಚ್ಚಯ ಹಾನಿಗೊಂಡಿದೆ –ಎಎಫ್‌ಪಿ ಚಿತ್ರ

ವಿಜಯ ದಿನ ಆಚರಣೆ: ಝೆಲೆನ್‌ಸ್ಕಿ ಪ್ರತಿಜ್ಞೆ

ಕೀವ್(ಎಎಫ್‌ಪಿ): ಎಂಟು ತಿಂಗಳ ಹಿಂದೆ ರಷ್ಯಾ ಪಡೆಗಳು ಆಕ್ರಮಣ ಆರಂಭಿಸಿದ ಮೇಲೆ ಉಕ್ರೇನ್ ತನ್ನ ಮೊದಲ ರಕ್ಷಕರ ದಿನವನ್ನು ಶುಕ್ರವಾರ ಆಚರಿಸಿತು. ದೇಶದಾದ್ಯಂತ ಸಾರ್ವಜನಿಕ ರಜಾದಿನ ಘೋಷಿಸಲಾಗಿತ್ತು.

ವಿಡಿಯೊ ಭಾಷಣದಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ರಷ್ಯಾದ ವಿರುದ್ಧ ವಿಜಯ ಸಾಧಿಸುವ ಪ್ರತಿಜ್ಞೆ ಮಾಡಿದರು. ಜತೆಗೆ ರಷ್ಯಾ ಸೇನೆಯ ಅಜೇಯ ಓಟ ಕೊನೆಗೊಳಿಸಿದ್ದೇವೆ. ಇಡೀ ಜಗತ್ತು ನಮ್ಮೊಂದಿಗೆ ನಿಂತಿದೆ. ಇದು ನಮ್ಮ ಜನರ ಗೆಲುವು ಎಂದರು.

ಪ್ರಮುಖಾಂಶಗಳು

- ಕೆರ್ಸಾನ್‌ನ 75 ಜನವಸತಿ ಪ್ರದೇಶಗಳು ಸೇರಿ ಆಕ್ರಮಿತ ಪ್ರದೇಶಗಳ ಮರು ವಶಪಡಿಸಿಕೊಳ್ಳುವುದಾಗಿ ಉಕ್ರೇನ್ ಘೋಷಣೆ
- ಹಾರ್ಕಿವ್‌ನ 502 ಹಳ್ಳಿಗಳು, ಡೊನೆಟ್‌ಸ್ಕ್‌ನ 43, ಲುಹಾನ್‌ಸ್ಕ್‌ನ ಏಳು ಹಳ್ಳಿಗಳನ್ನು ಮರು ವಶಪಡಿಸಿಕೊಂಡ ಉಕ್ರೇನ್
- ರಷ್ಯಾ ಪಡೆಗಳು ಉಕ್ರೇನ್‌ನಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಗಳನ್ನು ‘ಸೇನಾ ತಂತ್ರ’ವಾಗಿಸಿಕೊಂಡು ಸಂತ್ರಸ್ತರನ್ನು ಅಮಾನವೀಯವಾಗಿ ಹಿಂಸಿಸುತ್ತಿವೆ ಎಂದು ವಿಶ್ವಸಂಸ್ಥೆಯ ರಾಯಭಾರಿ ಪ್ರಮೀಳಾ ಪೆಟನ್ ‘ಎಎಫ್‌ಪಿ’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ
- ಇರಾನ್ ನಿರ್ಮಿತ ಶಾಹಿದ್ ಆತ್ಮಾಹುತಿ ಡ್ರೋನ್ ದಾಳಿಗೆ ಉಕ್ರೇನ್‌ನ ಮಿಗ್ –29 ಯುದ್ಧ ವಿಮಾನ ಪತನವಾಗಿದೆ
- ಉಕ್ರೇನ್‌ನನ್ನು ನಾಶಪಡಿಸುವುದು ನಮ್ಮ ಗುರಿಯಲ್ಲ. ‘ಪಶ್ಚಿಮದ ಪರವಿರುವ ಒಲವನ್ನಷ್ಟೇ’ ನಾಶಪಡಿಸುವುದು ನಮ್ಮ ಉದ್ದೇಶ ಎಂದು ಪುಟಿನ್ ಹೇಳಿದ್ದಾರೆ
- ಉಕ್ರೇನ್ ವಿಚಾರದಲ್ಲಿ ಭಾರತ ಮತ್ತು ಚೀನಾ ಶಾಂತಿ ಮಾತುಕತೆಯನ್ನು ಬೆಂಬಲಿಸುತ್ತಿವೆ ಎಂದು ಕಜಕಿಸ್ತಾನದಲ್ಲಿ ಪತ್ರಿಕಾ-ಗೋಷ್ಠಿಯಲ್ಲಿ ಪುಟಿನ್ ಹೇಳಿದ್ದಾರೆ

ಶ್ರೀನಿವಾಸನಗರ: ವಾಹನ ಸವಾರರ ಪರದಾಟ

ರಾಜರಾಜೇಶ್ವರಿ ನಗರ: ಕೊಟ್ಟಿಗೆಪಾಳ್ಯ ವಾರ್ಡ್‌ನ ಶ್ರೀನಿವಾಸನಗರದ ಪೈಪ್‌ಲೈನ್ ಮಾರ್ಗದ 6ನೇ ಮುಖ್ಯ ರಸ್ತೆಯಲ್ಲಿ ಬೆಂಗಳೂರು ಜಲಮಂಡಳಿ ರಸ್ತೆ ಅಗೆದಿದ್ದು, ಕೆಸರುಗದ್ದೆಯಂತಾಗಿದೆ.

7ನೇ ಮುಖ್ಯರಸ್ತೆಯಲ್ಲೂ ಕಳಪೆ ಕಾಮಗಾರಿಯಿಂದ ಆಳದ ಗುಂಡಿ ಬಿದ್ದು, ಮೃತ್ಯು ಕೂಪವಾಗಿ ಸಾವಿಗೆ ಆಹ್ವಾನ ನೀಡುತ್ತಿದೆ. ಕಿತ್ತು ಹೋಗಿರುವ ರಸ್ತೆಗಳನ್ನು ಸರಿಪಡಿಸಿ, ಸಮಸ್ಯೆಯನ್ನು ಬಗೆಹರಿಸುವಲ್ಲಿ ಬೆಂಗಳೂರು ಜಲಮಂಡಳಿ ಅಧಿಕಾರಿಗಳು, ಬಿಬಿಎಂಪಿ ಯವರು ವಿಫಲವಾಗಿದ್ದಾರೆ ಎಂದು ನಾಗರಿಕರು ದೂರಿದ್ದಾರೆ. ಮಳೆ ಬಂದರೆ ಕೆಸರು, ಬಿಸಿಲಿನಲ್ಲಿ ದೂಳು, ಚರಂಡಿಗಳು ತುಂಬಿ, ಸೊಳ್ಳೆಗಳ ಆವಾಸವಾಗಿ, ರೋಗರುಜಿನದ ಭಯ ಕಾಡುತ್ತಿದೆ. ಅಧಿಕಾರಿಗಳು ನಮ್ಮ ಸಮಸ್ಯೆ ಬಗೆಹರಿಸುತ್ತಿಲ್ಲ ಎಂದು ಬಡಾವಣೆ ಮಹಿಳೆಯರು ಅವಲತ್ತುಕೊಂಡರು.

’ಬೆಂಗಳೂರು ಜಲಮಂಡಳಿ ಕುಡಿಯುವ ನೀರಿನ ಪೈಪ್ ಒಡೆದ ಕಾರಣ ಸರಿಪಡಿಸಲು ರಸ್ತೆ ಅಗೆದು ಬಿಟ್ಟಿದ್ದಾರೆ. ಅದನ್ನು ಸರಿಪಡಿಸುವ ಕೆಲಸವನ್ನು ಜಲಮಂಡಳಿಯವರೇ ಮಾಡಬೇಕು. ಅವರ ಜೊತೆ ಚರ್ಚಿಸಿ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ‘ ಎಂದು ಬಿಬಿಎಂಪಿ ಲಗ್ಗೆರೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಡಿ.ಹೇಮಂತ್ ಹೇಳಿದರು.

ಕಾವೇರಿ ತೀರ್ಥೋದ್ಭವ; ಕೊಡವ, ಗೌಡ ಸಮಾಜಗಳ ನಡುವೆ ಹಗ್ಗಜಗ್ಗಾಟ

ಮಡಿಕೇರಿ: ಅ. 17ರಂದು ತಲಕಾ-ವೇರಿಯಲ್ಲಿ ನಡೆಯಲಿರುವ ಕಾವೇರಿ ತೀರ್ಥೋದ್ಭವ ಇದೀಗ ಕೊಡವ ಹಾಗೂ ಗೌಡ ಸಮಾಜಗಳ ಕೆಲವರ ನಡುವಿನ ಜಟಾಪಟಿಗೆ ಕಾರಣವಾಗಿದೆ.

ತೀರ್ಥೋದ್ಭವವಾಗುವ ಕುಂಡಿಕೆ ಬಳಿ ನಿಲ್ಲುವುದಕ್ಕೆ ಕೊಡವ ಸಮುದಾಯದ 4 ಕುಟುಂಬಗಳಿಗೆ ಅವಕಾಶ ಕೊಡಬೇಕು ಎಂದು ಕೆಲವರು ಒತ್ತಾಯಿ-ಸಿದ್ದಾರೆ. ಈಚೆಗೆ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಕೊಡವ ಸಮಾಜದ ಸಂಘಟನೆಗಳನ್ನು ಆಹ್ವಾನಿಸಿಲ್ಲ ಎಂಬ ಕಾರಣಕ್ಕೂ ಜಿಲ್ಲಾಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿದರು. ಇದು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಯಿತು.

ಮತ್ತೊಂದೆಡೆ, ಶುಕ್ರವಾರ ಕೊಡಗಿನ ಗೌಡ ಸಮಾಜದ 6 ಸಂಘಟನೆಗಳು ಜಂಟಿ ಸುದ್ದಿಗೋಷ್ಠಿ ನಡೆಸಿ, ತೀರ್ಥೋದ್ಭವದ ಸಮಯದಲ್ಲಿ ಹೊಸ ಪದ್ಧತಿಗಳ ಜಾರಿ ಬೇಡ ಎಂದು ಆಗ್ರಹಿಸಿದರು.

ಪುಣೆ ರೇಸ್

ಕ್ವೀನ್ಸ್ ಪ್ರೈಡ್ ಗೆಲ್ಲುವ ನಿರೀಕ್ಷೆ

ಪ್ರೈಡ್ ಗ್ರೂಪ್ ಮಲ್ಟಿ ಮಿಲಿಯನ್ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ವೀನ್ಸ್ ಪ್ರೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಂಪೇನ್ 1, ರಾಯಲ್ ಕ್ಯಾಸ್ಲ್ 8, ಏಂಜೆಲ್ಸ್ ಟ್ರಂಪೆಟ್ 7
2ನೇ ರೇಸ್: ಸೂಪರ್ಲೆಟಿವ್ 1, ಮ್ಯಾಜಿಲೆಟೊ 2, ಫ್ಲೇಮಿಂಗ್ ಫೈರ್ 5
3ನೇ ರೇಸ್: ಸನ್ ಆಫ್ ಎ ಗನ್ 8, ಪೆಟ್ರೋನಿಯಾ 2, ಕೌಂಟ್ ಆಫ್ ಸವಾಯ್ 31
4ನೇ ರೇಸ್: ಸೂಪ್ ಅಂಡ್ ಸ್ಯಾಂಡ್‌ವಿಚ್ 3, ಡೆಸರ್ಟ್ ಫೈರ್ 2, ಬೇಬಿ ಬಜೂಕ 1
5ನೇ ರೇಸ್: ಕ್ವೀನ್ಸ್ ಪ್ರೈಡ್ 9, ಗಫಡಮ್ ಲಯನೆಸ್ (4), ಹೌಸ್ ಆಫ್ ಲಾರ್ಡ್ಸ್ (2)
6ನೇ ರೇಸ್: ವಿನ್ಸೆಂಟ್ ವ್ಯಾನ್ ಗೋಗ್ 3, ಮ್ಯಾಡ್ ಲವ್ 2, ಥನ್‌ಬರ್ಗ್ 1
7ನೇ ರೇಸ್: ಟ್ರೂಲಿ ಎಪಿಕ್ 2, ಪಿಸ್ಸಾರೊ 1

ಉತ್ತಮ ಬೆಟ್: ಸೂಪ್ ಆ್ಯಂಡ್ ಸ್ಯಾಂಡ್‌ವಿಚ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಚೆನ್ನೈ (ಪಿಟಿಐ): ಬೆಂಗಳೂರು ಎಫ್‌ಸಿ ಮತ್ತು ಚೆನ್ನೈಯಿನ್ ಎಫ್‌ಸಿ ನಡುವೆ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯವು 1–1ಡ್ರಾ ನಲ್ಲಿ ಅಂತ್ಯವಾಯಿತು. 4ನೇ ನಿಮಿಷದಲ್ಲಿ ಗೋಲು ಗಳಿಸಿದ ರಾಯ್‌ಕೃಷ್ಣ, ಬಿಎಫ್‌ಸಿಗೆ ಮುನ್ನಡೆ ತಂದುಕೊಟ್ಟರು. ಪ್ರಶಾಂತ್ ಕರುತಾಡತ್‌ಕುಣಿ 45ನೇ ನಿಮಿಷದಲ್ಲಿ ಚೆನ್ನೈ ತಂಡಕ್ಕಾಗಿ ಗೋಲು ಹೊಡೆದರು.

ಚರ್ಮಗಂಟು ರೋಗ: ಲಸಿಕಾ ಅಭಿಯಾನ ಚುರುಕು

ಬೆಂಗಳೂರು: ರಾಜ್ಯದಲ್ಲಿ ಜಾನುವಾರುಗಳಿಗೆ ಹರಡುತ್ತಿರುವ ಚರ್ಮಗಂಟು ರೋಗ ನಿಯಂತ್ರಣಕ್ಕೆ ಮುಂದಾಗಿರುವ ಸರ್ಕಾರ, ಪ್ರತಿ ಜಿಲ್ಲೆಗಳಲ್ಲೂ ಲಸಿಕಾ ಅಭಿಯಾನ ತೀವ್ರಗೊಳಿಸಲು ನಿರ್ಧರಿಸಿದೆ.

‘ಆದ್ಯತೆ ಮೇಲೆ ಲಸಿಕೆ ಹಾಕಬೇಕು. 15 ಲಕ್ಷ ಡೋಸ್ ಲಸಿಕೆ ತರಿಸಿಕೊ-ಳ್ಳಬೇಕು. ರೋಗಕ್ಕೆ ಸೂಕ್ತ ಚಿಕಿತ್ಸೆ ದೊರಕಿಸಲು ಹಾಗೂ ಮೃತ ರಾಸುಗಳ ಮಾಲೀಕರಿಗೆ ಪರಿಹಾರ ಒದಗಿಸಲು ₹13 ಕೋಟಿ ತಕ್ಷಣ ಬಿಡುಗಡೆ ಮಾಡಲಾಗುವುದು’ ಎಂದು ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಶುಕ್ರವಾರ ನಡೆದ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಲೀಕರಿಗೆ ಪರಿಹಾರ ನೀಡಲು ಈಗಾಗಲೇ ₹ 2 ಕೋಟಿ ಬಿಡುಗಡೆ ಮಾಡಲಾಗಿದೆ. ಹೆಚ್ಚುವರಿಯಾಗಿ ₹ 5 ಕೋಟಿ ಹಾಗೂ ಜಾನುವಾರುಗಳ ಚಿಕಿತ್ಸೆ, ಲಸಿಕೆಗೆ ₹ 8 ಕೋಟಿ ಬಿಡುಗಡೆ ಮಾಡಲು ಸೂಚಿಸಲಾಗಿದೆ ಎಂದರು.

ರೋಗ ತೀವ್ರವಾಗಿರುವ ಹಾವೇರಿ, ಕೋಲಾರ ಜಿಲ್ಲೆಗಳಲ್ಲಿ ರೋಗ ನಿಯಂತ್ರಣಕ್ಕೆ ಶ್ರಮಿಸಲಾಗು-ತ್ತಿದೆ. ಇತರ ಜಿಲ್ಲೆಗಳಿಗೆ ಹರಡದಂತೆ ಎಚ್ಚರಿಕೆ ವಹಿಸಲಾಗಿದೆ. ಕೇಂದ್ರದ ಮಾರ್ಗಸೂಚಿಯಂತೆ ರೋಗ ಕಾಣಿಸಿಕೊಂಡ 5 ಕಿ.ಮೀ. ಸುತ್ತಳತೆಯ-ಲ್ಲಿ ಆರೋಗ್ಯವಂತ ಜಾನುವಾರುಗಳಿಗೆ ಲಸಿಕೆ ಹಾಕಬೇಕು. ಸದ್ಯ 6.57 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಿದ್ದು, ರೋಗಪೀಡಿತ ಜಾನುವಾರುಗಳನ್ನು ಪ್ರತ್ಯೇಕಿಸಲು ಪ್ರತಿ ಗ್ರಾಮದಲ್ಲೂ ವ್ಯವಸ್ಥೆ ಮಾಡಲಾಗುತ್ತಿದೆ. ಮರಣ ಹೊಂದಿದ ಜಾನುವಾರುಗಳ ಮಾಲೀಕರಿಗೆ ಈಗಾಗಲೇ ₹ 46.15 ಲಕ್ಷ ಪರಿಹಾರ ವಿತರಿಸಲಾಗಿದೆ. ಬಾಕಿ ಪರಿಹಾರ ತ್ವರಿತವಾಗಿ ವಿತರಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮನುಷ್ಯರಿಗೆ ರೋಗ ಹರಡುವುದಿಲ್ಲ–ಸಿ.ಎಂ: ರೋಗಪೀಡಿತ ರಾಸುಗಳ ಹಾಲಿನಿಂದ ಮನುಷ್ಯರಿಗೆ ರೋಗ ಹರಡುವುದಿಲ್ಲ. ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಸಂದೇಶ ರವಾನೆಯಾಗಿದೆ. ಈ ಕುರಿತು ಜನರಲ್ಲಿ ಅರಿವು ಮೂಡಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಬೌದ್ಧ ಧಮ್ಮ ದೀಕ್ಷೆ ಪಡೆದ 417 ಮಂದಿ

ಒಂದನೇ ಪುಟದಿಂದ...

ಬುದ್ಧ ವಿಹಾರ ಟ್ರಸ್ಟ್‌ನ ಅಧ್ಯಕ್ಷ ವೆಂಕಟೇಶ ಹೊಸಮನಿ ಮಾತನಾಡಿ, ‘ಹಿಂದೂ ಧರ್ಮದಲ್ಲಿ ಪರಿಶಿಷ್ಟರನ್ನು ಕೀಳಾಗಿ ಕಾಣಲಾಗುತ್ತಿದೆ. ಅದಕ್ಕೆ ಸ್ವಇಚ್ಛೆಯಿಂದ ಬೌದ್ಧ ಧರ್ಮ ಸ್ವೀಕರಸಿದ್ದೇವೆ. ಇದು ಮತಾಂತರವಲ್ಲ; ದೀಕ್ಷಾ ಪಡೆದಿದ್ದೇವೆ’ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ (ಅಂಬೇಡ್ಕರ್ ವಾದ) ಮಾವಳ್ಳಿ ಶಂಕರ್ ಮಾತನಾಡಿ, ‘ರಾಜ್ಯದಲ್ಲಿ ಇನ್ನೂ ಅಸ್ಪೃಶ್ಯತೆ ಜೀವಂತ ಇದೆ. ಮುಖ್ಯಮಂತ್ರಿ ಸೇರಿ ಹಲವರು ಪರಿಶಿಷ್ಟರ ಮನೆಯಲ್ಲಿ ಊಟ ಮಾಡುವ ಗಿಮಿಕ್ ಮಾಡುತ್ತಾರೆ. ಇದರಿಂದ ಅಸ್ಪೃಶ್ಯತೆ ನಿವಾರಣೆಯಾಗದು’ ಎಂದರು.

ತ್ರಿಸರಣ ಪಂಚಶೀಲ ಅಷ್ಟಾಂಗ ಮಾರ್ಗ ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಪಾದಿಸಿದ 22 ಪ್ರತಿಜ್ಞಾ ವಿಧಿಗಳನ್ನು ಬೋಧಿಸಲಾಯಿತು. ಇದಕ್ಕೂ ಮುನ್ನ ಬೈಕ್ ರ‍್ಯಾಲಿ ನಡೆಯಿತು.


ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಗೋಲ್ಡನ್ ಕೇವ್ ಬುದ್ಧ ವಿಹಾರದಲ್ಲಿ ನಡೆದ ಬೌದ್ಧ ಧಮ್ಮ ದೀಕ್ಷಾ ಸಮಾರಂಭದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಮೊಮ್ಮಗಳು ರಮಾತಾಯಿ ಮಾತನಾಡಿದರು

ಆಸ್ಟ್ರೇಲಿಯಾ: ಭಾರತೀಯ ವಿದ್ಯಾರ್ಥಿಗೆ ಇರಿತ

ಸಿಡ್ನಿ(ಪಿಟಿಐ): ಭಾರತೀಯ ವಿದ್ಯಾರ್ಥಿಯೊಬ್ಬನಿಗೆ ಆಸ್ಟ್ರೇಲಿಯಾದಲ್ಲಿ ವ್ಯಕ್ತಿಯೊಬ್ಬ ಹಣ ಕೊಡುವಂತೆ ಪೀಡಿಸಿ, ಚಾಕುವಿನಿಂದ ಹಲವು ಬಾರಿ ಇರಿದಿರುವ ಘಟನೆ ನಡೆದಿದೆ.

ಶುಭಮ್ ಗರ್ಗ್ (28) ಎಂಬ ವಿದ್ಯಾರ್ಥಿ ಅ.6 ರಂದು ರಾತ್ರಿ 10.30ರ ಸಮಯದಲ್ಲಿ ಪೆಸಿಫಿಕ್ ಹೆದ್ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ಡೇನಿಯಲ್ ನಾರ್‌ವುಡ್ (27) ಎಂಬಾತ ಅಡ್ಡಗಟ್ಟಿ ಹಣಕ್ಕಾಗಿ ಪೀಡಿಸಿದ್ದಾನೆ. ವಿದ್ಯಾರ್ಥಿ ಹಣ ನೀಡಲು ನಿರಾಕರಿ-ಸಿದ್ದಕ್ಕೆ ಮನಬಂದಂತೆ ಚಾಕುವಿನಿಂದ ಇರಿದಿದ್ದಾನೆ. ವಿದ್ಯಾರ್ಥಿಯ ಮುಖ, ಎದೆ ಮತ್ತು ಹೊಟ್ಟೆಗೆ ತೀವ್ರ ಗಾಯಗಳಾಗಿದ್ದು, ರಾಯಲ್ ನಾರ್ಥ್ ಶೋರ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಇಂದಿನಿಂದ ಲಾಲ್‌ಬಾಗ್‌ನಲ್ಲಿ ಸಾವಯವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ 1



ಪ್ರಜಾವಾಣಿ
ಪ್ರಜಾ ಪ್ಲಸ್+

ನಗರದಲ್ಲಿ ಇಂದು

ವನ್ಯಜೀವಿ ಛಾಯಾಚಿತ್ರ ಪ್ರದರ್ಶನ



ವನ್ಯಜೀವಿ ಛಾಯಾಗ್ರಾಹಕ ಅನಿರುದ್ಧ್ ವಿದ್ಯಾಭೂಷಣ್ ಅವರ ವನ್ಯಜೀವಿ ಛಾಯಾಚಿತ್ರ ಪ್ರದರ್ಶನವು ಅ.14 ರಿಂದ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆರಂಭಗೊಂಡಿದೆ. ಇನ್ನೂ ಎರಡು ದಿನ ಮುಂದುವರಿಯಲಿದೆ.

ಪ್ರದರ್ಶನ ಬೆಳಿಗ್ಗೆ 10.30ರಿಂದ ಸಂಜೆ 7.30ರವರೆಗೆ ಇರಲಿದೆ.

ಸಂಗೀತೋತ್ಸವ

11ನೇ ಗುರು ಪಂಚಾಕ್ಷರ ಸಂಗೀತೋತ್ಸವ 2022 ಹಾಗೂ 'ಪಂಚಾಕ್ಷರ ಕೃಪಾಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ: ಸಂಗೀತ ಕಾರ್ಯಕ್ರಮ– ಬೆಳಿಗ್ಗೆ 9.390ರಿಂದ. ಪ್ರಶಸ್ತಿ ಪುರಸ್ಕೃತರು– ಶ್ರೀಪಾದ್ ಹೆಗಡೆ, ಸಾನ್ನಿಧ್ಯ– ಡಾ. ಚೆನ್ನವೀರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ– ಉಮಾ ಮಹೇಶ್ವರ್ ಗುರೂಜಿ, ಅತಿಥಿ–ಮಲ್ಲಮ್ಮ ಎಂ. ಬಿರಾದಾರ್, ಅಧ್ಯಕ್ಷತೆ– ಸತೀಶ್ ಹಂಪಿಹೊಳಿ, ಸ್ಥಳ– ಘನಲಿಂಗ ಶಿವಯೋಗಿ ಸಭಾಭವನ, ನಂ. 31, ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, 15ನೇ ಮುಖ್ಯರಸ್ತೆ, 22ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಭಾನುವಾರ ಮಧ್ಯಾಹ್ನ 12.30ಕ್ಕೆ.

ಲಾಲ್‌ಬಾಗ್‌ನಲ್ಲಿ ಇಂದಿನಿಂದ ಸಾವಯವ ಮೇಳ

ಜೈವಿಕ್ ಕೃಷಿಕ್ ಸೊಸೈಟಿ, ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘ –ಇವರ ಸಹಯೋಗದಲ್ಲಿ ಲಾಲ್‌ಬಾಗ್‌ನಲ್ಲಿ ಇಂದು ಮತ್ತು ನಾಳೆ ಸಾವಯವ ಹಬ್ಬ ನಡೆಯಲಿದೆ.

ಸಾವಯವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ – ಈ ಹಬ್ಬದ ವಿಶೇಷ. ಎರಡು ದಿನಗಳ ಈ ಮೇಳದಲ್ಲಿ ಸಾವಯವ ಉತ್ಪನ್ನಗಳು, ಸಿರಿ ಧಾನ್ಯಗಳು, ಮರೆತುಹೋದ ಆಹಾರ ವೈವಿಧ್ಯ, ಗೆಡ್ಡೆ–ಗೆಣಸುಗಳು, ವಿನೂತನ ಹಣ್ಣು ಮತ್ತು ತರಕಾರಿಗಳು ಹಾಗೂ ದೇಸಿ ಬೀಜಗಳ ಪ್ರದರ್ಶನ ಮತ್ತು ಮಾರಾಟವಿರುತ್ತದೆ.

ಇಂದು ಉದ್ಘಾಟನೆ

ಲಾಲ್‌ಬಾಗ್‌ನ ಡಾ.ಎಂ.ಎಚ್.ಮರಿಗೌಡ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಆರಂಭವಾಗುವ ಸಾವಯವ ಮೇಳವನ್ನು ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್ ಉದ್ಘಾಟಿಸಲಿದ್ದಾರೆ. ಪರಿಸರ ತಜ್ಞ ಡಾ. ಎ.ಎನ್. ಯಲ್ಲಪ್ಪರೆಡ್ಡಿ, ಸಾವಯವ ಕೃಷಿಕ ಶಿವನಾಪುರ ರಮೇಶ್, ಮೈಸೂರು ಉದ್ಯಾನ ಕಲಾ ಸಂಘದ ಉಪಾಧ್ಯಕ್ಷ ಬಿ.ಆರ್. ವಾಸುದೇವ್, ಜೈವಿಕ್ ಕೃಷಿಕ್ ಸೊಸೈಟಿಯ ಗೌರವಾಧ್ಯಕ್ಷ ಕೆ. ರಾಮಕೃಷ್ಣಪ್ಪ ಮತ್ತು ಕಾರ್ಯಾಧ್ಯಕ್ಷ ಕೆ.ಎಂ. ಪರಶಿವಮೂರ್ತಿ ಉಪಸ್ಥಿತಿರಿರುತ್ತಾರೆ.

ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 20ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ವರ್ಗದ ಸಾವಯವ ಕೃಷಿಕರು ಮತ್ತು ಸಾವಯವ ಕೃಷಿಕರ ಗುಂಪುಗಳು ತಾವು ಬೆಳೆಯುತ್ತಿರುವ ಹಾಗೂ ಸಣ್ಣ ಪ್ರಮಾಣದಲ್ಲಿ ಸಂಸ್ಕರಣೆ ಮಾಡುತ್ತಿರುವ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಿದ್ದಾರೆ.

ಇವರ ಜೊತೆಗೆ 30ಕ್ಕೂ ಅಧಿಕ ಸಾವಯವ ಕೃಷಿಕರ ಸಂಘ ಸಂಸ್ಥೆಗಳು, ಸಗಟು ವ್ಯಾಪಾರಸ್ಥರು, ಸಂಸ್ಕರಣೆ ಮತ್ತು ಮಾರಾಟ ಸಂಸ್ಥೆಗಳು, ಕಿರಾಣಿ ಮಾರಾಟಗಾರರು ಈ ಮೇಳದಲ್ಲಿ ಭಾಗವಹಿಸಲಿದ್ದಾರೆ.

'ರೈತರು ಮತ್ತು ರೈತ ಗುಂಪುಗಳು ತಾವು ಬೆಳೆದ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಈ ಮೇಳ ವೇದಿಕೆ ನೀಡುತ್ತಿದೆ' ಎನ್ನುವುದು ಆಯೋಜಕರ ಅಭಿಪ್ರಾಯ.

ಸಾವಯವ ಉತ್ಪನ್ನ ಬೆಳೆಯುವ ರೈತರಿಂದಲೇ ಉತ್ಪನ್ನಗಳನ್ನು ಖರೀದಿಸುವ ಜೊತೆಗೆ, ಅವರೊಂದಿಗೆ ನಿರಂತರವಾಗಿ ಸಂಪರ್ಕ ಬೆಳೆಸಲು ಈ ಮೇಳ ಗ್ರಾಹಕರಿಗೆ ಉತ್ತಮ ಮಾರ್ಗವಾಗಿದೆ.

ಜೈವಿಕ್ ಕೃಷಿಕ್ ಸೊಸೈಟಿ

ಜೈವಿಕ್ ಕೃಷಿಕ್ ಸೊಸೈಟಿ 2004ರಿಂದ ಸಾವಯವ / ಸಹಜ ಕೃಷಿಕರು ಹಾಗೂ ಗ್ರಾಹಕರ ನಡುವೆ ಸಂಪರ್ಕ ವೇದಿಕೆಯಾಗಿ, ಸಾವಯವ ಕೃಷಿ ಉತ್ತೇಜಿಸುವ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಒಂದು ಸಾರ್ವಜನಿಕ ಸಂಸ್ಥೆ. ಸಾವಯವ ಕೃಷಿ ಮತ್ತು ಸಹಜ ಕೃಷಿಯಲ್ಲಿ ತೊಡಗಿರುವ ರಾಜ್ಯದ ಸಾವಿರಾರು ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿ ಕೊಡುವಲ್ಲಿಯೂ ನೆರವಾಗುತ್ತಿದೆ. ಬೆಂಗಳೂರು ಮತ್ತು ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಸಾವಯವ/ಸಹಜ ಕೃಷಿಕರೊಂದಿಗೆ ಗ್ರಾಹಕರನ್ನು ಬೆಸೆಯುವುದಕ್ಕಾಗಿ ಸೊಸೈಟಿಯು ಪ್ರತಿ ವರ್ಷ 'ಸಾವಯವ ಮೇಳ'ವನ್ನು ಆಯೋಜಿಸುತ್ತಾ ಬಂದಿದೆ. ಕೋವಿಡ್ ಕಾರಣದಿಂದ ಕಳೆದ 2 ವರ್ಷಗಳಿಂದ ಈ ಮೇಳವನ್ನು ಸ್ಥಗಿತಗೊಳಿಸಲಾಗಿತ್ತು. ಈ ವರ್ಷದಿಂದ ಮತ್ತೆ ಸಾವಯವ ಮೇಳಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಜೈವಿಕ್ ಕೃಷಿಕ್ ಸೊಸೈಟಿಯ ಗೌರವಾಧ್ಯಕ್ಷ ಕೆ. ರಾಮಕೃಷ್ಣಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲಾಲ್‌ಬಾಗ್ ಆವರಣದಲ್ಲಿರುವ ಜೈವಿಕ್ ಕೃಷಿಕ್ ಸೊಸೈಟಿಯ ಸಾವಯವ ಉತ್ಪನ್ನ ಮಾರಾಟ ಮಳಿಗೆ



ಲಾಲ್‌ಬಾಗ್‌ನಲ್ಲಿ ಸಾವಯವ ಹಬ್ಬ (ಸಂಗ್ರಹ ಚಿತ್ರ)







ಕಾಂಜೀವರಂ ಸಿಲ್ಕ್ಸ್ | ಮೆನ್ಸ್ ವೇರ್ | ವುಮೆನ್ಸ್ ವೇರ್ | ಕಿಡ್ಸ್ ವೇರ್ | ಗೋಲ್ಡ್ ಮತ್ತು ಸಿಲ್ವರ್ ಜುವೆಲ್ಲರಿ | ಫ್ಯಾಷನ್ ಜುವೆಲ್ಲರಿ | ರೂಫ್ ಟಾಪ್ ರೆಸ್ಟೋರೆಂಟ್
#231, ಚಿಕ್ಕಪೇಟೆ ಮುಖ್ಯ ರಸ್ತೆ, ಕೆನರಾ ಬ್ಯಾಂಕ್ ಎದುರು, ಬೆಂಗಳೂರು - 560 053 | 080-41300 300

ಗಂಧದಗುಡಿಯೊಳಗೆ ಪುನೀತಪರ್ವ


ಪುನೀತ್ ರಾಜ್‌ಕುಮಾರ್

ಸಿನಿ ಹನಿ

ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ, 'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ಅವರ ಜೊತೆಗೂಡಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ತಯಾರಿಸಿದ್ದ ಡಾಕ್ಯೂಫಿಲಂ 'ಗಂಧದಗುಡಿ' ಸದ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿದೆ.

ಚಿತ್ರದ ಟ್ರೇಲರ್ ಈಗಾಗಲೇ ಒಂದು ಕೋಟಿ ವೀಕ್ಷಣೆಯನ್ನು ದಾಟಿದ್ದು, ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಯೋಜಿಸಲು ದೊಡ್ಮನೆ ಸಜ್ಜಾಗಿದ್ದು, ಸಿದ್ಧತೆ ಆರಂಭಿಸಿದೆ.

'ಪುನೀತಪರ್ವ' ಹೆಸರಿನಲ್ಲಿ ಅ.21ರಂದು ಸಂಜೆ 6.30ಕ್ಕೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಪ್ರಿರಿಲೀಸ್ ಕಾರ್ಯಕ್ರಮ ನಡೆಯಲಿದ್ದು, ಕನ್ನಡ ಚಿತ್ರರಂಗ ಮಾತ್ರವಲ್ಲದೆ ಭಾರತೀಯ ಚಿತ್ರರಂಗದ ನೂರಾರು ಗಣ್ಯರು ಭಾಗವಹಿಸಲಿದ್ದಾರೆ. ಇತ್ತೀಚೆಗಷ್ಟೇ ಪಿಆರ್‌ಕೆ ಪ್ರೊಡಕ್ಷನ್ಸ್ ಮುಖ್ಯಸ್ಥೆ, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ.

'ಅಪ್ಪು ನಮ್ಮನ್ನಗಲಿ ಒಂದು ವರ್ಷ ಕಳೆಯುತ್ತಿದೆ. ಹೀಗಾಗಿ ಅವನಿಗೆ ಈ ಪುನೀತ ಪರ್ವ ಅರ್ಪಣೆ. ದಕ್ಷಿಣ ಭಾರತದ ಪ್ರಮುಖ ಕಲಾವಿದರನ್ನು ಪ್ರಿರಿಲೀಸ್ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೇವೆ. ಅಪ್ಪು 'ಗಂಧದಗುಡಿ'ಯನ್ನು ಬಹಳ ಪ್ರೀತಿಸಿದ್ದ. ಅವನ ಸಂತೋಷವನ್ನು ನಾವು ಸಂಭ್ರಮದಿಂದ ಆಚರಿಸಬೇಕು. ಅಶ್ವಿನಿ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ' ಎಂದಿದ್ದಾರೆ ನಟ ರಾಘವೇಂದ್ರ ರಾಜ್‌ಕುಮಾರ್.

'ಗಂಧದಗುಡಿ' ಪುನೀತ್ ಅವರ ಕನಸಾಗಿತ್ತು. ಪುನೀತ್ ಅವರು ತೆರೆಯ ಮೇಲೆ ಕಾಣಿಸಿಕೊಳ್ಳಲಿರುವ ಕೊನೆಯ ಚಿತ್ರ ಇದಾಗಿದೆ. ಈ ಡಾಕ್ಯೂಫಿಲಂ ಅ.28ರಂದು ಬಿಡುಗಡೆಯಾಗುತ್ತಿದ್ದು, ತೆರೆಯ ಮೇಲೆ 'ಮ್ಯಾನ್ ವಿದ್ ವೈಲ್ಡ್' ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾಯುತ್ತಿದ್ದಾರೆ. ❖

ಹಿಂದಿ ಬೆಲ್ಟ್‌ನಲ್ಲಿ ಕಾಂತಾರ ಅಬ್ಬರ




ಸಾಮಾಜಿಕ ಮಾಧ್ಯಮಗಳಲ್ಲಿ ಸದ್ಯ ರಿಷಬ್ ಶೆಟ್ಟಿ ನಿರ್ದೇಶನದ ಕಾಂತಾರ ಸಿನಿಮಾ ಕುರಿತ ಪೋಸ್ಟ್‌ಗಳೇ ತುಂಬಿವೆ. 'ಡಿವೈನ್ ಬ್ಲಾಕ್‌ಬಸ್ಟರ್' ಎಂದೇ ಕರೆಸಿಕೊಳ್ಳುತ್ತಿರುವ ಈ ಸಿನಿಮಾ ಇದೀಗ ಉತ್ತರಕ್ಕೆ ಹೆಜ್ಜೆ ಇಟ್ಟಿದೆ.

ಕನ್ನಡದಲ್ಲಷ್ಟೇ ತೆರೆಕಂಡಿದ್ದ ಹೊಂಬಾಳೆ ಫಿಲ್ಮ್ಸ್ ಬ್ಯಾನರ್‌ನಡಿ ನಿರ್ಮಾಣವಾದ ಕಾಂತಾರ, ಇದೀಗ ಹಿಂದಿ ಮತ್ತು ತೆಲುಗಿಗೆ ಡಬ್ ಆಗಿದೆ. ಹಿಂದಿಯಲ್ಲಿ ಡಬ್ ಆದ ಸಿನಿಮಾ ಅ.14ರಂದು ಬಿಡುಗಡೆಯಾಗಿದೆ. ಹಿಂದಿ ಭಾಷೆಯೊಂದರಲ್ಲೇ 2500ಕ್ಕೂ ಅಧಿಕ ಸ್ಕ್ರೀನ್‌ಗಳಲ್ಲಿ ಕಾಂತಾರ ಪ್ರದರ್ಶನ ಕಂಡಿದೆ. ಅ.15ರಂದು ತೆಲುಗಿನಲ್ಲಿ ಡಬ್ ಆದ ಸಿನಿಮಾ ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ತೆರೆಕಾಣಲಿದೆ.

ತಮಿಳು ಹಾಗೂ ಮಲಯಾಳಂಗೂ ಸಿನಿಮಾ ಡಬ್ ಆಗುತ್ತಿದ್ದು, ಇವುಗಳ ರಿಲೀಸ್ ದಿನಾಂಕವನ್ನು ಚಿತ್ರತಂಡ ಇನ್ನಷ್ಟೇ ಘೋಷಣೆ ಮಾಡಬೇಕಿದೆ. ನಟರಾದ ಪ್ರಭಾಸ್, ರಕ್ಷಿತ್ ಶೆಟ್ಟಿ, ನಟಿ ರಮ್ಯಾ ಮುಂತಾದ ಸೆಲೆಬ್ರಿಟಿಗಳೂ ಕೂಡಾ ಚಿತ್ರವನ್ನು ವೀಕ್ಷಿಸಿ ಕೊಂಡಾಡಿದ್ದಾರೆ. ಚಿತ್ರದ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪತ್ರವೊಂದನ್ನು ಪೋಸ್ಟ್ ಮಾಡಿದ್ದ ನಟ ಸುದೀಪ್, 'ಕೆಲವು ಸಿನಿಮಾಗಳು ಚೆನ್ನಾಗಿರುತ್ತವೆ, ಕೆಲವು ಅದ್ಭುತವಾಗಿರುತ್ತವೆ. ಬಹಳ ಅಪರೂಪಕ್ಕೆ ಕೆಲವು ಚಿತ್ರಗಳನ್ನು ನೋಡಿ ನಮ್ಮ ಬಾಯಿಂದ ಮಾತೇ ಹೊರಡದಂತೆ ಆಗುತ್ತವೆ. ನಮ್ಮನ್ನು ಆ ಚಿತ್ರಗಳು ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ಕಾಂತಾರ ಅಂಥದ್ದೊಂದು ಚಿತ್ರ. ಒಂದು ಸರಳವಾದ ಕಥೆ, ಒಳ್ಳೆಯ ಚಿತ್ರಕಥೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅದ್ಭುತವಾದ ನಿರೂಪಣೆ ಈ ಚಿತ್ರದ ಜೀವಾಳ. ಇನ್ನು, ರಿಷಭ್ ಶೆಟ್ಟಿ ತಮ್ಮ ಅದ್ಭುತ ಅಭಿನಯದಿಂದ ನಮ್ಮ ಮನಸ್ಸನ್ನು ತಟ್ಟುತ್ತಾರೆ' ಎಂದು ಉಲ್ಲೇಖಿಸಿದ್ದಾರೆ. ❖

'ಘೋಸ್ಟ್' ಆದ ಸೆಂಚುರಿ ಸ್ಟಾರ್!



ಸೆಂಚುರಿ ಸ್ಟಾರ್ ಸದ್ಯ ಸಾಲು ಸಾಲು ಚಿತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ 'ಕರಟಕ ದಮನಕ' ಸೆಟ್‌ಗೆ ಪ್ರವೇಶಿಸಿದ್ದ ಶಿವರಾಜ್‌ಕುಮಾರ್ ಇದೀಗ 'ಘೋಸ್ಟ್' ಆಗಿದ್ದಾರೆ.

'ಬೀರ್ ಬಲ್', 'ಓಲ್ಡ್ ಮಾಂಕ್' ಸಿನಿಮಾ ಖ್ಯಾತಿಯ ನಟ ಶ್ರೀನಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ ಮುಹೂರ್ತ ಇತ್ತೀಚೆಗೆ ಮಿನರ್ವ ಮಿಲ್‌ನಲ್ಲಿ ನಡೆಯಿತು. ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ಸಂದೇಶ್ ಎನ್. ಇದನ್ನು ನಿರ್ಮಿಸುತ್ತಿದ್ದಾರೆ. ಚಿತ್ರದ ಮೊದಲ ಸನ್ನಿವೇಶಕ್ಕೆ ಗೀತಾ ಶಿವರಾಜಕುಮಾರ್ ಕ್ಲ್ಯಾಪ್ ಮಾಡಿದರು. ಬೃಂದಾ ಜಯರಾಂ ಕ್ಯಾಮೆರಾ ಚಾಲನೆ ಮಾಡಿದರು.

ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಅದ್ಧೂರಿ ಸೆಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. http://dcxprodapp.deccanherald.co.in/device_dh/previews1/2022/10-13/ec/cb/file7n5r6eawnds9p25whwu.jpg ಮಿನರ್ವ ಮಿಲ್‌ನಲ್ಲಿ 15 ತರಹದ ಸೆಟ್‌ಗಳನ್ನು ಹಾಗೂ ಮೈಸೂರಿನಲ್ಲಿ ನಾಲ್ಕು ಸೆಟ್‌ಗಳನ್ನು ಕಲಾ ನಿರ್ದೇಶಕ ಮೋಹನ್ ಬಿ. ಕೆರೆ ನಿರ್ಮಾಣ ಮಾಡಿದ್ದಾರೆ. ಚಿತ್ರದ ಚಿತ್ರೀಕರಣ ಬೆಂಗಳೂರು ಹಾಗೂ ಮೈಸೂರಿನಲ್ಲಿ ನಡೆಯಲಿದೆ. ಮಿನರ್ವ ಮಿಲ್‌ನಲ್ಲಿ ನಿರ್ಮಿಸಲಾಗಿರುವ ಕಾರಾಗೃಹದ ಸೆಟ್‌ನಲ್ಲೇ 24 ದಿನ ಚಿತ್ರೀಕರಣ ನಡೆಯಲಿದೆ. ಈ ಸೆಟ್‌ಗಳ ನಿರ್ಮಾಣಕ್ಕೇ ಮೂರು ಕೋಟಿ ವೆಚ್ಚವಾಗಿದೆ ಎಂದಿದೆ ಚಿತ್ರತಂಡ.

ಇದು ಶ್ರೀನಿ ನಿರ್ದೇಶನದ ಐದನೇ ಚಿತ್ರ. ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಸಂಭಾಷಣೆ ಮಾಸ್ತಿ ಹಾಗೂ ಪ್ರಸನ್ನ ಅವರದು. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಹಾಗೂ ಮಹೇಂದ್ರ ಸಿಂಹ ಛಾಯಾಗ್ರಹಣ ಚಿತ್ರಕ್ಕಿದ್ದು, ಐದು ಸಾಹಸ ಸನ್ನಿವೇಶಗಳು ಚಿತ್ರದಲ್ಲಿದೆ. ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂನಲ್ಲಿ ಈ ಸಿನಿಮಾ ತೆರೆಕಾಣಲಿದೆ. ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.


ಘೋಸ್ಟ್ ಮುಹೂರ್ತ

ಸ್ಮಾರ್ಟ್‌ಫೋನ್‌ನಲ್ಲಿ 5G ಬಳಸುವುದು ಹೇಗೆ?

ತಂತ್ರಜ್ಞಾನ

ಬೆಂಗಳೂರು, ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್, ಸಿಲಿಗುರಿ, ನಾಗಪುರ ಮತ್ತು ವಾರಾಣಸಿಯಲ್ಲಿ ಏರ್‌ಟೆಲ್ ಹಂತಹಂತವಾಗಿ 5G ಸೇವೆಯನ್ನು ಬಳಕೆದಾರರಿಗೆ ಒದಗಿಸುತ್ತಿದೆ.

ರಿಲಯನ್ಸ್ ಜಿಯೊ ಮತ್ತು ವೊಡಾಫೋನ್ ಐಡಿಯಾ ಕೂಡ 5G ಸೇವೆಯನ್ನು ಪ್ರಮುಖ ನಗರಗಳಲ್ಲಿ ಆರಂಭದಲ್ಲಿ ವಿಸ್ತರಿಸುತ್ತಿದೆ. ಮುಂದಿನ ಹಂತದಲ್ಲಿ ಎಲ್ಲ ನಗರಗಳಲ್ಲೂ 5G ಸೇವೆ ದೊರೆಯಲಿದೆ.

5G ಆ್ಯಕ್ಟಿವೇಟ್ ಮಾಡುವುದು ಹೇಗೆ? ನಿಮ್ಮಲ್ಲಿ ಆ್ಯಂಡ್ರಾಯ್ಡ್ 5G ಸ್ಮಾರ್ಟ್‌ಫೋನ್ ಇದ್ದರೆ, ಮೊದಲು ಸೆಟ್ಟಿಂಗ್ಸ್ ಓಪನ್ ಮಾಡಿ. ನಂತರ ಮೊಬೈಲ್ ನೆಟ್‌ವರ್ಕ್ ಆಯ್ಕೆ ಮಾಡಿಕೊಳ್ಳಿ. ಯಾವ ಸಿಮ್/ನೆಟ್‌ವರ್ಕ್‌ನಲ್ಲಿ ನೀವು 5G ಬಳಕೆ ಮಾಡಲು ಇಚ್ಛಿಸುವಿರೋ, ಅದನ್ನು ಸೆಲೆಕ್ಟ್ ಮಾಡಿ. ಅದರಲ್ಲಿ, 'Preferred network type' ಎಂದಿರುವುದನ್ನು ಸೆಲೆಕ್ಟ್ ಮಾಡಿ. ಬಳಿಕ, ಮೇಲ್ಭಾಗದಲ್ಲಿ 5G ಇರುವುದನ್ನು ಖಚಿತಪಡಿಸಿ, ಆಯ್ಕೆ ಮಾಡಿ. ಬಳಿಕ ಫೋನ್ ರೀಸ್ಟಾರ್ಟ್ ಮಾಡಿ.



ನಿಮ್ಮ ಪ್ರದೇಶದಲ್ಲಿ 5G ನೆಟ್‌ವರ್ಕ್ ಇದ್ದರೆ, ಸ್ಮಾರ್ಟ್‌ಫೋನ್‌ನಲ್ಲಿ 5G ನೆಟ್‌ವರ್ಕ್ ಕಾಣಿಸಿಕೊಳ್ಳುತ್ತದೆ. ಏರ್‌ಟೆಲ್ ಈಗ ಇರುವ 4G ಸಿಮ್ ಮೂಲಕವೂ 5G ನೆಟ್‌ವರ್ಕ್ ಕಾರ್ಯನಿರ್ವಹಿಸಲಿದೆ.

ಏರ್‌ಟೆಲ್ ಥ್ಯಾಂಕ್ಸ್ ಆ್ಯಪ್ ಮೂಲಕ ಪರೀಕ್ಷಿಸಿಕೊಳ್ಳಿ.

ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಏರ್‌ಟೆಲ್ ನೆಟ್‌ವರ್ಕ್ ಇದ್ದರೆ, ನಿಮ್ಮಲ್ಲಿ 5G ಲಭ್ಯತೆಯನ್ನು ಪರಿಶೀಲಿಸಬಹುದು. ಏರ್‌ಟೆಲ್ ಆ್ಯಪ್ ತೆರೆಯಿರಿ. ಬಳಿಕ, ಅದರಲ್ಲಿ ಇರುವ 5G ಬ್ಯಾನರ್ ಕ್ಲಿಕ್ ಮಾಡಿ ಅದರಲ್ಲಿನ 'ಚೆಕ್ ಯುವರ್ ಫೋನ್ ಇಸ್ 5G ಎನೇಬಲ್ಡ್' ಆಯ್ಕೆ ಗಮನಿಸಿ.

ಈಗ, ಏರ್‌ಟೆಲ್ ಆ್ಯಪ್, ನಿಮ್ಮ ನಗರದಲ್ಲಿ 5G ಇದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸಿ ಹೇಳುತ್ತದೆ.

ಬಳಿಕ, ನಿಮ್ಮ ಸ್ಮಾರ್ಟ್‌ಫೋನ್ ಮತ್ತು ಸಾಫ್ಟ್‌ವೇರ್ 5G ಬೆಂಬಲ ನೀಡುವುದೇ ಎಂದು ಪರೀಕ್ಷಿಸಬಹುದು. 5G ಇದ್ದಲ್ಲಿ, ಡಿವೈಸ್ 5G ರೆಡಿ ಮತ್ತು ನೆಟ್‌ವರ್ಕ್ ಲಭ್ಯತೆ ಇದೆ ಎನ್ನುವುದನ್ನು ಖಚಿತಪಡಿಸಿ. ನಂತರ, ಸೆಟ್ಟಿಂಗ್ಸ್‌ಗೆ ಹೋಗಿ, ಫೋನ್ ನೆಟ್‌ವರ್ಕ್‌ನಲ್ಲಿ 5G ಸೆಲೆಕ್ಟ್ ಮಾಡಿ.

ಐಫೋನ್‌ನಲ್ಲಿ 5G ಬಳಸುವುದು ಹೇಗೆ?

ಐಫೋನ್‌ನಲ್ಲಿ ಸೆಟ್ಟಿಂಗ್ಸ್ ತೆರೆಯಿರಿ. ಅದರಲ್ಲಿ ಮೊಬೈಲ್ ಡೇಟಾ ಎಂದಿರುವುದನ್ನು ಕ್ಲಿಕ್ ಮಾಡಿ. ನಂತರ, ಮೊಬೈಲ್ ಡೇಟಾ ಆಪ್ಷನ್ಸ್ ಸೆಲೆಕ್ಟ್ ಮಾಡಿ, ಅದರಲ್ಲಿ ವಾಯ್ಸ್ ಮತ್ತು ಡೇಟಾ ಆಯ್ಕೆ ಮಾಡಿದೆ. ಬಳಿಕ, 5G ಎಂದಿರುವುದನ್ನು ಆಯ್ಕೆ ಮಾಡಿ.

ಐಫೋನ್ 12 ಮತ್ತು ನಂತರದ ಮಾದರಿಗಳಲ್ಲಿ 5G ಲಭ್ಯವಾಗಲಿದೆ. ಅಲ್ಲದೆ, ಪ್ರಸ್ತುತ iOS 16.0.2 ಓಎಸ್ ಅಪ್‌ಡೇಟ್ ಇದ್ದು, ಮುಂದಿನ ಅಪ್‌ಡೇಟ್ ಜತೆಗೆ ದೇಶದಲ್ಲಿ ಆ್ಯಪಲ್, ಅರ್ಹ ಐಫೋನ್‌ಗಳಿಗೆ 5G ನೆಟ್‌ವರ್ಕ್ ಒದಗಿಸಲಿದೆ. ಶೀಘ್ರದಲ್ಲೇ ಅಪ್‌ಡೇಟ್ ಬಿಡುಗಡೆ ಮಾಡುವುದಾಗಿ ಆ್ಯಪಲ್ ಹೇಳಿದೆ.

ಫಹಾದ್‌ಗೆ ಪವನ್ ಆ್ಯಕ್ಷನ್ ಕಟ್

'ಲೂಸಿಯಾ', 'ಯೂಟರ್ನ್' ಸಿನಿಮಾ ಖ್ಯಾತಿಯ ನಿರ್ದೇಶಕ, ನಟ ಪವನ್ ಕುಮಾರ್, ಮಲಯಾಳಂ ಸಿನಿಮಾ ಇಂಡಸ್ಟ್ರಿಯ ಖ್ಯಾತ ನಟ ಫಹಾದ್ ಫಾಸಿಲ್‌ಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ.

'ಧೂಮಂ' ಹೆಸರಿನ ಹೊಸ ಚಿತ್ರ ಸೆಟ್ಟೇರಿದ್ದು, ಇತ್ತೀಚೆಗೆ ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೊದಲ್ಲಿ ನಡೆಯಿತು. 'ಕೆ.ಜಿ.ಎಫ್.' ಚಿತ್ರದ ನಿರ್ದೇಶಕ ಪ್ರಶಾಂತ್ ನೀಲ್ ಮುಹೂರ್ತ ಸಮಾರಂಭಕ್ಕೆ ಆಗಮಿಸಿ ತಂಡಕ್ಕೆ ಶುಭಕೋರಿದ್ರು. ಕೆ.ಜಿ.ಎಫ್, ಕಾಂತಾರ ಹೀಗೆ ಸಾಲು ಸಾಲು ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಹೊಂಬಾಳೆ ಫಿಲ್ಮ್ಸ್‌ನ ಹನ್ನೆರಡನೇ ಸಿನಿಮಾ ಇದಾಗಿದೆ. ಮಲಯಾಳಂ, ಕನ್ನಡ, ತೆಲುಗು ಹಾಗೂ ತಮಿಳಿನಲ್ಲಿ ಈ ಸಿನಿಮಾ ತೆರೆಕಾಣಲಿದೆ.

ಫಹಾದ್‌ಗೆ ಜೋಡಿಯಾಗಿ ತಮಿಳಿನ 'ಸೂರಾರೈ ಪೋಟ್ರು' ಸಿನಿಮಾ ಖ್ಯಾತಿಯ ಅಪರ್ಣ ಬಾಲಮುರಳಿ ನಟಿಸಲಿದ್ದಾರೆ. ನವೆಂಬರ್‌ನಿಂದ ಸಿನಿಮಾದ ಶೂಟಿಂಗ್ ಆರಂಭವಾಗಲಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಹಾಗೂ ಪ್ರೀತಾ ಜಯರಾಮನ್ ಛಾಯಾಗ್ರಹಣ ಚಿತ್ರಕ್ಕಿರಲಿದೆ. ❖


ಫಹಾದ್ ಫಾಸಿಲ್, ಪವನ್ ಕುಮಾರ್ ಹಾಗೂ ಅಪರ್ಣಾ

ಅಕ್ಷಯಕಲ್ಪ: ಸಾವಯವ ಮೊಸರು ಮಾರುಕಟ್ಟೆಗೆ

ಸಾವಯವ ಹೈನೋದ್ಯಮದಲ್ಲಿ ಮುಂಚೂಣಿಯಲ್ಲಿರುವ 'ಅಕ್ಷಯಕಲ್ಪ' ಸಂಸ್ಥೆಯು ಈಗ 'ಗ್ರೀಕ್ ಯೋಗಹರ್ಟ್' ಹೆಸರಿನಲ್ಲಿ ವಿಶಿಷ್ಟವಾದ ತಾಜಾ ಮತ್ತು ಶುದ್ಧವಾದ ಮೊಸರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

100 ಗ್ರಾಂ ತೂಕದ ಪೊಟ್ಟಣಗಳಲ್ಲಿ ಈ ಮೊಸರು ಲಭ್ಯ. ಇದು ಸಂಪೂರ್ಣ ಸಾವಯವ ಮೊಸರು ಮತ್ತು ಸಂಪೂರ್ಣ ಸುರಕ್ಷಿತ. ಸಕ್ಕರೆ ಬದಲು ಜೇನುತುಪ್ಪ ಬಳಸಲಾಗಿದೆ.

'ಅತಿ ಹೆಚ್ಚು ಪ್ರೊಟಿನ್ ಹೊಂದಿರುವುದರಿಂದ ಬೆಳೆಯುವ ಮಕ್ಕಳ ಆರೋಗ್ಯಕ್ಕೆ ಒಳ್ಳೆಯದಾಗಿದೆ. ತಾಯಂದಿರು ತಮ್ಮ ಮಕ್ಕಳಿಗೆ ಈ ಮೊಸರು ನೀಡಬಹುದು. ಪೌಷ್ಟಿಕಾಂಶಗಳಿರುವ ಈ ಮೊಸರನ್ನು 15 ದಿನಗಳ ಕಾಲ ರೆಫ್ರಿಜರೇಟರ್‌ನಲ್ಲಿ ಇರಿಸಬಹುದು' ಎಂದು ಅಕ್ಷಯಕಲ್ಪ ಸಹ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಕುಮಾರ್ ವಿವರಿಸುತ್ತಾರೆ.

'ಗ್ರೀಕ್ ಯೋಗಹರ್ಟ್ ಮೊಸರಿನ ಪ್ಯಾಕೇಜಿಂಗ್ ಸಹ ವಿಶಿಷ್ಟವಾಗಿದೆ. ಈ ಮೊಸರಿಗೆ ಪ್ಯಾಕ್ ಮಾಡಿರುವ ಕಾಗದವನ್ನು ಮರುಬಳಕೆ ಮಾಡಲಾಗುವುದು. ಗ್ರಾಹಕರು ಬಳಕೆಯ ನಂತರ, ಈ ರಟ್ಟಿನ ಕಾಗದವನ್ನು ನಮಗೆ ವಾಪಸ್ ಮಾಡಬೇಕು. ಇದೇ ರೀತಿಯಲ್ಲಿ ಇದುವರೆಗೆ ವಿವಿಧ ಉತ್ಪನ್ನಗಳ ಸುಮಾರು 1500 ಕೆ.ಜಿ. ಪ್ಲಾಸ್ಟಿಕ್ ಅನ್ನು ಮರುಬಳಕೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

'ಅಕ್ಷಯಕಲ್ಪ ಇದುವರೆಗೆ 22 ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇವೆಲ್ಲವೂ ಸಾವಯವ ಉತ್ಪನ್ನಗಳು. ಬೆಂಗಳೂರು, ಚೆನ್ನೈ ಮತ್ತು ಹೈದರಾಬಾದ್, ಮೈಸೂರು, ತುಮಕೂರು ಸೇರಿದಂತೆ ವಿವಿಧೆಡೆ ಮಾರುಕಟ್ಟೆ ಜಾಲ ಹೊಂದಲಾಗಿದೆ' ಎಂದು ವಿವರಿಸಿದ್ದಾರೆ.



'ಅಕ್ಷಯಕಲ್ಪ ಸಂಸ್ಥೆ 12 ವರ್ಷಗಳಿಂದ ಉತ್ತಮ ಗುಣಮಟ್ಟದ ವಿವಿಧ ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದು, ಸುಮಾರು 60 ಸಾವಿರ ಗ್ರಾಹಕರ ವಿಶ್ವಾಸವನ್ನು ಗಳಿಸಿದ್ದೇವೆ. ಕಳೆದ ಎರಡು ವರ್ಷಗಳಿಂದ ಗ್ರೀಕ್ ಯೋಗಹರ್ಟ್ಸ್ ತಯಾರಿಸುವ ಬಗ್ಗೆ ಯೋಜನೆ ರೂಪಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ' ಎಂದು ವಿವರಿಸಿದ್ದಾರೆ.

'ಅಕ್ಷಯಕಲ್ಪ 750 ರೈತರ ಜತೆ ಒಪ್ಪಂದ ಮಾಡಿಕೊಂಡು ಅವರ ಆದಾಯ ವೃದ್ಧಿಸುವ ಕಾರ್ಯದಲ್ಲಿ ತೊಡಗಿದೆ. ರೈತರಿಗೆ ಪ್ರತಿ ತಿಂಗಳು ಕನಿಷ್ಠ ₹1 ಲಕ್ಷ ಆದಾಯ ದೊರೆಯುತ್ತಿದೆ' ಎಂದು ಮಾರುಕಟ್ಟೆ ವಿಭಾಗದ ಮುಖ್ಯಸ್ಥೆ ವಚನಾ ತಿಳಿಸಿದ್ದಾರೆ.

'ಅಕ್ಷಯಕಲ್ಪ ಎನ್ನುವ ಬ್ರ್ಯಾಂಡ್ ಅನ್ನು ಮಾರುಕಟ್ಟೆಯಲ್ಲಿ ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದೇವೆ. ಬೆಂಗಳೂರಿನಲ್ಲಿ ಪ್ರತಿ ದಿನ 35 ಸಾವಿರ ಹಾಲು ಮಾರಾಟ ಮಾಡಲಾಗುತ್ತಿದೆ. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ' ಎಂದು ವಿವರಿಸಿದರು. ಮಾಹಿತಿಗೆ www.akshayakalpa.org ವೆಬ್‌ಸೈಟ್ ವೀಕ್ಷಿಸಬಹುದು. ❖



ರಾಕುಲ್–ಜಕ್ಕಿ ಮದುವೆ ಶೀಘ್ರ

ಬಾಲಿವುಡ್ ನಟ ಹಾಗೂ ಚಿತ್ರ ನಿರ್ಮಾಪಕ ಜಕ್ಕಿ ಬಗ್‌ನಾನಿಯೊಂದಿಗೆ ನಟಿ ರಾಕುಲ್ ಪ್ರೀತ್ ಸಿಂಗ್ ಡೇಟಿಂಗ್ ಮಾಡುತ್ತಿರುವುದು ತಿಳಿದಿರುವ ವಿಚಾರ. ಅವರಿಬ್ಬರ ಮದುವೆ ಕುರಿತ ಗಾಸಿಪ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಲೇ ಇದ್ದವು.

ಇದೀಗ ಈ ಜೋಡಿ ಶೀಘ್ರದಲ್ಲೇ ಮದುವೆಯಾಗುವ ನಿರ್ಧಾರ ಮಾಡಿದ್ದಾರೆ ಎಂಬ ಅಧಿಕೃತ ಸುದ್ದಿ ಹೊರಬಿದ್ದಿದೆ. ದಿನಾಂಕ ಹಾಗೂ ಜಾಗ ತಿಳಿದಿಲ್ಲ. ರಾಕುಲ್‌ನೇ ಮದುವೆ ದಿನದ ಬಗ್ಗೆ ಎಲ್ಲರಿಗೂ ತಿಳಿಸಲಿದ್ದಾರೆ ಎಂದು ಅವರ ಸಹೋದರ ಅಮನ್ ಸಿಂಗ್ ಮಾಧ್ಯಮಗಳಿಗೆ ತಿಳಿಸಿರುವುದು ವರದಿಯಾಗಿದೆ. ಮದುವೆ ವಿಚಾರವನ್ನು ಜಕ್ಕಿ ಬಗ್‌ನಾನಿ ತಂದೆ ವಾಸು ಅವರು ಕೂಡ ಖಚಿತಪಡಿಸಿದ್ದು, ಮದುವೆ ತಯಾರಿ ನಡೆದಿದೆ ಎಂದು ತಿಳಿಸಿದ್ದಾರೆ.

ಕೋಲ್ಕತ್ತ ಮೂಲದ 36 ವರ್ಷದ ಜಕ್ಕಿ ಬಗ್‌ನಾನಿ ಬಾಲಿವುಡ್ ನಟ ಹಾಗೂ ನಿರ್ಮಾಪಕ. 2001 ರಲ್ಲಿ 'ರೆಹನಾ ಹೈ ತೆರೆ ದಿಲ್ ಮೇನ್' ಸಿನಿಮಾ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. 'ಫಾಲ್ತು', 'ಅಜಬ್ ಗಜಬ್', 'ಮೋಹಿನಿ', 'ವೆಲ್ ಕಮ್ ಟು ಕರಾಚಿ', 'ರಂಗ್ರೇಜ್' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ನಟಿಸಿದ್ದು, 'ಕೂಲಿ ನಂ 1', 'ವೆಲ್ ಕಮ್ ಟು ನ್ಯೂಯಾರ್ಕ್', 'ಬೆಲ್ ಬಾಟಮ್' ಸೇರಿ ಹಲವು ಸಿನಿಮಾಗಳನ್ನು ನಿರ್ಮಿಸಿದ್ದಾರೆ.

ಅತ್ತ ರಾಕುಲ್ ಕೂಡ ಸಿನಿಮಾ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಕೆಲವು ಸಿನಿಮಾಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಅವರು ನಟಿಸಿರುವ 'ಡಾಕ್ಟರ್ ಜಿ' ಹಾಗೂ 'ಥ್ಯಾಂಕ್ ಗಾಡ್', 'ಛತ್ರಿವಾಲಿ' ಸಿನಿಮಾಗಳು ಬಿಡುಗಡೆಯ ಹೊಸ್ತಿಲಲ್ಲಿವೆ.

ದಿ ಜ್ಯೂವೆಲರಿ ಶೋ

ಬೆಂಗಳೂರಿನ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಇತ್ತೀಚೆಗೆ 'ದಿ ಜ್ಯೂವೆಲರಿ ಶೋ' – ಬೃಹತ್ ಚಿನ್ನಾಭರಣಗಳ ಪ್ರದರ್ಶನ ಆಯೋಜಿಸಲಾಗಿತ್ತು.

ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿದ್ದ ಈ ಆಭರಣ ಪ್ರದರ್ಶನವನ್ನು ಚಿತ್ರ ನಟಿ ಧನ್ಯಾ ರಾಮ್‌ಕುಮಾರ್ ಉದ್ಘಾಟಿಸಿದರು.

GOLDEN CREEPER ENTERPRISES

ದೇಶದ 40 ಅಗ್ರಶ್ರೇಣಿಯ ಆಭರಣ ತಯಾರಕರು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಒಂದೇ ವೇದಿಕೆಯಡಿ ಹಬ್ಬ, ಮದುವೆಯಂತಹ ಶುಭ ಕಾರ್ಯಗಳಿಗೆ ಮೆರುಗು ನೀಡುವಂತಹ ವಿನೂತನ ಆಭರಣಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು. ಮೇಳದಲ್ಲಿ ಪ್ರಶಸ್ತಿ ವಿಜೇತ ಹಾಗೂ ಹೆಸರಾಂತ ಆಭರಣ ಮಳಿಗೆಯವರು ಭಾಗವಹಿಸಿದ್ದರು.

ಈ ಆಭರಣ ಮೇಳದಲ್ಲಿ ಬೆಂಗಳೂರು, ದೆಹಲಿ, ಕೋಲ್ಕತ್ತಾ, ಸೂರತ್, ಪುಣೆ, ಪಂಜಾಬ್, ಜೈಪುರ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಹೆಸರಾಂತ ಆಭರಣ ಕಂಪನಿಗಳು ತಮ್ಮ ವಿಶಿಷ್ಟ ಶೈಲಿಯ ಆಭರಣಗಳನ್ನು ಪ್ರದರ್ಶನಕ್ಕಿಟ್ಟಿದ್ದವು. ❖


ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದ 'ದಿ ಜ್ಯೂವೆಲರಿ ಶೋ' ಆಭರಣ ಪ್ರದರ್ಶನವನ್ನು ಚಿತ್ರ ನಟಿ ಧನ್ಯಾರಾಮ್‌ಕುಮಾರ್ ಉದ್ಘಾಟಿಸಿದರು.



ಸಾವಯವ ಹತ್ತಿ ಬಟ್ಟೆಗಳ ಮೇಳ

ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮವನ್ನು ಹೆಚ್ಚಿಸಲು 'ತುಲಾ' ಸರ್ಕಾರೇತರ ಸಂಸ್ಥೆಯು ಪರಿಸರಸ್ನೇಹಿ ಸಾವಯವ ಹತ್ತಿ ಬಟ್ಟೆಗಳ ಮೇಳವನ್ನು ಇದೇ 14ರಿಂದ ಆಯೋಜಿಸಿದೆ. ಎಲ್ಲ ಋತುಗಳಲ್ಲೂ ಧರಿಸಬಹುದಾದ ಸಾವಯವ ಹತ್ತಿ ಬಟ್ಟೆಗಳ ಪ್ರದರ್ಶನ ಇರಲಿದೆ.

ಸಾವಯವ ರೀತಿಯಲ್ಲಿ ಹತ್ತಿಯನ್ನು ಬೆಳೆದು, ಅದರ ಸಂಸ್ಕರಿಸಿ, ನೂಲು ತೆಗೆದು, ನೇಯುವಿಕೆ, ಬಣ್ಣ ನೀಡುವಿಕೆ ಹೀಗೆ ಎಲ್ಲವೂ ನೈಸರ್ಗಿಕ ಪ್ರಕ್ರಿಯೆಯಲ್ಲಿ ರೂಪುಗೊಂಡಿರುವ ಬಟ್ಟೆಗಳ ಪ್ರದರ್ಶನವೇ ಈ ಮೇಳದ ವಿಶೇಷ. ಯಂತ್ರಕ್ಕಿಂತಲೂ ಮನುಷ್ಯನ ಕೌಶಲಕ್ಕೆ ಆದ್ಯತೆ ಸಿಗಬೇಕು. ಸ್ವ ಉದ್ಯೋಗದಿಂದ ಸ್ವಾವಲಂಬನೆ. ಅಲ್ಲಿಂದಲೇ ಅಭಿವೃದ್ಧಿ ಎಂಬ ಧ್ಯೇಯೋದ್ದೇಶ ಈ ಮೇಳದ ಹಿಂದಿದೆ.



ಈ ಬಗ್ಗೆ ಸಂಸ್ಥೆಯ ಅನಂತಶಯನ ಅವರು ಹೇಳುವುದಿಷ್ಟು, 'ನೈಸರ್ಗಿಕ ಬಣ್ಣ ಹಾಗೂ ನೈಸರ್ಗಿಕವಾಗಿ ಬೆಳೆದ ಹತ್ತಿಯ ಬಳಕೆಯ ಬಗ್ಗೆ ಮೇಳದ ಮೂಲಕ ಜಾಗೃತಿ ಮೂಡಿಸಲಾಗುತ್ತದೆ' ಎನ್ನುತ್ತಾರೆ ಅವರು.

ಹತ್ತಿ ಕೃಷಿಯಿಂದ ಬಟ್ಟೆ ನೇಯುವ ಹಂತದವರೆಗೆ ಸುಮಾರು 6 ರಿಂದ 8 ಜನರಿಗೆ ಉದ್ಯೋಗ ನೀಡಿದಂತಾಗುತ್ತದೆ. ಈಗಷ್ಟೆ ಫ್ಯಾಷನ್ ಡಿಸೈನ್ ಕೋರ್ಸ್ ಮುಗಿಸಿ ಬಂದ ಯುವಸಮೂಹ ಟ್ರೆಂಡಿಗೆ ತಕ್ಕಂತೆ ವಿನ್ಯಾಸ ಮಾಡಿದ್ದಾರೆ. ಸದ್ಯಕ್ಕೆ ಪುರುಷರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಅಗತ್ಯವಿರುವ ಎಲ್ಲ ಬಗೆಯ ಉಡುಪುಗಳ ಪ್ರದರ್ಶನವು ಈ ಮೇಳದಲ್ಲಿ ಇರಲಿದೆ ಎನ್ನುವ ಮಾಹಿತಿ ಅವರದ್ದು.

ವಿಶೇಷ ಕಾರ್ಯಾಗಾರ:

15ರಂದು ಬೆಳಿಗ್ಗೆ 11.30ಕ್ಕೆ ನೈಸರ್ಗಿಕ ಹತ್ತಿ ಕೃಷಿ ಹಾಗೂ ನೇಯ್ಗೆ ಕುರಿತು ಅನಂತೂ ಮತ್ತು ವಾಣಿ ಮೂರ್ತಿ ಮಾತನಾಡಲಿದ್ದಾರೆ. ಜತೆಗೆ ಬಟ್ಟೆಗಳಿಗೆ ನೈಸರ್ಗಿಕ ಬಣ್ಣ ನೀಡುವಿಕೆಯ ಬಗ್ಗೆ ಉಚಿತ ಕಾರ್ಯಾಗಾರ ಕೂಡ ಇದೇ ದಿನ ನಡೆಯಲಿದೆ.

ಕಾರ್ಯಕ್ರಮ ನಡೆಯುವ ಸ್ಥಳ:

ಅದ್ರಿಶ್ ಜಿರೋ ವೇಸ್ಟ್ ಆರ್ಗಾನಿಕ್ ಸ್ಟೋರ್, 42, 8ನೇ ಮುಖ್ಯ ರಸ್ತೆ, 3ನೇ ಹಂತ, ಜೆ.ಪಿ.ನಗರ. ಸಮಯ: ಬೆಳಿಗ್ಗೆ 11 ರಾತ್ರಿ 8. ಹೆಚ್ಚಿನ ಮಾಹಿತಿಗೆ: 6364029909

ಇಂದು 'ಪ್ರೇಮಲೋಕದಾ ಗೀತೆಯೋ'



ನಗರದ ಸೈಡ್‌ವಿಂಗ್ ರಂಗತಂಡ ಇದೇ ಶನಿವಾರ(ಅ.15) ಸಂಜೆ 7.30ಕ್ಕೆ ಹನುಮಂತನಗರದ ಕೆ.ಎಚ್.ಕಲಾಸೌಧದಲ್ಲಿ 'ಈ ಪ್ರೇಮಲೋಕದಾ ಗೀತೆಯೂ' ನಾಟಕ ಪ್ರದರ್ಶನ ಏರ್ಪಡಿಸಿದೆ.

ನಿರ್ಮಾಣ: ರಂಗತಂಡದ ಅಧ್ಯಕ್ಷ ಶೈಲೇಶ್ ಕುಮಾರ್ ಎಂ.ಎಂ. ರಚನೆ ಮತ್ತು ನಿರ್ದೇಶನ : ಭರತ್ ಸ.ಜಗನ್ನಾಥ. ಪ್ರವೇಶ: ₹150. ಹೆಚ್ಚಿನ ಮಾಹಿತಿಗೆ ಸಂಪರ್ಕ: 9845087901

ಸೋನಿ ಮ್ಯಾಕ್ಸ್‌ನಲ್ಲಿ 'ಭೂಲ್ ಭೂಲೆಯ್ಯ 2'



ಹಾರರ್ ಮತ್ತು ಕಾಮಿಡಿ ಕಥಾನಕ ಹೊಂದಿದ್ದ ಭೂಲ್ ಭೂಲೆಯ್ಯ 2 ಚಿತ್ರ ಜಾಗತಿಕವಾಗಿ ಟಿವಿಯಲ್ಲಿ ಪ್ರಸಾರವಾಗಲಿದೆ.

ಬಾಲಿವುಡ್‌ನ ಈ ವರ್ಷದ ಯಶಸ್ವಿ ಚಿತ್ರಗಳಲ್ಲಿ ಒಂದಾದ ಭೂಲ್ ಭೂಲೆಯ್ಯ 2, ಉತ್ತಮ ಗಳಿಕೆ ಕಂಡು ಹೊಸ ದಾಖಲೆ ಸೃಷ್ಟಿಸಿತ್ತು.

ಕಾರ್ತಿಕ್ ಆರ್ಯನ್ ಅಭಿನಯದ ಈ ಚಿತ್ರದಲ್ಲಿ ಕಿಯಾರಾ ಅಡ್ವಾಣಿ ನಾಯಕಿಯಾಗಿ ನಟಿಸಿದ್ದರು. ಜತೆಗೆ ಟಬು ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ಭೂಲ್ ಭೂಲೆಯ್ಯ ಚಿತ್ರ ಸೋನಿ ಮ್ಯಾಕ್ಸ್ ಟಿವಿ ಚಾನೆಲ್‌ನಲ್ಲಿ ಅಕ್ಟೋಬರ್ 16ರ ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ. ಚಿತ್ರ ಈಗಾಗಲೇ ಒಟಿಟಿಯಲ್ಲಿ ಬಿಡುಗಡೆಯಾಗಿ ಉತ್ತಮ ಪ್ರತಿಕ್ರಿಯೆ ಗಳಿಸಿದೆ.

ಪಿಕ್ಸೆಲ್ 7 ಪ್ರೊ : ಗೂಗಲ್ ಹೊಸ ಸ್ಮಾರ್ಟ್‌ಫೋನ್

ಟೆಕ್ ಲೋಕದ ಪ್ರಮುಖ ಸಂಸ್ಥೆ ಗೂಗಲ್, ಪಿಕ್ಸೆಲ್ ಸರಣಿಯಲ್ಲಿ ಹಲವು ಮಾದರಿಯ ಸ್ಮಾರ್ಟ್‌ಫೋನ್‌ಗಳನ್ನು ಗ್ಯಾಜೆಟ್ ಮಾರುಕಟ್ಟೆಗೆ ಪರಿಚಯಿಸಿದೆ.

ಈ ಬಾರಿ ಗೂಗಲ್ ಬಿಡುಗಡೆ ಮಾಡಿರುವ ಪಿಕ್ಸೆಲ್ 7 ಮತ್ತು ಪಿಕ್ಸೆಲ್ 7 ಪ್ರೊ ಸ್ಮಾರ್ಟ್‌ಫೋನ್‌ಗಳು, ದೇಶದ ಮಾರುಕಟ್ಟೆಯಲ್ಲಿ ಖರೀದಿಗೆ ಲಭ್ಯವಿದೆ.

ಗೂಗಲ್‌ನ ನೂತನ ಪಿಕ್ಸೆಲ್ 7 ಸ್ಮಾರ್ಟ್‌ಫೋನ್ 8GB RAM + 128GB ಮಾದರಿಗೆ ದೇಶದಲ್ಲಿ ₹59,999 ದರವಿದೆ. ಅಲ್ಲದೆ, ಸ್ನೋ, ಒಬ್ಸಿಡಿಯನ್ ಮತ್ತು ಲೆಮನ್‌ಗ್ರಾಸ್ ಎಂಬ ಮೂರು ಬಣ್ಣಗಳಲ್ಲಿ ದೊರೆಯುತ್ತದೆ ಎಂದು ಗೂಗಲ್ ಹೇಳಿದೆ.

ಪಿಕ್ಸೆಲ್ 7 ಸ್ಮಾರ್ಟ್‌ಫೋನ್‌ನಲ್ಲಿ 50 ಮೆಗಾಪಿಕ್ಸೆಲ್ ಸಹಿತ ಎರಡು ಕ್ಯಾಮೆರಾ ಹೊಂದಿದೆ. ಅಲ್ಲದೆ, 10.8 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ ಕೂಡ ಇದರಲ್ಲಿದೆ.

ಗೂಗಲ್ ಪಿಕ್ಸೆಲ್ 7 ಪ್ರೊ ಸ್ಮಾರ್ಟ್‌ಫೋನ್ 12GB RAM + 128GB ಮಾದರಿಗೆ ₹84,999 ದರವಿದೆ. ಹ್ಯಾಜೆಲ್, ಒಬ್ಸಿಡಿಯನ್ ಮತ್ತು ಸ್ನೋ ಎಂಬ ಮೂರು ಬಣ್ಣಗಳಲ್ಲಿ 7 ಪ್ರೊ ದೊರೆಯಲಿದೆ. ಆರಂಭಿಕ ಕೊಡುಗೆಯಾಗಿ ಕ್ಯಾಶ್‌ಬ್ಯಾಕ್, ನೋ ಕಾಸ್ಟ್ ಇಎಂಐ ಆಯ್ಕೆಗಳು ಫ್ಲಿಪ್‌ಕಾರ್ಟ್‌ನಲ್ಲಿ ದೊರೆಯಲಿದೆ.



ಗೂಗಲ್ ಪಿಕ್ಸೆಲ್ 7 ಪ್ರೊ ಸ್ಮಾರ್ಟ್‌ಫೋನ್‌ನಲ್ಲಿ 50 ಮೆಗಾಪಿಕ್ಸೆಲ್ ಮತ್ತು 48 ಮೆಗಾಪಿಕ್ಸೆಲ್ ಟೆಲಿಫೋಟೊ ಲೆನ್ಸ್ ಸಹಿತ ಹಿಂಬದಿ ಕ್ಯಾಮೆರಾ ಹಾಗೂ 10.8 ಮೆಗಾಪಿಕ್ಸೆಲ್ ಸೆಲ್ಫಿ ಜತೆಗೆ ಲಭ್ಯವಿದೆ.



